ಚಿಕ್ಕರೂಪಿ

ಗಾಂಧಿ

ಅನು ಬಂದ್ಯೋಪಾಧ್ಯಾಯ

BAHUROOPI GANDHI (Kannada)
Title in English : LEARNING FROM GANDHI by Anu Bandyopadhyaya
(First English Edition published as BAHUROOPE GANDHI)
Rendered into Kannada by H. N. Geetha

First Edition : 2009 **Pages : 148** **Price : Rs. 90**

Paper used for this book : 70 gsm Maplitho 18.6 Kgs (1/8 Demy Size)

ಮೊದಲ ಮುದ್ರಣ : 2009

ಕನ್ನಡ ಕೃತಿಸ್ವಾಮ್ಯ : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಮೂಲ ಹಕ್ಕುಗಳು : ಲೇಖಕರವು

ಬೆಲೆ : ರೂ. 90

ಮುಖಚಿತ್ರ : ಬಿ. ಬಿ. ಪತ್ತಾರ್
ರೇಖಾಚಿತ್ರಗಳು : ಆರ್. ಕೆ. ಲಕ್ಷ್ಮಣ್ ಮತ್ತು ನಿಕ್ಕಿ ಥಾಮಸ್
ನಿಕ್ಕಿ ಥಾಮಸ್ ರಚಿಸಿದ ಚಿತ್ರಗಳು – ಕೃಪೆ : ಅದರ್ ಇಂಡಿಯಾ ಪ್ರೆಸ್, ಗೋವಾ

ಅರ್ಪಣೆ

ಎಲ್ಲಾ ಕೆಲಸಗಳನ್ನು
ಗೌರವಿಸಬೇಕೆಂದು ಹೇಳಿಕೊಟ್ಟ
ನನ್ನ ತಾಯಿಗೆ

ಪ್ರಕಾಶಕರು
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560 001
ದೂರವಾಣಿ : 22203580, 30578022 ಫ್ಯಾಕ್ಸ್ : 30578023
e-mail : navakarnataka@dataone.in
website : **www.navakarnataka.com**
http://navakarnataka.blogspot.com

ಶಾಖೆಗಳು

ಗಾಂಧಿನಗರ	ಕೆ. ಎಸ್. ರಾವ್ ರಸ್ತೆ	ರಾಮಸ್ವಾಮಿ ವೃತ್ತ	ಸ್ಟೇಷನ್ ರಸ್ತೆ
ಬೆಂಗಳೂರು-9	ಮಂಗಳೂರು - 1	ಮೈಸೂರು - 24	ಗುಲ್ಬರ್ಗಾ-2
✆ 22251382	✆ 2441016	✆ 2424094	✆ 224302

0110092753 **ISBN 978-81-8467-104-9**

Printed by R. S. Rajaram at Navakarnataka Printers, No. 167 & 168, 10th Main III Phase, Peenya Industrial Area, Bangalore - 560 058 and published by him for Navakarnataka Publications (P) Ltd., 11, Embassy Centre, Crescent Road P. B. 5159, Bangalore-560 001 (INDIA). Typeset at Navakarnataka, Bangalore-1

ಮುನ್ನುಡಿ

ಪ್ರಧಾನ ಮಂತ್ರಿಯವರ ಗೃಹ
ನವದೆಹಲಿ

ಇದು ಮಕ್ಕಳಿಗಾಗೆಂದೇ ಬರೆದ ಪುಸ್ತಕ. ಆದರೆ ಇದನ್ನು ಬಹಳಷ್ಟು ಜನ ದೊಡ್ಡವರು ಸಹ ಸಂತೋಷದಿಂದ ಓದುತ್ತಾರೆ ಹಾಗೂ ಇದರ ಪ್ರಯೋಜನವನ್ನೂ ಪಡೆಯುತ್ತಾರೆ ಎಂಬುದು ನನಗೆ ಖಂಡಿತ ಗೊತ್ತು.

ಈಗಾಗಲೇ ಗಾಂಧೀಜೀಯವರು ಒಂದು ದಂತಕಥೆಯಾಗಿದ್ದಾರೆ. ಅವರನ್ನು ನೋಡಿಲ್ಲದವರು, ಅದರಲ್ಲೂ ಇಂದಿನ ಮಕ್ಕಳು, ಅವರು ಅತ್ಯಂತ ಅಸಾಧಾರಣ ವ್ಯಕ್ತಿ, ಅದ್ಭುತ ಕೆಲಸಗಳನ್ನು ಮಾಡಿದ ಅಸಾಮಾನ್ಯ ವ್ಯಕ್ತಿ ಎಂಬುದನ್ನು ತಿಳಿದುಕೊಳ್ಳಬೇಕು. ಆದ್ದರಿಂದ, ಗಾಂಧೀಜೀಯವರ ಜೀವನದ ಸಾಮಾನ್ಯ ಅಂಶಗಳನ್ನು, ಮಕ್ಕಳ ಮುಂದಿಡುವುದು ಅಪೇಕ್ಷಣೀಯವಾಗಿದೆ. ಈ ಪುಸ್ತಕ ಆ ಕೆಲಸವನ್ನು ಮಾಡುತ್ತಿದೆ.

ಗಾಂಧೀಜೀಯವರು ಬಹಳಷ್ಟು ವಿಷಯಗಳಲ್ಲಿ ಅದು ಹೇಗೆ ಆಸಕ್ತಿ ತೋರುತ್ತಿದ್ದರು ಮತ್ತು ಆಸಕ್ತಿ ವಹಿಸಿದಾಗ, ಅಷ್ಟೇ ಚೆನ್ನಾಗಿ ನಿರ್ವಹಿಸುತ್ತಿದ್ದರು ಎಂಬುದೊಂದು ಅಸಾಮಾನ್ಯ ಸಂಗತಿ. ಜೀವನದಲ್ಲಿ ಸಣ್ಣಪುಟ್ಟ ಎಂದನ್ನಿಸುವ ಅಂತಗಳನ್ನು ನಿರ್ವಹಿಸುವಾಗಲೂ ಸಹ ಅವರು ನೀಡುತ್ತಿದ್ದ ಸಂಪೂರ್ಣ ಗಮನವೇ ಪ್ರಾಯಶಃ ಅವರ ಮಾನವೀಯತೆಯನ್ನು ಎತ್ತಿಹಿಡಿದದ್ದು ಎಂದು ತೋರುತ್ತದೆ. ಅವರ ವ್ಯಕ್ತಿತ್ವಕ್ಕೆ ಅದೇ ಆಧಾರವಾಗಿತ್ತು.

ಗಾಂಧೀಜೀ ರಾಜಕೀಯ ಮತ್ತು ಸಾರ್ವಜನಿಕ ರಂಗಗಳಿಗಿಂತ ಬಹಳ ಭಿನ್ನವಾಗಿ ವಿವಿಧ ಮಾರ್ಗಗಳಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತಿದ್ದರು ಎಂಬುದನ್ನು ಈ ಪುಸ್ತಕ ನಮಗೆ ಹೇಳುತ್ತದೆ ಎಂಬುದಂತೂ ನನಗೆ ಸಂತೋಷದ ವಿಷಯ. ಅವರ ಬಗ್ಗೆ ಒಂದು ಒಳನೋಟವನ್ನು ಪ್ರಾಯಶಃ ಇದು ನಮಗೆ ಕೊಡುತ್ತದೆ.

ನವದೆಹಲಿ — **ಜವಾಹರಲಾಲ್ ನೆಹರೂ**
10ನೇ ಮಾರ್ಚ್, 1964

ಪರಿಚಯ

ಈ ಪುಸ್ತಕದ ಹಸ್ತಪ್ರತಿ 1949ರಿಂದ ನನ್ನ ಬಳಿಯೇ ಇದೆ. ಬಂಗಾಲದ ಕಸ್ತೂರ್‌ಬಾ ತರಬೇತಿ ಶಿಬಿರದಲ್ಲಿನ ಕೆಲಸವನ್ನು ನಾನು ತೊರೆದ ತಕ್ಷಣವೇ, ಅಂದರೆ 1948ರಲ್ಲಿ ಡಿ. ಜಿ. ತೆಂಡೂಲ್ಕರ್‌ರವರ 'ಮಹಾತ್ಮ' ಕೃತಿಯ ಹಸ್ತಪ್ರತಿಯನ್ನು ನಾನು ಓದಿದೆ. ಆಗ ನಾನು ಹಳ್ಳಿಯೊಂದರಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಸುತ್ತಮುತ್ತಲಿದ್ದ ಗ್ರಾಮಸ್ಥರು ಮತ್ತು ತರಬೇತಿ ಪಡೆಯುತ್ತಿದ್ದ ಹುಡುಗಿಯರು ಗಾಂಧೀಜೀಯವರ ಬಗ್ಗೆ ಬಹಳ ಸ್ವಲ್ಪ ತಿಳಿದಿದ್ದರು ಎಂಬುದನ್ನು ನಾನು ಗಮನಿಸಿದೆ. ಅವರು ಗಾಂಧಿ ಜಯಂತಿಯನ್ನು ಆಚರಿಸುತ್ತಿದ್ದರು, ದಿನನಿತ್ಯವೂ ನೂಲುತ್ತಿದ್ದರು ಮತ್ತು ಪ್ರಾರ್ಥನೆ ಮಾಡುತ್ತಿದ್ದರು. ಕೆಲವರು ರಾಷ್ಟ್ರೀಯ ಚಳುವಳಿಗಳಲ್ಲಿ ಭಾಗವಹಿಸಿದ್ದರು, ಜೈಲಿಗೆ ಹೋಗಿ ಬಂದಿದ್ದರು. ಆದರೂ ಗಾಂಧೀಜೀಯವರ ನಿಜವಾದ ಕೊಡುಗೆ ಏನೆಂಬುದು ಅವರಿಗೆ ತಿಳಿದೇ ಇರಲಿಲ್ಲ. ಇದು ನನ್ನ ತಪ್ಪು ಗ್ರಹಿಕೆಯೇ ಆಗಿತ್ತೋ ಏನೋ – ಆದರೂ ನನಗನ್ನಿಸಿದ್ದು ಹಾಗೇನೇ.

ಪ್ರತಿದಿನ ನನ್ನ ಸಂಪರ್ಕಕ್ಕೆ ಬರುವ ಅನೇಕ ವ್ಯಕ್ತಿಗಳ ಬಗ್ಗೆ ನನಗೆ ಹಾಗೆಯೇ ಅನ್ನಿಸುತ್ತದೆ. ಅವರಲ್ಲಿ ಕೆಲವರು ವಿದ್ಯಾವಂತರು ಸಹ ಆಗಿದ್ದಾರೆ. ಈ ಎಲ್ಲರಿಗೂ ದೈಹಿಕ ಶ್ರಮ ಎಂದರೆ ಏನೋ ಜಿಗುಪ್ಸೆ. ಕಾರ್ಯಫಲತೆಯ ಬಗ್ಗೆ ನನಗೇ ಖಚ್ಚು ನಂಬಿಕೆಯಿಲ್ಲ. ಆದರೆ ದೈಹಿಕ ಶ್ರಮದ ದುಡಿಮೆ ಏನೆಂದು ನನಗೆ ಗೊತ್ತು. ಆದ್ದರಿಂದಲೇ ದಿನವೂ ನಾನು ಆಳುಕಾಳುಗಳೊಂದಿಗೆ ಸ್ವಲ್ಪ ದೈಹಿಕ ಶ್ರಮವನ್ನು ಹಂಚಿಕೊಳ್ಳಲು ಪ್ರಯತ್ನಿಸುತ್ತೇನೆ. ಇಲ್ಲದಿದ್ದಲ್ಲಿ, ಒಂದೆರಡು ಕಾಸುಗಳನ್ನು ಕೊಟ್ಟು ಇತರರಿಂದ ನನಗಾಗಿ ಕೆಲಸ ಮಾಡಿಸಿಕೊಳ್ಳುವ ಹಕ್ಕನ್ನು ಪಡೆಯಬಹುದೆಂಬ ಭಾವನೆಯೇನಾದರೂ ಬೆಳೆಸಿಕೊಂಡುಬಿಟ್ಟೇನು.

ಇಂತಹ ಶ್ರಮದ ಕೆಲಸಗಳನ್ನು ಇತರರು, ಆ ಕೆಲಸದ ಮೇಲಿನ ಪ್ರೀತಿಯಿಂದ ಅಲ್ಲ, ಬದಲಿಗೆ ಜೀವನೋಪಾಯಕ್ಕಾಗಿ ಮಾಡಿದರೆ, ಗಾಂಧೀಜಿ ಇಂತಹವುಗಳಲ್ಲಿ ಸ್ವಇಚ್ಛೆಯ ಪಾಲುದಾರರು ಎಂಬ ಅಂಶವನ್ನು ನಾನು ಹೇಳಬೇಕಾಗಿತ್ತು. ಕೆಲವು ಪ್ರಸಂಗಗಳನ್ನು ಉದ್ದೇಶಪೂರ್ವಕವಾಗಿಯೇ ಪುನಃ ಪುನಃ ಹೇಳಲಾಗಿದೆ. ಗಾಂಧೀಜೀಯವರನ್ನು ಕಣ್ಣು ಮುಚ್ಚಿಕೊಂಡು ಆರಾಧಿಸುವವರ ದಂಡಿಗೆ ಇನ್ನೂ ಹಲವು ವ್ಯಕ್ತಿಗಳನ್ನು ಸೇರಿಸುವುದು ನನಗೆ ಖಂಡಿತವಾಗಿಯೂ ಇಷ್ಟವಿಲ್ಲ. ಆದರೆ, ಗಾಂಧೀಜಿ ನಮ್ಮ ರಾಷ್ಟ್ರಪಿತರಷ್ಟೇ ಆಗಿರಲಿಲ್ಲ ಅಥವಾ ಸ್ವಾತಂತ್ರ್ಯದ ರೂವಾರಿ ಮಾತ್ರವಾಗಿರಲಿಲ್ಲ. ಈ ವಿಷಯವನ್ನು ನಮ್ಮ ಯುವಜನಾಂಗ ಮೊದಲು ಅರಿತುಕೊಳ್ಳಬೇಕು, ಆಮೇಲೆ ವಿಮರ್ಶಿಸಬೇಕು ಎಂದು ನಾನು ಬಯಸುತ್ತೇನೆ.

ಈ ಪುಸ್ತಕದ ವಿಚಾರ ನನ್ನದೇ. ಇದನ್ನು ಹದಿಹರೆಯದವರಿಗಾಗಿ ನಾನು ಬರೆದೆ. ಹೆಚ್ಚುಕಮ್ಮಿ ಇದರಲ್ಲಿನ ಬಹಳಷ್ಟು ವಿಚಾರಗಳು ಡಿ. ಜಿ. ತೆಂಡೂಲ್ಕರ್‌ರವರ 'ಮಹಾತ್ಮ'ದಿಂದ ತೆಗೆದುಕೊಳ್ಳಲಾಗಿದೆ. ಈ ಪುಟ್ಟ ಪ್ರಕಟಣೆಗೆ ನಾನು ಅವರಿಗೆ ಎಷ್ಟು ಆಭಾರಿಯಾಗಿದ್ದೇನೆ ಎಂದು ನನಗೆ ವ್ಯಕ್ತಪಡಿಸಲು ಸಾಧ್ಯವಿಲ್ಲ. ಶ್ರೀ ಎನ್. ಜಿ. ಜೋಗಿಯವರು ಹಸ್ತಪ್ರತಿಯನ್ನು ಓದುವಷ್ಟು ಸಹೃದಯಿಗಳಾಗಿದ್ದರು. ಶ್ರೀ ಎಂ. ಚಲಪತಿ ರಾವ್‌ರವರು ಈ ರೇಖಾಚಿತ್ರಗಳ ಪೈಕಿ ಇಪ್ಪತ್ತನ್ನು 'ನ್ಯಾಷನಲ್ ಹೆರಾಲ್ಡ್'ನಲ್ಲಿ ಸರಣಿಯಲ್ಲಿ ಪ್ರಕಟಿಸಲು ಅನುವು ಮಾಡಿಕೊಟ್ಟರು.

ಶ್ರೀ ಆರ್. ಕೆ. ಲಕ್ಷ್ಮಣ್ ಅವರು ನನ್ನ ಪುಸ್ತಕಕ್ಕೆ ರೇಖಾಚಿತ್ರಗಳನ್ನು ಬರೆದುಕೊಟ್ಟರು. ಅವರಿಗೆ ನಾನು ಆಭಾರಿ. ಈ ಪುಸ್ತಕಕ್ಕೆ ಮುನ್ನುಡಿ ಬರೆದುಕೊಟ್ಟ ಶ್ರೀ ಜವಾಹರ್‌ಲಾಲ್‌ಜೀಯವರಿಗೆ ನಾನು ಬಹಳ ಋಣಿಯಾಗಿದ್ದೇನೆ. ಗಾಂಧೀಜೀಯವರ ಕೆಲಸಗಳ ಪೈಕಿ ಯಾವುದನ್ನಾದರೂ ಸಾವಿರ ಓದುಗರಲ್ಲಿ ಓರ್ವ ಕಿರಿಯ ಓದುಗ ಅನುಸರಿಸಿದರೆ, ನನಗೆ ಬಹಳ ಸಂತೋಷ.

ಪರಿವಿಡಿ

ಕಷ್ಟಜೀವಿ	...	...	...	7
ಬ್ಯಾರಿಸ್ಟರ್	...	...	...	10
ದರ್ಜಿ	...	...	...	17
ಅಗಸ	...	...	...	20
ಕ್ಷೌರಿಕ	...	...	...	23
ಭಂಗಿ	...	...	...	27
ಚಮ್ಮಾರ	...	...	...	33
ಸೇವಕ	...	...	...	38
ಬಾಣಸಿಗ	...	...	...	43
ವೈದ್ಯ	...	...	...	47
ದಾಯಿ	...	...	...	52
ಶಿಕ್ಷಕ	...	...	...	56
ನೇಕಾರ	...	...	...	62
ನೂಲುವವ	...	...	...	65
ವ್ಯಾಪಾರಿ	...	...	...	71
ರೈತ	...	...	...	78
ಹರಾಜುಗಾರ	...	...	...	84
ಭಿಕ್ಷುಕ	...	...	...	87
ಸುಲಿಗೆಕೋರ	...	...	...	93
ಸೆರೆಮನೆಯ ಹಕ್ಕಿ	...	...	...	99
ಕಾರ್ಯನೀತಿಜ್ಞ	...	...	...	106
ಲೇಖಕ	...	...	...	112
ಪತ್ರಕರ್ತ	...	...	...	118
ಮುದ್ರಕ – ಪ್ರಕಾಶಕ	...	...	...	126
ಫ್ಯಾಷನ್ ರೂಪಿಸುವವ	...	...	...	130
ಹಾಫ್‌ಕಾಡಿಗ	...	...	...	136
ಪುರೋಹಿತ	...	...	...	141
ಗಾಂಧಿಯವರ ಬದುಕಿನ ಘಟನಾವಳಿಗಳು		...	...	147

ಕಷ್ಟಜೀವಿ

ಓರ್ವ ಬಿಡುವಿಲ್ಲದ ಬ್ಯಾರಿಸ್ಟರ್ ತಮ್ಮ ಕಕ್ಷಿದಾರರಿಗೆ ದಾವೆ–ಖಟ್ಲೆಗಳನ್ನು ಹೂಡಿ ಸಮಯ ಮತ್ತು ಹಣಗಳನ್ನು ವೃಥಾ ಪೋಲು ಮಾಡಿ, ತಮ್ಮನ್ನು ತಾವೇ ನಾಶ ಮಾಡಿಕೊಳ್ಳಬಾರದು; ನ್ಯಾಯಾಲಯದಾಚೆ ಚರ್ಚೆಗಳ ಮೂಲಕ ತಮ್ಮ ವಿವಾದಗಳನ್ನು ಬಗೆಹರಿಸಿಕೊಳ್ಳಬೇಕೆಂದು ಸಲಹೆ ಇತ್ತರು. ಆ ಬ್ಯಾರಿಸ್ಟರ್ ತಮ್ಮ ವಿರಾಮದ ವೇಳೆಯಲ್ಲಿ ಹಿಂದೂ, ಮುಸಲ್ಮಾನ, ಕ್ರೈಸ್ತ, ಪಾರ್ಸಿ ಮತ್ತು ಬೌದ್ಧರ ಮತಗಳನ್ನು ಕುರಿತಾದ ಪುಸ್ತಕಗಳನ್ನು ಓದುತ್ತಿದ್ದರು. ಹಾಗೆಯೇ ಅವರು ಜ್ಞಾನಿಗಳು ಬರೆದ ಪುಸ್ತಕಗಳನ್ನು ಸಹ ಓದುತ್ತಿದ್ದರು. ಅವರು ನಡೆಸಿದ ಈ ಪುಸ್ತಕಗಳ ಅಧ್ಯಯನ ಮತ್ತು ಆತ್ಮಶೋಧ ಪ್ರತಿದಿನವೂ ಪ್ರತಿಯೊಬ್ಬ ಮನುಷ್ಯನೂ ಒಂದಿಷ್ಟಾದರೂ ಕಷ್ಟಪಟ್ಟು ದುಡಿಯಬೇಕೆಂಬ ವಿಚಾರವನ್ನು ಅವರಿಗೆ ಮನದಟ್ಟು ಮಾಡಿಸಿತು. ಸುಮ್ಮನೆ ತಲೆ ಉಪಯೋಗಿಸಿ ಕೆಲಸ ಮಾಡುವುದಷ್ಟೇ ಸಾಲದು, ಅಕ್ಷರಸ್ಥರು-ಅನಕ್ಷರಸ್ಥರು, ವೈದ್ಯರು ಮತ್ತು ವಕೀಲರು, ಕ್ಷೌರಿಕರು ಮತ್ತು ಝಾಡಮಾಲಿ – ಎಲ್ಲರಿಗೂ ಅವರವರ ಕೆಲಸಗಳಿಗೆ ಸಮಾನವಾದ ಕೂಲಿಯನ್ನು ಕೊಡಬೇಕು.

ಬ್ಯಾರಿಸ್ಟರರು ನಿಧಾನವಾಗಿ ತಮ್ಮ ಜೀವನಮಾರ್ಗವನ್ನು ಬದಲಿಸಿಕೊಂಡರು. ತಮ್ಮ ಮುಂದೆ ಯಾವುದೇ ಕೆಲಸ ಬರಲಿ, ಅದಕ್ಕೆ ಕೈಹಾಕುತ್ತಿದ್ದರು. ಒಂದು ಆಶ್ರಮದಲ್ಲಿ ತಮ್ಮ ಮಿತ್ರರು ಮತ್ತು ಕುಟುಂಬದವರೊಂದಿಗೆ ಸರಳವಾದ ಸಾಮುದಾಯಿಕ ಜೀವನವನ್ನು ನಡೆಸಲು ಅವರು ನಿರ್ಧರಿಸಿದರು. ಅವರ ಹಲವು ಯೂರೋಪಿಯನ್ ಗೆಳೆಯರು ಸಹ ಆಶ್ರಮದ ಜೀವನವನ್ನು ಹಂಚಿಕೊಳ್ಳಬಯಸಿದರು. ಅವರೆಲ್ಲಾ ಕಷ್ಟಪಟ್ಟು ದುಡಿಯುವ ರೈತರಂತೆ ನೆಲವನ್ನು ಉಳುತ್ತಾ, ತೋಟವನ್ನು ಅರೈಕೆ ಮಾಡುತ್ತಾ ಜೀವನ ನಡೆಸಿದರು. ಸಂಬಳ ಕೊಟ್ಟು ಆಳುಗಳನ್ನು ಇಟ್ಟುಕೊಳ್ಳಲಿಲ್ಲ. ಆ ತೋಟದಲ್ಲಿ ಹಿಂದೂ, ಮುಸಲ್ಮಾನರು, ಕ್ರೈಸ್ತ-ಪಾರ್ಸಿಗಳು, ಬ್ರಾಹ್ಮಣ-ಶೂದ್ರರು, ಕಾರ್ಮಿಕರು ಮತ್ತು ಬ್ಯಾರಿಸ್ಟರುಗಳು, ಕರಿಯರು ಮತ್ತು ಬಿಳಿಯರು – ಎಲ್ಲರೂ ಒಂದು ದೊಡ್ಡ ಕುಟುಂಬದ ಸದಸ್ಯರಂತೆ ಒಟ್ಟಾಗಿದ್ದರು. ಎಲ್ಲರಿಗೂ ಸೇರಿ ಇದ್ದುದು ಒಂದೇ ಊಟದ ಕೋಣೆ. ಇದ್ದ ಒಂದೇ ಒಂದು ಅಡುಗೆಮನೆಯಲ್ಲಿ ತಯಾರಿಸಿದ ಅಡುಗೆಯನ್ನು ಎಲ್ಲರೂ ಸೇರಿ ಊಟ ಮಾಡುತ್ತಿದ್ದರು. ಅವರ ಊಟ ಸರಳವಾಗಿತ್ತು; ಉಡುಪು ಒರಟಾಗಿತ್ತು. ಪ್ರತಿಯೊಬ್ಬ ಸದಸ್ಯರಿಗೂ ಅವರ ತಿಂಗಳ ಖರ್ಚಿಗಾಗಿ 40 ರೂಪಾಯಿ ಸಿಗುತ್ತಿತ್ತು. ಬ್ಯಾರಿಸ್ಟರ್ ತಿಂಗಳಿಗೆ 4000 ರೂಪಾಯಿಗಳನ್ನು ಪಡೆಯುತ್ತಿದ್ದರೂ, ಅವರಿಗೂ ಅಷ್ಟೇ. ಒಂದು ಗಡಿಯಾರದ ಶಿಸ್ತಿನಲ್ಲಿ ಅವರು ದಿನನಿತ್ಯ ಕಠಿಣಶ್ರಮವನ್ನು ಅನುಸರಿಸುತ್ತಿದ್ದರು. ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದುದು ದಿನಕ್ಕೆ ಆರು ಗಂಟೆಗಳ ಕಾಲ.

ಒಮ್ಮೆ ತೋಟದಲ್ಲಿ ಒಂದು ಗುಡಿಸಲನ್ನು ಕಟ್ಟುತ್ತಿದ್ದಾಗ, ಆ ಕಟ್ಟಣೆಯ ಮೇಲೆ ಏರಿದವರಲ್ಲಿ ಅವರೇ ಮೊದಲಿಗರು. ಅಂದು ಅವರು ನೀಲಿಬಣ್ಣದ ಒರಟುಬಟ್ಟೆಯ ನಿಲುವಂಗಿ ತೊಟ್ಟಿದ್ದರು. ಅದರ ತುಂಬಾ ಹಲವಾರು ಜೇಬುಗಳು. ಅವುಗಳಲ್ಲಿ ದೊಡ್ಡ-ಸಣ್ಣ ಮೊಳೆಗಳು ಮತ್ತು ಸ್ಕ್ರೂಗಳು. ಒಂದು ಜೇಬಿನಿಂದ ಸುತ್ತಿಗೆಯೊಂದು ಹೊರಕ್ಕೆ ಇಣುಕುತ್ತಿತ್ತು. ಅವರ ನಡುಪಟ್ಟಿಯ ಮೇಲೆ ಒಂದು ಗರಗಸ ಮತ್ತು ಒಂದು ಉಳಿ

ನೇತಾಡುತ್ತಿತ್ತು. ಸುತ್ತಿಗೆ ಮತ್ತು ಗರಗಸಗಳನ್ನು ಇಟ್ಟುಕೊಂಡು ಪ್ರತಿದಿನ ಸುಡುಜಿಸಿಲಲ್ಲಿ ಕೆಲಸ ಮಾಡುತ್ತಿದ್ದರು.

ಒಂದು ದಿನ ಊಟವಾದ ಬಳಿಕ ಅವರು ಒಂದು ಪುಸ್ತಕದ ಕಪಾಟು ಮಾಡಲು ಕುಳಿತರು. ಒಂದೇ ಸಮನೆ ಏಳು ಗಂಟೆಗಳ ಕಾಲ ಕೆಲಸ ಮಾಡಿ, ಸೂರನ್ನು ತಾಕುತ್ತಿದ್ದ ಕಪಾಟನ್ನು ತಯಾರಿಸಿ ಪೂರೈಸಿದರು. ಆಶ್ರಮಕ್ಕೆ ಹೋಗುತ್ತಿದ್ದ ಕಾಲುದಾರಿಗೆ ಜಲ್ಲಿಕಲ್ಲು ಹಾಕಬೇಕಾಗಿತ್ತು. ಆದರೆ ಅದರ ವೆಚ್ಚವನ್ನು ಭರಿಸುವಷ್ಟು ಹಣ ಅವರಲ್ಲಿರಲಿಲ್ಲ. ಅವರು ದೈನಂದಿನ ವಾಕಿಂಗ್‌ನಿಂದ ಹಿಂತಿರುಗುವಾಗ ಸಣ್ಣಪುಟ್ಟ ಕಲ್ಲುಗಳನ್ನು ಹೆಕ್ಕಿ ತರಲು ಆರಂಭಿಸಿದರು. ಅವರ ಸಹಚರರು ಸಹ ಅವರ ಈ ಉದಾಹರಣೆಯನ್ನೇ ಅನುಸರಿಸಿದರು. ಸ್ವಲ್ಪ ಕಾಲದಲ್ಲಿಯೇ ದಾರಿಗೆ ನೆಲಗಟ್ಟು ಮಾಡಲು ಬೇಕಾಗಿದ್ದ ಕಲ್ಲುಗಳ ರಾಶಿಯೇ ಹುಟ್ಟಿಕೊಂಡಿತು. ಹೀಗೆ ಅವರು, ಇತರರು ಕೆಲಸ ಮಾಡುವಂತೆ ಮಾಡುತ್ತಿದ್ದರು. ಆಶ್ರಮದ ಮಕ್ಕಳು ಸಹ ತೋಟಗಾರಿಕೆ, ಅಡುಗೆ ಮಾಡುವುದು, ಗುಡಿಸುವುದು, ಬಡಗಿ ಕೆಲಸ, ಚರ್ಮದ ಕೆಲಸ ಮತ್ತು ಅಕ್ಷರ ಜೋಡಣೆಗಳಲ್ಲಿ ತೊಡಗಿಕೊಳ್ಳುತ್ತಿದ್ದರು.

"ನಾವು ಮೇಸ್ತ್ರಿಗಳನ್ನು, ಚಮ್ಮಾರರನ್ನು, ಬಡಗಿಗಳನ್ನು, ಕಮ್ಮಾರರನ್ನು ಮತ್ತು ಕ್ಷೌರಿಕರನ್ನು ನಮಗಿಂತ ಕೀಳಾಗಿ ನೋಡುತ್ತೇವೆ. ಅವರ ವೃತ್ತಿ ಮತ್ತು ಮನೆಗಳಿಂದ ಎಲ್ಲಾ ಸೌಜನ್ಯ, ಕಲಿಕೆ, ಸಭ್ಯತೆ ಮತ್ತು ಸಂಸ್ಕೃತಿ ಕಸಿದುಕೊಂಡೆವು. ಇತ್ತ ಕುಶಲ ಕೆಲಸವನ್ನು ಕೀಳಾಗಿ ಕಂಡೆವು, ಅತ್ತ ಕಾರಕೂನಗಿರಿಯನ್ನು ಅಟ್ಟಕ್ಕೇರಿಸಿದೆವು. ನಾವು ಗುಲಾಮಗಿರಿಯನ್ನು ಆಹ್ವಾನಿಸಿದ್ದು ಹೀಗೆಯೇ. ಆದ್ದರಿಂದಲೇ ಈ ಅಸಂತೋಷದ ಸ್ಥಿತಿಗೆ ಬಂದು ಬಿದ್ದಿದ್ದೇವೆ" ಎಂದು ಅವರು ನಂಬಿದ್ದರು.

ಬೆಳಗಿನ ಜಾವ, ಬ್ಯಾರಿಸ್ಟರ್‌ರವರು ಬೀಸೋ ಕಲ್ಲಿನಲ್ಲಿ ಗೋಧಿಯನ್ನು ಪುಡಿ ಮಾಡುತ್ತಿದ್ದರು. ನಂತರ ಉಡುಪು ಧರಿಸಿ, ಐದು ಮೈಲು ದೂರವಿದ್ದ ತಮ್ಮ ಕಚೇರಿಗೆ ನಡೆದು ಹೋಗುತ್ತಿದ್ದರು. ತಮ್ಮ ಕೂದಲು ತಾವೇ ಕತ್ತರಿಸಿಕೊಳ್ಳುತ್ತಿದ್ದರು ಮತ್ತು ತಮ್ಮ ಬಟ್ಟೆಗಳನ್ನು ತಾವೇ ಒಗೆದು ಇಸ್ತ್ರಿ ಮಾಡಿಕೊಳ್ಳುತ್ತಿದ್ದರು. ಇಡೀ ರಾತ್ರಿ ಎಚ್ಚರವಾಗಿದ್ದು, ಪ್ಲೇಗ್ ಪೀಡಿತರಾಗಿದ್ದ ಗಣಿ ಕಾರ್ಮಿಕರ ಆರೈಕೆ ಮಾಡುತ್ತಿದ್ದರು. ಕುಷ್ಠರೋಗಿಗಳ ಗಾಯ ತೊಳೆಯುತ್ತಿದ್ದರು. ಕಕ್ಕಸುಗಳನ್ನು ತೊಳೆಯಲು ನಾಚಿಕೆಪಟ್ಟುಕೊಳ್ಳುತ್ತಿರಲಿಲ್ಲ. ಅವರಿಗೆ ಸೋಮಾರಿತನವಾಗಲೀ, ಭಯ ಅಥವಾ ದ್ವೇಷವೆಂಬುದಾಗಲೀ ತಿಳಿದೇ ಇರಲಿಲ್ಲ.

ತಮ್ಮ ಪತ್ರಿಕೆಗಾಗಿ ಅವರು ಲೇಖನಗಳನ್ನು ಬರೆಯುತ್ತಿದ್ದರು. ಅವನ್ನು ತಾವೇ ಟೈಪ್ ಮಾಡುತ್ತಿದ್ದರು, ತಮ್ಮದೇ ಆದ ಸ್ವಂತ ಮುದ್ರಣಾಲಯದಲ್ಲಿ ಅಕ್ಷರ ಜೋಡಣೆ ಮಾಡುತ್ತಿದ್ದರು ಹಾಗೂ, ಅಗತ್ಯಬಿದ್ದಲ್ಲಿ, ಕರಚಾಲಿತ ಮುದ್ರಣಯಂತ್ರದಲ್ಲಿ ಮುದ್ರಿಸಲು ತಾವೂ ಕೈಹಾಕುತ್ತಿದ್ದರು. ಪುಸ್ತಕಗಳ ಬೈಂಡಿಂಗ್ ಕೆಲಸ ಚೆನ್ನಾಗಿ ಮಾಡುತ್ತಿದ್ದರು. ಸ್ಫೂರ್ತಿದಾಯಕ ಸಂಪಾದಕೀಯಗಳು ಮತ್ತು ಪತ್ರಗಳನ್ನು ಬರೆಯುತಿದ್ದ ಅವರ ಸೃಜನಶೀಲ ಕೈಗಳು ಚರಕಾದಲ್ಲೂ ನೂಲುತ್ತಿದ್ದವು, ನೇಯ್ಗೆಯಂತ್ರದಲ್ಲಿ ನೇಯುತ್ತಿದ್ದವು, ಹೊಸ ಅಡುಗೆಗಳನ್ನು ಮಾಡುತ್ತಿದ್ದವು, ಕೌಶಲ್ಯದಿಂದ ಸೂಜಿಯನ್ನು ಬಳಸುತ್ತಿದ್ದವು ಮತ್ತು ಹಣ್ಣಿನ ಮರಗಿಡಗಳು ಹಾಗೂ ತರಕಾರಿಗಳನ್ನು ಪೋಷಿಸುತ್ತಿದ್ದವು; ಅಷ್ಟೇ ನಿಪುಣತೆ ನೆಲ ಉಳುವುದರಲ್ಲೂ ಇತ್ತು, ಬಾವಿಯಿಂದ ನೀರು ಸೇದುವುದರಲ್ಲೂ ಇತ್ತು, ಸೌದೆ ಒಡೆಯುವುದರಲ್ಲೂ ಇತ್ತು, ಗಾಡಿಯಿಂದ ಭಾರಿ ತೂಕದ ವಸ್ತುಗಳನ್ನು ಇಳಿಸುವುದರಲ್ಲೂ ಇತ್ತು.

ಬಂದೀಖಾನೆಯಲ್ಲಿದ್ದಾಗ, ಒಂಬತ್ತು ಗಂಟೆಗಳ ಕಾಲ ಗುದ್ದಲಿಯಿಂದ ಗಟ್ಟಿಯಾದ ಒಣಭೂಮಿಯನ್ನು ಅಗೆದು ತೋಡಬೇಕಾಗಿತ್ತು ಅಥವಾ ಹರಿದ ಕಂಬಳಿಗಳನ್ನು ಹೊಲಿಯಬೇಕಾಗಿತ್ತು. ಬಹಳ ಆಯಾಸವೆನಿಸಿದಾಗ, ಅವರು ಭಗವಂತನಲ್ಲಿ ಶಕ್ತಿಗಾಗಿ ಪ್ರಾರ್ಥಿಸುತ್ತಿದ್ದರು. ತಮಗೆ ಒಪ್ಪಿಸಿದ ಯಾವುದೇ ಕೆಲಸದಲ್ಲಿ ವಿಫಲರಾಗುವ ಯೋಚನೆಯನ್ನೇ ಅವರಿಗೆ ಸಹಿಸಲಾಗುತ್ತಿರಲಿಲ್ಲ.

ಅವರ ಜೀವನದ ಮುಖ್ಯ ಘಟ್ಟದಲ್ಲಿ, ಹತ್ತಿರದ ಪಟ್ಟಣದ ಅಂಗಡಿಯಿಂದ ಕೆಲವು ಸಾಮಾನುಗಳನ್ನು ಕೊಳ್ಳಲು ಅವರು ಒಂದಕ್ಕಿಂತ ಹೆಚ್ಚು ಸಲ ದಿನಕ್ಕೆ 40 ಮೈಲಿ ನಡೆದಿದ್ದರು. ಒಮ್ಮೆಯಂತೂ 55 ಮೈಲಿಗಳನ್ನು ನಡೆದಿದ್ದರು. ಸ್ಕೌಟರ್ ಹೊರುವ ಸ್ವಯಂಸೇವಕರಾಗಿ ಅವರು ಗಾಯಾಳು ಸೈನಿಕರನ್ನು ಹೊತ್ತು ಒಮ್ಮೆಗೆ 30ರಿಂದ 40 ಮೈಲಿ ಗಳನ್ನು ನಡೆದಿದ್ದರು. 78ರ ವಯಸ್ಸಿನಲ್ಲೂ ವಾರಗಟ್ಟಲೆ, ದಿನಕ್ಕೆ 18 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದರು; ಕೆಲವೊಮ್ಮೆ ಅದು 21 ಗಂಟೆಗಳವರೆಗೂ ಮುಂದುವರೆಯುತ್ತಿತ್ತು. ಆ ವಯಸ್ಸಿನಲ್ಲಿ, ನೂಲುವುದರ ಹೊರತಾಗಿ ಅವರಿಗೆ ಬೇರೆ ಯಾವ ದೈಹಿಕ ಕೆಲಸವನ್ನೂ ಮಾಡಲಾಗುತ್ತಿರಲಿಲ್ಲ. ಆದರೆ ಚಳಿಗಾಲದ ಮುಂಜಾವುಗಳಲ್ಲಿಯೂ ಬರಿಗಾಲಲ್ಲಿ ಮೂರರಿಂದ ಐದು ಮೈಲಿಗಳವರೆಗೆ ಇಬ್ಬನಿ ಸುರಿದ ಹಳ್ಳಿಗಳ ದಾರಿಗಳಲ್ಲಿ ನಡೆಯುವಷ್ಟು ದೇಹದಾರ್ಢ್ಯತೆ ಅವರಲ್ಲಿತ್ತು. ಕೆಲಸದ ಬಗ್ಗೆ ಅವರಿಗಿದ್ದ ಅದ್ಭುತ ನಿಷ್ಠೆ ಮತ್ತು ಸಾಮರ್ಥ್ಯಗಳಿಂದಲೇ ಅವರಿಗೆ ದಕ್ಷಿಣ ಆಫ್ರಿಕಾದ ಅವರ ಸಹೋದ್ಯೋಗಿಗಳಿಂದ 'ಕರ್ಮವೀರ' ಎಂಬ ಬಿರುದು ಸಂದಿತು.

ಬ್ಯಾರಿಸ್ಟರ್

ಗಾಂಧಿ ತಮ್ಮ 18ನೇ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸು ಮಾಡಿದರು. ತಕ್ಷಣವೇ ಕಾನೂನಿನ ಅಧ್ಯಯನಕ್ಕಾಗಿ ಲಂಡನ್‌ಗೆ ತೆರಳಿದರು. ಮೋದ್-ಬನಿಯಾಗಳ ಪೈಕಿ ವಿದೇಶಕ್ಕೆ ಹೋದವರಲ್ಲಿ ಅವರೇ ಮೊದಲಿಗರು. ಇನ್ನರ್ ಟೆಂಪಲ್ ಸೇರಿದ ಬಳಿಕ, ಗಾಂಧಿಗೆ ಕಾನೂನು ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಸುಲಭ ಅನ್ನಿಸಿತು. ಒಂದೆರಡು ತಿಂಗಳ ಕಾಲ ಪಠ್ಯಪುಸ್ತಕದಲ್ಲಿಯೇ ಟಿಪ್ಪಣಿಗಳನ್ನು ಹಾಕಿಕೊಂಡೇ ಅನೇಕರು ತೇರ್ಗಡೆ ಹೊಂದುತ್ತಿದ್ದರು. ನೋಟ್ಸ್‌ಗಳನ್ನು ಓದುವ ಈ ಸುಲಭದ ಮಾರ್ಗ ಗಾಂಧಿಯವರಿಗೆ ಇಷ್ಟವಾಗಲಿಲ್ಲ. ಮೋಸ ಎಂದರೆ ಅವರಿಗೆ ಅಸಹ್ಯ. ಬದಲಿಗೆ, ಅವರು ಮೂಲ ಪಠ್ಯಪುಸ್ತಕಗಳನ್ನೇ ಓದಲು ಆಯ್ಕೆ ಮಾಡಿಕೊಂಡರು. ಅದಕ್ಕಾಗಿ ಅವುಗಳಿಗಾಗಿ ಹೆಚ್ಚು ಹಣ ವ್ಯಯಿಸಿದರು. ಸಾಮಾನ್ಯ ಕಾನೂನಿನ ದಪ್ಪ ದಪ್ಪ ಸಂಪುಟಗಳನ್ನು ಅವರು ಒಂಬತ್ತು ತಿಂಗಳುಗಳ ಕಾಲ ಶ್ರಮ ವಹಿಸಿ ಓದಬೇಕಾಯಿತು. ಅವರು ಲ್ಯಾಟಿನ್ ಭಾಷೆಯನ್ನು ಕಲಿತು ಮೂಲ ರೋಮನ್ ಕಾನೂನು ಪುಸ್ತಕಗಳನ್ನು ಓದಿದರು. ಆ ದಿನಗಳಲ್ಲಿ ಬ್ಯಾರಿಸ್ಟರ್‌ಗಳನ್ನು "ಡಿನ್ನರ್ ಬ್ಯಾರಿಸ್ಟರ್‌ಗಳು" ಎಂದು ಕರೆಯಲಾಗುತ್ತಿತ್ತು, ಏಕೆಂದರೆ ಮೂರು ವರ್ಷಗಳಲ್ಲಿ ಅವರು ಕಲಿಕೆಯ 12 ಅವಧಿಗಳನ್ನು ನಿಭಾಯಿಸಬೇಕಾಗಿತ್ತು. ಈ ಅವಧಿಯಲ್ಲಿ, ಒಟ್ಟಿನಲ್ಲಿ, ಅವರು ಕಡೇಪಕ್ಷ 72 ಭೋಜನ ಕೂಟಗಳಲ್ಲಿ ಭಾಗವಹಿಸಬೇಕಿತ್ತು. ಅಷ್ಟೇ ಅಲ್ಲ, ವಿದ್ಯಾರ್ಥಿಗಳು ಈ ದುಬಾರಿ ಔತಣಗಳ ವೆಚ್ಚವನ್ನು ತಾವೇ ಭರಿಸಬೇಕಾಗಿತ್ತು.

ಗಾಂಧಿಯವರಿಗೆ ಇಂತಹ ಸಾಮಾಜಿಕ ಕೂಟಗಳಲ್ಲಿ ಭಾಗವಹಿಸುವ ಅಭ್ಯಾಸವಿರಲಿಲ್ಲ. ಡಿನ್ನರ್‌ಗಳಲ್ಲಿ ತಿನ್ನುವುದು ಮತ್ತು ವೈನ್ ಕುಡಿಯುವುದು, ಅದು ಹೇಗೆ ಒಳ್ಳೆಯ ಬ್ಯಾರಿಸ್ಟರ್ ಆಗಲಿಕ್ಕೆ ಸಹಾಯ ಮಾಡಬಲ್ಲದು ಎಂಬುದು ಅವರಿಗೆ ಅರ್ಥವಾಗಲಿಲ್ಲ. ಆದರೂ, ಅವರು ಡಿನ್ನರ್‌ಗಳಿಗೆ ಹೋಗಲೇಬೇಕಾಗಿತ್ತು. ಅವರೋ ಸಸ್ಯಾಹಾರಿ. ಮದ್ಯಪಾನ ಮಾಡುತ್ತಿರಲಿಲ್ಲ. ಹೀಗಾಗಿ ಅವರು ಅಲ್ಲಿ ಎಲ್ಲಾ ತಿನಿಸುಗಳನ್ನು ತಿನ್ನುತ್ತಿರಲಿಲ್ಲ, ಮದ್ಯವನ್ನೂ ಕುಡಿಯುತ್ತಿರಲಿಲ್ಲ. ಆದ್ದರಿಂದಲೇ, ಬಹಳಷ್ಟು ಮಂದಿ ಕಾನೂನು ವಿದ್ಯಾರ್ಥಿಗಳು ಅವರನ್ನು ತಮ್ಮ ಜೊತೆಗಾರರನ್ನಾಗಿ ಮಾಡಿಕೊಳ್ಳಲು ಹಾತೊರೆಯುತ್ತಿದ್ದರು.

ಈ ಔತಣಕೂಟಗಳಾಗಲೀ, ವಾಚನಗೋಷ್ಠಿಗಳಾಗಲೀ ಗಾಂಧಿಯವರಿಗೆ ಅವರ ನಾಚಿಕೆ ಮತ್ತು ಪುಕ್ಕಲುತನಗಳಿಂದ ಆಚೆ ಬರುವುದಕ್ಕೆ ಸಹಾಯ ಮಾಡಲಿಲ್ಲ. ಒಂದು ಕೇಸ್ ಬಗ್ಗೆ ವಾದಿಸುವಾಗ ಪುಸ್ತಕದ ಕಲಿಕೆಯನ್ನು ಹೇಗೆ ಉಪಯೋಗಿಸುವುದೆಂದು ಅವರು ಚಿಂತಿಸಿದರು. ಆಗ ಒಬ್ಬ ಇಂಗ್ಲಿಷ್ ವಕೀಲ ಅವರಿಗೆ ಪ್ರೋತ್ಸಾಹ ನೀಡಿದ ಹಾಗೂ ಒಬ್ಬ ಒಳ್ಳೆಯ ವಕೀಲರಾಗಿ, ಸಭ್ಯ ಜೀವನಕ್ಕೆ ಬೇಕಾಗುವಷ್ಟು ಗಳಿಸಲು ಪ್ರಾಮಾಣಿಕತೆ ಮತ್ತು ಪರಿಶ್ರಮಗಳಿದ್ದರೆ ಸಾಕು ಎಂದು ತಿಳಿಸಿದ. ಕಾನೂನಿನ ಮುಕ್ಕಾಲು ಭಾಗ ವಾಸ್ತವಾಂಶಕ್ಕೆ ಸಂಬಂಧಿಸಿದ್ದು, ಒಂದು ಕೇಸ್‌ನ ವಾಸ್ತವ ಸಂಗತಿಗಳನ್ನು ನೋಡಿಕೊಂಡರೆ, ಕಾನೂನು ತನ್ನನ್ನು ತಾನು ನೋಡಿಕೊಳ್ಳುತ್ತದೆ. ಇತಿಹಾಸ ಮತ್ತು ಸಾಮಾನ್ಯ ಜ್ಞಾನದ ಪುಸ್ತಕಗಳನ್ನು ಓದುವಂತೆ ಆ ಮನುಷ್ಯ ಗಾಂಧಿಯವರಿಗೆ ಸಲಹೆ ನೀಡಿದ. ಈ ಸಲಹೆಯನ್ನು ಗಾಂಧಿ ಪಾಲಿಸಿದರು.

ಸ್ವಲ್ಪ ಕಾಲ, ಗಾಂಧಿಯವರು ಇಂಗ್ಲೆಂಡಿನಲ್ಲಿ ಒಬ್ಬ ಟಾಕ್‌ಠೀಕ್ ಆದ ಇಂಗ್ಲಿಷ್ ಸಭ್ಯಸ್ಥನಾಗಲು 'ಪ್ರಯತ್ನ ಮಾಡಿದರು. ಸರಿಯಾದ ಉಚ್ಚಾರಣೆ ಮತ್ತು ಭಾಷಣ ಮಾಡುವುದನ್ನು ಕಲಿಯಲೆತ್ನಿಸಿದರು. ನೃತ್ಯ ಮಾಡುವುದು, ಪಿಟೀಲು ನುಡಿಸುವುದು ಮತ್ತು ಆಧುನಿಕ ಉಡುಪು ಧರಿಸುವುದು – ಇವನ್ನೂ ಕಲಿಯಲು ಪ್ರಯತ್ನಿಸಿದರು. ಲಂಡನ್ನಿನ ಅತ್ಯಂತ ಆಧುನಿಕ ಉಡುಪುಗಳ ಅಂಗಡಿಯಲ್ಲಿ ದುಬಾರಿ ಸೂಟ್ ಒಂದನ್ನು ಖರೀದಿಸಿದರು. ಚಿನ್ನದ ಸರಪಣಿ ಇದ್ದ ಡಬಲ್ ವಾಚ್ ಖರೀದಿಸಿದರು. ಟೈಗಳು ಮತ್ತು ತಲೆಗೆ ಹ್ಯಾಟುಗಳು. ತರುಣಿಯರೊಡನೆಯೂ ಸ್ನೇಹ ಬೆಳೆಸಿದರು. ನಿಧಾನವಾಗಿ ಗಾಂಧಿ ಅನಾಯಾಸ ಹಾಗೂ ವೈಭವದ ಜೀವನಶೈಲಿಯತ್ತ ವಾಲುತ್ತಿದ್ದರು. ಕೆಲವು ತಿಂಗಳುಗಳ ಬಳಿಕ ನಾನೆಂಥ ಮೂರ್ಖ ಎಂಬುದರ ಅರಿವು ಅವರಿಗಾಯಿತು. ತಮ್ಮ ದುಬಾರಿ ಹವ್ಯಾಸಗಳಿಗಾಗಿ ಅವರು ತಮ್ಮ ಅಣ್ಣನ ಮೇಲೆ ಒತ್ತಡ ಹಾಕುತ್ತಿದ್ದರು. ಅವರು ಇಂಗ್ಲೆಂಡಿಗೆ ಬಂದಿದ್ದು ಅಧ್ಯಯನಕ್ಕಾಗಿ, ಇಂಗ್ಲಿಷ್ ಜನರ ರೀತಿನೀತಿಗಳನ್ನು ಅನುಕರಿಸುವುದಕ್ಕಲ್ಲ. ಒಡನೆಯೇ ಅವರು ತಮ್ಮ ಜೀವನಶೈಲಿಯನ್ನು ಬದಲಿಸಿಕೊಳ್ಳಲು ನಿರ್ಧರಿಸಿದರು. ಕಡಿಮೆ ಬಾಡಿಗೆಯ ಒಂದು ಕೋಣೆ ಮತ್ತು ಒಲೆಯನ್ನು ಪಡೆದು, ತಾವೇ ಬೆಳಿಗಿನ ತಿಂಡಿ, ರಾತ್ರಿಯ ಅಡುಗೆ ಮಾಡಿಕೊಳ್ಳಲು ಆರಂಭಿಸಿದರು. ಮಧ್ಯಾಹ್ನದ ಊಟ ಅಗ್ಗದ ಸಸ್ಯಾಹಾರಿ ಹೋಟೆಲುಗಳಲ್ಲಿ. ವಾಹನಗಳಿಗಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದರು. ಪ್ರತಿದಿನ ಎಂಟು–ಹತ್ತು ಕಿಲೋಮೀಟರ್ ದೂರ ನಡೆಯಲಾರಂಭಿಸಿದರು.

ಇಂಗ್ಲೆಂಡಿನಲ್ಲಿ 32 ತಿಂಗಳುಗಳ ಕಾಲ ವಾಸವಿದ್ದ ನಂತರ, ನಿಗದಿತ ಸಮಯದಲ್ಲೇ ಬ್ಯಾರಿಸ್ಟರ್ ಆಗಿ ಅವರ ದಾಖಿಲಾತಿಯೂ ಆಯಿತು. ಎರಡು ದಿನಗಳ ಬಳಿಕ ಅವರು ಭಾರತಕ್ಕೆ ಹಡಗಿನ ಮೂಲಕ ಪ್ರಯಾಣ ಬೆಳೆಸಿದರು. ಭಾರತಕ್ಕೆ ಬಂದ ನಂತರ ಅವರು ಬಾಂಬೆಯಲ್ಲಿ ಒಂದು ಮನೆಯನ್ನು ಬಾಡಿಗೆಗೆ ಹಿಡಿದರು; ಒಬ್ಬ ಅಡುಗೆಯವನನ್ನೂ ನೇಮಿಸಿಕೊಂಡರು. ಹೈಕೋರ್ಟಿಗೆ ದಿನಾ ಹೋಗುತ್ತಿದ್ದರು, ಕೇಸ್‌ಗಳು ಹೇಗೆ ನಡೆಯುತ್ತವೆ ಎಂಬುದನ್ನು ನೋಡುತ್ತಿದ್ದರು ಹಾಗೂ ವಕೀಲರ ಸಂಘದ ಗ್ರಂಥಾಲಯದಲ್ಲಿ ಬಹಳಷ್ಟು ತಾಸುಗಳನ್ನು ಕಳೆಯುತ್ತಿದ್ದರು. ಭಾರತೀಯ ಕಾನೂನಿನ ಬಗ್ಗೆ ಪುಸ್ತಕಗಳನ್ನು ಓದುತ್ತಿದ್ದರು.

ಗಾಂಧಿಯವರ ಮೊದಲ ಕೇಸ್ ಸರಳವಾದದ್ದಾಗಿತ್ತು, ಅದಕ್ಕಾಗಿ ಅವರಿಗೆ ಸಂದ ಶುಲ್ಕ 30 ರೂ.ಗಳು. ಅನುಭವವಿಲ್ಲದ 22 ವರ್ಷದ ತರುಣ ಬ್ಯಾರಿಸ್ಟರ್, ವಾದ ಮಾಡಲು ಎದ್ದು ನಿಂತಾಗ, ಧೈರ್ಯವೇ ಉಡುಗಿಹೋಗಿತ್ತು. ತಲೆ ಸುತ್ತಿತು, ಗಂಟಲು ಒಣಗಿತು. ನಾಚಿಕೆ–ಅವಮಾನಗಳಿಂದ ಅವರು ನ್ಯಾಯಾಲಯದಿಂದ ಹೊರಬಂದರು. ಆಮೇಲೆ, ಆ ನ್ಯಾಯಾಲಯದಲ್ಲಿ ಅವರು ಯಾವ ಕೇಸನ್ನೂ ತೆಗೆದುಕೊಳ್ಳಲಿಲ್ಲ.

ಅವರ ವೆಚ್ಚಗಳು ಏರುತ್ತಲಿದ್ದವು, ಆದಾಯ ಮಾತ್ರ ಹೆಚ್ಚುಕಮ್ಮಿ ಶೂನ್ಯವಾಗಿತ್ತು. ಅರ್ಜಿ–ಬಿನ್ನವತ್ತಳೆಗಳನ್ನು ಬರೆಯುವುದರಲ್ಲಿ ಅವರದು ಎತ್ತಿದ ಕೈಯಾಗಿತ್ತು. ಆದರೆ ಅದು ಬ್ಯಾರಿಸ್ಟರ ಕೆಲಸವಲ್ಲವಲ್ಲ. ಅಲ್ಲದೆ, ಅದರಿಂದ ಅಂಥ ವರಮಾನವೂ ಸಿಗುತ್ತಿರಲಿಲ್ಲ. ಹೀಗೆ ಆರು ತಿಂಗಳುಗಳ ಪ್ರಯತ್ನದ ನಂತರ, ಗಾಂಧಿ ರಾಜ್‌ಕೋಟ್‌ನಲ್ಲಿದ್ದ ತಮ್ಮ ಅಣ್ಣ ಮತ್ತು ಆತನ ಕುಟುಂಬದವರನ್ನು ಸೇರಿಕೊಂಡರು. ಇಂಗ್ಲೆಂಡಿನಿಂದ ಬಂದ ಬ್ಯಾರಿಸ್ಟರ್ ತಮ್ಮನ ಯಶಸ್ಸಿನ ಬಗ್ಗೆ ಆ ಅಣ್ಣನಿಗೆ ಉಚ್ಚ ಆಶಯಗಳಿದ್ದವು. ಅವರಿಗೆ ಭಯಂಕರ ನಿರಾಶೆಯಾಯಿತು. ಗಾಂಧಿಯವರಿಗೆ ಅತೀವ ದುಃಖವಾಯಿತು.

ರಾಜ್‌ಕೋಟ್‌ನಲ್ಲಿ ಇನ್ನೂ ಒಂದು ಕಷ್ಟ ತಲೆ ಎತ್ತಿತು. ನಿಯಮದ ಪ್ರಕಾರ,

ಕೇಸುಗಳನ್ನು ತಂದ ವಕೀಲರಿಗೆ ಅವರು ದಳ್ಳಾಳಿ ರುಸುಮು ಎಂದು ಇಂತಿಷ್ಟು ಹಣ ಕೊಡಬೇಕಾಗುತ್ತಿತ್ತು. ಗಾಂಧಿಯವರಿಗೆ ಅದು ನೀತಿಯುತವಲ್ಲ ಎಂದು ತೋರಿದ್ದರಿಂದ ಹಾಗೆ ಕೊಡಲು ನಿರಾಕರಿಸಿದರು. ಅವರ ಅಣ್ಣ ಬೇಡಿಕೊಂಡಾಗ ಗಾಂಧಿ ರಾಜಿ ಮಾಡಿಕೊಂಡರು. ಆಗ ಗಾಂಧಿಯವರು ತಿಂಗಳಿಗೆ 300 ರೂ. ಸಂಪಾದಿಸುತ್ತಿದ್ದರು. ಆ ಕೆಲಸ ಮಾಡುವುದರಲ್ಲಿ ಅವರಿಗೆ ಸ್ವಲ್ಪವೂ ಸಂತೋಷವಿರಲಿಲ್ಲ; ಸುತ್ತಮುತ್ತಲೂ ನಡೆಯುತ್ತಿದ್ದ ಮೋಸ–ತಟವಟಗಳೂ ಹಿಡಿಸುತ್ತಿರಲಿಲ್ಲ.

ಅದೃಷ್ಟವೆಂಬಂತೆ, ಅವರಿಗೆ ದಕ್ಷಿಣ ಆಫ್ರಿಕಾದ ಒಬ್ಬ ಶ್ರೀಮಂತ ಮುಸಲ್ಮಾನ ವರ್ತಕನಿಂದ ಒಂದು ಪ್ರಸ್ತಾಪ ಬಂದಿತು. ಆ ಪ್ರಕಾರ ಎಲ್ಲವೂ ಸೇರಿ 1,575 ರೂ.ಗಳು ಸಿಗುತ್ತಿತ್ತು ಮತ್ತು ಅಲ್ಲಿಗೆ ಹೋಗಿ–ಬರಲು ಮೊದಲನೇ ದರ್ಜೆಯ ಹಡಗು ಪ್ರಯಾಣದ ವೆಚ್ಚ. ಗಾಂಧಿ ಈ ಪ್ರಸ್ತಾಪವನ್ನು ಒಪ್ಪಿಕೊಂಡು, ದೂರದ ಖಂಡಕ್ಕೆ ಹೋಗಲು ಹಡಗನ್ನೇರಿದರು. ದಕ್ಷಿಣ ಆಫ್ರಿಕಾದಲ್ಲಿನ ಜೀವನ–ಅಲ್ಲಿನ ಸ್ಥಿತಿಗತಿಗಳ ಬಗ್ಗೆ ಅವರಿಗೇನೇನೂ ಗೊತ್ತಿರಲಿಲ್ಲ. ಹಡಗು ಜಾಂಜಿಬಾರ್‌ನಲ್ಲಿ ಲಂಗರು ಹಾಕಿದಾಗ, ಅಲ್ಲಿನ ನ್ಯಾಯಾಲಯಕ್ಕೆ, ಅಲ್ಲಿ ಕೆಲಸಕಾರ್ಯ ಹೇಗೆ ನಡೆಯುತ್ತದೆ ಎಂದು ನೋಡಲು ಹೋದರು. ಜಮಾ–ಖರ್ಚುಗಳಿಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳು ಅವರಿಗೆ ಅರ್ಥವಾಗಲೇ ಇಲ್ಲ. ಯಾವ ಕೇಸಿಗಾಗಿ ಅವರು ದಕ್ಷಿಣ ಆಫ್ರಿಕಾಕ್ಕೆ ಹೋಗುತ್ತಿದ್ದರೋ, ಅದು ಮುಖ್ಯವಾಗಿ ಲೆಕ್ಕಪತ್ರಗಳಿಗೆ ಸಂಬಂಧಿಸಿದುದೇ ಆಗಿತ್ತು. ಗಾಂಧಿ ಲೆಕ್ಕಿಗತನದ ಪುಸ್ತಕವೊಂದನ್ನು ಆಗ ಖರೀದಿಸಿ ತಂದು, ಜಾಗರೂಕತೆಯಿಂದ ಓದಿದರು.

ದಕ್ಷಿಣ ಆಫ್ರಿಕಾದ ಡರ್ಬಾನ್‌ನಲ್ಲಿ ಬಂದಿಳಿದ ಮೂರನೇ ದಿನ ಗಾಂಧಿ ಅಲ್ಲಿನ ನ್ಯಾಯಾಲಯಕ್ಕೆ ಹೋದರು. ಅವರು ತಲೆಗೆ ಸುತ್ತಿದ್ದ ಪೇಟಾವನ್ನು ತೆಗೆಯಬೇಕೆಂದು ಅಲ್ಲಿನ ಮ್ಯಾಜಿಸ್ಟ್ರೇಟರು ಆದೇಶಿಸಿದರು. ಗಾಂಧಿ ಅವರ ಆದೇಶವನ್ನು ಪಾಲಿಸಲು ನಿರಾಕರಿಸಿ, ನ್ಯಾಯಾಲಯದಿಂದಾಚೆ ನಡೆದರು. ದಕ್ಷಿಣ ಆಫ್ರಿಕಾದ ನೆಲದ ಮೇಲೆ ಕಾಲಿಟ್ಟಾಗಿನಿಂದ, ಭಾರತೀಯರನ್ನು ಬಿಳಿಯರು ಎಷ್ಟು ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ ಎಂಬುದನ್ನು ಅವರು ಗಮನಿಸಿದರು. ಗಾಂಧಿಯವರಿಗೆ 'ಸ್ವಾಗತವಿಲ್ಲದ ಆಗಂತುಕ' ಮತ್ತು 'ಕೂಲಿ ಬ್ಯಾರಿಸ್ಟರ್' ಎಂಬ ಹಣೆಪಟ್ಟಿಗಳನ್ನು ಹಚ್ಚಲಾಯಿತು. ಈ ಅಪಮಾನಗಳಿಂದ ಅವರು ನೊಂದರು.

ತಮ್ಮ ಕಕ್ಷಿದಾರ ದಾದಾ ಅಬ್ದುಲ್ಲಾರಿಂದ ಗಾಂಧಿ ವಿವಾದಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನು ತಿಳಿದುಕೊಂಡರು. ಹಾಗೇ ಕೇಸ್ ಬಗ್ಗೆ ಸಂಪೂರ್ಣ ಅಧ್ಯಯನ ನಡೆಸಿದರು. ಎರಡೂ ಪಕ್ಷಗಳವರು ತಂತಮ್ಮ ವಕೀಲರಿಗಾಗಿ ದೀರ್ಘ ಕಾಲದವರೆಗೆ ಹಣ ವ್ಯಯಿಸುತ್ತಾ ಹೋದರೆ, ಇಬ್ಬರೂ ನಾಶವಾಗುತ್ತಾರೆ ಎಂದು ಅವರು ಆಲೋಚಿಸಿದರು. ತಮ್ಮ ಕಕ್ಷಿದಾರರ ಖರ್ಚಿನಲ್ಲಿ ತಾವು ಹಣ ಮಾಡುವುದಾಗಲೀ, ಸ್ಥಾನ ಪಡೆಯುವುದಾಗಲೀ ಅವರಿಗೆ ಇಷ್ಟವಾಗಲಿಲ್ಲ. ಒಬ್ಬ ಕಾನೂನು ಸಲಹೆಗಾರನಾಗಿ ತಮ್ಮ ನಿಜವಾದ ಕೆಲಸ ಎರಡೂ ಪಕ್ಷಗಳವರನ್ನು ಒಂದುಗೂಡಿಸುವುದು ಎಂದು ಅವರು ನಂಬಿದ್ದರು. ನ್ಯಾಯಾಲಯದಿಂದಾಚೆ ವಿವಾದವನ್ನು ಇತ್ಯರ್ಥ ಮಾಡುವುದಕ್ಕಾಗಿ ಎದುರು ಪಕ್ಷದವರನ್ನು ತಾವು ಭೇಟಿ ಮಾಡಬೇಕೆಂದು ಅವರು ಒತ್ತಾಯಿಸಿದರು. ದಾದಾ ಅಬ್ದುಲ್ಲಾ ಸ್ವಲ್ಪ ಹಿಂಜರಿದಾಗ ಗಾಂಧಿ ಹೇಳಿದರು, "ನಮ್ಮಿಬ್ಬರ ಮಧ್ಯೆ ಗೌಪ್ಯವಾಗಿರುವ ವಿಷಯ ಬೇರೆ ಯಾರಿಗೂ ಗೊತ್ತಾಗುವುದಿಲ್ಲ. ಒಂದು ಇತ್ಯರ್ಥಕ್ಕೆ ಬರೋಣ ಎಂದಷ್ಟೇ ನಾನು ಅವರಿಗೆ ಸಲಹೆ ಕೊಡುತ್ತೇನೆ." ಗಾಂಧಿಯವರ ಮಧ್ಯಸ್ಥಿಕೆಯ ಪೊರತಾಗಿಯೂ, ಈ ಕೇಸ್ ಒಂದು ವರ್ಷದವರೆಗೆ ಎಳೆಯಿತು. ಒಂದು ಸಂಕೀರ್ಣವಾದ ಕೇಸ್‌ಅನ್ನು ಅತ್ಯುತ್ತಮ ನ್ಯಾಯಾಧೀಶರು ಮತ್ತು ವಕೀಲರು ಹೇಗೆ ನಿರ್ವಹಿಸುತ್ತಾರೆಂಬುದನ್ನು ಅಭ್ಯಾಸ ಮಾಡಲು ಗಾಂಧಿಯವರಿಗೆ ಒಂದು ಒಳ್ಳೆಯ ಅವಕಾಶ ಸಿಕ್ಕಿತ್ತು. ಅವರು ಸಾಕ್ಷ್ಯಾಧಾರಗಳನ್ನು ತಯಾರು ಮಾಡಿದರು. ಎರಡೂ ಪಕ್ಷಗಳಿಗೆ ತೃಪ್ತಿಯಾಗುವಂತೆಯೇ ವಿವಾದ ಬಗೆಹರಿಯಿತು. ಆದರೆ, ಗಾಂಧಿಯವರಿಗೆ ಎರಡು ಪಕ್ಷಗಳಿಗೆ ಬೆಂಬಲವಾಗಿ ಕಾನೂನಿನ ಅಂಶಗಳನ್ನು ಮೇಲೆತ್ತಿ, ವೆಚ್ಚವನ್ನು ಏರಿಸುವಂಥ ತಮ್ಮ ವೃತ್ತಿಯ ಬಗ್ಗೆಯೇ ಜಿಗುಪ್ಸೆ ಹುಟ್ಟಿತು.

ಡರ್ಬಾನ್‌ನ ನ್ಯಾಯಾಲಯದಲ್ಲಿ ಗಾಂಧಿ ತಮ್ಮ ವೃತ್ತಿಯ ಅಭ್ಯಾಸದಲ್ಲಿ ತೊಡಗಿಕೊಂಡ ಒಡನೆಯೆ, ಬಾಲಸುಂದರಂ ಎಂಬ ಹೆಸರಿನ, ಕರಾರಿನ ಮೇಲೆ ಅಲ್ಲಿಗೆ ಬಂದಂತಹ ಕಾರ್ಮಿಕ ಅವರ ಕಚೇರಿಗೆ ಬಂದ. ಅವನ ಬಟ್ಟೆ ಹರಿದಿತ್ತು, ಮುಂದಿನ ಎರಡು ಹಲ್ಲುಗಳು ಮುರಿದಿದ್ದವು. ಅವನ ಬಿಳಿಯ ಯಜಮಾನ ಅವನಿಗೆ ಬಾರಿಸಿದ್ದ. ಗಾಂಧಿ ಅವನಿಗೆ ಸಮಾಧಾನ ಮಾಡಿದರು. ಒಬ್ಬ ಬಿಳಿಯ ವೈದ್ಯನಿಂದ ಔಷಧೋಪಚಾರ ಮಾಡಿಸಿದರು. ಗಾಯದ ಗಂಭೀರತೆಗೆ ಸಂಬಂಧಿಸಿದಂತೆ ವೈದ್ಯಕೀಯ ಪ್ರಮಾಣಪತ್ರವನ್ನು ಕೊಡಿಸಿದರು. ಅವರು ಬಾಲಸುಂದರಂಗಾಗಿ ಹೋರಾಡಿದರು, ಅವನ ಕೇಸನ್ನು ಗೆದ್ದುಕೊಟ್ಟರು. ಅಷ್ಟೇ ಅಲ್ಲ, ಅವನಿಗೊಬ್ಬ ಒಳ್ಳೆಯ ಯಜಮಾನನನ್ನು ಸಹ ಹುಡುಕಿಕೊಟ್ಟರು. ಈ ಘಟನೆ ಅಲ್ಲಿನ ಬಡ ಭಾರತೀಯ ಕಾರ್ಮಿಕರಲ್ಲಿ ಗಾಂಧಿಯವರನ್ನು ಜನಪ್ರಿಯರನ್ನಾಗಿಸಿತು. ಅಸಹಾಯಕರ ರಕ್ಷಕ ಎಂಬ ಖ್ಯಾತಿ ಭಾರತವನ್ನು ಮುಟ್ಟಿತು. ಅಂದಿನಿಂದ ಆ ಜನ ಗಾಂಧಿಯವರನ್ನು 'ಸ್ನೇಹಿತರಿಲ್ಲದವರಿಗೆ ಸ್ನೇಹಿತ' ಎಂದೇ ನೋಡುತ್ತಿದ್ದರು.

ಒಂದು ವರ್ಷದ ಅನುಭವ, ಆತ್ಮವಿಶ್ವಾಸವನ್ನು ಪಡೆದುಕೊಳ್ಳಲು ಗಾಂಧಿಯವರಿಗೆ ನೆರವಾಯಿತು. ಕೊಂಚ ವಾದ-ವಿವಾದಗಳ ವಿನಿಮಯದ ನಂತರ, ಈ ಕೂಲಿ ಬ್ಯಾರಿಸ್ಟರ್‌ಗೆ ನಟಾಲ್ ಸುಪ್ರೀಂ ಕೋರ್ಟಿನಲ್ಲಿ ದಾಖಲಾತಿ ಪಡೆಯಲು ಅನುಮತಿ ಸಿಕ್ಕಿತು. ಬಿಳಿಯ ವಕೀಲರು ಅವರಿಗೆ ಕೇಸುಗಳನ್ನೇ ಕೊಡುತ್ತಿರಲಿಲ್ಲ. ಇದಲ್ಲದೆ, ತಮ್ಮ ಕಾನೂನಿನ ಅಭ್ಯಾಸಕ್ಕೆ ಅವರೇ ಕೆಲವು ಅಡೆತಡೆಗಳನ್ನು ಸೇರಿಸಿಕೊಂಡರು. ವಕೀಲರ ವೃತ್ತಿಯು ಸುಳ್ಳುಕೋರರ ವೃತ್ತಿಯಲ್ಲ ಎಂಬುದನ್ನು ಸಾಬೀತುಪಡಿಸಲು ಅವರು ನಿರ್ಧರಿಸಿದ್ದರು. ಒಂದು ಕೇಸನ್ನು ಗೆಲ್ಲಲಿಕ್ಕಾಗಿ ಅವರು ಎಂದೂ ಸುಳ್ಳು ಹೇಳಲಿಲ್ಲ ಅಥವಾ ಒಬ್ಬ ಸಾಕ್ಷಿಗೆ ಸುಳ್ಳು ಹೇಳುವಂತೆ ಹೇಳಿಕೊಡಲಿಲ್ಲ. ಅವರ ಕಕ್ಷಿದಾರ ಗೆಲ್ಲಲಿ–ಬಿಡಲಿ, ತಮ್ಮ ವಾಡಿಕೆಯ ಶುಲ್ಕಕ್ಕಿಂತ ಹೆಚ್ಚಾಗಲೀ, ಕಡಿಮೆಯಾಗಲೀ ಅವರು ತೆಗೆದುಕೊಳ್ಳುತ್ತಿರಲಿಲ್ಲ. ಒಂದು ವೇಳೆ ಶುಲ್ಕ ಬಾಕಿ ಉಳಿದಿದ್ದರೆ, ಅದಕ್ಕಾಗಿ ತಮ್ಮ ಕಕ್ಷಿದಾರರಿಗೆ ಎಂದೂ ನೆನಪಿನೋಲೆ ಕಳುಹಿಸುತ್ತಿರಲಿಲ್ಲ ಹಾಗೂ ವೈಯಕ್ತಿಕ ದೂರು–ಅಸಮಾಧಾನಗಳಿಗೆ ಯಾರ ಮೇಲೂ ಕಾನೂನು ಕ್ರಮ ತೆಗೆದುಕೊಳ್ಳುತ್ತಿರಲಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಅವರ ಮೇಲೆ ನಾಲ್ಕು ಬಾರಿ ಹಲ್ಲೆ ನಡೆಯಿತು. ಆದರೆ ತಪ್ಪಿತಸ್ಥರನ್ನು ನ್ಯಾಯಾಲಯಕ್ಕೆ ಎಳೆಯಲು ಅಥವಾ ಅವರನ್ನು ಶಿಕ್ಷೆಗೆ ಒಳಪಡಿಸಲು ಅವರು ನಿರಾಕರಿಸಿದರು. ತಮ್ಮ 20 ವರ್ಷಗಳ ವಕೀಲವೃತ್ತಿಯಲ್ಲಿ, ನ್ಯಾಯಾಲಯದಾಚೆ ನೂರಾರು ಕೇಸುಗಳನ್ನು ಇತ್ಯರ್ಥ ಮಾಡಲು ಸಹಾಯ ಮಾಡಿದರು.

ಒಮ್ಮೆ ಒಂದು ಕೇಸನ್ನು ನಡೆಸುತ್ತಿದ್ದಾಗ, ಅವರ ಕಕ್ಷಿದಾರ ಅಪ್ರಾಮಾಣಿಕ ಎಂಬುದು ತಿಳಿದುಬಂದಿತು. ಆ ಕಕ್ಷಿದಾರರ ಪರವಾಗಿ ವಾದ ಮಾಡುವ ಬದಲು, ಅವರು ಕೇಸನ್ನು ವಜಾ ಮಾಡುವಂತೆ ಮ್ಯಾಜಿಸ್ಟ್ರೇಟರಿಗೆ ಹೇಳಿದರಲ್ಲದೆ, ತಪ್ಪು ಕೇಸನ್ನು ತಂದಿದ್ದಕ್ಕಾಗಿ

ಕಕ್ಷಿದಾರರನ್ನು ಆಕ್ಷೇಪಿಸಿದರು. ಒಮ್ಮೆ ಗಾಂಧಿ ಹೇಳಿದರು: "ನನ್ನ ಕಾನೂನು ವೃತ್ತಿಯನ್ನು ಒಬ್ಬ ಎರಡನೇ ದರ್ಜೆ ವಕೀಲನಾಗಿ ನಾನು ಆರಂಭಿಸಿದೆ. ನನ್ನ ಕಾನೂನು ಕೌಶಲಗಳ ಬಗ್ಗೆ ನನ್ನ ಕಕ್ಷಿದಾರರು ಸ್ವಲ್ಪವೂ ಪ್ರಭಾವಿತರಾಗಿರಲಿಲ್ಲ. ಆದರೆ ಯಾವುದೇ ಸಂದರ್ಭದಲ್ಲೂ ನಾನು ಸತ್ಯ ಬಿಟ್ಟು ಹೋಗಲಾರೆನೆಂಬುದನ್ನು ಅರಿತರೋ, ಅವರು ನನಗೆ ಅಂಟಿಕೊಂಡರು." ಗಾಂಧಿಯವರ ಕಕ್ಷಿದಾರರು ಅವರ ಸ್ನೇಹಿತರಾದರು, ಸಹೋದ್ಯೋಗಿಗಳಾದರು. ಪ್ರಾಮಾಣಿಕತೆಗೆ ಅವರು ಎಂತಹ ಕೀರ್ತಿ ತಂದಿತ್ತರೆಂದರೆ, ಒಮ್ಮೆ ಅವರ ಕಕ್ಷಿದಾರರು ಜೈಲಿಗೆ ಹೋಗುವುದರಿಂದ ತಪ್ಪಿಸಿದರು. ಆ ಹಳೆಯ ಕಕ್ಷಿದಾರರು ಸುಂಕ ಪಾವತಿಸದೆ ವಸ್ತುಗಳ ಕಳ್ಳಸಾಗಾಣಿಕೆ ಮಾಡುತ್ತಿದ್ದರು. ಆದರೆ ಅವರ ಗೌರವಕ್ಕೆ ಚ್ಯುತಿ ಬಂದಾಗ, ಅವರು ಗಾಂಧಿಯವರ ಬಳಿ ನಿಜ ಹೇಳಿದರು. ಗಾಂಧಿಯವರು ತಮ್ಮ ತಪ್ಪನ್ನು ಒಪ್ಪಿಕೊಂಡು, ದಂಡವನ್ನು ತೆರುವಂತೆ ಅವರಿಗೆ ಸಲಹೆ ನೀಡಿದರು. ಗಾಂಧಿ ಅಟಾರ್ನಿ ಜನರಲ್ ಮತ್ತು ಸುಂಕದ ಅಧಿಕಾರಿಗಳನ್ನು ಭೇಟಿ ಮಾಡಿ, ವಸ್ತುಸ್ಥಿತಿಯನ್ನು ಇರುವಂತೆಯೇ ವರದಿ ಮಾಡಿದರು. ಅವರ ವರದಿಯ ಬಗ್ಗೆ ಏನೂ ಪ್ರಶ್ನಿಸಲೇ ಇಲ್ಲ. ತಪ್ಪಿತಸ್ಥರಿಗೆ ಮಾತ್ರ ದಂಡ ವಿಧಿಸಲಾಯಿತು. ಕೃತಜ್ಞತಾಪೂರ್ವಕವಾಗಿ ಆ ಕಕ್ಷಿದಾರ ಇಡೀ ಪ್ರಸಂಗವನ್ನು ಮುದ್ರಿಸಿ, ಆ ಹಾಳೆಯನ್ನು ತಮ್ಮ ಕಚೇರಿಯ ಕೋಣೆಯಲ್ಲಿ ತೂಗು ಹಾಕಿದರು.

ಮತ್ತೊಂದು ಸಂದರ್ಭದಲ್ಲಿ, ಅವರ ಕಕ್ಷಿದಾರರ ಕಾಗದಪತ್ರಗಳಲ್ಲಿ ಲೆಕ್ಕ ತಪ್ಪು ತಪ್ಪಾಗಿ ದಾಖಲಾಗಿತ್ತು. ಗಾಂಧಿ ಎದುರುಪಕ್ಷದವರಿಗೇ ಈ ತಪ್ಪನ್ನು ಎತ್ತಿ ತೋರಿ, ಸಮರ್ಥವಾಗಿ ವಾದ ಮಾಡಿದರು. ಮೊದಲಿಗೆ ಗಾಂಧಿಯವರದು ಚಾಲಾಕಿತನದ ವಕಾಲತ್ತು ಎಂದು ಆಪಾದಿಸಿದ ನ್ಯಾಯಾಧೀಶರು, ನಂತರ ಗಾಂಧಿಯವರ ಕಕ್ಷಿದಾರರ ಪರವಾಗಿಯೇ ತೀರ್ಪು ನೀಡಿದರು. ನ್ಯಾಯಾಧೀಶರು ಎದುರು ಪಕ್ಷದವರನ್ನು ಕೇಳಿದರು: "ಒಂದು ವೇಳೆ ಗಾಂಧಿಯವರು ಈ ತಪ್ಪನ್ನು ಒಪ್ಪಿಕೊಳ್ಳದೆಯೇ ಹೋಗಿದ್ದಲ್ಲಿ, ನೀವೇನು ಮಾಡುತ್ತಿದ್ದಿರಿ?" ಎಂದು. ಗಾಂಧಿ ಪಾಟೀಸವಾಲಿನಲ್ಲಿ ನಿಪುಣರಾಗಿದ್ದರು. ನ್ಯಾಯಾಧೀಶರು ಮತ್ತು ವಕೀಲರ ಸಂಘದ ಸದಸ್ಯರಿಗೆ ಅವರೆಂದರೆ ಬಹಳ ಗೌರವ. ಬಹಳ ಮಂದಿ ಬಿಳಿಯರೂ ಅವರಿಗೆ ಕಕ್ಷಿದಾರರಾಗಿದ್ದರು. ಭಾರತದಲ್ಲೇ ಆಗಲೀ, ದಕ್ಷಿಣ ಆಫ್ರಿಕಾದಲ್ಲೇ ಆಗಲಿ, 100 ಕೇಸುಗಳ ಪೈಕಿ 99 ಕೇಸುಗಳಲ್ಲಿ ಯೂರೋಪಿಯನ್ನರ ವಿರುದ್ಧ ಭಾರತೀಯರಿಗೆ ನ್ಯಾಯ ಸಿಗುತ್ತಿರಲಿಲ್ಲ. ಇಂತಹ ಪ್ರಸಂಗಗಳೇ ಅವರು ಹೀಗೆ ಹೇಳುವಂತೆ ಮಾಡಿದ್ದು: "ಭಾರತದಲ್ಲಿನ ಭೀಕರ ಕೊಲೆಗಳಿಗೆ ಒಬ್ಬನೇ ಒಬ್ಬ ಇಂಗ್ಲಿಷಿನವ ಕಾನೂನಿನ ತೀವ್ರದಂಡನೆಯನ್ನು ಅನುಭವಿಸಿದ್ದಾನೆಯೇ ? ಒಬ್ಬ ಇಂಗ್ಲಿಷ್ ಅಧಿಕಾರಿಯ ಮೇಲೆ ನಡೆಸಿದ ವಿಚಾರಣೆಯನ್ನು ನೋಡಿ. ಹಾಗೆಯೇ ಅವನು ಉದ್ದೇಶಪೂರ್ವಕವಾಗಿ ಸಾಧುಸ್ವಭಾವದ ನೀಗ್ರೋಗಳನ್ನು ಹಿಂಸಿಸಿದ್ದಕ್ಕೆ ಅವನಿಗೆ ದೊರೆತ ವಿಡಂಬನಾತ್ಮಕ ಶಿಕ್ಷೆಯನ್ನೂ ನೋಡಿ."

ಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸುವುದರ ಜೊತೆಗೆ ಕಾನೂನಿನ ಬಗ್ಗೆ ಪ್ರತಿಕೂಲ ಟೀಕೆಗಳನ್ನು ಮಾಡಿದರೂ, ಗಾಂಧಿ ತಮ್ಮ ವೃತ್ತಿಯಲ್ಲಿ ಅಭಿವೃದ್ಧಿ ಹೊಂದಿದರು. ಭಾರತದಲ್ಲಿ ಅವರು ಸ್ವಲ್ಪ ಕಾಲದವರೆಗೆ ಕಾನೂನಿನ ವೃತ್ತಿಯಲ್ಲಿ ತೊಡಗಿಕೊಂಡಿದ್ದರು. ಆದರೆ ದಕ್ಷಿಣ ಆಫ್ರಿಕಾದಲ್ಲಿ 20 ವರ್ಷಗಳವರೆಗೆ ವಕೀಲ ವೃತ್ತಿಯನ್ನು ನಡೆಸಿದ್ದರು. ಆರಂಭದಲ್ಲಿ ಅವರು ಒಂದು ಒಳ್ಳೆಯ ಪ್ರದೇಶದಲ್ಲಿ ಬಾಡಿಗೆಗೆ ಮನೆಯೊಂದನ್ನು ಪಡೆದು, ಒಬ್ಬ ಏಳಿಗೆ ಹೊಂದುತ್ತಿರುವ ಬ್ಯಾರಿಸ್ಟರ್‌ಗೆ ಸರಿಹೊಂದುವಂತಹ ಸಂಸ್ಥೆಯನ್ನು ನೆಲೆಗೊಳಿಸಿದರು. ಅದನ್ನು ಅವರು ಯೂರೋಪಿಯನ್ ಶೈಲಿಯಲ್ಲಿ ಸಜ್ಜುಗೊಳಿಸಿದರು. ಭಾನುವಾರ ಮತ್ತು ರಜಾದಿನಗಳಂದು, ಮೇಜವಾನಿಗಳನ್ನು ಏರ್ಪಡಿಸುತ್ತಿದ್ದರು. ಅವರದು ಒಂದು ಮುಕ್ತ ಮನೆಯಾಗಿತ್ತು. ತಮ್ಮೊಂದಿಗೆ ಅಲ್ಲಿಯೇ ವಾಸಿಸಲು ತಮ್ಮ ಹತ್ತಿರದ ಸ್ನೇಹಿತರನ್ನು ಹಾಗೂ ಸಿಬ್ಬಂದಿಯನ್ನು ಆಹ್ವಾನಿಸುತ್ತಿದ್ದರು. ಅವರ ಕಚೇರಿ ಮನೆಯಿಂದ ಆರು ಮೈಲಿಗಳ ದೂರದಲ್ಲಿತ್ತು. ಕೆಲವು ತಿಂಗಳ ಕಾಲ ಅವರು ಬೈಸಿಕಲ್ ಸವಾರಿ ಮಾಡುತ್ತಿದ್ದರು. ಆಮೇಲೆ ಕಚೇರಿಗೆ ನಡೆದೇ ಹೋಗತೊಡಗಿದರು. ಟ್ರಾಮ್ ಕಾರ್‌ನಲ್ಲಿ ಮುಂಭಾಗದ ಸೀಟುಗಳಲ್ಲಿ ಕುಳಿತುಕೊಳ್ಳುವುದಕ್ಕೆ ಭಾರತೀಯರಿಗೆ ಬಿಡುತ್ತಿರಲಿಲ್ಲವಾದ್ದರಿಂದ, ಅವರು ಟ್ರಾಮ್ ಏರುತ್ತಲೇ ಇರಲಿಲ್ಲ. ಅದನ್ನು ಏರಲು ಅವರು ವಿಶೇಷ ಪರವಾನಗಿ ಪಡೆಯಬಹುದಿತ್ತು ಅನ್ನುವುದು ಬೇರೆ ವಿಷಯ. ಗಾಂಧಿ ನಿಧಾನವಾಗಿ ಬಡ ಭಾರತೀಯ ಕಾರ್ಮಿಕರ ಜೊತೆ ತಮ್ಮನ್ನು ಗುರುತಿಸಿಕೊಳ್ಳಲು ಆರಂಭಿಸಿದರು; ಸರಳ ಜೀವನದಲ್ಲಿ ತೊಡಗಿಕೊಂಡರು. 40ರ ವಯಸ್ಸಿನಲ್ಲಿ, ತಿಂಗಳಿಗೆ ಸರಾಸರಿ ಸಾವಿರ ರೂಪಾಯಿಗಳನ್ನು ಗಳಿಸುತ್ತಿದ್ದಂತಹ ಸಮಯದಲ್ಲಿ ಅವರು ತಮ್ಮ ವೃತ್ತಿಯನ್ನು ತೊರೆದು, ಸಾರ್ವಜನಿಕ ಕೆಲಸಕ್ಕಾಗಿ ತಮ್ಮನ್ನು ಮುಡಿಪಾಗಿಟ್ಟುಕೊಂಡರು. ಸಮುದಾಯಕ್ಕಾಗಿ ತಮ್ಮೆಲ್ಲಾ ಸ್ವತ್ತುಗಳನ್ನು ಬಿಟ್ಟುಕೊಟ್ಟರು, ತಮ್ಮ ಕೈಗಳಿಂದ ಕೆಲಸ ಮಾಡತೊಡಗಿದರು ಮತ್ತು ತೋಟ-ಹೊಲ ಗದ್ದೆಗಳಲ್ಲಿ ವಾಸಿಸತೊಡಗಿದರು.

ಅನೇಕ ವರ್ಷಗಳ ನಂತರ ಗಾಂಧಿ, ಭಾರತದಲ್ಲಿ ನ್ಯಾಯಾಲಯಗಳು ದುಂದುವೆಚ್ಚದಲ್ಲಿ ನಡೆಯುತ್ತಿರುವಾಗ, ವಕೀಲರು ಮತ್ತು ಬ್ಯಾರಿಸ್ಟರ್‌ಗಳು ಹೆಚ್ಚು ಶುಲ್ಕ ವಿಧಿಸುತ್ತಿರುವುದನ್ನು ಖಂಡಿಸಿದರು. ಜನರ ಬಡತನಕ್ಕೂ ಅವರಿಗೂ ಸಂಬಂಧವೇ ಇರಲಿಲ್ಲ. ಒಬ್ಬ ವಕೀಲ ತಿಂಗಳಿಗೆ ಐವತ್ತು ಸಾವಿರದಿಂದ ಒಂದು ಲಕ್ಷ ರೂಪಾಯಿಗಳವರೆಗೂ ಆದಾಯ ಗಳಿಸಬಹುದು. ಗಾಂಧಿ ಹೇಳಿದರು: "ಕಾನೂನು ವೃತ್ತಿ ಎನ್ನುವುದು ಊಹಾಪೋಹದ ವ್ಯಾಪಾರವಲ್ಲ. ಈ ವಕೀಲರು ಮತ್ತು ನ್ಯಾಯಾಲಯಗಳ ಪ್ರಭಾವ ನಮ್ಮ ಮೇಲಿಲ್ಲದೇ ಹೋಗಿದ್ದರೆ, ನಾವು ಇನ್ನೂ ಸಂತೋಷಕರವಾದ ಜೀವನ ನಡೆಸುತ್ತಿದ್ದವು. ವಕೀಲರ ವೃತ್ತಿಯು ನಮಗೆ ಅನೈತಿಕತೆಯನ್ನು ಕಲಿಸುತ್ತದೆ. ಸುಳ್ಳು ಸಾಕ್ಷಿಗಳು ಎರಡೂ ಕಡೆ ಇರುತ್ತಾರೆ. ಅವರು ಹಣಕ್ಕಾಗಿ ತಮ್ಮ ಆತ್ಮಗಳನ್ನು ಮಾರಿಕೊಳ್ಳುತ್ತಾರೆ." ನ್ಯಾಯ ಎನ್ನುವುದನ್ನು ಶುದ್ಧವಾಗಿಡಲು ಮತ್ತು ಸುಲಭ ಬೆಲೆಯದಾಗಿಸಲು ಕಾನೂನು ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯ ಅಗತ್ಯವಿದೆ ಎಂಬುದು ಅವರ ಭಾವನೆಯಾಗಿತ್ತು. ಹೀಗಾಗಿ ಅವರು ಬಡವರಿಗೆ ಯಾವುದೇ ಶುಲ್ಕ ವಿಧಿಸದೆ ಅವರ ಕೇಸ್‌ಗಳನ್ನು ತಾವೇ ಕೈಗೆತ್ತಿಕೊಂಡರು; ಯಾವುದೇ ಕೇಸ್ ಸಾರ್ವಜನಿಕ ಕೆಲಸಕ್ಕೆ ಸಂಬಂಧಪಟ್ಟಿದ್ದಾಗಿದ್ದರೆ, ವಾಸ್ತವವಾಗಿ ತಮ್ಮಿಂದ ಎಷ್ಟು ವಿರ್ಚಾಯಿತೋ, ಅದನ್ನು ಮೀರಿ ಯಾವುದೇ ಶುಲ್ಕ ವಿಧಿಸುತ್ತಿರಲಿಲ್ಲ. ಅಲ್ಲಿ ನೆಲೆಗೊಂಡಿದ್ದ ಬಡ ಭಾರತೀಯರನ್ನು ಅಲ್ಲಿನ ಕೂಲಿ ಪ್ರದೇಶಗಳಿಂದ ಮುನಿಸಿಪಾಲಿಟಿಯವರು ಹೊರಹಾಕುತ್ತಿದ್ದಾಗ, ಗಾಂಧಿ ಆ ಬಾಡಿಗೆದಾರರ ಪರ ನಿಂತರು. ಪ್ರತಿಯೊಂದು ಕೇಸ್‌ಗೂ ಶ್ರಮ ವಹಿಸಿ ದುಡಿದರು. ಅಲ್ಲದೆ, ಪ್ರತಿ ಕೇಸ್‌ಗೂ ಕೇವಲ 150 ರೂ.ಗಳ ಶುಲ್ಕ ವಿಧಿಸಿದರು. ಒಟ್ಟು 70 ಕೇಸ್‌ಗಳಲ್ಲಿ, ಒಂದನ್ನು ಮಾತ್ರ ಅವರು ಸೋತರು. ಬಂದ ಆದಾಯದಲ್ಲಿ ಅರ್ಧದಷ್ಟನ್ನು ಒಂದು ದತ್ತಿ ಸಂಸ್ಥೆ ಕಟ್ಟಲು ದಾನ ನೀಡಿದರು.

ತನ್ನ ದೇಶದ ಜನರಿಗೆ ಮಾನವ ಹಕ್ಕುಗಳನ್ನು ದೊರಕಿಸಿಕೊಡಲು, ಸರ್ಕಾರದ ವಿರುದ್ಧ ಪ್ರತಿರೋಧ ವ್ಯಕ್ತಪಡಿಸಬೇಕೆಂದು ಅವರು ಬೋಧಿಸಿದರು. ಆಗ ಅವರನ್ನು ಬಂಧಿಸಲಾಯಿತು

ದರ್ಜಿ

ದಕ್ಷಿಣ ಆಫ್ರಿಕಾದಲ್ಲಿ ಗಾಂಧಿಗೆ ಎರಡು ಬಾರಿ ಕಠಿಣ ಕೆಲಸದ ಶಿಕ್ಷೆ ವಿಧಿಸಲಾಗಿತ್ತು. ಕೆಲವು ವಾರಗಳವರೆಗೆ ಅವರು ದಿನದಲ್ಲಿ ಒಂಬತ್ತು ಗಂಟೆಗಳ ಕಾಲ ಹರಿದ ಕಂಬಳಿಗಳನ್ನು ಹೊಲಿಯಬೇಕಾಗಿತ್ತು ಮತ್ತು ಮಂದವಾದ ಬಟ್ಟೆಯಿಂದ ಷರಟುಗಳಿಗಾಗಿ ಜೇಬು ಕತ್ತರಿಸಬೇಕಾಗಿತ್ತು. ತಮಗೆ ಕೊಡುತ್ತಿದ್ದ ಬಟ್ಟೆಯ ತುಂಡುಗಳನ್ನು ಅವರು ಸಮಯಕ್ಕೆ ಮುಂಚೆಯೇ ಹೊಲಿದು ಹಾಕಿ, ಹೊಲಿಯಲು ಇನ್ನೂ ಹೆಚ್ಚಿನ ಪಟ್ಟಿಗಳನ್ನು ಕೊಡಿ ಎಂದು ಕೇಳುತ್ತಿದ್ದರು. ಕೆಲವು ದಿನಗಳ ಕಾಲ ಒಂದು ಭಾರತೀಯ ಸೆರೆಮನೆಯಲ್ಲಿ ಅವರು ಸಿಂಗರ್ ಹೊಲಿಗೆ ಯಂತ್ರದ ಮೇಲೆ ಕೆಲಸ ಮಾಡಿದರು. ಸೆರೆಮನೆಯಲ್ಲಿನ ಈ ಎಲ್ಲಾ ಕೆಲಸಗಳನ್ನು ಅವರು ಸ್ವಇಚ್ಛೆಯಿಂದ ಮಾಡುತ್ತಿದ್ದರು. ಹೊಲಿಗೆ ಯಂತ್ರ ಬಳಸುವುದರಲ್ಲಿ ತಾವು ದಕ್ಷರಾಗಬೇಕೆಂದು ಅವರು ಬಯಸುತ್ತಿದ್ದರು.

ದುಡಿಯುವ ಕೈಗಳ ಬದಲಿಗೆ ದೊಡ್ಡ ದೊಡ್ಡ ಯಂತ್ರಗಳನ್ನು ಬಳಸುವುದಕ್ಕೆ ಮತ್ತು ಬಂಡವಾಳಶಾಹಿಗಳ ಮಾಲೀಕತ್ವದ ಯಂತ್ರಗಳಿಗೆ ಮನುಷ್ಯರನ್ನು ಗುಲಾಮರನ್ನಾಗಿಸುವುದಕ್ಕೆ ಅವರ ಸಮ್ಮತಿ ಇರಲಿಲ್ಲ. ಯಂತ್ರವೊಂದು ಅವಶ್ಯಕವಾದ ಮಾನವ ಶ್ರಮವನ್ನು ಸ್ಥಳಾಂತರಿಸುವುದಕ್ಕೆ ಬಿಡಬಾರದು ಎಂದು ಅವರು ನಂಬಿದ್ದರು. ಭಾರತದಲ್ಲಿನ ಸಮಸ್ಯೆ ಲಕ್ಷಗಟ್ಟಲೆ ಜನರ ಪುರಸತ್ತಿನ ಕಾಲವನ್ನು ಹೇಗೆ ಕೊನೆಗೊಳಿಸುವುದು ಎಂಬುದಾಗಿರಲಿಲ್ಲ; ಬದಲಿಗೆ ಅವರ ವ್ಯರ್ಥ ಸಮಯವನ್ನು ಉಪಯೋಗಿಸಿಕೊಳ್ಳುವುದು ಹೇಗೆ ಎಂಬುದೇ ಆಗಿತ್ತು. ಆದರೆ ಹೊಲಿಗೆ ಯಂತ್ರಕ್ಕೆ ಮಾತ್ರ ಅವರು ಏನಾಯತಿ ಕೊಟ್ಟಿದ್ದರು. ಏಕೆಂದರೆ "ಅವಿಷ್ಕಾರವಾದ ಕೆಲವೇ ಕೆಲವು ಉಪಯೋಗೀ ವಸ್ತುಗಳ ಪೈಕಿ ಹೊಲಿಗೆ ಯಂತ್ರವೂ ಒಂದು. ಸಿಂಗರ್ ತನ್ನ ಹೆಂಡತಿ ಬಹಳ ಶ್ರಮ ವಹಿಸಿ ತನ್ನ ಕೈಗಳಿಂದ ಹೊಲಿಯುತ್ತಿದ್ದ ಪ್ರಕ್ರಿಯೆಯನ್ನು ನೋಡಿದ. ಅವಳ ಬಗ್ಗೆ ಇದ್ದ ಪ್ರೀತಿಗಾಗಿ, ಅವಳ ಶ್ರಮವನ್ನು ಉಳಿಸುವ ಸಲುವಾಗಿ, ಅವನು ಹೊಲಿಗೆ ಯಂತ್ರವನ್ನು ರೂಪಿಸಿದ. ಆ ಯಂತ್ರದ ಹಿಂದೆ ಪ್ರೇಮ-ಪ್ರೀತಿ ಇತ್ತು" ಎಂದು ಅವರು ನಂಬಿದ್ದರು.

ಗಾಂಧಿ ಒಮ್ಮೆ ತಮ್ಮ ಆಶ್ರಮದ ಮಹಿಳಾ ಸಹವಾಸಿಯೊಬ್ಬರಿಗೆ ಹೇಳಿದರು: "ನಿಮ್ಮ ಸಲ್ವಾರ್ ಕಮೀಜ್ ಉಡುಪನ್ನು ಹೊಲಿಸುವ ಬಗ್ಗೆ ನೀವೇನೂ ಚಿಂತೆ ಮಾಡಬೇಡಿ. ಯಾವ ಉಡುಪನ್ನು ಸಿದ್ಧಪಡಿಸಬೇಕೋ, ಅದನ್ನು ನಾನೇ ಮಾಡಬಲ್ಲೆ. ನಾವು ಒಂದು ಸಿಂಗರ್ ಹೊಲಿಗೆ ಯಂತ್ರವನ್ನು ಎರವಲು ತರಬಹುದು. ಬೇಕಾಗಿರುವ ಉಡುಪನ್ನು ತಯಾರಿಸಲು, ಕೆಲವು ಗಂಟೆಗಳು ಸಾಕು." ತಮ್ಮ ಹೊಲಿಗೆ ಕೆಲಸದ ಬಗ್ಗೆ ಹೆಮ್ಮೆ ಪಡಲು ಅವರಿಗೆ ಎಲ್ಲಾ ಕಾರಣಗಳೂ ಇದ್ದವು. ತಮ್ಮ ಪತ್ನಿಯ ರವಿಕೆಗೆ ಬಟ್ಟೆ ಕತ್ತರಿಸಿ, ಹೊಲಿಯಬಲ್ಲವರಾಗಿದ್ದರು. ಚರಕಾದಲ್ಲಿ ನೂಲು ತೆಗೆಯುತ್ತಿದ್ದರು, ಕೈಮಗ್ಗದಲ್ಲಿ ಅದನ್ನು ನೇಯುತ್ತಿದ್ದರು ಮತ್ತು ತಮ್ಮ ಕುರ್ತಾ ತಾವೇ ಹೊಲಿದುಕೊಳ್ಳುತ್ತಿದ್ದರು. ನುರಿತ ದರ್ಜಿಗಳು ಮತ್ತು ಚಮ್ಮಾರರು ಆಶ್ರಮವಾಸಿಗಳಿಗೆ ಉಚಿತವಾಗಿ ಪಾಠ ಹೇಳಿಕೊಡುತ್ತಿದ್ದರು. ನೀಲಿ ಬೆಳೆಯ ಬೆಳೆಗಾರರ ಪೀಡನೆಯನ್ನು ವಿರೋಧಿಸುವಲ್ಲಿ ಚಂಪಾರಣ್ಯದ ರೈತರಿಗೆ ಗಾಂಧಿಯವರು ಮಾರ್ಗದರ್ಶನ ಮಾಡುತ್ತಿದ್ದಾಗ, ಒಬ್ಬ ಬ್ರಿಟಿಷ್ ಪತ್ರಕರ್ತ ಅವರನ್ನು ದೂಷಿಸಿದ. "ರೈತರ

ಹಾಗೂ ದಕ್ಷಿಣ ಆಫ್ರಿಕಾ ಮತ್ತು ಭಾರತೀಯ ನ್ಯಾಯಾಲಯಗಳೆರಡರಲ್ಲೂ ಅವರ ವಿಚಾರಣೆ ನಡೆಸಲಾಯಿತು. ಬಹಳಷ್ಟು ಸಲ ಅವರನ್ನು ಸೆರೆಮನೆಗೆ ಹಾಕಲಾಯಿತು. ದಕ್ಷಿಣ ಆಫ್ರಿಕಾದಲ್ಲಿ, ಅವರು 10 ವರ್ಷಗಳ ಕಾಲ ವಕೀಲಿ ವೃತ್ತಿ ನಡೆಸಿದ್ದ ನ್ಯಾಯಾಲಯದ ಸಾಕ್ಷಿ ಕಟಕಟೆಯಲ್ಲೇ ಕೈಕೋಳ ಹಾಕಿಕೊಂಡು ನಿಲ್ಲಬೇಕಾಯಿತು. ಭಾರತದಲ್ಲಿ ಮೊದಲ ಬಾರಿಗೆ ಅವರನ್ನು ದೋಷಿ ಎಂದು ಪರಿಗಣಿಸಿದ ನಂತರ, ಅವರ ಹೆಸರನ್ನು ಬ್ಯಾರಿಸ್ಟರುಗಳ ಪಟ್ಟಿಯಿಂದ ತೆಗೆಯಲಾಯಿತು.

ಗಾಂಧಿ ಬ್ರಿಟಿಷ್ ರಾಜ್ಯದ ನ್ಯಾಯಾಲಯಗಳೊಂದಿಗೆ ಅಸಹಕಾರ ಘೋಷಿಸಿದರು ಹಾಗೂ ಪಂಚಾಯತಿ ಪದ್ಧತಿಯನ್ನು ಪುನಃ ಜಾರಿಗೆ ತರುವುದನ್ನು ಸಮರ್ಥಿಸಿದರು. ಈ ಕಾನೂನು-ಮುರುಕನ ಕರೆಗೆ ಓಗೊಟ್ಟು, ಬಹಳಷ್ಟು ಮಂದಿ ಪ್ರಸಿದ್ಧ ವಕೀಲರು ತಮ್ಮ ವೃತ್ತಿಯನ್ನು ತೊರೆದು ಸ್ವಾತಂತ್ರ್ಯ ಆಂದೋಲನವನ್ನು ಸೇರಿಕೊಂಡರು.

ವಕೀಲರ ಸಂಘ ಮಂಡಿಸಿದ ಒಂದು ಭಾಷಣಕ್ಕೆ ಉತ್ತರವಾಗಿ ಗಾಂಧಿ, 'ತನ್ನ ವೃತ್ತಿಬಾಂಧವರೇ ತನ್ನನ್ನು ಹೊರಹಾಕಿದ್ದಾರೆ' ಎಂದರು. 'ತನ್ನ ಕಾನೂನನ್ನು ತಾನು ಎಂದೋ ಮರೆತಿದ್ದೇನೆ' ಎಂದೂ ಹೇಳಿದರು. ಗಾಂಧಿ ಕಾನೂನನ್ನು ಅರ್ಥೈಸುವುದಕ್ಕಿಂತ ಅವುಗಳನ್ನು ಮುರಿಯುವುದರಲ್ಲೇ ಹೆಚ್ಚು ತೊಡಗಿದ್ದರು.

ಮನ ಒಲಿಸಿಕೊಳ್ಳುವ ಸಲುವಾಗಿ ಗಾಂಧಿ ತಾತ್ಕಾಲಿಕವಾಗಿ ಹಾಗೂ ವಿಶೇಷವಾಗಿ ರಾಷ್ಟ್ರೀಯ ದಿರುಸನ್ನು ಆಯ್ದುಕೊಂಡರು" ಎಂದು ಆತ ಆರೋಪಿಸಿದ. ಗಾಂಧಿ ಅದಕ್ಕೆ ಮಾರುತ್ತರ ಕೊಟ್ಟರು: "ಸ್ವದೇಶಿಯ ಪ್ರಮಾಣ ಸ್ವೀಕರಿಸಿದ್ದರಿಂದಲೇ ನನ್ನ ಬಟ್ಟೆಬರೆ ಈಗ ಸಂಪೂರ್ಣವಾಗಿ ಕೈಯಿಂದ ನೇಯ್ದದ್ದು ಮತ್ತು ನನ್ನ ಅಥವಾ ನನ್ನ ಸಹೋದ್ಯೋಗಿಗಳ ಕೈಯಿಂದಲೇ ಹೊಲಿಯಲ್ಪಟ್ಟದ್ದು."

ಆಮೇಲೆ ಗಾಂಧಿಯವರು ಕುರ್ತಾ ಬಳಕೆಯನ್ನೇ ಕೈಬಿಟ್ಟರು. ಒಂದು ಲಂಗೋಟಿ, ಸುತ್ತಲೂ ಒಂದು ತುಂಡುಬಟ್ಟೆ ಧರಿಸತೊಡಗಿದರು. ಆಮೇಲೂ ಕೂಡ, ಕೆಲವೊಮ್ಮೆ, ತಮ್ಮ ಕರವಸ್ತ್ರ, ಕೈಚೌಕ ಅಥವಾ ಲಂಗೋಟಿಯ ಅಂಚುಗಳಿಗೆ ಹೊಲಿಗೆ ಹಾಕುತ್ತಿದ್ದರು. ಹೊಲಿಯುವುದರಲ್ಲಿ ಅವರು ಮಗ್ನರಾಗುತ್ತಿದ್ದಾಗ, ತಮ್ಮ ಕಾರ್ಯದರ್ಶಿಗೆ ಪತ್ರಗಳನ್ನು ಹೇಳಿ ಬರೆಯಿಸುತ್ತಿದ್ದರು. ಅವರನ್ನು ಆಗಾಖಾನ್ ಅರಮನೆಯಲ್ಲಿ ಬಂಧನದಲ್ಲಿಟ್ಟಿದ್ದಾಗ, ಸೆರೆಮನೆಯ ಮೇಲ್ವಿಚಾರಕರಿಗೆ ಖಾದಿ ಕರವಸ್ತ್ರಗಳನ್ನು ಹುಟ್ಟುಹಬ್ಬದ ಉಡುಗೊರೆಯಾಗಿ ಕೊಟ್ಟರು. ಒಂದೊಂದು ಕರವಸ್ತ್ರದಲ್ಲೂ ಆ ಮೇಲ್ವಿಚಾರಕರ ಹೆಸರಿನ ಮೊದಲಕ್ಷರಗಳಿದ್ದವು. ಗಾಂಧಿಯವರೇ ಅದರ ಕಸೂತಿ ಹಾಕಿದ್ದು. ಅವರಿಗೆ ಆಗ 74 ವರ್ಷ!

ಒಮ್ಮೆ ಗಾಂಧಿಯವರ ಮಾರ್ಗದರ್ಶನದಲ್ಲಿ ಓರ್ವ ಮಹಿಳೆ, ಗಾಂಧಿಯವರ ಅಚ್ಚುಮೆಚ್ಚಿನ ಶಾಲೊಂದರ ಮೇಲೆ ಖಾದಿಬಟ್ಟೆಯ ತೇಪೆಯನ್ನು ಹಾಕಬೇಕಾಗಿತ್ತು. ಅದೇ ಶಾಲನ್ನು ಹೊದ್ದು ಅವರು ತಮ್ಮ ಬಡ ದೇಶವಾಸಿಗಳ ಪ್ರತಿನಿಧಿಯಾಗಿ ಬ್ರಿಟಿಷ್ ಪ್ರಧಾನಮಂತ್ರಿಯ ಜೊತೆ ದುಂಡುಮೇಜಿನ ಪರಿಷತ್ತಿನಲ್ಲಿ ಕುಳಿತಿದ್ದರು ಹಾಗೂ ಬಕಿಂಗ್‌ಹ್ಯಾಮ್ ಅರಮನೆಯಲ್ಲಿ ಚಹಾಕೂಟವೊಂದರಲ್ಲಿ ಪಾಲ್ಗೊಂಡಿದ್ದರು. ಅವರು ಎಂದೂ ಪ್ರದರ್ಶನಕ್ಕೆ ಲಕ್ಷ್ಯಕೊಡುತ್ತಿರಲಿಲ್ಲ, ಆದರೆ ಕೊಳಕಾದ, ಹರಿದುಹೋದ ಉಡುಪುಗಳಂದರೆ ಜಿಗುಪ್ಸೆಪಟ್ಟುಕೊಳ್ಳುತ್ತಿದ್ದರು. ಒಮ್ಮೆ ಒಂದು ಸಭೆಯಲ್ಲಿ ತಮ್ಮ ಸಹೋದ್ಯೋಗಿಯೊಬ್ಬರು ಹೊದ್ದುಕೊಂಡಿದ್ದ ಖಾದಿ ವಸ್ತ್ರದಲ್ಲಿ ಒಂದು ತೂತು ಇದ್ದುದ್ದನ್ನು ಗಮನಿಸಿದರು. ತಕ್ಷಣ ಅವರಿಗೆ ಒಂದು ಚೀಟಿ ಬರೆದು ಕಳುಹಿಸಿದರು: "ಹರಿದ ಬಟ್ಟೆಗಳನ್ನು ತೊಡುವುದೆಂದರೆ ಅದು ಸೋಮಾರಿತನದ ಲಕ್ಷಣ. ಹೀಗಾಗಿ, ಅದು ನಾಚಿಕೆಗೇಡು. ಆದರೆ ತೇಪೆ ಹಾಕಿದ ಬಟ್ಟೆಗಳು ಬಡತನವನ್ನು ಸಾರುತ್ತವೆ. ತ್ಯಾಗ-ವೈರಾಗ್ಯ ಹಾಗೂ ಪರಿಶ್ರಮವನ್ನು ಸಾರುತ್ತವೆ. ನಿಮ್ಮ ಮೇಲುಹೊದಿಕೆಯಲ್ಲಿನ ಬಿರುಕು ನನಗೆ ಸಹ್ಯವಾಗಲಿಲ್ಲ. ಅದು ಬಡತನದ ಅಥವಾ ಸರಳತೆಯ ಚಿಹ್ನೆಯಾಗಿಲ್ಲ. ಅದು ಹೆಂಡತಿ ಇಲ್ಲದಿರುವ ಅಥವಾ ಕೆಟ್ಟ ಹೆಂಡತಿಯ ಅಥವಾ ಸೋಮಾರಿತನದ ಚಿಹ್ನೆಯಾಗಿದೆ."

ಅಗಸ

ಬ್ಯಾರಿಸ್ಟರ್ ಗಾಂಧಿ ಒಪ್ಪವಾದ ಯೂರೋಪಿಯನ್ ಉಡುಪು ಧರಿಸಿ ನ್ಯಾಯಾಲಯಕ್ಕೆ ಹೋಗುತ್ತಿದ್ದರು. ಪ್ರತಿದಿನವೂ ತಮ್ಮ ಷರಟಿಗೆ ಹೊಂದುವಂತಹ ಉಜ್ವಲ ಮತ್ತು ಸ್ವಚ್ಛವಾದ ಕಾಲರ್ ಬೇಕಾಗುತ್ತಿತ್ತು. ಅವರು ದಿನ ಬಿಟ್ಟು ದಿನ ತಮ್ಮ ಶರಟು ಬದಲಾಯಿಸುತ್ತಿದ್ದರು. ಅವರಿಗೆ ಬರುತ್ತಿದ್ದ ಅಗಸನ ಬಿಲ್ ಮೊತ್ತ ಬಹಳ ಹೆಚ್ಚಾಗಿರುತ್ತಿತ್ತು. ಸಾಮಾನ್ಯವಾಗಿ ಗಾಂಧಿಯವರ ಬಟ್ಟೆಯನ್ನು ಮಡಿ ಮಾಡಿ ಕೊಡಲು ಆ ಅಗಸ ಸ್ವಲ್ಪ ತಡ ಮಾಡುತ್ತಿದ್ದ. ಗಾಂಧಿಯವರು ತಮ್ಮ ಉಡುಪುಗಳ ಒಂದು ಒಳ್ಳೆಯ ಸಂಗ್ರಹ ಇಟ್ಟುಕೊಳ್ಳಲು ಬಹಳಷ್ಟು ಖರ್ಚು ಮಾಡಬೇಕಾಗುತ್ತಿತ್ತು. ಕಾಲರ್‌ಗಳುಳ್ಳ ಮೂರು ಡಜನ್ ಷರಟುಗಳಿದ್ದರೂ ಆ ಧೋಬಿಯ ಸ್ವಂತ ಇಷ್ಟದೊಡನೆ ಏಗಲಾಗುತ್ತಿರಲಿಲ್ಲ.

ಗಾಂಧಿಯವರಿಗೆ ತಮ್ಮ ಖರ್ಚುಗಳನ್ನು ಕಡಿಮೆ ಮಾಡಿಕೊಳ್ಳಬೇಕಿತ್ತು. ಒಂದು ದಿನ ಅವರು ಒಗೆಯುವ ಪರಿಕರಗಳೊಂದಿಗೆ ಸಜ್ಜಾಗಿ ಮನೆಗೆ ಬಂದರು. ಒಗೆಯುವ ಬಗ್ಗೆ ಒಂದು ಪುಸ್ತಕವನ್ನು ಅವರು ಖರೀದಿಸಿ, ಅದನ್ನು ಜಾಗರೂಕತೆಯಿಂದ ಓದಿದರು. ಚೆನ್ನಾಗಿ ಬಟ್ಟೆ ಒಗೆಯುವ ಬಗ್ಗೆ ನಿರ್ದೇಶನಗಳು ಸಿಕ್ಕ ಮೇಲೆ, ಅವರು ಅದನ್ನು ರೂಢಿಗೆ ತರಲಾರಂಭಿಸಿದರು. ಪಾಪ, ಈ ಪ್ರಯೋಗದಲ್ಲಿ ಸುಮ್ಮನೆ ಪ್ರೇಕ್ಷಕಿಯಾಗಿರಲು ಕಸ್ತೂರ್‌ಬಾಗೆ ಅವರು ಜಿಡಲಿಲ್ಲ. ಅವರಿಗೂ ಗಾಂಧಿ ಒಗೆಯುವ ಕಲೆಯನ್ನು ಕಲಿಸಿದರು. ಈ ಹೊಸ ಖಯಾಲಿ ಗಾಂಧಿಯವರ ದೈನಂದಿನ ಕೆಲಸದ ಮೇಲೆ ಒಂದು ಹೆಚ್ಚುವರಿ ಹೊರೆಯಾಯಿತು. ಆದರೆ, ಅವರು ಸೋಲನ್ನೊಪ್ಪಿಕೊಳ್ಳುವ ಮನುಷ್ಯರಾಗಿರಲಿಲ್ಲ. ತಮ್ಮ ಅಗಸನ ಉಪದ್ರವದಿಂದ ಮುಕ್ತರಾಗಿ, ಸ್ವಾವಲಂಬಿಗಳಾಗಬೇಕೆಂದು ಅವರು ನಿರ್ಧರಿಸಿಬಿಟ್ಟಿದ್ದರು. ಒಂದು ದಿನ ಅವರು ತಮ್ಮ ಕಾಲರ್ ಒಗೆದು, ಅದಕ್ಕೆ ಗಂಜಿ ಹಾಕಿದರು. ಆ ಕೆಲಸ ಮಾಡಿ ಅಭ್ಯಾಸವಿರದಿದ್ದ ಅವರು ಅಷ್ಟೇನೂ ಕಾವಿರದಿದ್ದ ಇಸ್ತ್ರಿಪೆಟ್ಟಿಗೆಯಿಂದ ಅತ್ಯಲ್ಪ ಒತ್ತಡ ಹಾಕಿ ಇಸ್ತ್ರಿ ಮಾಡಿದರು. ಅವರಿಗೋ, ಅದನ್ನು ಸುಟ್ಟುಬಿಡುವೆನೇನೋ ಎಂದು ಭಯ. ಅದೇ ಕಾಲರ್ ಧರಿಸಿ ಅವರು ನ್ಯಾಯಾಲಯಕ್ಕೆ ಹೋದರು. ಕಾಲರ್‌ಗೆ ಹಾಕಿದ ಗಂಜಿ ಜಾಸ್ತಿಯಾಗಿತ್ತು ಹಾಗೂ ನಿಗರಿ ನಿಂತಿತ್ತು. ಇದನ್ನು ನೋಡಿ ಅವರ ಗೆಳೆಯರು ಒಂದು ಬಗೆಯಾಗಿ ನಕ್ಕರು. ಸ್ವಲ್ಪವೂ ವಿಚಲಿತರಾಗದ ಗಾಂಧಿ ಹೇಳಿದರು: "ಇದು ನನ್ನ ಮೊಟ್ಟಮೊದಲ ಒಗೆಯೋ ಪ್ರಯತ್ನ. ಅದಕ್ಕೇ ಗಂಜಿ ತುಸು ಹೆಚ್ಚಾಗಿದೆ. ಅದೇನೂ ಪರವಾಗಿಲ್ಲ. ಕಡೇ ಪಕ್ಷ ನಿಮಗೆಲ್ಲ ಎಷ್ಟು ಮುದ ಒದಗಿಸಿತು ನೋಡಿ."

"ಆದರೆ, ಇಲ್ಲೇನು ಧೋಬೀಖಾನೆಗಳಿಗೆ ಬರವೇ?" ಎಂದು ಪ್ರಶ್ನಿಸಿದರು ಒಬ್ಬರು.

"ಇಲ್ಲ. ಆದರೆ ಧೋಬಿಯ ಬಿಲ್‌ಗಳು ಬಹಳ ದುಬಾರಿ. ಒಂದೇ ಒಂದು ಕಾಲರ್ ಒಗೆಯಲಿಕ್ಕೆ ತಗುಲುವ ವೆಚ್ಚ ಹೆಚ್ಚುಕಮ್ಮಿ ಕಾಲರ್‌ನ ಬೆಲೆಯಷ್ಟೇ ಇದೆ. ಅಲ್ಲದೆ, ಅಗಸನ ಮೇಲೆ ನಿರಂತರವಾಗಿ ಸಂಪೂರ್ಣ ಅವಲಂಬನೆ. ನನ್ನ ಬಟ್ಟೆಗಳನ್ನು ನಾನೇ ಒಗೆದುಕೊಳ್ಳಲು ನಾನು ಇಚ್ಛಿಸುತ್ತೇನೆ." ಆಮೇಲೆ ಅವರು ತಾವು ಒಬ್ಬ ನಿಪುಣ ಧೋಬಿ ಎಂದೂ ನಿರೂಪಿಸಿದರು.

ಒಮ್ಮೆ ಗೋಖಲೆಯವರು ಗಾಂಧಿಯೊಡನಿರಲು ಬಂದರು. ಗಾಂಧಿ ಗೋಖಲೆಯವರನ್ನು

ತಮ್ಮ ಗುರುಗಳೆಂದು ಪರಿಗಣಿಸುತ್ತಿದ್ದರು. ಗೋಖಲೆಯವರಿಗೆ ಒಂದು ದೊಡ್ಡ ಸಮಾರಂಭ ವೊಂದರಲ್ಲಿ ಭಾಗವಹಿಸಬೇಕಾಗಿತ್ತು. ಅವರ ಕಂಠವಸ್ತ್ರ ಸುಕ್ಕುಸುಕ್ಕಾಗಿಬಿಟ್ಟಿತ್ತು. ಆದರೆ ಅದನ್ನು ಅಗಸನಿಂದ ಶುಚಿ ಮಾಡಿಸಿಕೊಳ್ಳುವಷ್ಟು ಸಮಯ ಇರಲಿಲ್ಲ. ಗಾಂಧಿ ಅವರನ್ನು ಕೇಳಿದರು: "ನಾನು ಅದನ್ನು ಚೆನ್ನಾಗಿ ಇಸ್ತ್ರಿ ಮಾಡಿಕೊಡಲೆ?" ಗೋಖಲೆ ಉತ್ತರಿಸಿದರು: "ಒಬ್ಬ ವಕೀಲನಾಗಿ ನಿಮ್ಮ ಸಾಮರ್ಥ್ಯವನ್ನು ನಾನು ನಂಬಬಹುದು. ಆದರೆ ಅಗಸನಾಗಿ... ಇಲ್ಲ ಇಲ್ಲ. ನೀವದನ್ನು ಕೆಡಿಸಿಬಿಟ್ಟರೆ ಏನು ಮಾಡುವುದು?" ಆದರೆ ಗಾಂಧಿ ಹಟಹಿಡಿದು, ಇಸ್ತ್ರಿ ಮಾಡಿದರು. ಗಾಂಧಿಯವರ ಈ ಕೆಲಸದಿಂದ ಗೋಖಲೆಯವರು ಪ್ರಸನ್ನರಾದರು. ಆಗ ಗಾಂಧಿಯವರಿಗೂ ಎಷ್ಟು ಸಂತೋಷವಾಯಿತೆಂದರೆ, ಈಗ ಇಡೀ ಪ್ರಪಂಚವೇ ಅವರಿಗೆ ಪ್ರಮಾಣಪತ್ರ ಕೊಡಲು ನಿರಾಕರಿಸಿದರೂ ಅವರಿಗೆ ಅದರ ಬಗ್ಗೆ ಲಕ್ಷ್ಯವಿಲ್ಲ ಎಂದರು.

ದಕ್ಷಿಣ ಆಫ್ರಿಕಾದಲ್ಲಿನ ಅವರ ಆಶ್ರಮಗಳಲ್ಲಿ ನೀರಿಗೆ ಬರ ಇತ್ತು. ಮಹಿಳೆಯರು ಒಗೆಯಲು ದೂರದಲ್ಲಿದ್ದ ನೀರಿನ ಊಟೆಗಳಿಗೆ ಹೋಗಬೇಕಾಗಿತ್ತು. ಗಾಂಧಿ ಅವರಿಗೆ ನೆರವಾಗುತ್ತಿದ್ದರು. ಖಾದಿ ಉತ್ಪಾದನೆಯ ಆರಂಭದ ಹಂತಗಳಲ್ಲಿ, ಬಹಳ ಮಂದ ಹಾಗೂ ಭಾರವಾದ ಸೀರೆಗಳನ್ನು ಕೈಮಗ್ಗದಲ್ಲಿ ನೇಯಲಾಗುತ್ತಿತ್ತು. ಆಶ್ರಮದ ಮಹಿಳೆಯರು ಅದನ್ನು ಉಡಲು ಒಪ್ಪಿಕೊಂಡರಾದರೂ, ಅವನ್ನು ಒಗೆಯುವಾಗ ಎಲ್ಲರೂ ಗೊಣಗುಟ್ಟಿ ಕೊಳ್ಳುತ್ತಿದ್ದರು. ಗಾಂಧಿ ಒಬ್ಬ ಅಗಸನಾಗಿ ತಮ್ಮ ಸೇವೆ ಒದಗಿಸಲು ಮುಂದೆ ಬಂದರು. ಬೇರೆಯವರ ಬಟ್ಟೆಗಳನ್ನು ಒಗೆಯುವುದರಲ್ಲಿ ಅವರಿಗೆ ಯಾವ ನಾಚಿಕೆಯೂ ಕಾಣಲಿಲ್ಲ. ಒಮ್ಮೆ ಗಾಂಧಿ ಒಬ್ಬ ಶ್ರೀಮಂತನ ಅತಿಥಿಯಾಗಿದ್ದರು. ಅಲ್ಲಿನ ಬಚ್ಚಲುಮನೆಯನ್ನು ಒಳಹೊಕ್ಕ ಅವರು, ಧೋತರವೊಂದು ಬಾಗಿಲ ಮೇಲೆ ನೇತಾಡುತ್ತಿದ್ದುದನ್ನು ನೋಡಿದರು. ಅವರು ಸ್ನಾನವನ್ನು ಮುಗಿಸಿದರು, ತಮ್ಮ ಪಂಚೆಯನ್ನು ಒಗೆದರು; ಹಾಗೆಯೇ ಆ ಪಂಚೆಯನ್ನೂ ಸಹ ಒಗೆದು ಹಾಕಿದರು. ಅವನ್ನು ಬಿಸಿಲಿನಲ್ಲಿ ಒಣ ಹಾಕಲು ಹೊರಗೆ ಕೊಂಡೊಯ್ದರು. ಬಿಳಿಯ ಬಟ್ಟೆಗಳು ಬಿಸಿಲಿನಲ್ಲಿ ಒಣಗಿದಾಗ ಹೆಚ್ಚು ಪ್ರಕಾಶಮಾನವಾಗುತ್ತವೆ ಹಾಗೂ

ಕ್ಲೌರಿಕ

ದಕ್ಷಿಣ ಆಫ್ರಿಕಾಕ್ಕೆ ಬಂದ ಒಂದು ವಾರದ ಬಳಿಕ, ತಮ್ಮ ಕಾನೂನಿನ ಕೆಲಸಕ್ಕೆ ಸಂಬಂಧಿಸಿದಂತೆ ಗಾಂಧಿ ಒಂದು ದೊಡ್ಡ ನಗರದಲ್ಲಿ ಒಂದು ರಾತ್ರಿ ಕಳೆಯಬೇಕಾಯಿತು. ಒಂದು ಟ್ಯಾಕ್ಸಿಯನ್ನು ಬಾಡಿಗೆಗೆ ಹಿಡಿದ ಗಾಂಧಿ ಚಾಲಕನಿಗೆ ಒಂದು ದೊಡ್ಡ ಹೋಟೆಲ್‌ಗೆ ಕರೆದೊಯ್ಯುವಂತೆ ಹೇಳಿದರು. ಹೋಟೆಲ್‌ನ ಮ್ಯಾನೇಜರ್‌ನನ್ನು ಕಂಡ ಗಾಂಧಿ, ತಮಗೆ ಒಂದು ಕೋಣೆಯನ್ನು ಕೊಡುವಂತೆ ಕೇಳಿದರು. ಆ ಬಿಳಿಯ ಮ್ಯಾನೇಜರ್ ಗಾಂಧಿಯವರನ್ನು ಅಡಿಯಿಂದ ಮುಡಿಯವರೆಗೂ ನೋಡಿ, ಹೇಳಿದ: "ಕ್ಷಮಿಸಿ, ಎಲ್ಲಾ ಭರ್ತಿಯಾಗಿದೆ. ಯಾವ ಕೋಣೆಯೂ ಖಾಲಿಯಿಲ್ಲ." ಗಾಂಧಿ ಆ ರಾತ್ರಿಯನ್ನು ತಮ್ಮ ಭಾರತೀಯ ಮಿತ್ರರೊಬ್ಬರ ಅಂಗಡಿಯಲ್ಲಿ ಕಳೆಯಬೇಕಾಯಿತು. ಈ ಘಟನೆಯನ್ನು ತಮ್ಮ ಮಿತ್ರರಿಗೆ ಹೇಳಿದಾಗ, ಆ ಸ್ನೇಹಿತರು ಕೇಳಿದರು: "ಒಂದು ಹೋಟೆಲ್‌ನಲ್ಲಿ ಪ್ರವೇಶ ಸಿಗಬಹುದೆಂದು ನೀವು ಅದು ಹೇಗೆ ನಿರೀಕ್ಷಿಸಿದಿರಿ?" "ಯಾಕೆ ನಿರೀಕ್ಷಿಸಬಾರದು?" ಆಶ್ಚರ್ಯದಿಂದ ಕೇಳಿದರು ಗಾಂಧಿ. "ಬಿಡಿ, ಸಮಯ ಬಂದಾಗ ನಿಮಗೇ ಎಲ್ಲಾ ಗೊತ್ತಾಗುತ್ತೆ," ಎಂದರು ಆ ಮಿತ್ರರು. ನಂತರದ ದಿನಗಳಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ಸಹಿಸಬೇಕಾದ ಅವಮಾನಗಳ ಬಗ್ಗೆ ಗಾಂಧಿಯವರಿಗೆ ಬಹಳಷ್ಟು ತಿಳಿದುಬಂದಿತು. ಅವರ ಕಪಾಳಕ್ಕೆ ಏಟು ಬಿತ್ತು, ಮೈಮೇಲೆ ಗುದ್ದುಗಳು ಬಿದ್ದವು, ಕಾಲಿನಿಂದ ಒದೆಯಲಾಯಿತು, ರೈಲಿನಿಂದ ಹೊರಕ್ಕೆ ತಳ್ಳಲ್ಪಟ್ಟರು, ಫುಟ್‌ಪಾತ್‌ನಿಂದ ಆಚೆ ನೂಕಲ್ಪಟ್ಟರು. ಇವೆಲ್ಲಕ್ಕೂ ಕಾರಣ, ಅವರು ವರ್ಣೀಯ ಭಾರತೀಯರಾಗಿದ್ದುದು. ಆದರೂ ಬಿಳಿಯರು ಯಾಕೆ 'ಕರಿಯ'ರನ್ನು ಅಷ್ಟು ದ್ವೇಷಿಸುತ್ತಾರೆ ಮತ್ತು ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ ಎಂಬುದು ಅವರಿಗೆ ಅರ್ಥವಾಗಲೇ ಇಲ್ಲ. ಎಲ್ಲಾ ಮನುಷ್ಯರೂ ಒಂದೇ ದೇವರ ಮಕ್ಕಳಲ್ಲವೇ ಹಾಗೂ ಕ್ರೈಸ್ತಧರ್ಮ ಪ್ರೀತಿಯನ್ನು ಸಾರುವ ಧರ್ಮವಲ್ಲವೇ?

ಒಂದು ದಿನ ಗಾಂಧಿ ಕೂದಲು ಕತ್ತರಿಸಿಕೊಳ್ಳುವ ಸಲುವಾಗಿ ಸಲೂನ್‌ಗೆ ಹೋದರು. ಬಿಳಿಯ ಕ್ಲೌರಿಕ ಕೇಳಿದ: "ಏನು ಬೇಕಾಗಿತ್ತು?"

"ನನಗೆ ಹೇರ್‌ಕಟ್ ಆಗಬೇಕು" ಗಾಂಧಿ ಹೇಳಿದರು.

"ಕ್ಷಮಿಸಿ. ನಿಮ್ಮ ಕೂದಲನ್ನು ನಾನು ಕತ್ತರಿಸಲಾರೆ. ಒಬ್ಬ ವರ್ಣೀಯ ಮನುಷ್ಯನ ಕೂದಲು ಕತ್ತರಿಸಿದರೆ, ನಾನು ಬೇರೆ ಗಿರಾಕಿಗಳನ್ನು ಕಳೆದುಕೊಳ್ಳಬೇಕಾಗುತ್ತದೆ."

ಈ ಅವಮಾನ ಗಾಂಧಿಯವರ ಮನಸ್ಸಿನಾಳಕ್ಕೆ ಇಳಿಯಿತು. ನೋವಿನಿಂದ ಒದ್ದಾಡುವುದರಿಂದ ಅಥವಾ ದಿನಪತ್ರಿಕೆಗಳಲ್ಲಿ ಲಿಖಿತ ಮನವಿಗಳನ್ನು ಪ್ರಕಟಿಸುವುದರಿಂದ ಏನೂ ಸಾಧ್ಯವಿಲ್ಲ ಎಂದು ಅವರಿಗೆ ಅನ್ನಿಸಿತು. ತಾನು ಸ್ವಾವಲಂಬಿಯಾಗಬೇಕು, ತನ್ನ ವ್ಯವಹಾರಗಳನ್ನು ತಾನೆ ನೋಡಿಕೊಳ್ಳಲು ಸಮರ್ಥನಾಗಬೇಕು. ಒಡನೆಯೇ ಅವರು ಒಂದು ಜೊತೆ ಕ್ಲಿಪ್ಪರ್‌ಗಳನ್ನು (ಕೂದಲು ಕತ್ತರಿಸುವ ಕತ್ತರಿ) ಖರೀದಿಸಿ ಮನೆಗೆ ಹೋದರು. ಕನ್ನಡಿಯ ಮುಂದೆ ನಿಂತು ತಮ್ಮ ಕೂದಲನ್ನು ಕತ್ತರಿಸಿಕೊಳ್ಳತೊಡಗಿದರು. ತಮ್ಮ ಮುಖಕ್ಷೌರವನ್ನೇನೋ ತಾವೇ ಮಾಡಿಕೊಳ್ಳುವುದು ಸಾಧ್ಯವಾಯಿತು. ಆದರೆ ತಮ್ಮ ಕೂದಲು ತಾವೇ ಕತ್ತರಿಸಿಕೊಳ್ಳುವುದೆಂದರೆ – ಅದೊಂದು ವಿಲಕ್ಷಣ ಕೆಲಸ. ಅಲ್ಲದೆ, ಅದು ಕ್ರಿಮಿಗಳೂ ನಾಶವಾಗುತ್ತವೆಯಾದ್ದರಿಂದ ಅವನ್ನು ಬಿಸಿಲಿನಲ್ಲೇ ಒಣಗಿಸಬೇಕೆಂಬುದು ಅವರ ನಿರ್ದಿಷ್ಟ ನಿಲುವಾಗಿತ್ತು. ಗಾಂಧಿಯವರ ಈ ಕ್ರಮವನ್ನು ವಿರೋಧಿಸುತ್ತಾ ಆತಿಥೇಯರು ಹೇಳಿದರು: "ಬಾಪೂಜೀ, ಇದೇನು ಮಾಡುತ್ತಿದ್ದೀರಿ?" ಗಾಂಧಿ ಹೇಳಿದರು: "ಯಾಕೆ, ಅದರಲ್ಲೇನು ತಪ್ಪಿದೆ? ಆ ಶುಭ್ರ ಧೋತರ ಕೊಳೆಯಾಗಿಬಿಟ್ಟಿತ್ತು. ಹೀಗಾಗಿ ನಾನು ಒಗೆದು ಹಾಕಿದೆ. ವಸ್ತುಗಳನ್ನು ಸ್ವಚ್ಛವಾಗಿಡಲು ಒಂದಿಷ್ಟು ಕೆಲಸ ಮಾಡುವುದಕ್ಕೆ ನನಗೇನೂ ನಾಚಿಕೆ ಅನಿಸೋಲ್ಲ." ಗಾಂಧಿಯವರಿಗೆ ನಾಚಿಕೆ ಎಂದೇನೂ ಅನ್ನಿಸಲಿಲ್ಲ. ಆದರೆ ಅವರ ಆತಿಥೇಯರಿಗೆ ನಾಚಿಕೆಯಾಯಿತು.

ತಮ್ಮ ಇಳಿವಯಸ್ಸಿನಲ್ಲಿ, ಸೆರೆಮನೆಯಲ್ಲಿ, ಗಾಂಧಿ ಕೆಲವೊಮ್ಮೆ ತಮ್ಮ ಲಂಗೋಟಿ, ಕೈಚೌಕ ಮತ್ತು ಕರವಸ್ತ್ರಗಳನ್ನು ಒಗೆದುಕೊಳ್ಳುತ್ತಿದ್ದರು; ತಮ್ಮ ಸಹೋದ್ಯೋಗಿಗಳು ಹೆಚ್ಚುವರಿ ಕೆಲಸ ಮಾಡುವುದನ್ನು ತಪ್ಪಿಸುತ್ತಿದ್ದರು. ಕಸ್ತೂರ್‌ಬಾ ಆಗಾಖಾನ್ ಅರಮನೆಯಲ್ಲಿ ಕೊನೆ ಬಾರಿಗೆ ಅನಾರೋಗ್ಯಪೀಡಿತರಾಗಿದ್ದಾಗ, ಗಾಂಧಿ ಅವರು ಉಪಯೋಗಿಸುತ್ತಿದ್ದ ಕರವಸ್ತ್ರಗಳನ್ನು ಹೆಕ್ಕಿಕೊಂಡು, ಒಗೆಯುತ್ತಿದ್ದರು.

ತಮ್ಮ ಇಡೀ ಜೀವಮಾನವೆಲ್ಲಾ ಅವರಿಗೆ ತಮ್ಮ ಉಡುಪಿನ ಬಗ್ಗೆ ವಿಶೇಷ ಗಮನವಿತ್ತು. ಸಣ್ಣ ಹುಡುಗನಾಗಿದ್ದಾಗ, ತಮ್ಮ ಬಿಳಿಯ ಬಣ್ಣದ ಒಳ್ಳೆಯ ಮಿಲ್ ಪಂಚೆಯನ್ನು ಒಗೆಯುವುದರಲ್ಲಿ ಇತರ ಹುಡುಗರೊಂದಿಗೆ ಸ್ಪರ್ಧಿಸುತ್ತಿದ್ದರು. ಬಾವಿಯಿಂದ ನೀರು ಸೇದಿ ತಂದು ಒಗೆಯುತ್ತಿದ್ದರು. ಗಾಂಧಿ ಸರಳವಾದ ಅಭ್ಯಾಸಗಳನ್ನು ಮೆಚ್ಚುತ್ತಿದ್ದರು, ಆದರೆ ಕೊಳಕಾದ, ಸುಕ್ಕುಸುಕ್ಕಾದ ಬಟ್ಟೆಗಳನ್ನು ಇಷ್ಟಪಡುತ್ತಿರಲಿಲ್ಲ. ತಮ್ಮ ಲಂಗೋಟಿ, ಮೇಲುಹೊದಿಕೆ ಮತ್ತು ಕೈಚೌಕಗಳನ್ನು ಒಂದೇ ಒಂದು ಚುಕ್ಕೆಯೂ ಇರದಷ್ಟು ಶುಭ್ರವಾಗಿ, ಸುಕ್ಕಿಲ್ಲದಂತೆ ಇಟ್ಟುಕೊಳ್ಳುತ್ತಿದ್ದರು. ಸ್ವಚ್ಛತೆಯ ಚಿತ್ರವೇ ಅವರಾಗಿದ್ದರು.

ಏಂಡಿತಾ ಒಬ್ಬ ಬ್ಯಾರಿಸ್ಟರರ ಕೆಲಸವೂ ಅಲ್ಲ! ಆದರೂ ಹೇಗೋ ಮಾಡಿಕೊಂಡರು, ಹಿಂಭಾಗದ ಕೂದಲು ಮಾತ್ರ ಕೆಟ್ಟೇಹೋಯಿತು. ಮರುದಿನ ಅವರು ಎಂದಿನಂತೆ ಶಾಂತರೀತಿಯಲ್ಲಿ ನ್ಯಾಯಾಲಯಕ್ಕೆ ಹೋದರು. ಹೆಡ್ಡನಂತೆ ಕಾಣುತ್ತಿದ್ದ ಅವರ ಹೇರ್‌ಕಟ್ ನೋಡಿ ಅವರ ಸ್ನೇಹಿತರು ಬಿದ್ದು ಬಿದ್ದು ನಕ್ಕರು. ಒಬ್ಬರು ಕುಚೋದ್ಯದಿಂದ ಕೇಳಿದರು: "ಗಾಂಧಿ, ನಿಮ್ಮ ಕೂದಲಿಗೇನಾಯಿತು? ರಾತ್ರಿ ಏನಾದರೂ ಇಲಿಗಳು ಬಂದು ಕಡಿದವೇ?" ಗಾಂಧಿ ಮನಃಪೂರ್ವಕವಾಗಿ ಹೇಳಿದರು: "ಇಲ್ಲ, ಇಲ್ಲ. ಆ ಬಿಳಿಯ ಕ್ಷೌರಿಕ ಕಪ್ಪು ಮನುಷ್ಯನ ಕಪ್ಪುಗೂದಲನ್ನು ಮುಟ್ಟಲು ನಿರಾಕರಿಸಿದ. ಆದ್ದರಿಂದ, ನಾನೇ ಕತ್ತರಿಸಿಕೊಳ್ಳಲು ನಿರ್ಧರಿಸಿದೆ, ಎಷ್ಟೇ ಕೆಟ್ಟದಾದರೂ, ಏನೀಗ?"

ಗಾಂಧಿಯವರು ತಮ್ಮ 28ನೇ ವಯಸ್ಸಿನಲ್ಲಿ ಕೂದಲು ಕತ್ತರಿಸಿಕೊಳ್ಳಲು ಮಾಡಿದ ಮೊದಲ ಪ್ರಯತ್ನ ಇದಾಗಿತ್ತು. ಆಮೇಲೆ ಅವರು ಆಗಾಗ್ಗೆ ಸಾಮಾನ್ಯ ಕತ್ತರಿ ಮತ್ತು ಕೂದಲು ಕತ್ತರಿಸುವ ಕತ್ತರಿಗಳನ್ನು ಉಪಯೋಗಿಸುತ್ತಿದ್ದರು. ಅವರ ಆಶ್ರಮಗಳಲ್ಲಿ ಹಣ ತೆತ್ತು ಕ್ಷೌರಿಕನ ಸೇವೆ ಪಡೆಯುವುದು ನಿಷಿದ್ಧವಾಗಿತ್ತು. ಆಶ್ರಮವಾಸಿಗಳು ಸರದಿ ಪ್ರಕಾರ ಪರಸ್ಪರರ ಕೂದಲುಗಳನ್ನು ಕತ್ತರಿಸುತ್ತಿದ್ದರು. ಆಶ್ರಮದ ವಿದ್ಯಾರ್ಥಿಗಳು ಸರಳ ಸಂಯಮಯುತ ಜೀವನ ನಡೆಸಬೇಕೆಂದು ಗಾಂಧಿ ಬಯಸುತ್ತಿದ್ದರು. ಆಧುನಿಕ ಉಡುಗೆತೊಡುಗೆ, ಉತ್ತಮ ಉಡುಪುಗಳು ಅಥವಾ ರುಚಿರುಚಿಯಾದ ಆಹಾರಪದಾರ್ಥಗಳಿಗೆ ಅಲ್ಲಿ ಅವಕಾಶವಿರಲಿಲ್ಲ. ಒಂದು ಭಾನುವಾರ ಬೆಳಿಗ್ಗೆ, ಹುಡುಗರು ಸ್ನಾನಕ್ಕೆ ತೆರಳುತ್ತಿದ್ದರು. ಆಗ ಗಾಂಧಿ ಒಬ್ಬೊಬ್ಬರನ್ನಾಗಿ ಕರೆದು, ಅವರ ಕೂದಲನ್ನು ಕತ್ತರಿಸಿದ್ದರು. ತಮ್ಮ ಕೂದಲನ್ನು ಬುಡದವರೆಗೂ ಕತ್ತರಿಸಿದ್ದಕ್ಕಾಗಿ ಆ ಹುಡುಗರಿಗೆ ಬಹಳ ಅಸಂತೋಷವೇ ಆಯಿತು. ಒಮ್ಮೆ ಗಾಂಧಿ ಆಶ್ರಮದ ಇಬ್ಬರು ಹುಡುಗಿಯರ ಉದ್ದನೆಯ ಕೂದಲನ್ನೂ ಕತ್ತರಿಸಿದ್ದರು.

ದಕ್ಷಿಣ ಆಫ್ರಿಕಾದ ಸೆರೆಮನೆಗಳಲ್ಲಿ ಬಾಚಣಿಕೆಗಳನ್ನು ಕೊಡುತ್ತಿರಲಿಲ್ಲ. ಎರಡು ತಿಂಗಳು ಅಥವಾ ಇನ್ನೂ ಹೆಚ್ಚು ಅವಧಿಗೆ ಶಿಕ್ಷೆಗೊಳಗಾದ ಪ್ರತಿಯೊಬ್ಬ ಖೈದಿ ತಮ್ಮ ಕೂದಲನ್ನು ಬಹಳ ಚಿಕ್ಕದಾಗಿ ಕತ್ತರಿಸಿಕೊಳ್ಳುತ್ತಿದ್ದರು, ಹಾಗೆಯೇ ಮೀಸೆಗಳನ್ನೂ ಜೋಳಿಸಿಕೊಳ್ಳುತ್ತಿದ್ದರು. ಗಾಂಧಿ ಮತ್ತು ಅವರ ಸಹಚರರಿಗೆ ಈ ಆಚರಣೆಯಿಂದ ವಿನಾಯಿತಿ ಸಿಕ್ಕಿತ್ತು. ಆದರೆ ಗಾಂಧಿ ಸೆರೆಮನೆಯ ಎಲ್ಲಾ ಅನುಭವಗಳನ್ನು ಅನುಭವಿಸಲು ಬಯಸಿದರು. ತಮಗೆ ಕೂದಲು ಕತ್ತರಿಸಿಕೊಳ್ಳಬೇಕಾಗಿದೆಯೆಂದು ಗಾಂಧಿ ಬರೆದು ಕೊಟ್ಟಾಗ, ಸೆರೆಮನೆಯ ಮುಖ್ಯಾಧಿಕಾರಿ ಅವರಿಗೆ ಕ್ಲಿಪ್ಪರ್ ಮತ್ತು ಒಂದು ಜೊತೆ ಕತ್ತರಿಗಳನ್ನು ಕೊಟ್ಟರು. ಅಂದಿನಿಂದ ಗಾಂಧಿ ಮತ್ತು ಅವರ ಒಂದಿಬ್ಬರು ಸಹಖೈದಿಗಳು ಕ್ಷೌರಿಕನ ಕೆಲಸ ಮಾಡುವುದರಲ್ಲಿ ಪ್ರತಿದಿನ ಎರಡೆರಡು ಗಂಟೆ ಕಳೆಯುತ್ತಿದ್ದರು.

ಆಗಾಖಾನ್ ಅರಮನೆಯಲ್ಲಿ ಅವರು ಬಂಧನದಲ್ಲಿದ್ದಾಗ, ಅವರೊಡನೆ ಓರ್ವ ಮಹಿಳಾ ಆಶ್ರಮವಾಸಿಯೂ ಇದ್ದರು. ತಲೆಯಲ್ಲಿನ ಹೊಟ್ಟು ಅವರನ್ನು ಬಾಧಿಸುತ್ತಿತ್ತು. ಒಮ್ಮೆ ಯಾರೂ ಕಾವಲುಗಾರರಿಲ್ಲದಿದ್ದ ಸಮಯದಲ್ಲಿ ಆಕೆ ಹೇಳಿದರು: "ಬಾಪು, ನನ್ನ ತಲೆಯ ಹೊಟ್ಟಿಗಾಗಿ ನಾನು ಕೂದಲನ್ನು ಕತ್ತರಿಸಿಕೊಂಡು, ಏನಾದರೂ ಔಷಧಿಯನ್ನು ಹಾಕಿಕೊಳ್ಳಲೇ?" ತಟ್ಟನೆ ಗಾಂಧಿ ಉತ್ತರಿಸಿದರು: "ಹೌದು ಹೌದು. ಈಗಲೇ ಮಾಡಿ. ಕತ್ತರಿ ತನ್ನಿ." ಕತ್ತರಿ ತರಲಾಯಿತು. ಆ ಮಹಿಳೆಯ ಕೂದಲು ಕೆಳಕ್ಕೆ ಬಿದ್ದವು. ಮಹಾತ್ಮ ಕ್ಷೌರಿಕ ಆಗ 75 ವಯಸ್ಸಿನವರಾಗಿದ್ದರು.

ಸ್ವದೇಶಿ ಆಂದೋಲನದ ಸಮಯದಲ್ಲಿ, ಗಾಂಧಿ ವಿದೇಶೀ ಕ್ಷೌರಕತ್ತಿಗಳನ್ನು ತ್ಯಜಿಸಿ,

ದೇಶೀಯ ಸಾಧನಗಳನ್ನು ಬಳಸತೊಡಗಿದರು. ನಿಧಾನವಾಗಿ ಅವನ್ನು ಸರಿಯಾಗಿ ಉಪಯೋಗಿಸುವ ಬಗೆಯನ್ನು ಕಲಿತರು. ಅಲ್ಲದೆ, ಕನ್ನಡಿ, ಸಾಬೂನು ಅಥವಾ ಬ್ರಷ್ ಇಲ್ಲದೆಯೇ ಮುಖಕ್ಷೌರ ಮಾಡಿಕೊಳ್ಳಬಲ್ಲರಾದರು. ಮುಖಕ್ಷೌರ ಮಾಡಿಕೊಳ್ಳುವ ಕಲೆಯಲ್ಲಿ ಇದೊಂದು ಮಹತ್ವಪೂರ್ಣ ಪ್ರಗತಿ ಎಂದು ಅವರು ಭಾವಿಸಿದ್ದಿರಬೇಕು ಮತ್ತು ಈ ಪ್ರಮಾಣಪತ್ರವನ್ನು ಅವರು ಒಬ್ಬ ಕ್ಷೌರಿಕನಿಗೇ ಕೊಟ್ಟರು: "ಮುನ್ನಿಲಾಲ್ ಬಹಳ ನಿಷ್ಠೆಯಿಂದ ನನ್ನ ಮುಖಕ್ಷೌರವನ್ನು ಮಾಡಿದ್ದಾನೆ. ಅವನದ್ದು ದೇಸೀ ಕತ್ತಿ. ಅಲ್ಲದೆ, ಅವನು ಸಾಬೂನಿಲ್ಲದೆಯೇ ಕ್ಷೌರ ಮಾಡುತ್ತಾನೆ." ಅವರ ಕೆಲ ಅನುಚರರಿಗೂ ಈ ಖಯಾಲಿ ತಗುಲಿತು. ಇದು ಒಪ್ಪಲಾರದ ವಿಧಾನವೇನಲ್ಲ ಎಂದು ಅವರಿಗೆ ಅನ್ನಿಸಿತು.

ಹಳ್ಳಿಗಳಲ್ಲಿನ ಕ್ಷೌರಿಕರು ಹೇಗೆ ಶಸ್ತ್ರಚಿಕಿತ್ಸಕರಂತೆ ಕೆಲಸ ಮಾಡಬಲ್ಲರು, ಒಂದು ಹುಣ್ಣನ್ನು ತೆರೆಯುವುದರಲ್ಲಿ ಅಥವಾ ಮುಳ್ಳನ್ನು ತೆಗೆಯುವುದರಲ್ಲಿ ಎಷ್ಟು ನಿಪುಣರು ಎಂಬುದು ಗಾಂಧಿಯವರಿಗೆ ತಿಳಿದಿತ್ತು. ಆದರೆ ಅವರ ಕೊಳಕು ಬಟ್ಟೆಗಳು ಮತ್ತು ಸ್ವಚ್ಛವಿಲ್ಲದ ಉಪಕರಣಗಳನ್ನು ಸಹಿಸಿಕೊಳ್ಳುವುದೇ ಅವರಿಗೆ ಕಷ್ಟವಾಗುತ್ತಿತ್ತು.

ಒಮ್ಮೆ ಸೇವಾಗ್ರಾಮದ ಒಬ್ಬ ಹರಿಜನ ಸೇವಕ ಹೇಳಿದ: "ನನಗೆ ವಾರ್ಧಾಗೆ ಹೋಗಬೇಕಾಗಿದೆ." "ಯಾಕೆ" ಎಂದು ಕೇಳಿದಾಗ, ಅವನು ಹೇಳಿದ: "ಕ್ಷೌರಕ್ಕಾಗಿ."

"ಇದೇ ಹಳ್ಳಿಯಲ್ಲಿಯೇ ಮಾಡಿಸಿಕೊಳ್ಳಲು ಆಗುವುದಿಲ್ಲವೇ?"

"ಸವರ್ಣೀಯ ಕ್ಷೌರಿಕರು ನನಗೆ ಕ್ಷೌರ ಮಾಡುವುದಿಲ್ಲ. ಇಲ್ಲಿ ಹರಿಜನ ಕ್ಷೌರಿಕರು ಯಾರೂ ಇಲ್ಲ" ಆತ ಉತ್ತರಿಸಿದ.

"ಹಾಗಿದ್ದ ಮೇಲೆ ನಾನು ಹೇಗೆ ಆ ಕ್ಷೌರಿಕನಿಂದ ಕ್ಷೌರ ಮಾಡಿಸಿಕೊಳ್ಳಬಲ್ಲೆ?" ಎಂದು ಹೇಳಿದ ಗಾಂಧಿ, ಆ ಕ್ಷೌರಿಕನಿಂದ ಕ್ಷೌರ ಮಾಡಿಸಿಕೊಳ್ಳುವುದನ್ನೇ ನಿಲ್ಲಿಸಿದರು. ಪ್ರತಿದಿನ

ಭಂಗಿ

ರಾಜ್‌ಕೋಟ್‌ನಲ್ಲಿಯ ಗಾಂಧಿಯವರ ತಂದೆಯ ಮನೆಯಲ್ಲಿ ಉಕಾ ಎಂಬ ಕಸ ಗುಡಿಸುವವ ಭಂಗಿ ಕೆಲಸ ಮಾಡುತ್ತಿದ್ದ. ಗಾಂಧಿ ಏನಾದರೂ ಅವನನ್ನು ಮುಟ್ಟಿದರೆ, ಸ್ನಾನ ಮಾಡಿ ಬರುವಂತೆ ತಾಯಿ ಪುತ್ಲೀಬಾಯಿ ಹೇಳುತ್ತಿದ್ದಳು. ಸಾಮಾನ್ಯವಾಗಿಯೇ ನಮ್ರ ಹಾಗೂ ವಿಧೇಯ ಸ್ವಭಾವದ ಮಗನಾಗಿದ್ದ ಗಾಂಧಿಗೆ ಇದು ಮಾತ್ರ ಓಡಿಸುತ್ತಿರಲಿಲ್ಲ. 12 ವರ್ಷದ ಈ ಬಾಲಕ ತಾಯಿಯೊಂದಿಗೆ ವಾದ ಮಾಡುತ್ತಿದ್ದ: "ಕೊಳೆ-ಕೊಳಚೆಗಳನ್ನು ಸ್ವಚ್ಛಗೊಳಿಸುವ ಮೂಲಕ ಉಕಾ ನಮಗೆ ಸೇವೆ ಸಲ್ಲಿಸುತ್ತಾನೆ. ಅವನ ಸ್ಪರ್ಶ ನನ್ನನ್ನು ಹೇಗೆ ಮಲಿನಗೊಳಿಸುತ್ತದೆ ? ನಿನ್ನ ಮಾತನ್ನು ನಾನು ಮೀರಲಾರೆ. ಆದರೆ, ರಾಮ ಗುಹಕನನ್ನು, ಅಂದರೆ ಒಬ್ಬ ಚಂಡಾಲನನ್ನು ಆಲಂಗಿಸಿದ ಎಂದು ರಾಮಾಯಣ ಹೇಳುತ್ತದೆ. ರಾಮಾಯಣ ನಮ್ಮ ದಾರಿ ತಪ್ಪಿಸಲಾರದು." ಈ ವಾದಕ್ಕೆ ಪುತ್ಲೀಬಾಯಿಯ ಬಳಿ ಯಾವುದೇ ಉತ್ತರವಿರಲಿಲ್ಲ.

ಗಾಂಧಿ ಭಂಗಿ ಕೆಲಸವನ್ನು ದಕ್ಷಿಣ ಆಫ್ರಿಕಾದಲ್ಲಿ ಕಲಿತರು. ಅಲ್ಲಿನ ಅವರ ಸ್ನೇಹಿತರು ಪ್ರೀತಿಯಿಂದ ಅವರನ್ನು ಮಹಾನ್ ಭಂಗಿ ಎಂದು ಕರೆಯುತ್ತಿದ್ದರು. ಅಲ್ಲಿ ಮೂರು ವರ್ಷಗಳಿದ್ದ ಬಳಿಕ, ಅವರು ಹೆಂಡತಿ-ಮಕ್ಕಳನ್ನು ಅಲ್ಲಿಗೇ ಕರೆದೊಯ್ಯಲು ಭಾರತಕ್ಕೆ ಬಂದರು. ಆ ಸಮಯದಲ್ಲಿ ಬಾಂಬೆ ಪ್ರಾಂತ್ಯದಲ್ಲಿ ಪ್ಲೇಗ್ ಬಂದಿತ್ತು. ಅದು ರಾಜ್‌ಕೋಟ್‌ಗೂ ಹರಡುವ ಸಂಭವವಿತ್ತು. ಗಾಂಧಿ ಒಡನೆಯೇ ರಾಜ್‌ಕೋಟ್‌ನ ನೈರ್ಮಲ್ಯ ವ್ಯವಸ್ಥೆಯನ್ನು ಸುಧಾರಿಸಲು ತಾವೂ ಸೇವೆ ಮಾಡುತ್ತೇನೆಂದರು. ಅವರು ಒಂದೊಂದು ಮನೆಯನ್ನೂ ಪರೀಕ್ಷಿಸಿದರು. ಮನೆಯ ಕಕ್ಕಸುಗಳನ್ನು ಸ್ವಚ್ಛವಾಗಿಡಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಮಬ್ಬುಮಬ್ಬಾದ, ಹೊಲಸು ತುಂಬಿದ, ಕ್ರಿಮಿಕೀಟಗಳು ಆವರಿಸಿಕೊಂಡಿರುತ್ತಿದ್ದ ಗಬ್ಬು ನಾತ ಬೀರುವ ಪಾಯಖಾನೆಯ ಗುಂಡಿಗಳು ಅವರಿಗೆ ದಿಗ್ಭ್ರಮೆ ಹುಟ್ಟಿಸಿತು. ಮೇಲ್ವರ್ಗದವರಿಗೆ ಸೇರಿದ ಕೆಲವು ಮನೆಗಳಲ್ಲಿ, ಗಟಾರಗಳನ್ನೇ ಬಹಿರ್ದೆಶೆಗೆ ರಹಸ್ಯವಾಗಿ ಉಪಯೋಗಿಸಲಾಗುತ್ತಿತ್ತು. ಅಲ್ಲಿನ ಮುರ್ನಾತ ಸಹಿಸಲಸಾಧ್ಯವಾಗಿತ್ತು. ಆದರೆ, ಅಲ್ಲಿನ ಜನರಿಗೆ ಮಾತ್ರ ಈ ವಿಷಯದಲ್ಲಿ ಪರಮ ಔದಾಸೀನ್ಯ ಹಾಗೂ ನಿರಾಸಕ್ತಿ. ಪಾಪದ ಬಡ ಅಸ್ಪೃಶ್ಯರು ಇದಕ್ಕಿಂತ ಸ್ವಚ್ಛ ಮನೆಗಳಲ್ಲಿ ವಾಸಿಸುತ್ತಿದ್ದರು ಹಾಗೂ ಗಾಂಧಿಯವರ ಮನವಿಗಳಿಗೆ ಪ್ರತಿಕ್ರಿಯಿಸುತ್ತಿದ್ದರು. ಗಾಂಧಿ ಮಲ ಮತ್ತು ಮೂತ್ರಗಳಿಗೆ ಎರಡು ಪ್ರತ್ಯೇಕ ಬಕೆಟ್‌ಗಳನ್ನು ಬಳಸುವ ಸಲಹೆ ಇತ್ತರು. ಇದು ನೈರ್ಮಲ್ಯ ವ್ಯವಸ್ಥೆಯನ್ನು ಸುಧಾರಿಸಿತು.

ರಾಜ್‌ಕೋಟ್‌ನಲ್ಲಿ ಗಾಂಧಿ ಕುಟುಂಬ ಹೆಸರುವಾಸಿಯಾಗಿತ್ತು. ಗಾಂಧಿಯವರ ತಂದೆ ಮತ್ತು ತಾತ ರಾಜ್‌ಕೋಟ್ ಮತ್ತು ನೆರೆಹೊರೆಯ ರಾಜ್ಯಗಳ ದಿವಾನರಾಗಿ ಬಹಳ ಕಾಲ ಸೇವೆ ಸಲ್ಲಿಸಿದ್ದರು. ಸುಮಾರು 70 ವರ್ಷಗಳ ಹಿಂದೆ, ಒಬ್ಬ ಪ್ರಧಾನ ಮಂತ್ರಿಯ ಬ್ಯಾರಿಸ್ಟರ್ ಮಗನಿಗೆ ತನ್ನೂರಿನ ಸುತ್ತ ಓಡಾಡಲು ಮತ್ತು ಮನೆ ಮನೆಗಳ ಚರಂಡಿಗಳ ತಪಾಸಣೆ ನಡೆಸಲು ಧೈರ್ಯದ ಅಗತ್ಯವಿತ್ತು. ಅಗತ್ಯವಿದ್ದಾಗ ನೈತಿಕ ಧೈರ್ಯ ತೋರುವಲ್ಲಿ ಗಾಂಧಿ ಎಂದಿಗೂ ಹಿಂದೆ ಬೀಳಲಿಲ್ಲ. ಅವರು ಪಾಶ್ಚಾತ್ಯರ ಅನೇಕ ಪದ್ಧತಿಗಳನ್ನು ಟೀಕಿಸಿದರು,

ಅವರು ಹಳ್ಳಿಯಿಂದ ಹಳ್ಳಿಗೆ ಪ್ರಯಾಣ ಮಾಡುತ್ತಿದ್ದಾಗ, ಕ್ಷೌರ ಮಾಡಿಕೊಳ್ಳಲೂ ಅವರಿಗೆ ಸಮಯ ಸಿಗುತ್ತಿರಲಿಲ್ಲ. ಹಲವು ಬಾರಿ ಕ್ಷೌರಿಕನ ಸಹಾಯವೂ ಬೇಕಾಗುತ್ತಿತ್ತು.

ಗಾಂಧಿ ಖಾದಿ ಪ್ರವಾಸದಲ್ಲಿದ್ದಾಗ, ಖಾದಿ ತೊಟ್ಟ ಕ್ಷೌರಿಕನಿಂದಲೇ ಕ್ಷೌರ ಮಾಡಿಸಿಕೊಳ್ಳಬಯಸಿದ್ದರು. ಸ್ವಯಂಸೇವಕರು ಅಂತಹ ಒಬ್ಬನನ್ನು ಹುಡುಕಲು ಅಲ್ಲಿ-ಇಲ್ಲಿ ಓಡಿದರು. ಗಾಂಧಿ ಅವರಿಗೆ ಹೇಳಿದರು: "ನಮ್ಮ ಸ್ವದೇಶಿಯ ಆಣೆಪ್ರಮಾಣದಲ್ಲಿ ಅಗಸರು ಮತ್ತು ಕ್ಷೌರಿಕರನ್ನು ಸಹಭಾಗಿಗಳನ್ನಾಗಿಸಬೇಕು. ಕ್ಷೌರಿಕರು ಗೊಡ್ಡುಹರಟೆ ಹೊಡೆಯುವುದರಲ್ಲಿ ನಿಸ್ಸೀಮರು; ಅವರು ಸ್ವದೇಶಿಯ ಸಂದೇಶವನ್ನು ಹರಡಬಲ್ಲರು." ಮತ್ತೊಂದು ಸಂದರ್ಭದಲ್ಲಿ, ಒರಿಸ್ಸಾದಲ್ಲಿ ಗಾಂಧಿ ಒಬ್ಬ ಕ್ಷೌರಿಕನಿಗಾಗಿ ಕಾಯುತ್ತಿದ್ದರು. ಆಗ ಒಬ್ಬ ಹೆಂಗಸು ಕ್ಷೌರದ ಸಾಮಾನು ಸರಂಜಾಮುಗಳೊಂದಿಗೆ ಬರುತ್ತಿರುವುದನ್ನು ಕಂಡರು. ಆಕೆ ಭಾರಿ ಭಾರಿಯಾದ ಓಲೆ, ಮೂಗುಬಟ್ಟು, ಕತ್ತಿನ ಸರ, ಕಾಲಿನ ಗೆಜ್ಜೆಗಳು ಮತ್ತು ಅರಗಿನ ಬಳೆಗಳನ್ನು ಧರಿಸಿದ್ದಳು. ಗಾಂಧಿ ಕೇಳಿದರು: "ಸರಿ, ನೀನು ನನಗೆ ಕ್ಷೌರ ಮಾಡುತ್ತೀಯೇನಮ್ಮಾ ?" ಆಕೆ ಮುಗುಳ್ನಗುತ್ತಾ ತಲೆಯಾಡಿಸಿ, ತನ್ನ ಕ್ಷೌರಕತ್ತಿಯನ್ನು ಹರಿತಗೊಳಿಸತೊಡಗಿದಳು. ಗಾಂಧಿ ಮತ್ತೆ ಅವಳನ್ನು ಕೇಳಿದರು: "ಇಂಥ ಭಾರೀ ಒಡವೆಗಳನ್ನು ಯಾಕೆ ಹಾಕಿಕೊಂಡಿದ್ದೀಯಾ ? ಅವೇನೂ ನಿನ್ನನ್ನು ಸುಂದರವಾಗಿಸೋಲ್ಲ. ಅವು ಬಹಳ ಕುರೂಪವಾಗಿವೆ. ಕೊಳೆಯಿಂದ ತುಂಬಿದೆ." ಕಂಬನಿ ತುಂಬಿದ ಕಣ್ಣುಗಳಿಂದ ಅವಳು ಹೇಳಿದಳು: "ಇಂದಿನ ಈ ವಿಶೇಷ ಸಂದರ್ಭಕ್ಕೆಂದೇ ನಾನು ಇವನ್ನು ಎರವಲು ಪಡೆದಿದ್ದೇನೆ ಎಂಬುದು ನಿಮಗೆ ಗೊತ್ತೆ ? ನಿಮ್ಮಂಥ ಮಹಾಪುರುಷರ ಬಳಿ ನಾನು ಒಳ್ಳೆಯ ಆಭರಣಗಳನ್ನು ಹಾಕಿಕೊಳ್ಳದೇ ಹೇಗೆ ತಾನೆ ಬರಲಿ ?" ಗಾಂಧಿಯವರ ತಲೆ ಮತ್ತು ಗಡ್ಡವನ್ನು ಕ್ಷೌರ ಮಾಡಿದ ಬಳಿಕ, ಅವಳು ತನ್ನ ಕೂಲಿಯನ್ನು ಅವರ ಪಾದದ ಬಳಿ ಇಟ್ಟು, ವಂದಿಸಿ, ಹೊರಟುಹೋದಳು.

ಆದರೆ ಪುನಃ ಪುನಃ ನೈರ್ಮಲ್ಯ ವ್ಯವಸ್ಥೆಯನ್ನು ಪಾಶ್ಚಾತ್ಯ ದೇಶಗಳಿಂದಲೇ ಕಲಿತದ್ದು ಎಂಬುದನ್ನು ಒಪ್ಪಿಕೊಳ್ಳುತ್ತಿದ್ದರು. ಅಂತಹ ಸ್ವಚ್ಛತೆಯನ್ನು ಅವರು ಭಾರತದಲ್ಲಿ ಪರಿಚಯಿಸಬಯಸಿದ್ದರು.

ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಅವರು ಎರಡನೆಯ ಬಾರಿಗೆ ಬಂದಿದ್ದಾಗ, ಗಾಂಧಿ ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದರು. ದಕ್ಷಿಣ ಆಫ್ರಿಕಾದಲ್ಲಿ ಅನಾದರಕ್ಕೊಳಗಾದ ಭಾರತೀಯರ ಪರ ವಕಾಲತ್ತಿಗಾಗಿ ಅವರು ಬಂದಿದ್ದರು. ಕಾಂಗ್ರೆಸ್ ಶಿಬಿರದಲ್ಲಿನ ನೈರ್ಮಲ್ಯ ಸ್ಥಿತಿ ಭಯಂಕರವಾಗಿತ್ತು. ಕೆಲವು ಪ್ರತಿನಿಧಿಗಳು ತಮ್ಮ ಕೋಣೆಯ ಮುಂದುಗಡೆ ಇದ್ದ ವರಾಂಡಾವನ್ನೇ ಶೌಚಾಲಯವಾಗಿ ಉಪಯೋಗಿಸುತ್ತಿದ್ದರು. ಇತರರು ಅದಕ್ಕೆ ಯಾವ ಆಕ್ಷೇಪಣೆಯನ್ನೂ ಮಾಡುತ್ತಿರಲಿಲ್ಲ. ಆದರೆ ಗಾಂಧಿ ಅದಕ್ಕೆ ಕೂಡಲೆ ಪ್ರತಿಕ್ರಿಯಿಸಿದರು. ಸ್ವಯಂಸೇವಕರೊಡನೆ ಅವರು ಆ ಬಗ್ಗೆ ಮಾತನಾಡಿದಾಗ, "ಇದು ಕಸ ಗುಡಿಸುವವರ ಕೆಲಸ. ನಮ್ಮದಲ್ಲ" ಎಂದುಬಿಟ್ಟರು. ಗಾಂಧಿ ಆಗ ಒಂದು ಕಸಬರಿಗೆ ಬೇಕೆಂದರು; ಹೊಲಸನ್ನು ಸ್ವತಃ ಸ್ವಚ್ಛಗೊಳಿಸಿದರು. ಆಗ ಅವರು ಪಾಶ್ಚಾತ್ಯ ಉಡುಪಿನಲ್ಲಿದ್ದರು. ಸ್ವಯಂಸೇವಕರಿಗೆ ಆಶ್ಚರ್ಯವಾಯಿತು, ಆದರೆ ಯಾರೂ ಅವರ ಸಹಾಯಕ್ಕೆ ಮಾತ್ರ ಮುಂದೆ ಬರಲಿಲ್ಲ. ವರ್ಷಗಳ ತರುವಾಯ ಗಾಂಧಿ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮಾರ್ಗದರ್ಶಿ ತಾರೆಯಾದಾಗ, ಕಾಂಗ್ರೆಸ್ ಶಿಬಿರಗಳಲ್ಲಿ ಸ್ವಯಂಸೇವಕರು ಭಂಗಿ ದಳ ರಚಿಸಿಕೊಂಡರು. ಒಮ್ಮೆ ಕೇವಲ ಬ್ರಾಹ್ಮಣರು ಭಂಗಿಗಳಾಗಿ ಕೆಲಸ ಮಾಡಿದರು.

ಹರಿಪುರ ಕಾಂಗ್ರೆಸ್‌ನಲ್ಲಿ ಭಂಗಿ ಕೆಲಸ ಮಾಡಲು ಎರಡು ಸಾವಿರ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡಲಾಯಿತು. ಹೊಲಸು-ಕೊಳಚೆಗಳನ್ನು ಸ್ವಚ್ಛಮಾಡುವ ಒಂದು ಗುಂಪಿನ ಜನರಿಗೆ ಅಸ್ಪೃಶ್ಯರೆಂದು ಹಣೆಪಟ್ಟಿ ಹಚ್ಚುವುದು ಗಾಂಧಿಯವರಿಂದ ಯೋಚಿಸಲೂ ಸಾಧ್ಯವಿರಲಿಲ್ಲ. ಭಾರತದಿಂದ ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಬೇಕೆಂದು ಅವರು ಬಯಸಿದರು.

ದಕ್ಷಿಣ ಆಫ್ರಿಕಾದಲ್ಲಿ, ಭಾರತೀಯರನ್ನು ಅವರ ಕ್ಷಪಚ ಅಭ್ಯಾಸಗಳಿಂದಾಗಿ ಜಿಳಿಯರು ಬಹಳ ಕೀಳಾಗಿ ನೋಡುತ್ತಿದ್ದರು. ಗಾಂಧಿ ಆ ಭಾರತೀಯರ ವಸತಿಗೃಹಗಳನ್ನು ಪರೀಕ್ಷಿಸಿ ನೋಡಿ, ತಮ್ಮ ಮನೆಗಳನ್ನು ಮತ್ತು ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕೆಂದು ಅವರಿಗೆ ಹೇಳಿದರು. ಅದರ ಬಗ್ಗೆ ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿದರು, ವಾರ್ತಾಪತ್ರಿಕೆಗಳಲ್ಲಿ ಬರೆದರು. ಡರ್ಬಾನ್‌ನಲ್ಲಿದ್ದ ಗಾಂಧಿಯವರ ಮನೆ ಪಾಶ್ಚಾತ್ಯ ರೀತಿಯಲ್ಲಿ ಕಟ್ಟಲಾಗಿತ್ತು. ಅವರ ಬಚ್ಚಲಮನೆಯಲ್ಲಿ ನೀರಿನ ಹೊರಹರಿವಿಗೆ ವ್ಯವಸ್ಥೆಯೇ ಇರಲಿಲ್ಲ. ಕಮೋಡ್ ಮತ್ತು ಕಕ್ಕಸುಪಾತ್ರೆಗಳನ್ನು ಉಪಯೋಗಿಸಲಾಗುತ್ತಿತ್ತು. ಕೆಲವೊಮ್ಮೆ ಗಾಂಧಿಯವರು ಅವರೊಡನೆ ವಾಸಿಸುತ್ತಿದ್ದ ಗುಮಾಸ್ತರು ಉಪಯೋಗಿಸಿದ ಕಕ್ಕಸುಪಾತ್ರೆಗಳನ್ನು ಸ್ವಚ್ಛ ಮಾಡುತ್ತಿದ್ದರು. ಅವರು ತಮ್ಮ ಪತ್ನಿ ಕಸ್ತೂರ್‌ಬಾ ಅವರಿಗೂ ಇವನ್ನು ಸ್ವಚ್ಛ ಮಾಡಲು ಒತ್ತಾಯಿಸುತ್ತಿದ್ದರು. ಅವರ ಎಳೆವಯಸ್ಸಿನ ಮಗಂದಿರಿಗೂ ಈ ಕೆಲಸವನ್ನು ಕಲಿಸಿದರು. ಒಮ್ಮೆ ಕಸ್ತೂರ್‌ಬಾ, ಒಬ್ಬ ಕೆಳಜಾತಿಯ ಗುಮಾಸ್ತ ಉಪಯೋಗಿಸಿದ ಕಕ್ಕಸುಪಾತ್ರೆಯನ್ನು ಒಯ್ಯುವಾಗ ಸೊಟ್ಟಮುಖ ಮಾಡಿದರು. ಆಗ ಗಾಂಧಿ ಅವರನ್ನು ಗದರಿಸುತ್ತಾ, ಜಾತಿ ಪಕ್ಷಪಾತ ಮಾಡುವುದಾದರೆ ಮನೆ ಬಿಟ್ಟು ಹೋಗಬಹುದೆಂದು ಹೇಳಿದರು. ಒಮ್ಮೆ ಗಾಂಧಿಯವರು ಒಬ್ಬ ಅಸ್ಪೃಶ್ಯ ದಂಪತಿಗಳನ್ನು ಸಬರಮತಿ ಆಶ್ರಮದಲ್ಲಿ ಸೇರಿಸಿಕೊಂಡಿದ್ದಕ್ಕೆ, ಅವರ ಬಗ್ಗೆ ಸಹಾನುಭೂತಿ ಹೊಂದಿದ್ದ ಹತ್ತಿರದವರಿಂದಲೇ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿದ್ದರು.

ದಕ್ಷಿಣ ಆಫ್ರಿಕಾದ ಸೆರೆಮನೆಯಲ್ಲಿದ್ದಾಗ ಒಮ್ಮೆ ಗಾಂಧಿ ಕಕ್ಕಸುಗಳನ್ನು ಸ್ವಚ್ಛ ಮಾಡಲು ತಾವಾಗಿಯೇ ಮುಂದೆ ಬಂದರು. ಅಲ್ಲಿ ಹರಿಯುವ ನೀರಿನ ವ್ಯವಸ್ಥೆಯೂ ಇತ್ತು. ಸೆರೆಮನೆಯ ಅಧಿಕಾರಿಗಳು ಮುಂದಿನ ಸಲ, ಆ ಕೆಲಸವನ್ನು ಅವರಿಗೇ ಒಪ್ಪಿಸಿದರು.

ದಕ್ಷಿಣ ಆಫ್ರಿಕಾದಲ್ಲಿ 20 ವರ್ಷಗಳು ಇದ್ದ ಬಳಿಕ, ಗಾಂಧಿಯವರು 1915ರಲ್ಲಿ ತಮ್ಮ ಜನರೊಂದಿಗೆ ಭಾರತಕ್ಕೆ ಮರಳಿ ಬಂದರು. ಅದೇ ವರ್ಷ ಹರಿದ್ವಾರದಲ್ಲಿ ನಡೆದ ಕುಂಭಮೇಳಕ್ಕೆ ಅವರು ಭೇಟಿಯಿತ್ತಾಗ, ಅವರು ಮತ್ತು ಅವರ ಆದರ್ಶ ಹುಡುಗರು ಮೇಳದಲ್ಲಿ ಭಂಗಿಗಳಾಗಿ ಕೆಲಸ ಮಾಡಿದರು. ಅದೇ ವರ್ಷ ಗಾಂಧಿ ಪೂನಾದಲ್ಲಿದ್ದ 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯ ವಸತಿಗೃಹಗಳಿಗೆ ಭೇಟಿ ಇತ್ತರು. ಆ ಕಾಲೋನಿಯ ಕೆಲವು ಸದಸ್ಯರು ಒಂದು ಮುಂಜಾನೆ ಗಾಂಧಿ ಕಕ್ಕಸುಗಳನ್ನು ತೊಳೆಯುತ್ತಿದ್ದುದನ್ನು ನೋಡಿದರು. ಅವರಿಗೆ ಅದು ಇಷ್ಟವಾಗಲಿಲ್ಲ. ಆದರೆ, ಇಂತಹ ಕೆಲಸಗಳು ಒಬ್ಬ ವ್ಯಕ್ತಿಯನ್ನು ಸ್ವರಾಜ್ಯಕ್ಕಾಗಿ ಅರ್ಹರನ್ನಾಗಿಸುತ್ತದೆ ಎಂಬುದು ಗಾಂಧಿಯವರ ನಂಬಿಕೆಯಾಗಿತ್ತು.

ಗಾಂಧಿ ಒಂದಕ್ಕಿಂತ ಹೆಚ್ಚು ಬಾರಿ ಇಡೀ ಭಾರತವನ್ನು ಸುತ್ತಾಡಿ ಬಂದರು. ಎಲ್ಲೆಲ್ಲಿ ಹೋದರೂ, ಯಾವುದೋ ಒಂದು ರೀತಿಯಲ್ಲಿ ಅವರು ಅಸ್ವಚ್ಛತೆಯನ್ನು ಕಂಡರು. ಸಾರ್ವಜನಿಕ ಮೂತ್ರಿಗಳಲ್ಲಿನ ಮತ್ತು ರೈಲುನಿಲ್ದಾಣಗಳ ಹಾಗೂ ಧರ್ಮಶಾಲೆಗಳ ಪಾಯಖಾನೆಗಳಲ್ಲಿನ ಹೊಲಸು ಮತ್ತು ದುರ್ವಾಸನೆಗಳೂ ಘೋರವಾಗಿದ್ದವು. ಬಡ ಹಳ್ಳಿಗರು ಮತ್ತು ಅವರ ಎತ್ತುಗಳು ಬಳಸುತ್ತಿದ್ದ ರಸ್ತೆಗಳು ಎಂದೂ ಸುಸ್ಥಿತಿಯಲ್ಲಿ ಇರುತ್ತಿರಲಿಲ್ಲ. ಪುಣ್ಯಕ್ಷೇತ್ರಗಳಲ್ಲಿನ ನೀರಾಗಲೀ, ಸ್ನಾನಘಟ್ಟಗಳಾಗಲೀ ಎಷ್ಟು ಕೊಳಕಾಗಿದೆ

ಎಂಬುದನ್ನು ತಿಳಿದುಕೊಳ್ಳುವತ್ತ ಯಾವ ಗಮನವೂ ಇಲ್ಲದಂತೇ, ಜನ ಅದರಲ್ಲಿ ಮುಳುಗಿ ಏಳುತ್ತಿದ್ದುದನ್ನು ಅವರು ನೋಡಿದರು. ನದಿಯ ದಂಡೆಗಳನ್ನು ಆ ಜನರೇ ಹೊಲಸು ಮಾಡುತ್ತಿದ್ದರು. ಅಲ್ಲಲ್ಲಿ ಬೆಳ್ಳಿಯ ನಾಣ್ಯಗಳನ್ನು ಕೂರಿಸಿರುವ ಕಾಶಿ ವಿಶ್ವನಾಥನ ದೇವಸ್ಥಾನದ ಅಮೃತಶಿಲೆಯ ನೆಲದಲ್ಲಿ ಕೊಳೆ ಕಟ್ಟಿಕೊಂಡಿರುವುದನ್ನು ನೋಡಿ ಅವರಿಗೆ ಸಂಕಟವಾಯಿತು. ಬಹುತೇಕ ದೇವಸ್ಥಾನಗಳಿಗೆ ಪ್ರವೇಶವು, ಜಾರುವ ಸಂದುಗೊಂದುಗಳ ಮೂಲಕವೇ ಏಕಿದೆ ಎಂದು ಅವರು ಚಿಂತಿಸಿದರು. ರೈಲು ಬೋಗಿಗಳನ್ನು ಹೊಲಸು ಮಾಡುವ ರೈಲುಪ್ರಯಾಣಿಕರ ಅಭ್ಯಾಸವನ್ನು ಕಂಡು ದುಃಖಿಸಿದ ಅವರು, ಬೂಟುಗಳನ್ನು ಉಪಯೋಗಿಸುವ ಶಕ್ತಿ ಎಲ್ಲರಿಗೂ ಇಲ್ಲ, ಕೇವಲ ಕೆಲವರಿಗೆ ಇದೆ, ಆದರೆ ಭಾರತದಲ್ಲಿ ಬರಿಗಾಲಲ್ಲಿ ನಡೆಯುವುದನ್ನು ಯೋಚಿಸಲೂ ಆಗದು ಎಂದರು. ಬಾಂಬೆಯಂತಹ ನಗರಗಳಲ್ಲೂ ಸಹ, ಸುತ್ತಮುತ್ತಲಿನ ಮನೆಗಳಲ್ಲಿನ ಮಂದಿ ಯಾವಾಗ ತಮ್ಮ ಮೇಲೆ ಉಗಿಯುತ್ತಾರೋ ಎಂಬ ಭೀತಿಯಲ್ಲಿ ಜನ ರಸ್ತೆಗಳಲ್ಲಿ ಸಡೆದಾಡುತ್ತಾರೆ!

ಪೌರಸಭೆಯ ಭಾಷಣಗಳಿಗೆ ಉತ್ತರವಾಗಿ, ಗಾಂಧಿ ಆಗಾಗ್ಗೆ ಹೇಳುತ್ತಿದ್ದರು: "ನಿಮ್ಮ ವಿಶಾಲವಾದ ರಸ್ತೆಗಳಿಗೆ, ಭವ್ಯವಾದ ದೀಪವ್ಯವಸ್ಥೆಗಳಿಗೆ, ಹಾಗೂ ಸುಂದರವಾದ ಉದ್ಯಾನವನಗಳಿಗಾಗಿ ಅಭಿನಂದಿಸುತ್ತೇನೆ. ಆದರೆ ಮಾದರಿ ಪಾಯಖಾನೆಗಳನ್ನು ಹೊಂದಿರದ, ಹಗಲು-ರಾತ್ರಿಗಳ ಎಲ್ಲಾ ಸಮಯದಲ್ಲೂ ರಸ್ತೆ-ಬೀದಿಗಳು ಸ್ವಚ್ಛವಾಗಿಲ್ಲದಿರುವಲ್ಲಿ, ಅಲ್ಲಿನ ಪೌರಸಭೆಗೆ ಅಸ್ತಿತ್ವದಲ್ಲಿರಲು ಅರ್ಹತೆಯೇ ಇಲ್ಲ. ಬಹಳಷ್ಟು ಪೌರಸಭೆಗಳ ಅತಿ ದೊಡ್ಡ ಸಮಸ್ಯೆ ಎಂದರೆ ಅನೈರ್ಮಲ್ಯತೆ... ಝಾಡಮಾಲಿಗಳು ಎಂತಹ ಸ್ಥಿತಿಯಲ್ಲಿ ವಾಸಿಸುತ್ತಾರೆ ಎಂಬ ಬಗ್ಗೆ ನೀವೆಂದಾದರೂ ಯೋಚಿಸಿದ್ದೀರಾ?"

ಜನರಿಗೆ ಅವರು ಹೇಳಿದರು: "ನಿಮ್ಮ ಕೈಗಳಲ್ಲಿ ಪೊರಕೆ ಮತ್ತು ಬಕೆಟ್‌ಗಳನ್ನು ತೆಗೆದುಕೊಳ್ಳುವವರೆಗೂ, ನೀವು ನಿಮ್ಮ ಪಟ್ಟಣ ಮತ್ತು ನಗರಗಳನ್ನು ಸ್ವಚ್ಛ ಮಾಡಲಾರಿರಿ." ಒಂದು ಮಾದರಿ ಶಾಲೆಯನ್ನು ಪರೀಕ್ಷಿಸಿದಾಗ, ಅವರು ಅಲ್ಲಿನ ಶಿಕ್ಷಕರಿಗೆ ಹೇಳಿದರು: "ನಿಮ್ಮ ವಿದ್ಯಾರ್ಥಿಗಳಿಗೆ ನೀವು ಸಾಹಿತ್ಯಕ ಶಿಕ್ಷಣವನ್ನು ಕೊಡುವುದರ ಜೊತೆಗೆ, ಅವರನ್ನು ಅಡುಗೆ ಮಾಡುವವರು ಮತ್ತು ಕಸ ಗುಡಿಸುವವರನ್ನಾಗಿಯೂ ಮಾಡಿದಲ್ಲಿ, ನಿಮ್ಮ ಸಂಸ್ಥೆಯನ್ನು ನೀವು ಒಂದು ಮಾದರಿ ಸಂಸ್ಥೆಯನ್ನಾಗಿ ಮಾಡುತ್ತೀರಾ." ವಿದ್ಯಾರ್ಥಿಗಳಿಗೆ ಅವರ ಸಲಹೆ ಹೀಗಿತ್ತು: "ನಿಮಗೆ ನೀವೇ ಝಾಡಮಾಲಿಗಳಾದರೆ, ನೀವು ನಿಮ್ಮ ಸುತ್ತಮುತ್ತಲನ್ನು ಸ್ವಚ್ಛವಾಗಿಡುತ್ತೀರಿ. ಒಬ್ಬ ನಿಪುಣ ಝಾಡಮಾಲಿಯಾಗಬೇಕಾದರೆ, ಏಕ್ಸ್‌ರೀಯಾ ಕ್ರಾಸ್‌ಅನ್ನು ಗೆಲ್ಲುವುದಕ್ಕೆ ಬೇಕಾದ ಧೈರ್ಯದಷ್ಟೇ ಧೈರ್ಯ ಬೇಕಾಗುತ್ತದೆ."

ಗಾಂಧಿಯವರ ಆಶ್ರಮದ ಹತ್ತಿರವಿದ್ದ ಹಳ್ಳಿಗರು ಮಲವನ್ನು ಮಣ್ಣಿನಿಂದ ಮುಚ್ಚಲು ನಿರಾಕರಿಸಿದರು. ಅವರು ಹೇಳಿದರು: "ಇದು ಭಂಗಿ ಮಾಡುವ ಕೆಲಸ. ಮಲವನ್ನು ನೋಡುವುದು ಪಾಪದ ಕೆಲಸ; ಇನ್ನು ಅದರ ಮೇಲೆ ಮಣ್ಣು ಎಸೆಯುವುದೆಂದರೆ, ಇನ್ನೂ ಪಾಪ." ಗಾಂಧಿ ಖುದ್ದಾಗಿ ಹಳ್ಳಿಗಳಲ್ಲಿ ಭಂಗಿಯ ಕೆಲಸದ ಉಸ್ತುವಾರಿ ಮಾಡಿದರು. ಆ ಹಳ್ಳಿಗರಿಗೆ ಒಂದು ಉದಾಹರಣೆ ತೋರಬೇಕೆಂದು ಕೆಲವು ತಿಂಗಳುಗಳ ಕಾಲ, ಅವರೇ ಹಳ್ಳಿಹಳ್ಳಿಗಳಿಗೆ ಬಕೆಟ್ಟು ಮತ್ತು ಪೊರಕೆ ಹಿಡಿದು ಹೋಗುತ್ತಿದ್ದರು. ಅವರ ಮಿತ್ರರು ಮತ್ತು ಅತಿಥಿಗಳು ಅವರೊಂದಿಗೆ ಹೋಗುತ್ತಿದ್ದರು. ಅವರು ಬಕೆಟ್ಟು ಬಕೆಟ್ಟುಗಳಲ್ಲಿ ಹೊಲಸನ್ನು ತಂದು ಗುಂಡಿಗಳಲ್ಲಿ ಹೂತರು. ತ್ಯಾಜ್ಯದ ವಿಲೇವಾರಿ ಸಹ ಗಾಂಧಿಯವರಿಗೆ ಒಂದು ವಿಜ್ಞಾನವಾಗಿತ್ತು.

ಅವರ ಆಶ್ರಮಗಳಲ್ಲಿ ಭಂಗಿಯ ಕೆಲಸವಲ್ಲದನ್ನೂ ಆಶ್ರಮವಾಸಿಗಳೇ ಮಾಡುತ್ತಿದ್ದರು. ಗಾಂಧಿ ಅವರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ವಿವಿಧ ಜನಾಂಗದ, ಮತಧರ್ಮಗಳ ಮತ್ತು ಮೈಬಣ್ಣಗಳ ಜನ ಅಲ್ಲಿ ವಾಸಿಸುತ್ತಿದ್ದರು. ಆಶ್ರಮದ ನೆಲದ ಮೇಲೆ ಒಂದಿಷ್ಟೂ ಕಸ ಇರುತ್ತಿರಲಿಲ್ಲ. ಎಲ್ಲ ಕಸಕಡ್ಡಿಗಳನ್ನು ಗುಂಡಿಗಳಲ್ಲಿ ಹೂಳಲಾಗುತ್ತಿತ್ತು. ಹಣ್ಣು-ತರಕಾರಿಗಳ ಸಿಪ್ಪೆಗಳು ಮತ್ತು ಆಹಾರಗಳ ಉಳಿಕೆಗಳು, ಎಲ್ಲವನ್ನೂ ಒಂದು ಪ್ರತ್ಯೇಕವಾದ ಗೊಬ್ಬರದ ಗುಂಡಿಯಲ್ಲಿ ಸುರಿಯಲಾಗುತ್ತಿತ್ತು. ಮಲವನ್ನು ಸಹ ಇಲ್ಲಿ ಹೂತು, ಆಮೇಲೆ ಒಳ್ಳೆಯ ಸಾರಯುತ ಗೊಬ್ಬರವನ್ನಾಗಿ ಉಪಯೋಗಿಸಲಾಗುತ್ತಿತ್ತು. ತ್ಯಾಜ್ಯ ನೀರನ್ನು ಗಿಡಗಳಿಗೆ ಬಳಸಲಾಗುತ್ತಿತ್ತು. ಆ ತೋಟದಲ್ಲಿ ಪಕ್ಕಾ ಒಳಚರಂಡಿ ವ್ಯವಸ್ಥೆ ಇಲ್ಲದಿದ್ದರೂ ಅಲ್ಲಿ ನೊಣಗಳಾಗಲಿ, ದುರ್ವಾಸನೆಯಾಗಲೀ ಇರಲಿಲ್ಲ. ಗಾಂಧಿ ಮತ್ತು ಅವರ ಸಹ ಕೆಲಸಗಾರರು ಸರದಿ ಪ್ರಕಾರ ಕಸ ಗುಡಿಸುತ್ತಿದ್ದರು. ಅವರು ಬಕೆಟ್ ಕಕ್ಕಸು ಮತ್ತು ಎರಡು ಗುಂಡಿಗಳ ಕಂದಕ ಕಕ್ಕಸುಗಳನ್ನು ಪರಿಚಯಿಸಿದರು. ತಮ್ಮ ತೋಟಕ್ಕೆ ಬಂದವರಿಗೆಲ್ಲಾ ಅವರು ಈ ಆವಿಷ್ಕಾರವನ್ನು ಹೆಮ್ಮೆಯಿಂದ ತೋರಿಸುತ್ತಿದ್ದರು. ಶ್ರೀಮಂತರು-ಬಡವರು, ಮುಖಂಡರು-ಕೆಲಸಗಾರರು, ಭಾರತೀಯರು ಮತ್ತು ವಿದೇಶೀಯರು – ಎಲ್ಲರೂ ಈ ಕಕ್ಕಸುಗಳನ್ನೇ ಉಪಯೋಗಿಸಬೇಕಾಗಿತ್ತು. ಈ ಪ್ರಯೋಗವು ನಿಧಾನವಾಗಿ ಸಂಪ್ರದಾಯವಾದೀ ಸ್ವಭಾವ ಹೊಂದಿದ್ದ ಸಹ ಕೆಲಸಗಾರರ ಮತ್ತು ಆಶ್ರಮದ ಮಹಿಳೆಯರ ಮನಸ್ಸುಗಳಿಂದ ಭಂಗಿ ಕೆಲಸದ ಬಗ್ಗೆ ಇದ್ದ ತಿರಸ್ಕಾರದ ಧೋರಣೆಯನ್ನು ತೆಗೆದುಹಾಕಿತು. ಶುಚಿಗೊಳಿಸುವ ಅವಕಾಶ ಸ್ವಲ್ಪ ಸಿಕ್ಕಿದರೂ, ಗಾಂಧಿಯವರಿಗೆ ಬಹಳ ಸಂತೋಷವಾಗುತ್ತಿತ್ತು. ಅವರ ಪ್ರಕಾರ ಜನರ ಕಕ್ಕಸುಗಳಲ್ಲಿನ ಸ್ಥಿತಿಗತಿಯೇ ನೈರ್ಮಲ್ಯದ ಬಗ್ಗೆ ಅವರಿಗಿರುವ ಜ್ಞಾನ-ತಿಳುವಳಿಕೆಯ ಪರೀಕ್ಷೆ.

ಅವರು ಭಂಗಿಗಳ ಮನೆಗಳಿಗೆ ಭೇಟಿ ನೀಡುತ್ತಿದ್ದರು. ಭಂಗಿಗಳು ತಮ್ಮ ದುಃಖದ ಕತೆಗಳನ್ನು ಅವರ ಬಳಿ ಹೇಳಿಕೊಳ್ಳುತ್ತಿದ್ದರು. ತಮ್ಮ ಕೆಲಸಗಳನ್ನು ಮಾಡುವುದರಲ್ಲಿ ಏನೂ ಅವಮಾನವಿಲ್ಲ ಎಂದು ಗಾಂಧಿ ಅವರಿಗೆ ಭರವಸೆ ನೀಡುತ್ತಿದ್ದರು. ಹೆಂಡ ಸಾರಾಯಿಗಳನ್ನು ಕುಡಿಯುವುದು ಮತ್ತು ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವುದನ್ನು ಬಿಡಿರೆಂದು ಸಲಹೆ ನೀಡುತ್ತಿದ್ದರು. ಗುಡಿಸುವವರು ಚಳುವಳಿ ಮಾಡುವುದನ್ನು ಗಾಂಧಿ ಎಂದೂ ಬೆಂಬಲಿಸಲಿಲ್ಲ. ಒಬ್ಬ ಭಂಗಿ ಒಂದು ದಿನಕ್ಕೂ ತನ್ನ ಕೆಲಸ ತಪ್ಪಿಸಬಾರದು ಎಂದು ಅವರು ನಂಬಿದ್ದರು.

ತಮ್ಮ 'ಹರಿಜನ್' ಪತ್ರಿಕೆಯಲ್ಲಿ ಒಬ್ಬ ಮಾದರಿ ಭಂಗಿ ಹೇಗಿರಬೇಕು ಎಂಬುದನ್ನು ಅವರು ವಿವರಿಸಿದರು: "ಸರಿಯಾದ ಒಂದು ಕಕ್ಕಸನ್ನು ಹೇಗೆ ಕಟ್ಟಲಾಗಿದೆ ಮತ್ತು ಅದನ್ನು ಸರಿಯಾದ ರೀತಿಯಲ್ಲಿ ಶುಚಿಗೊಳಿಸುವುದು ಹೇಗೆ ಎಂಬ ಬಗ್ಗೆ ಅವನಿಗೆ ತಿಳಿದಿರಬೇಕು. ಮಲಮೂತ್ರಗಳ ವಾಸನೆಯನ್ನು ಸಹಿಸಿಕೊಂಡು, ಅದನ್ನು ನಿರ್ಮೂಲ ಮಾಡುವ ಬಗ್ಗೆ ಹಾಗೂ ವಿವಿಧ ಕ್ರಿಮಿನಾಶಕಗಳನ್ನು ಉಪಯೋಗಿಸಿ ಅವನ್ನು ನಿಷ್ಕ್ರಿಯಗೊಳಿಸುವುದೂ ತಿಳಿದಿರಬೇಕು. ಅದೇ ರೀತಿ ಮಲಮೂತ್ರಗಳನ್ನು ಗೊಬ್ಬರವನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯೂ ಅವನಿಗೆ ತಿಳಿದಿರಬೇಕು." ಕಕ್ಕಸುಗಳನ್ನು ಶುಚಿ ಮಾಡುವ ಕೆಲಸವನ್ನು ಕೂಲಿಗಾಗಿ ಹೇರಲ್ಪಟ್ಟ ದುಡಿಮೆಯಾಗಿ ಮುಂದುವರಿಸುವ ಬದಲು, ಅದನ್ನು ಅತ್ಯವಶ್ಯಕವಾದ ಸಾಮಾಜಿಕ ಕೆಲಸದ ಮಟ್ಟಕ್ಕೆ ಏರಿಸಬೇಕೆಂದು ಗಾಂಧಿ ಬಯಸಿದ್ದರು.

ಅವರ ಖಾದಿ ಪ್ರವಾಸದಲ್ಲಿ, ಗಾಂಧಿಯವರು ಮಾತನಾಡಬೇಕಾಗಿದ್ದ ಸಾರ್ವಜನಿಕ ಸಭೆಯೊಂದರಲ್ಲಿ ಭಾಗವಹಿಸಲು ಝಾಡಮಾಲಿಗಳಿಗೆ ಜಿಡಲಿಲ್ಲ. ಈ ವಿಷಯ ಗಾಂಧಿಗೆ

ಗೊತ್ತಾದಾಗ, ಅವರು ಸಭೆಯ ವ್ಯವಸ್ಥಾಪಕರಿಗೆ ಹೇಳಿದರು:

"ನಿಮ್ಮ ಪರ್ಸ್ ಮತ್ತು ಭಾಷಣಗಳನ್ನು ನೀವೇ ಇಟ್ಟುಕೊಳ್ಳಿ. ಅಸ್ಪೃಶ್ಯರಿಗಾಗೆಂಬೇ ನಾನು ಒಂದು ಸಭೆ ನಡೆಸುತ್ತೇನೆ. ಬೇಕಿದ್ದವರು ಅಲ್ಲಿಗೇ ಬರಲಿ."

ಗಾಂಧಿ ನಿಧನರಾಗುವ ಎರಡು ವರ್ಷಗಳಿಗೆ ಮೊದಲು ಮುಂಬೈ ಮತ್ತು ದಿಲ್ಲಿಯಲ್ಲಿ ಝಾಡಮಾಲಿಗಳ ಕಾಲೋನಿಯಲ್ಲೇ ಕೆಲ ದಿನಗಳ ಕಾಲ ತಂಗಿದ್ದರು. ಅವರಿರುವ ಜಾಗದಲ್ಲೇ ಗಾಂಧಿಯೂ ತಂಗಲು ಬಯಸಿದ್ದರು. ಅವರ ಊಟವನ್ನೇ ಇವರೂ ಮಾಡಬಯಸಿದ್ದರು. ಆದರೆ ಈ ಪ್ರಯೋಗದ ವೇಳೆಗೆ ಅವರಿಗಾಗಲೇ ವಯಸ್ಸಾಗಿತ್ತು. ಅಲ್ಲದೆ, ಕೆಲವು ವಿಶೇಷ ಸೌಲಭ್ಯಗಳನ್ನು ಒತ್ತಾಯಪೂರ್ವಕವಾಗಿ ಮಹಾತ್ಮರ ಮೇಲೆ ಹೇರಲಾಯಿತು.

ಒಮ್ಮೆ ಗಾಂಧಿ ವೈಸ್‌ರಾಯ್‌ರವರನ್ನು ಕಾಣಲು ಶಿಮ್ಲಾಗೆ ಹೋದರು. ಅಲ್ಲಿ ಭಂಗಿಗಳ ವಸತಿಸ್ಥಳವನ್ನು ನೋಡಲು ಸಹ ಕೆಲಸಗಾರ ಮುಖಂಡನೊಬ್ಬನನ್ನು ಕಳುಹಿಸಿದರು. ಆತ ಆ ಸ್ಥಳ ಪ್ರಾಣಿಗಳಿರಲೂ ಲಾಯಕ್ಕಿಲ್ಲ ಎಂದು ಹೇಳಿದಾಗ, ಗಾಂಧಿ ಸಂಕಟದಿಂದ ಹೇಳಿದರು: "ಇಂದು ಭಂಗಿಗಳನ್ನು ನಾವು ಪ್ರಾಣಿಗಳ ಮಟ್ಟಕ್ಕೆ ಇಳಿಸಿದ್ದೇವೆ. ಅವರು ಒಂದೆರಡು ಕಾಸು ಗಳಿಸುತ್ತಾರೆ, ಆದರೆ ಅದು ಮಾನವ ಘನತೆಯ ಮೌಲ್ಯವಲ್ಲ. ಆತ ತಿನ್ನುವುದನ್ನು ನೋಡಿ – ಸುತ್ತಮುತ್ತ ಹೊಲಸು, ಕಕ್ಕಸಿನ ಗೋಡೆಯ ನೆರಳಿನಲ್ಲಿ ಭಯದಿಂದ ಕುಗ್ಗಿಕೊಂಡು ತಿನ್ನುತ್ತಾನೆ. ಹೃದಯವನ್ನು ಒಡೆಯಲು ಇಷ್ಟು ಸಾಕು." ಭಂಗಿಯೊಬ್ಬ ಮಲವ ಬುಟ್ಟಿಯನ್ನು ತಲೆಯ ಮೇಲೆ ಹೊತ್ತು ನಡೆಯುವ ದೃಶ್ಯ ಅವರನ್ನು ಹತಾಶರನ್ನಾಗಿಸುತ್ತಿತ್ತು. ಸರಿಯಾದ ಉಪಕರಣಗಳ ಬಳಕೆಯಿಂದ ಕಕ್ಕಸನ್ನು ಶುಚಿ ಮಾಡುವ ಕೆಲಸವನ್ನು ಹೇಗೆ ಒಪ್ಪವಾಗಿ ಮಾಡಬಹುದೆಂದು ಅವರು ಹೇಳಿದರು. ಅದೊಂದು ಶುದ್ಧ ಕಲೆ. ಅದು ತಮ್ಮ ಮೈಗಂಟಿಕೊಳ್ಳದಂತೆ ಅವರು ಜೊಕ್ಕಟವಾಗಿ ಮಾಡುತ್ತಿದ್ದರು.

ಒಮ್ಮೆ ಒಬ್ಬ ವಿದೇಶೀಯ ಗಾಂಧಿಯವರನ್ನು ಕೇಳಿದ: "ನಿಮ್ಮನ್ನು ಒಂಬ ದಿನದ ಮಟ್ಟಿಗೆ ಭಾರತದ ವೈಸ್‌ರಾಯ್ ಆಗಿ ಮಾಡಿದರೆ, ನೀವೇನು ಮಾಡುತ್ತೀರಿ ?"

ಗಾಂಧಿ ಹೇಳಿದರು: "ನಾನು ವೈಸ್‌ರಾಯ್ ಮನೆ ಹತ್ತಿರದ ಆಜಿಯನ್‌ನ ಕೊಳಕಾದ ಕುದುರೆ ಲಾಯದಂತಿರುವ ಭಂಗಿಗಳ ವಸತಿಸ್ಥಳವನ್ನು ಚೊಕ್ಕಟ ಮಾಡುತ್ತೇನೆ."

"ನಿಮ್ಮ ಅವಧಿಯನ್ನು ಇನ್ನೂ ಒಂದು ದಿನಕ್ಕೆ ವಿಸ್ತರಿಸಿದರೆ, ಆಗ ?"

"ಅದೇ ಕೆಲಸವನ್ನು ಮರುದಿನವೂ ಮುಂದುವರಿಸುತ್ತೇನೆ."

ಚಮ್ಮಾರ

ಗಾಂಧಿಯವರಿಗೆ 63 ವರ್ಷ ವಯಸ್ಸಾಗಿದ್ದಾಗ, ಅವರನ್ನು ವಲ್ಲಭ್‌ಭಾಯಿ ಪಟೇಲರ ಜೊತೆ ಯರವಾಡಾ ಸೆರೆಮನೆಯಲ್ಲಿಟ್ಟಿದ್ದರು. ವಲ್ಲಬ್‌ಭಾಯಿಯವರಿಗೆ ಒಂದು ಜೊತೆ ಚಪ್ಪಲಿ ಬೇಕಾಗಿತ್ತು. ಆದರೆ ಆ ವರ್ಷ ಸೆರೆಮನೆಯಲ್ಲಿ ಯಾರೂ ಒಳ್ಳೆಯ ಚಮ್ಮಾರರೇ ಇರಲಿಲ್ಲ. ಗಾಂಧಿ ಹೇಳಿದರು: "ಒಳ್ಳೆಯ ಚರ್ಮವೇನಾದರೂ ಸಿಕ್ಕಿದಲ್ಲಿ, ನಾನೇ ಒಂದು ಜೊತೆ ಚಪ್ಪಲಿ ಮಾಡಿಕೊಡಬಲ್ಲೆ. ಚಪ್ಪಲಿ ಹೊಲಿಯುವುದನ್ನು ನಾನು ಬಹಳ ಹಿಂದೆಯೇ ಕಲಿತಿದ್ದೆ. ಈಗ ಏನಾದರೂ ಅದು ನೆನಪಿಗೆ ಬರುವುದೇ ನೋಡುತ್ತೇನೆ. ನಾನು ಬಹಳ ಒಳ್ಳೆಯ ಚಮ್ಮಾರನಾಗಿದ್ದೆ. ಸೋದೆಪುರದಲ್ಲಿರುವ ಖಾದಿ ಪ್ರತಿಷ್ಠಾನ ಸಂಗ್ರಹಾಲಯದಲ್ಲಿ ನನ್ನ ಕೆಲಸದ ಮಾದರಿಯನ್ನು ನೋಡಬಹುದು. ಆ ಒಂದು ಜೊತೆ ಚಪ್ಪಲಿಯನ್ನು ನಾನು '.....' ಗಾಗಿ ಕಳುಹಿಸಿದ್ದೆ. ಅದನ್ನು ಪಾದರಕ್ಷೆಯಾಗಿ ಬಳಸಲಾಗಲೇ ಇಲ್ಲ, ಬದಲಿಗೆ ಅದನ್ನು ತಲೆಯ ಆಭರಣದಂತೆ ಉಪಯೋಗಿಸಬಹುದಿತ್ತು."

ಈ ಹಿಂದೆ 1911ರಲ್ಲಿ ಗಾಂಧಿ, ತಮ್ಮ ಸೋದರಳಿಯನಿಗೆ ಪತ್ರ ಬರೆದಿದ್ದರು: "ನಾನು ಟಾಲ್‌ಸ್ಟಾಯ್ ಫಾರಂನಲ್ಲಿ ಅನೇಕ ಪಾದರಕ್ಷೆಗಳನ್ನು ತಯಾರಿಸಿದ್ದೆ. ಈಚೆಗೆ ಚಪ್ಪಲಿಗಳನ್ನೇ ಹೆಚ್ಚುಹೆಚ್ಚಾಗಿ ಹೊಲಿಯುತ್ತಿದ್ದೇನೆ. ಈ ಕೆಲಸ ನನಗೆ ಇಷ್ಟ ಅಲ್ಲದೆ, ಇದು ಅಗತ್ಯ ಕೂಡ. ಈಗಾಗಲೇ ನಾನು 15 ಜೊತೆಗಳನ್ನು ಮಾಡಿದ್ದೇನೆ. ನಿನಗೆ ಹೊಸ ಪಾದರಕ್ಷೆಗಳು ಬೇಕಾದಾಗ, ದಯವಿಟ್ಟು ನಿನ್ನ ಅಳತೆ ಕಳುಹಿಸು" ಎಂದು.

ಗಾಂಧಿ ಈ ಕಲೆಯನ್ನು ದಕ್ಷಿಣ ಆಫ್ರಿಕಾದಲ್ಲಿ ತಮ್ಮ ನಿಷ್ಠಾವಂತ ಗೆಳೆಯರಾಗಿದ್ದ ಜರ್ಮನಿಯ ಕಲ್ಲೆನ್‌ಬ್ಯಾಕ್‌ರಿಂದ ಕಲಿತರು. ಗಾಂಧಿ ಈ ಕಲೆಯನ್ನು ಇತರರಿಗೂ ಕಲಿಸಿದರು. ಅವರೋ, ಬೂಟು ತಯಾರಿಕೆಯಲ್ಲಿ ತಮ್ಮ ಗುರುವನ್ನೂ ಮೀರಿಸಿದರು. ಅವರುಗಳು ತಯಾರಿಸಿದ ಬೂಟುಗಳು ಹೊರಗೆ, ಅಂದರೆ ತೋಟದಾಚೆ ಮಾರಾಟವಾಗುತ್ತಿದ್ದವು. ಆ ಸಮಯದಲ್ಲಿ, ಪ್ಯಾಂಟಿನ ಜೊತೆ ಚಪ್ಪಲಿ–ಬೂಟುಗಳನ್ನು ಧರಿಸುವ ಹೊಸ ಪರಿಪಾಠ ಬೆಳೆಸಿದರು. ಉಷ್ಣ ದೇಶಗಳಲ್ಲಿ, ಪಾದವನ್ನು ಪೂರ್ತಿ ಮುಚ್ಚುವಂತಹ ಬೂಟುಗಳಿಗಿಂತ ಇಂತಹುವೇ ಬಹಳ ಆರಾಮದಾಯಕವಾಗಿದ್ದವು. ಇವನ್ನು ಚಳಿಗಾಲದಲ್ಲಿ ಕಾಲುಚೀಲದ ಮೇಲೆಯೂ ಹಾಕಿಕೊಳ್ಳಬಹುದಾಗಿತ್ತು.

ಸರ್ದಾರ್ ಪಟೇಲ್ ಜವಾಹರ್‌ಲಾಲ್ ಮತ್ತು ಇತರ ಕೆಲವರು ಒಮ್ಮೆ ಗಾಂಧಿಯವರ ಸಲಹೆ ಪಡೆಯಲೆಂದು ಸೇವಾಗ್ರಾಮಕ್ಕೆ ಹೋದರು. ಗಾಂಧಿ ಒಂದು ತಂಡಕ್ಕೆ ತರಬೇತಿ ನೀಡುವುದರಲ್ಲಿ ಮಗ್ನರಾಗಿದ್ದರು: "ಪಟ್ಟಿಗಳು ಹೀಗೆ ಬರಬೇಕು. ಹೊಲಿಗೆ – ಅಲ್ಲಿ, ಈ ರೀತಿ ಬರಬೇಕು. ಮತ್ತೆ, ... ಕೆಳಭಾಗದಲ್ಲಿ, ಹೆಚ್ಚು ಒತ್ತಡ ಬೀಳುವ ಜಾಗದಲ್ಲಿ ಚರ್ಮದ ಅಡ್ಡಪಟ್ಟಿಗಳು ಬರಬೇಕು." ತಂಡದವರ ತಯಾರಿಕೆಯಲ್ಲಿದ್ದ ದೋಷಗಳನ್ನು ಗಾಂಧಿ ತಿದ್ದುತ್ತಿದ್ದರು. ಬಂದಿದ್ದ ಮುಖಂಡರಲ್ಲಿ ಒಬ್ಬರು ಆಕ್ಷೇಪಿಸಿದರು: "ನಮ್ಮ ಸಮಯವನ್ನೆಲ್ಲಾ ಅವರು ತೆಗೆದುಕೊಳ್ಳುತ್ತಿದ್ದಾರೆ." ಗಾಂಧಿಯವರು ಒಡನೆಯೇ ಮಾರುತ್ತರ ನೀಡಿದರು: "ಅವರು ಕಲಿಯುತ್ತಿದ್ದಾರೆ ಅಂತ ನೀವೆಲ್ಲಾ ಹೊಟ್ಟೆಕಿಚ್ಚು ಪಡಬೇಡಿ. ಬೇಕು ಅನ್ನಿಸಿದರೆ, ಒಂದು ಒಳ್ಳೆಯ ಚಪ್ಪಲಿ ಮಾಡೋದು ಹೇಗೆ ಅಂತ ನೀವೂ ಸಹ ನೋಡಬಹುದು."

ಮತ್ತೊಂದು ದಿನ, ಗಾಂಧಿ ಮತ್ತು ಅವರ ಸಹ ಕೆಲಸಗಾರರು ಹಳ್ಳಿಯಲ್ಲಿನ ತೊಗಲು ಹದ ಮಾಡುವವರು ಒಂದು ಸತ್ತ ಎತ್ತಿನ ಚರ್ಮ ಸುಲಿಯುವ ಸಂಪೂರ್ಣ ಪ್ರಕ್ರಿಯೆಯನ್ನು ನೋಡುತ್ತಿದ್ದುದು ಕಂಡುಬಂದಿತು. ಅವರು ಹಳ್ಳಿಯ ಚಾಕುವಿನಿಂದ ಸತ್ತ ಪ್ರಾಣಿಯನ್ನು, ಅದರ ಚರ್ಮಕ್ಕೆ ಏನೂ ಹಾನಿಯಾಗದಂತೆ, ಉದ್ದಕ್ಕೆ ಸೀಳಿದರು. ಅವರ ಆ ಕೌಶಲ ಗಾಂಧಿಯವರ ಮೇಲೆ ಪ್ರಭಾವ ಬೀರಿತು. ಹಳ್ಳಿಯ ಚರ್ಮಕಾರರಿಗಿಂತ ಚೆನ್ನಾಗಿ ಯಾರೂ, ಶಸ್ತ್ರವೈದ್ಯರೂ ಸಹ, ಆ ಕೆಲಸವನ್ನು ಮಾಡಲಾರರು ಎಂದು ಅವರು ಹೇಳಿದರು. ಮನುಷ್ಯರ ದೇಹವನ್ನು ಭೇದಿಸಿ-ಪರೀಕ್ಷಿಸಿ, ಚರ್ಮ ಸುಲಿಯುವ ಪ್ರತಿಯೊಬ್ಬ ವೈದ್ಯಕೀಯ ವಿದ್ಯಾರ್ಥಿಯೂ ಒಬ್ಬ ಚರ್ಮಕಾರನೇ ಎಂದು ಅವರಿಗೆ ಅನ್ನಿಸಿತು. ಒಬ್ಬ ವೈದ್ಯನ ಕೆಲಸವನ್ನು ಗೌರವಿಸುತ್ತಾರೆ; ಆದರೆ ಝಾಡಮಾಲಿಯ ಅಥವಾ ಚರ್ಮಕಾರರ ವೃತ್ತಿ ಎಂದರೆ ಏನೋ ಹೀನಾಯ. ಹಿಂದೂಗಳಿಗೆ ಅವರು ಅಸ್ಪೃಶ್ಯರು.

ಗಾಂಧಿ ತಮ್ಮ ಕಲಿಕೆಯನ್ನು ಚಪ್ಪಲಿ ಬೂಟುಗಳ ತಯಾರಿಕೆಗೇ ನಿಲ್ಲಿಸಲಿಲ್ಲ. ಚರ್ಮವನ್ನು ಹದ ಮಾಡುವ ತಜ್ಞರಾಗಲೂ ಅವರು ಬಯಸಿದರು. ಅವರಿಗೆ ಇನ್ನೇನು ತಾನೆ ಮಾಡಲು ಸಾಧ್ಯವಿತ್ತು? ಪ್ರಪಂಚದಾದ್ಯಂತ ಎಷ್ಟೋ ಮಂದಿ ಚರ್ಮದ ಬೂಟುಗಳನ್ನು ತೊಡುತ್ತಾರೆ. ಸಾಮಾನ್ಯವಾಗಿ, ಆರೋಗ್ಯವಾಗಿರುವ ಹಸುಗಳು-ಎತ್ತುಗಳು, ಆಡು-ಮೇಕೆ ಮುಂತಾದ ಪ್ರಾಣಿಗಳನ್ನು ಕೊಂದು ಅವುಗಳ ಚರ್ಮ ಪಡೆಯುತ್ತಾರೆ. ಗಾಂಧಿ ಅಹಿಂಸೆಯಲ್ಲಿ ನಂಬಿಕೆ ಉಳ್ಳವರಾಗಿದ್ದರು. ಸಾಯುತ್ತಲಿದ್ದ ತನ್ನ ಹೆಂಡತಿಗಾಗಲೀ ಅಥವಾ ಕಾಯಿಲೆಯ ಮಗನಿಗಾಗಲೀ ಗೋಮಾಂಸದ ಚಹಾ ಅಥವಾ ಮೊಟ್ಟೆಗಳನ್ನು ಕೊಡದಿದ್ದ ಆ ಮನುಷ್ಯ, ಹೊಳಪಿನ ಬೂಟುಗಳನ್ನು ಧರಿಸಲಿಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದಕ್ಕೆ ಒಪ್ಪುತ್ತಾನೆಯೇ? ಆದರೆ, ಅವರಿಗೆ ಚರ್ಮದ ಅಗತ್ಯವಿತ್ತು.

ಹೀಗಾಗಿ, ಅವರು ಸ್ವಾಭಾವಿಕವಾಗಿಯೇ ಸತ್ತ ಪ್ರಾಣಿಗಳ ಚರ್ಮ ಉಪಯೋಗಿಸುವ ನಿರ್ಧಾರ ಮಾಡಿದರು. ಅಂತಹ ಚರ್ಮದಿಂದ ಮಾಡಿದ ಬೂಟುಗಳು ಮತ್ತು ಚಪ್ಪಲಿಗಳು 'ಅಹಿಂಸಕ್ ಚಪ್ಪಲಿ' ಎಂದು ಹೆಸರು ಪಡೆದವು. ತಾವಾಗಿಯೇ ಸತ್ತ ಪ್ರಾಣಿಗಳ ಚರ್ಮವನ್ನು ಮೆದು ಮಾಡುವುದಕ್ಕಿಂತ, ಕೊಂದ ಪ್ರಾಣಿಗಳ ಚರ್ಮಗಳನ್ನು ಮೆದು ಮಾಡುವುದು ಸುಲಭದ ಕೆಲಸ. ಚರ್ಮ ಹದ ಮಾಡುವವರು ಅಹಿಂಸಕ್ ಚರ್ಮ ಒದಗಿಸುತ್ತಿರಲಿಲ್ಲ. ಆದ್ದರಿಂದ, ಚರ್ಮ ಹದ ಮಾಡುವ ಕಲೆಯನ್ನು ಗಾಂಧಿ ಕಲಿಯಲೇಬೇಕಾಯಿತು.

ಪ್ರತಿ ವರ್ಷ ಒಂಭತ್ತು ಕೋಟಿ ರೂಪಾಯಿಗಳ ಮೌಲ್ಯದ ಕಚ್ಚಾ ಚರ್ಮವನ್ನು ಭಾರತದಿಂದ ರಫ್ತು ಮಾಡಲಾಗುತ್ತಿದೆ ಎಂಬುದನ್ನು ಅವರು ಆಗಷ್ಟೆ ಅರಿತರು. ಆ ಚರ್ಮವನ್ನು ಅಲ್ಲಿ ವೈಜ್ಞಾನಿಕವಾಗಿ ಉಪಚರಿಸಿದ ನಂತರ, ಕೋಟಿಗಟ್ಟಲೆ ರೂಪಾಯಿ ಮೌಲ್ಯಗಳ ಚರ್ಮದ ವಸ್ತುಗಳು ಭಾರತಕ್ಕೆ ಆಮದಾಗುತ್ತಿದ್ದವು. ಇದರಿಂದ ಹಣದ ನಷ್ಟವಷ್ಟೇ ಅಲ್ಲ, ಕಚ್ಚಾ ಚರ್ಮವನ್ನು ಹದಗೊಳಿಸುವಲ್ಲಿ ನಮ್ಮ ಬುದ್ಧಿವಂತಿಕೆ ಮತ್ತು ಕೌಶಲವನ್ನು ಉಪಯೋಗಿಸುವ ಹಾಗೂ ಉತ್ತಮವಾದ ಚರ್ಮದ ವಸ್ತುಗಳನ್ನು ತಯಾರಿಸುವಂಥ ಅವಕಾಶವೂ ನಷ್ಟವಾಗುತ್ತಿತ್ತು. ನೂಲುವವರು ಮತ್ತು ನೇಕಾರರಂತೆ, ನೂರಾರು ಮಂದಿ ಚರ್ಮಕಾರರು ಮತ್ತು ಚಮ್ಮಾರರು ತಮ್ಮ ಜೀವನೋಪಾಯ ಮಾರ್ಗದಿಂದ ವಂಚಿತರಾಗುತ್ತಿದ್ದರು. ಚರ್ಮ ಹದಗೊಳಿಸುವ ವೃತ್ತಿ ಯಾವಾಗಿನಿಂದ ಹೀನಾಯವೆನಿಸಿಕೊಂಡಿತು ಎಂಬುದು ಗಾಂಧಿಯವರಿಗೆ ವಿಸ್ಮಯ. ಹಿಂದಿನ ಕಾಲದಲ್ಲಿ ಹೀಗೆ ಇದ್ದಿರಲಿಕ್ಕಿಲ್ಲ. ಆದರೆ, ಇಂದು ಲಕ್ಷಗಟ್ಟಲೆ ಚರ್ಮಕಾರರು ಈ ಕೆಲಸ ಮಾಡುತ್ತಿದ್ದಾರೆ; ತಲೆತಲಾಂತರದಿಂದ ಅಸ್ಪೃಶ್ಯರೆನಿಸಿಕೊಳ್ಳುತ್ತಿದ್ದಾರೆ. ಮೇಲ್ವರ್ಗದವರು ಅವರನ್ನು ಕೀಳಾಗಿ ಕಾಣುತ್ತಾರೆ. ಅವರು ಒಂದು ಕಲೆ-ವಿದ್ಯಾಭ್ಯಾಸವಾಗಲೀ, ಸ್ವಚ್ಛತೆ ಮತ್ತು ಘನತೆಯಾಗಲೀ ಇಲ್ಲದ ಜೀವನವನ್ನು ಒದುಕುತ್ತಿದ್ದಾರೆ. ಚರ್ಮಕಾರರು, ಕಸ ಗುಡಿಸುವವರು ಮತ್ತು ಚಪ್ಪಲಿ-ಬೂಟುಗಳನ್ನು ಹೊಲಿಯುವವರು ಸಮಾಜಕ್ಕೆ ಸೇವೆ ಸಲ್ಲಿಸುತ್ತಾರೆ; ಪ್ರಯೋಜನಕಾರೀ ಕೆಲಸ ಮಾಡುತ್ತಾರೆ. ಆದರೂ ಜಾತಿಪದ್ಧತಿಯ ಅನುಸರಣೆಯು ದೇಶದ ಒಂದು ಭಾಗದ ಜನರ ಮೇಲೆ ಹೀನಬದುಕನ್ನು ಹೇರುತ್ತದೆ. ಬೇರೆ ದೇಶಗಳಲ್ಲೆಲ್ಲಾ, ಯಾರಾದರೂ ಚರ್ಮಕಾರನ ಅಥವಾ ಚಮ್ಮಾರನ ವೃತ್ತಿಯನ್ನು ಆಯ್ಕೆ ಮಾಡಿಕೊಂಡರೆ, ಅವನು ಬಡ ಅವಿದ್ಯಾವಂತ ಅಸ್ಪೃಶ್ಯನಾಗುವುದಿಲ್ಲ.

ಈ ಗ್ರಾಮೀಣ ಕಸುಬಿಗೆ ಜೀವ ತುಂಬಲು ಗಾಂಧಿ ಸಾರ್ವಜನಿಕವಾಗಿ ಮನವಿ ಮಾಡಿದರು. ಈಗಾಗಲೇ ವಿನಾಶದ ಅಂಚನ್ನು ತಲುಪಿದ್ದ ಗ್ರಾಮೀಣ ಚರ್ಮಕಾರ ಕಲೆಯನ್ನು ಪುನಶ್ಚೇತನಗೊಳಿಸಲು ಚರ್ಮ ಹದಗೊಳಿಸುವ ರಾಸಾಯನಿಕ ಶಾಸ್ತ್ರಜ್ಞರ ಸಹಾಯವನ್ನೂ ಬೇಡಿದರು. ಚರ್ಮ ಹದಗೊಳಿಸುವ ಕಲೆಯಲ್ಲಿ ಸುಧಾರಣೆ ತಂದರೆ, ಅದರಿಂದ ಕೆಟ್ಟ ಮಾಂಸ ತಿನ್ನುವುದೂ ನಿಲ್ಲುತ್ತದೆ ಎಂದು ಗಾಂಧಿ ಅಂದುಕೊಂಡರು. ಚರ್ಮಕಾರನ ಮನೆಗೆ ಸತ್ತ ಹಸುವನ್ನು ತಂದರೆ, ಇಡೀ ಕುಟುಂಬಕ್ಕೆ ಸಂತೋಷವೋ ಸಂತೋಷ. ಅಂದರೆ, ಅವರಿಗೆ ಆ ದಿನವೆಲ್ಲ ಸತ್ತ ಪ್ರಾಣಿಯ ಮಾಂಸದೂಟದ ಸುಗ್ಗಿ. ಮಕ್ಕಳು ಆ ಪ್ರಾಣಿಯ ಸುತ್ತಲೂ ಕುಣಿಯತೊಡಗುತ್ತಾರೆ. ಆ ಪ್ರಾಣಿಯ ತೊಗಲನ್ನು ಸುಲಿಯುತ್ತಿರುವಂತೆ, ಮೂಳೆಗಳನ್ನು, ಮಾಂಸದ ಚೂರುಗಳನ್ನು ತೆಗೆದುಕೊಂಡು ಪರಸ್ಪರರ ಮೇಲೆ ಎಸೆದಾಡುತ್ತಾರೆ. ಗಾಂಧಿಗೆ ಈ ದೃಶ್ಯ ಅಸಹ್ಯಕರವಾಗಿತ್ತು.

ಹರಿಜನ ಚರ್ಮಕಾರರಿಗೆ ಗಾಂಧಿ ಹೇಳಿದರು: "ಸತ್ತ ಮಾಂಸವನ್ನು ತಿನ್ನುವುದನ್ನು ನೀವು ಬಿಡುವುದಿಲ್ಲವೆ? ನೀವು ಬಿಡದೇ ಹೋದರೆ, ನಾನೇನೋ ನಿಮ್ಮನ್ನು ಮುಟ್ಟಬಹುದು.

ಆದರೆ ಸಂಪ್ರದಾಯಸ್ಥ ಜನ ನಿಮ್ಮ ಸಂಗವನ್ನೇ ಬೇಡ ಎಂದಾರು. ಸತ್ತ ಮಾಂಸ ತಿನ್ನುವುದು ಬಹಳ ಕೊಳಕು ಅಭ್ಯಾಸ." ಅವರು ಹೇಳಿದರು: "ನಾವು ಸತ್ತ ಹಸುಗಳ ವಿಲೇವಾರಿ ಮಾಡಬೇಕೆಂದರೆ, ಚರ್ಮ ಸುಲಿಯಬೇಕೆಂದರೆ, ಆಗ ಅದರ ಮಾಂಸವನ್ನು ತಿನ್ನುವುದನ್ನು ನಿಲ್ಲಿಸಿಬಿಡಬೇಕು ಎಂದು ನೀವು ನಿರೀಕ್ಷಿಸಬಾರದು." ಗಾಂಧಿ ವಾದಿಸಿದರು: "ಯಾಕಾಗಬಾರದು? ನಾನೂ ಚರ್ಮಕಾರ ವೃತ್ತಿ ಮಾಡುವುದನ್ನು ನೀವು ಒಂದು ದಿನ ನೋಡಬಹುದು. ಆದರೆ ನಾನು ಸತ್ತ ಮಾಂಸ ತಿನ್ನುವುದನ್ನಂತೂ ನೀವು ಕಾಣಲಾರಿರಿ. ನನ್ನ ಅನುಭವದ ಮೇಲೆ ನಾನು ಹೇಳಬಲ್ಲೆ – ಪಾಯಖಾನೆ ತೊಳೆಯುವುದು ಮತ್ತು ಚರ್ಮ ಹದ ಮಾಡುವುದು, ಎರಡನ್ನೂ ಸ್ವಚ್ಛ – ಆರೋಗ್ಯಕರ ರೀತಿಯಲ್ಲಿ ಮಾಡಬಹುದು."

ಸಬರಮತಿ ಮತ್ತು ವಾರ್ಧಾ ಆಶ್ರಮಗಳಲ್ಲಿ ಗಾಂಧಿ ಚರ್ಮ ಹದಗೊಳಿಸುವ ಘಟಕವನ್ನು ಆರಂಭಿಸಿದರು. ಮೊದಲು ಅದು ಸಣ್ಣ ಪ್ರಮಾಣದಲ್ಲಿಯೇ ಶುರುವಾಯಿತು. ಆಮೇಲೆ ಚರ್ಮಗಳ ಶೇಖರಣೆಗಾಗಿ ಒಂದು ಪಕ್ಕಾ ಕಟ್ಟಡವೂ ಎದ್ದು ನಿಂತಿತು. ಗಾಂಧಿ ಈ ಕಟ್ಟಡಕ್ಕಾಗಿ 50,000 ರೂ.ಗಳನ್ನು ಸಂಗ್ರಹಿಸಿದರು. ಈ ಕಟ್ಟಡದಲ್ಲಿ ಆಶ್ರಮದ ಹುಡುಗರು ಪರಿಣತ ಚಮ್ಮಾರರ ನೆರವಿನಿಂದ ಚರ್ಮ ಹದಗೊಳಿಸುವ ಕೆಲಸ ಮಾಡುತ್ತಿದ್ದರು. ಅಲ್ಲಿ ಮಾಡಲಾದ ಚರ್ಮದ ವಸ್ತುಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಲಾಗುತ್ತಿತ್ತು. ಇಡೀ ಕೆಲಸವನ್ನು ಸತ್ತ ಹಸುಗಳ ಚರ್ಮದಿಂದ ಮಾಡಲಾಗುತ್ತಿತ್ತು.

ಗಾಂಧಿ ಕಲ್ಕತ್ತಾದಲ್ಲಿದ್ದ ನ್ಯಾಷನಲ್ ಟ್ಯಾನರಿ ಸಂಸ್ಥೆಗೆ ಭೇಟಿ ಇತ್ತರು. ಅಲ್ಲಿ ಅತೀವ ಆಸಕ್ತಿಯಿಂದ ಹಳದಿ ಚರ್ಮದ ತಯಾರಿಕಾ ವಿಧಾನವನ್ನು ನೋಡಿದರು. ಹಸುಗಳ ಚರ್ಮದ ಮೇಲಿನ ಕೂದಲುಗಳನ್ನು ಹೇಗೆ ಸುಣ್ಣ ಸವರಿ ತೆಗೆಯುತ್ತಾರೆ, ಚರ್ಮಕ್ಕೆ ಬಣ್ಣ ಹೇಗೆ ಹಾಕುತ್ತಾರೆ ಎಂಬುದನ್ನು ಗಮನಿಸಿದರು. ಗ್ರಾಮೀಣ ಚರ್ಮ ಹದಗೊಳಿಸುವ ಕಲೆಯಲ್ಲಿ ಸುಧಾರಣೆ ತರುವಲ್ಲಿ ಠಾಕೂರರ ಶಾಂತಿನಿಕೇತನದಲ್ಲಿ ನಡೆಯುತ್ತಿದ್ದ ಸಂಶೋಧನಾ ಕೆಲಸದ ಜೊತೆಯೂ ಸಂಪರ್ಕ ವಿರಿಸಿಕೊಂಡಿದ್ದರು. ಹಳ್ಳಿಗಳಲ್ಲಿರುವ ಚರ್ಮ ಹದಗೊಳಿಸುವ ಪ್ರಾಚೀನ ಕಾಲದ ಕಲೆಯನ್ನು ತೆಗೆದುಹಾಕಲು ಗಾಂಧಿ ಬಯಸಲಿಲ್ಲ; ಇಂತಹ ಕಸಬುಗಳನ್ನು ಹಳ್ಳಿಗಳಿಂದಲೇ ತೆಗೆದು, ನಗರಗಳಿಗೆ ತರುವುದು ಅವರಿಗೆ ಇಷ್ಟವಿರಲಿಲ್ಲ. ಹಾಗೆ ಮಾಡುವುದರಿಂದ ಹಳ್ಳಿಗರ ನಾಶ ಖಚಿತ. ತಮ್ಮ ಕೈ ಮತ್ತು ತಲೆಗಳನ್ನು ಕೌಶಲ್ಯಪೂರ್ಣವಾಗಿ ಉಪಯೋಗಿಸಲು ಇದ್ದ ಒಂದು ಸಣ್ಣ ಅವಕಾಶವನ್ನು ಸಹ ಆ ಹಳ್ಳಿಗರು ಕಳೆದುಕೊಳ್ಳುತ್ತಿದ್ದರು. ಹಳ್ಳಿಯ ಒಂದು ಭಾಗದಲ್ಲಿ ಸತ್ತ ಪ್ರಾಣಿಯನ್ನು, ಮತ್ತೊಂದು ಭಾಗಕ್ಕೆ ಒಂದು ಸಭ್ಯ ರೀತಿಯಲ್ಲಿ ಒಯ್ಯಬೇಕೆಂದು ಅವರ ಇಚ್ಛೆ. ಹಳ್ಳಿಯ ಆ ಚರ್ಮಕಾರನೋ, ಆ ಸತ್ತ ಪ್ರಾಣಿಯನ್ನು ಎತ್ತಿಕೊಳ್ಳುತ್ತಾನೆ, ಎಳೆಯತೊಡಗುತ್ತಾನೆ. ಈ ಮೂಲಕ ಚರ್ಮವನ್ನು ಫಾಸಿ ಮಾಡುತ್ತಾನೆ ಹಾಗೂ ಆ ತೊಗಲಿನ ಮೌಲ್ಯವನ್ನು ಕಡಿಮೆ ಮಾಡುತ್ತಾನೆ. ಮತ್ತೆ, ಮೂಳೆಗಳನ್ನು ಹೇಗೆ ಉಪಯೋಗಿಸಬೇಕೆನ್ನುವುದು ಅವನಿಗೆ ತಿಳಿದಿರುವುದಿಲ್ಲ. ಅವನ್ನು ನಾಯಿಗಳಿಗೆ ಎಸೆಯುತ್ತಾನೆ. ಒಟ್ಟಿನಲ್ಲಿ, ಹೀಗೂ ನಷ್ಟ ಅನುಭವಿಸುತ್ತಾನೆ. ಮೂಳೆಗಳಿಂದ ತಯಾರಾದ ಹಿಡಿ ಮತ್ತು ಗುಂಡಿಗಳು ಪರದೇಶಗಳಿಂದ ಭಾರತಕ್ಕೆ ಬರುತ್ತವೆ. ಪುಡಿ ಮಾಡಲಾದ ಮೂಳೆಗಳು ಸಹ ಒಳ್ಳೆಯ ಗೊಬ್ಬರವಾಗುತ್ತದೆ.

ಗಾಂಧಿ ಚಮ್ಮಾರರ ಗುಡಿಸಲುಗಳಿಗೆ ಹೋದರು, ಅವರೊಂದಿಗೆ ಬೆರೆತರು, ಅವರೊಂದಿಗೆ ಮಾತುಕತೆ ನಡೆಸಿದರು. ಅವರೂ ಸಹ ಗಾಂಧಿಯವರಲ್ಲಿ ಅಪಾರ ವಿಶ್ವಾಸವಿಟ್ಟರು. ತಮ್ಮ ಬಳಗವನ್ನು ಸುಧಾರಿಸುವ ನಿರ್ಧಾರವುಳ್ಳ ಒಬ್ಬ ಗೆಳೆಯನೆಂಬಂತೆ ಗಾಂಧಿಯವರನ್ನು ನೋಡಿದರು. ಗಾಂಧಿ ಅವರ ಕೇರಿಗೆ ಹೋದಾಗ ಕುಡಿಯುವ ನೀರಿನ ಕೊರತೆ ಬಗ್ಗೆ ಅವರೆಲ್ಲಾ ದೂರಿದರು. ಸಾರ್ವಜನಿಕ ಬಾವಿಯನ್ನು ಉಪಯೋಗಿಸಲು ಅಥವಾ ದೇವಸ್ಥಾನಕ್ಕೆ ಹೋಗಲು ಅವರನ್ನು ಬಿಡುತ್ತಿಲ್ಲ; ಜನ ಅವರನ್ನು ಹೇಗೆ ದೂರ ವಿಡುತ್ತಾರೆ; ಹಳ್ಳಿ ಅಥವಾ ನಗರದ ಹೊರವಲಯದಲ್ಲಿಯೇ ಅವರೆಲ್ಲಾ ಬಾಳಬೇಕಾದ ಒತ್ತಾಯವಿದೆ ಎಂದೆಲ್ಲಾ ಹೇಳಿದರು. ಗಾಂಧಿಗೆ ಬಹಳ ನೋವು–ನಾಚಿಕೆಗಳಾದವು. ಆ ಜನರಿಗೆ ಅನುಕಂಪ ತೋರುವುದರಲ್ಲಿ ಅವರಿಗೆ ಸಂಚಿಕ ಇರಲಿಲ್ಲ. ಆದರೆ ಆ ಜನ ತಮ್ಮ ಕಾಲ ಮೇಲೆ ತಾವೇ ನಿಲ್ಲಬೇಕೆಂದು ಅವರು ಬಯಸಿದರು. ಭಾರತದಲ್ಲಿ ದೈಹಿಕ ಶ್ರಮವನ್ನು ಕೀಳಾಗಿ ಕಾಣುವಂತಹ ಕರಾಳ ದಿನವೊಂದು ಉದಯವಾಗಿದೆ; ತಮ್ಮ ಸೋದರ ಬಾಂಧವರಿಗೆ ಮಾನವೀಯ ಹಕ್ಕುಗಳನ್ನು ನಿರಾಕರಿಸಿದ ಜನ ಮುಂದೊಂದು ದಿನ ತಮ್ಮ ಈ ಅನ್ಯಾಯದ ಮತ್ತು ನಿಷ್ಕರುಣೆಯ ಕೃತ್ಯಗಳಿಗಾಗಿ ಉತ್ತರಿಸುವ ಕಾಲ ಬಂದೇ ಬರುತ್ತದೆ ಎಂದು ಗಾಂಧಿ ಠಾಕೂರರೊಂದಿಗಿದ್ದಾಗ ಭವಿಷ್ಯ ನುಡಿದರು.

ಚರ್ಮಕಾರರಿಗೆ ಸರಿಯಾದ ಕೂಲಿ ವೇತನ, ನಿಜವಾದ ಶಿಕ್ಷಣ ಮತ್ತು ವೈದ್ಯಕೀಯ ನೆರವುಗಳು ಸಿಗುವುದರ ಬಗ್ಗೆ ನಿಗಾ ವಹಿಸಲು ನಿಷ್ಣಾವಂತ ಕೆಲಸಗಾರರ ತಂಡದ ಅವಶ್ಯಕತೆಯಿದೆ ಎಂಬುದನ್ನು ಗಾಂಧಿ ಮನಗಂಡರು. ಈ ತಂಡ ರಾತ್ರಿ ಶಾಲೆಗಳನ್ನು ನಡೆಸಬೇಕು; ಹರಿಜನ ಮಕ್ಕಳನ್ನು ಹೊರಸಂಚಾರಕ್ಕೆ, ವಿಹಾರಗಳಿಗೆ ಕರೆದೊಯ್ಯಬೇಕು. ಗಾಂಧಿಯವರೇ ಚಮ್ಮಾರರ ಕೇರಿಗಳಲ್ಲಿ ರಾತ್ರಿ ಶಾಲೆಗಳನ್ನು ತೆರೆದರು. ಹರಿಜನರು ಕೆಲಸ ಮಾಡುವಲ್ಲಿ ಗಮನವಿಟ್ಟರು.

ಚಮ್ಮಾರರು ಸಹ ಗಾಂಧಿಯವರ ಮನವಿಗೆ ಓಗೊಡಲು ಪ್ರಯತ್ನಿಸಿದರು. ಕೆಲವು ಸತ್ತ ಪ್ರಾಣಿಯ ಮಾಂಸದಿಂದಷ್ಟೆ ಕೆಲಸ ಮಾಡುವ ಪ್ರಮಾಣ ಮಾಡಿದರು; ಕೆಲವರು ಕುಡಿಯುವ ಮತ್ತು ಸತ್ತ ಪ್ರಾಣಿಯ ಮಾಂಸ ತಿನ್ನುವುದನ್ನು ಬಿಡುತ್ತೇವೆಂದರು. ಒಮ್ಮೆ ಗಾಂಧಿ ಚಮ್ಮಾರರ ಸಭೆಯೊಂದಕ್ಕೆ ಹರಿದು ತಾತಾತೂತಾಗಿದ್ದ ಚಪ್ಪಲಿಗಳನ್ನು ಧರಿಸಿಕೊಂಡು ಹೋಗಿದ್ದರು. ಆಗ ಅವರು ಪ್ರವಾಸದಲ್ಲಿದ್ದರು ಹಾಗೂ ಬೇರೊಂದು ಜೊತೆ ಚಪ್ಪಲಿಯನ್ನೂ ಹೊಂದಿರಲಿಲ್ಲ. ಅಲ್ಲಿದ್ದ ಚಮ್ಮಾರರು ಅದನ್ನು ಗಮನಿಸಿದರು. ಅವರಲ್ಲಿ ಇಬ್ಬರು ಒಂದು ಜೊತೆ ಅಹಿಂಸಕ್ ಚಪ್ಪಲಿಗಳನ್ನು ತಯಾರಿಸಿ ಗಾಂಧಿಯವರಿಗೆ ಉಡುಗೊರೆಯಾಗಿತ್ತರು.

ಒಮ್ಮೆ ಗಾಂಧಿ ತಮ್ಮನ್ನು ದಕ್ಷಿಣ ಆಫ್ರಿಕಾದಲ್ಲಿ ಜೈಲಿಗೆ ಕಳುಹಿಸಿದ್ದ ಜನರಲ್ ಸ್ಮಟ್ಸ್ ಅವರಿಗೆ ಕೈಯಿಂದ ಮಾಡಿದ ಒಂದು ಜೊತೆ ಚಪ್ಪಲಿಯನ್ನು ಕಾಣಿಕೆಯಾಗಿತ್ತರು. ಗಾಂಧಿಯವರ 70ನೇ ಹುಟ್ಟುಹಬ್ಬಕ್ಕೆ, ಜನರಲ್ ಸ್ಮಟ್ಸ್ ಹೀಗೆ ಬರೆದರು: "ಜೈಲಿನಲ್ಲಿದ್ದಾಗ, ಅವರು ನನಗಾಗಿ ಒಂದು ಜೊತೆ ಚಪ್ಪಲಿಗಳನ್ನು ತಯಾರಿಸಿದರು. ಇಂತಹ ಶ್ರೇಷ್ಠ ವ್ಯಕ್ತಿಯ ಬೂಟುಗಳಲ್ಲಿ ನಿಲ್ಲುವ ಅರ್ಹತೆಯೂ ನನಗಿಲ್ಲ ಎಂದು ನನಗನ್ನಿಸಿದರೂ ಬಹಳಷ್ಟು ವರ್ಷಗಳ ಕಾಲ ನಾನು ಅವನ್ನು ಧರಿಸಿದ್ದೇನೆ."

ಸೇವಕ

ಆಶ್ರಮದಲ್ಲಿ ಗಾಂಧಿ ಸಾಮಾನ್ಯವಾಗಿ ಚಾಕರಿಗಿರುವ ಆಳುಗಳು ಮಾಡುವಂತಹ ವಿವಿಧ ರೀತಿಯ ಕೆಲಸಗಳನ್ನು ಮಾಡುತ್ತಿದ್ದರು. ಅದಕ್ಕೂ ಮೊದಲು, ಅಂದರೆ, ವಕೀಲರಾಗಿ ಸಾವಿರಾರು ರೂಪಾಯಿಗಳನ್ನು ಗಳಿಸುತ್ತಿದ್ದ ಸಂದರ್ಭದಲ್ಲೂ, ಪ್ರತಿದಿನಾ ಬೆಳಿಗ್ಗೆ ಅವರು ಗೋಧಿ ಬೀಸುತ್ತಿದ್ದರು. ಕಸ್ತೂರ್‌ಬಾ ಮತ್ತು ಅವರ ಮಕ್ಕಳು ಸಹ ಅವರೊಂದಿಗೆ ಈ ಗೋಧಿ ಬೀಸುವ ಕೆಲಸದಲ್ಲಿ ತೊಡಗಿಕೊಳ್ಳುತ್ತಿದ್ದರು. ಅದರಿಂದ ಹುಡುಗಿಲ್ಲದ ಸಂಪೂರ್ಣ ಆಹಾರವಾದ ಬ್ರೆಡ್ ತಯಾರಿಸಲು ಬೇಕಾದ ನುಣುಪಾದ ಅಥವಾ ಒರಟಾದ ತಾಜಾ ಹಿಟ್ಟು ಅವರಿಗೆ ಸಿಗುತ್ತಿತ್ತು. ಸಬರಮತಿ ಆಶ್ರಮದಲ್ಲಿಯೂ ಗಾಂಧಿ ಈ ಅಭ್ಯಾಸವನ್ನು ಮುಂದುವರೆಸಿದರು. ಒಂದು ಬೀಸುವಕಲ್ಲನ್ನು ದುರಸ್ತಿ ಮಾಡುತ್ತಾ ಅವರು ಗಂಟೆಗಳನ್ನು ವ್ಯಯಿಸಿದರು. ಒಮ್ಮೆ ಆಶ್ರಮದಲ್ಲಿ ಹಿಟ್ಟಿನ ಕೊರತೆಯಿದೆ ಎಂದು ನೌಕರನೊಬ್ಬ ದೂರಿದಾಗ, ಗಾಂಧಿ ಒಡನೆ ಎದ್ದು ಹೋಗಿ ಗೋಧಿ ಬೀಸಲು ಕೈ ಹಾಕಿದರು. ಅವರಿಗೆ, ಬೀಸುವ ಮುನ್ನ ಕಾಳುಗಳನ್ನು ಆಯ್ದಿರಲೇಬೇಕು. ಆಶ್ರಮಕ್ಕೆ ಭೇಟಿ ನೀಡಬಂದ ಜನ ಆಗಾಗ್ಗೆ ಈ ಶ್ರೇಷ್ಠ ವ್ಯಕ್ತಿ ಸೊಂಟಕ್ಕೆ ದಟ್ಟಿ ಸುತ್ತಿಕೊಂಡು ಗೋಧಿ ಆಯುತ್ತಿರುವುದರಲ್ಲಿ ಮಗ್ನರಾಗಿದ್ದುದನ್ನು ನೋಡುತ್ತಿದ್ದರು. ಹೊರಗಿನವರ ಮುಂದೆ ಇಂತಹ ದೈಹಿಕ ಕೆಲಸಗಳನ್ನು ಮಾಡುವುದರಲ್ಲಿ ನಾಚಿಕೆ ಎಂದೇನೂ ಅವರಿಗೆ ಅನ್ನಿಸುತ್ತಿರಲಿಲ್ಲ. ಒಮ್ಮೆ ತನ್ನ ಇಂಗ್ಲಿಷಿನ ಬಗ್ಗೆ ಗರ್ವವಿದ್ದ ಒಬ್ಬ ಕಾಲೇಜು ತರುಣ ಗಾಂಧಿಯವರನ್ನು ನೋಡಲು ಬಂದ. ಸಂದರ್ಶನದ ನಂತರ ಅವನು ಹೇಳಿದ: "ಬಾಪೂ, ನನ್ನಿಂದ ನಿಮಗೆ ಏನಾದರೂ ಸೇವೆ ಆಗಬಹುದಾದರೆ, ದಯವಿಟ್ಟು ಹೇಳಿ." ಆತ ಅಂದುಕೊಂಡ ಗಾಂಧಿ ತನಗೇನೋ ಬರವಣಿಗೆಯ ಕೆಲಸ ಕೊಡಬಹುದೆಂದು. ಅದನ್ನು ಊಹಿಸಿದ ಗಾಂಧಿ ಹೇಳಿದರು: "ಸರಿ, ಬಿಡುವಿದ್ದರೆ, ಸ್ವಲ್ಪ ಈ ತಟ್ಟೆಯಲ್ಲಿರುವ ಗೋಧಿಯನ್ನು ಆರಿಸು." ಆ ಮನುಷ್ಯನಿಗೆ ಎರಡೆರಡು ಮನಸ್ಸು. ಒಂದು ತಾಸಿನ ಬಳಿಕ ಗೋಧಿ ಆರಿಸಿ ಆರಿಸಿ ಅವನಿಗೆ ಸುಸ್ತಾಯಿತು. ಬಳಲಿದ ಧ್ವನಿಯಲ್ಲಿ ಹೋಗಿ ಬರುತ್ತೇನೆಂದು ಹೇಳಿ ಅವನು ಹೊರಟ.

ಕೆಲವರ್ಷಗಳ ಕಾಲ ಗಾಂಧಿ, ಆಶ್ರಮದಲ್ಲಿ ಸಹಾಯಕ ಉಗ್ರಾಣಕಾರನಾಗಿ ಸೇವೆ ಸಲ್ಲಿಸಿದರು. ಬೆಳಗಿನ ಪ್ರಾರ್ಥನೆಗಳ ನಂತರ, ತರಕಾರಿಗಳ ಸಿಪ್ಪೆ ಕತ್ತರಿಸಲು ಅವರು ಅಡುಗೆಮನೆಗೆ ಹೋಗುತ್ತಿದ್ದರು. ಅಡುಗೆಮನೆ ಅಥವಾ ಉಗ್ರಾಣಗಳ ಯಾವುದಾದರೂ ಮೂಲೆಯಲ್ಲಿ ಕಸ ಅಥವಾ ಜೇಡರಬಲೆಯನ್ನು ನೋಡಿದರೆ, ತಮ್ಮ ಸಹ ಕೆಲಸಗಾರರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ತರಕಾರಿ, ಹಣ್ಣು ಮತ್ತು ದವಸಧಾನ್ಯಗಳ ಆಹಾರ ಮೌಲ್ಯಗಳ ಬಗ್ಗೆ ಅವರು ಚೆನ್ನಾಗಿ ತಿಳಿದುಕೊಂಡಿದ್ದರು. ಒಮ್ಮೆ ಒಬ್ಬ ಆಶ್ರಮವಾಸಿ ಅಲೂಗಡ್ಡೆಯನ್ನು ತೊಳೆಯದೇ ಹೆಚ್ಚಿದರು. ಯಾವಾಗಲೂ ನಿಂಬೆಹಣ್ಣು ಮತ್ತು ಆಲೂಗಡ್ಡೆಗಳನ್ನು ಹೆಚ್ಚುವ ಮುಂಚೆ ಏಕ ತೊಳೆಯಬೇಕೆಂದು ಅವರು ಆತನಿಗೆ ವಿವರಿಸಿದರು. ಮತ್ತೊಬ್ಬ ಆಶ್ರಮವಾಸಿಗೆ ಕಪ್ಪು ಚುಕ್ಕೆಗಳಿದ್ದ ಬಾಳೆಯ ಹಣ್ಣುಗಳನ್ನು ಕೊಟ್ಟಾಗ, ಅವನಿಗೆ ಅದು ಹಿಡಿಸಲಿಲ್ಲ. ಕಪ್ಪು ಚುಕ್ಕೆ ಬಾಳೆಹಣ್ಣು ಆತನ ಜೀರ್ಣಾಂಗ ವ್ಯವಸ್ಥೆಗೆ ಅತಿ ಸೂಕ್ಷ್ಮ ಆದ್ದರಿಂದಲೇ ಅವನ್ನು ಕೊಟ್ಟೆ ಎಂದು ಗಾಂಧಿ ಹೇಳಿದರು. ಆಗಾಗ್ಗೆ



ಗಾಂಧಿ ಆಶ್ರಮವಾಸಿಗಳಿಗೆ ವಿನಾದರೂ ಆಹಾರವಸ್ತುಗಳನ್ನು ಹಂಚುತ್ತಿದ್ದರು. ಹೀಗಾಗಿ ತಮಗೆ ಬಡಿಸಲಾಗುತ್ತಿದ್ದ ಸಪ್ಪೆ ಸಪ್ಪೆ ವ್ಯಂಜನಗಳ ಬಗ್ಗೆ ದೂರಲು ಅವರಿಗೆ ಅವಕಾಶವೇ ಆಗುತ್ತ ಇರಲಿಲ್ಲ. ದಕ್ಷಿಣ ಆಫ್ರಿಕಾದ ಸೆರೆಮನೆಯಲ್ಲಿದ್ದಾಗ ತಮ್ಮೊಂದಿಗೆ ಇದ್ದ ನೂರಾರು ಸೆರೆಮನೆವಾಸಿಗಳಿಗೆ ದಿನಕ್ಕೆರಡು ಬಾರಿ ಅವರೇ ಬಡಿಸುತ್ತಿದ್ದರು.

ಆಶ್ರಮದಲ್ಲಿದ್ದ ನಿಯಮಗಳ ಪೈಕಿ ತಮ್ಮ ಪಾತ್ರೆಗಳನ್ನು ತಾವೇ ತೊಳೆಯಬೇಕೆಂಬುದೂ ಒಂದು. ಅಡುಗೆಮನೆಯ ಮಡಕೆಗಳನ್ನು ಸರದಿಯ ಪ್ರಕಾರ ಬೇರೆ ಬೇರೆ ಗುಂಪುಗಳವರು ತೊಳೆಯುತ್ತಿದ್ದರು. ಒಂದು ದಿನ ದೊಡ್ಡದಾದ ಮಸಿ ಹತ್ತಿದ್ದ ಭಾರೀ ಪಾತ್ರೆಯೊಂದನ್ನು ತಾವೇ ತೊಳೆಯಬಯಸಿದ ಗಾಂಧಿ ಕೈಗಳಿಗೆ ಬೂದಿ ಬಳಿದುಕೊಂಡು ಪಾತ್ರೆಯನ್ನು ಉಜ್ಜಲು ಪ್ರಯತ್ನಿಸಿದರು. ಆಗ ಇದ್ದಕ್ಕಿದ್ದಂತೆ ಕಸ್ತೂರ್‌ಬಾ ಅಲ್ಲಿಗೆ ಬಂದು, ಪಾತ್ರೆಯನ್ನು ಹಿಡಿದುಕೊಂಡು ಹೇಳಿದರು: "ಇದು ನಿಮ್ಮ ಕೆಲಸವಲ್ಲ. ಇದನ್ನು ಮಾಡಲು ಬೇರೆಯವರಿದ್ದಾರೆ." ಆಕೆಯ ಮಾತಿಗೆ ಒಪ್ಪಿಕೊಳ್ಳುವುದೇ ಜಾಣತನ ಎಂದು ಭಾವಿಸಿದ ಗಾಂಧಿ ಕೆಲಸವನ್ನು ಬಾ ಅವರಿಗೇ ಬಿಟ್ಟುಕೊಟ್ಟು ನಡೆದರು. ಲೋಹದ ಪಾತ್ರೆಗಳು ಫಳಫಳ ಎನ್ನುವವರೆಗೂ ಗಾಂಧಿಗೆ ಸಮಾಧಾನವಾಗುತ್ತಿರಲಿಲ್ಲ. ಒಮ್ಮೆ ಸೆರೆಮನೆಯಲ್ಲಿ ಸಹಾಯಕನೊಬ್ಬನ ಕೆಲಸದಿಂದ ಅಸಂತೋಷಗೊಂಡ ಅವರು, ಕಬ್ಬಿಣದ ಪಾತ್ರೆಗಳನ್ನು ಹೆಚ್ಚುಕಡಿಮೆ ಬೆಳ್ಳಿಯಂತೆ ಹೊಳೆಯುವ ಹಾಗೆ ಮಾಡಬಲ್ಲೆ ಎಂದು ಹೇಳಿದರು.

ಆಶ್ರಮವನ್ನು ಕಟ್ಟುತ್ತಿದ್ದಾಗ, ಅಲ್ಲಿಗೆ ಬರುತ್ತಿದ್ದ ಕೆಲವು ಅತಿಥಿಗಳು ಶಿಬಿರಗಳಲ್ಲಿ ಮಲಗಬೇಕಾಗುತ್ತಿತ್ತು. ಹೊಸದಾಗಿ ಬಂದವರೊಬ್ಬರು ತಮ್ಮ ಹಾಸಿಗೆಯನ್ನು ಎಲ್ಲಿಡಬೇಕೆಂದು ತಿಳಿಯದೆ, ಅದನ್ನು ಸುತ್ತಿಟ್ಟು, ವಿಚಾರಿಸಲು ಹೋದರು. ವಾಪಸು ಬಂದಾಗ ಗಾಂಧಿ ಆ ಹಾಸಿಗೆಯನ್ನು ತಮ್ಮ ಹೆಗಲ ಮೇಲಿಟ್ಟುಕೊಂಡು ಒಯ್ಯುತ್ತಿದ್ದುದನ್ನು ಕಂಡರು.

ಆಶ್ರಮದ ಆವರಣದಾಚೆ ಇದ್ದ ಬಾವಿಯಿಂದ ನೀರು ಸೇದುವುದು ದಿನನಿತ್ಯದ

ಕೆಲಸಗಳ ಪೈಕಿ ಒಂದಾಗಿತ್ತು. ಒಂದು ದಿನ ಗಾಂಧಿಯವರ ಮೈ ಹುಷಾರಿರಲಿಲ್ಲ. ಅಲ್ಲದೆ, ಅಂದು ಬೆಳಿಗ್ಗೆ ಅವರು ಗೋಧಿ ಬೀಸುವ ಕೆಲಸವನ್ನೂ ಮಾಡಿದ್ದರು. ಆಗ ಸಹ ಕೆಲಸಗಾರನೊಬ್ಬ ಗಾಂಧಿಯವರನ್ನು ಹೆಚ್ಚಿನ ದೈಹಿಕ ಶ್ರಮದಿಂದ ಪಾರುಮಾಡಬೇಕೆಂದು, ಇತರ ಆಶ್ರಮವಾಸಿಗಳ ಸಹಾಯದಿಂದ ದೊಡ್ಡ-ಚಿಕ್ಕ ಎಲ್ಲಾ ಬಿಂದಿಗೆಗಳನ್ನು ತುಂಬಿಸಿಟ್ಟ. ಗಾಂಧಿಗೆ ಈ ವಿಚಾರ ಇಷ್ಟವಾಗಲಿಲ್ಲ. ಮನಸ್ಸು ಸ್ವಲ್ಪ ನೊಂದಿತು ಕೂಡ. ಅವರು ಮಕ್ಕಳ ಒಂದು ಸ್ನಾನದ ಬಾನಿಯನ್ನು ತೆಗೆದುಕೊಂಡು, ಅದರಲ್ಲಿ ನೀರು ತುಂಬಿಕೊಂಡು, ತಲೆಯ ಮೇಲೆ ಹೊತ್ತು ನಡೆದರು. ಅತ್ತ ಆ ಕೆಲಸಗಾರ ತನ್ನ ಹುಚ್ಚುತನದ ಕೆಲಸಕ್ಕೆ ಪಶ್ಚಾತ್ತಾಪಪಟ್ಟ. ತಾವು ಮಹಾತ್ಮ ಅಥವಾ ವಯಸ್ಸಾದ ಮನುಷ್ಯನಾಗಿದ್ದಿರಬಹುದು. ಆದರೆ ಕೇವಲ ಅದೇ ಕಾರಣಕ್ಕಾಗಿ ಯಾವುದೇ ದಿನನಿತ್ಯದ ಕೆಲಸ ಮಾಡುವುದನ್ನು ತಪ್ಪಿಸುವುದು ಗಾಂಧಿಯವರು ಎಂದೂ ಇಷ್ಟಪಡುತ್ತಿರಲಿಲ್ಲ. ಇನ್ನು ಕೆಲಸ ಮಾಡುವುದು ದೈಹಿಕವಾಗಿ ನಿಜಕ್ಕೂ ಅಸಾಧ್ಯ ಎಂದನ್ನಿಸದ ಹೊರತು, ತಮ್ಮ ಕೆಲಸಗಳನ್ನು ತಾವೇ ಮಾಡಲು ಬಯಸುತ್ತಿದ್ದರು. ಕೆಲಸ ಎಂತಹುದೇ ರೀತಿಯದಾಗಿರಲೀ, ಅದನ್ನು ಮಾಡಲು ಅವರಿಗೆ ಅದ್ಭುತ ದೈಹಿಕ ಮತ್ತು ಇಚ್ಛಾಶಕ್ತಿ ಇತ್ತು. ಅವರಿಗೆ ಆಯಾಸ ಎಂದರೇನೆಂದು ಗೊತ್ತಿರಲಿಲ್ಲ. ಬೋಯರ್ ಯುದ್ಧದಲ್ಲಿ ಅವರು ದಿನಗಟ್ಟಲೆ ಸ್ಟ್ರೆಚರ್ ಹೊರುವ ಕೆಲಸ ಮಾಡುತ್ತಾ ದಿನಕ್ಕೆ 25 ಮೈಲುಗಳನ್ನು ನಡೆಯುತ್ತಿದ್ದರು. ನಡೆಯುವುದರಲ್ಲಿ ಅವರು ಮಹಾನ್. ಟಾಲ್‌ಸ್ಟಾಯ್ ತೋಟದಿಂದ ಅವರು ಆಗಾಗ್ಗೆ ದಿನಕ್ಕೆ 42 ಮೈಲಿ ನಡೆಯುತ್ತಿದ್ದರು. ಮನೆಯಲ್ಲಿ ಮಾಡಿದ ತಿಂಡಿತಿನಿಸುಗಳೊಂದಿಗೆ ಬೆಳಿಗ್ಗೆ 2 ಗಂಟೆಗೆ ಹೊರಟರೆ, ಖಿರೀದಿಗಳನ್ನು ಮುಗಿಸಿಕೊಂಡು ಮರಳಿ ಬರುತ್ತಿದ್ದುದು ಸಂಜೆಯೇ. ಇತರ ಸ್ನೇಹಿತರು ಮತ್ತು ಕಿರಿಯ ಆಶ್ರಮವಾಸಿಗಳು ಅವರ ಈ ಉದಾಹರಣೆಯನ್ನು ಉಲ್ಲಸಿತರಾಗಿ ಅನುಸರಿಸುತ್ತಿದ್ದರು.

ಒಮ್ಮೆ ಒಂದು ಹೊಂಡವನ್ನು ಕೆಲಸಗಾರರು ಮುಚ್ಚುತ್ತಿದ್ದರು. ಒಂದು ಬೆಳಿಗ್ಗೆ, ಕೆಲಸದ ನಂತರ, ಅವರೆಲ್ಲಾ ತಮ್ಮ ಸನಿಕೆ–ಗುದ್ದಲಿ ಮತ್ತು ಮಂಕರಿಗಳನ್ನು ತೆಗೆದುಕೊಂಡು ವಾಪಸ್ಸು ಬಂದಾಗ, ಬೆಳಗಿನ ತಿಂಡಿಗೆ ಗಾಂಧಿ ಹಲವಾರು ತಟ್ಟೆಗಳ ತುಂಬಾ ಹಣ್ಣುಗಳನ್ನು ಇಟ್ಟಿದ್ದುದು ಕಂಡುಬಂದಿತು. ಅವರಲ್ಲೊಬ್ಬ ಕೇಳಿದ: "ನಮಗಾಗಿ ಇಷ್ಟೊಂದು ತೊಂದರೆ ಏಕೆ ತೆಗೆದುಕೊಂಡಿರಿ? ನಿಮ್ಮಿಂದ ಇಂತಹ ಸೇವೆ ಮಾಡಿಸಿಕೊಳ್ಳಲು ನಾವು ಅರ್ಹರೆ?" ಗಾಂಧಿ ಮುಗುಳ್ನಕ್ಕು ಹೇಳಿದರು: "ಯಾಕಿಲ್ಲ? ನೀವೆಲ್ಲಾ ಸುಸ್ತಾಗಿ ಬರುತ್ತೀರೆಂದು ನನಗೆ ಗೊತ್ತು. ನಿಮಗಾಗಿ ಫಲಾಹಾರ ತಯಾರು ಮಾಡಿಡಲು ನನಗೆ ವೇಳೆಯೂ ಇತ್ತು."

ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಸುಪರಿಚಿತ ಮುಖಂಡನಾಗಿ ಗಾಂಧಿ ಒಮ್ಮೆ ಲಂಡನ್ನಿಗೆ ಭಾರತೀಯ ವಸಾಹತುಗಾರರ ಪರ ವಕಾಲತ್ತು ಮಾಡಲು ಹೋದರು. ಅಲ್ಲಿದ್ದ ಭಾರತೀಯ ವಿದ್ಯಾರ್ಥಿಗಳಿಂದ ಸಸ್ಯಾಹಾರಿ ಭೋಜನ ಕೂಟಕ್ಕೆ ಅವರಿಗೆ ಆಹ್ವಾನ ಬಂದಿತು. ಆ ವಿದ್ಯಾರ್ಥಿಗಳು ತಾವೇ ಅಡುಗೆ ಮಾಡಬೇಕೆಂದೂ ನಿರ್ಧರಿಸಿದ್ದರು. ಮಧ್ಯಾಹ್ನ 2 ಗಂಟೆಗೆ, ಒಬ್ಬ ಕೃಶಕಾಯ ಮನುಷ್ಯ ಅಲ್ಲಿನ ನೆಲಮಾಳಿಗೆಗೆ ಬಂದ; ಪಾತ್ರೆ ತೊಳೆಯಲು, ತರಕಾರಿ ತೊಳೆಯಲು ಹಾಗೂ ಇಂತಹ ಇತರ ಸುತ್ತುಕೆಲಸಗಳನ್ನು ಮಾಡಲು ಸಹಾಯ ಮಾಡಿದ. ಆಮೇಲೆ ವಿದ್ಯಾರ್ಥಿ ಮುಖಂಡ ಅಲ್ಲಿಗೆ ಬಂದಾಗಷ್ಟೇ, ಆ ಮನುಷ್ಯ ಬೇರೆ ಯಾರೂ ಅಲ್ಲ, ಸಾಯಂಕಾಲದ ಗಣ್ಯ ಅತಿಥಿ ಎಂಬುದು ತಿಳಿದುಬಂದಿತು.

ಗಾಂಧಿ ಖಂಡಿತವಾದಿಯೇನೋ ಆಗಿದ್ದರು. ಆದರೆ, ಇತರರು ಅವರಿಗಾಗಿ ಕೆಲಸ ಮಾಡುವುದು ಅವರಿಗೆ ಹಿಡಿಸುತ್ತಿರಲಿಲ್ಲ. ಒಂದು ರಾಜಕೀಯ ಅಧಿವೇಶನದ ಮುಕ್ತಾಯದಲ್ಲಿ, ರಾತ್ರಿ 10 ಗಂಟೆಗೆ, ಮಲಗುವ ಮುನ್ನ ಅವರು ತಮ್ಮ ಕೋಣೆಯ ಕಸ ಗುಡಿಸುತ್ತಿದ್ದುದು ಕಂಡುಬಂದಿತು. ಅವರ ಅನುಯಾಯಿಯೊಬ್ಬರು ಸಹಾಯ ಮಾಡಲು ಧಾವಿಸಿದಾಗ, ಅವರು ಮುಗುಳ್ನಗುವಿನೊಂದಿಗೆ ಕೆಲಸ ಒಪ್ಪಿಸಿದರು. ಗ್ರಾಮಗಳ ಪ್ರವಾಸ ಕೈಗೊಂಡಾಗ, ಲಾಟೀನಿನಲ್ಲಿದ್ದ ಎಣ್ಣೆ ಮುಗಿದುಹೋದರೆ, ಆಯಾಸಗೊಂಡ ತಮ್ಮ ಸಂಗಾತಿಗಳನ್ನು ಎಬ್ಬಿಸುವುದಕ್ಕಿಂತ, ಚಂದ್ರನ ಬೆಳಕಿನಲ್ಲೇ ಪತ್ರಗಳನ್ನು ಬರೆಯಲು ಬಯಸುತ್ತಿದ್ದರು. ನೌಖಾಲಿ ಯಾತ್ರೆಯ ಸಮಯದಲ್ಲಿ, ತಮ್ಮೊಂದಿಗೆ ಕೇವಲ ಇಬ್ಬರಿರಲು ಅವರು ಅವಕಾಶ ಮಾಡಿಕೊಟ್ಟಿದ್ದರು. ಅವರಿಬ್ಬರಿಗೂ ಖಾಕ್ರಾ ಮಾಡುವುದು ಗೊತ್ತಿರಲಿಲ್ಲ. ಗಾಂಧಿ ಅಡುಗೆಮನೆಗೆ ಹೋದರು. ನಿಪುಣ ಅಡುಗೆಯವರ ಭಂಗಿಯಲ್ಲಿ ಕುಳಿತರು. ಇಡಿ ಪ್ರಕ್ರಿಯೆಯನ್ನು ಮಾಡಿ ತೋರಿಸಿದರು. ಅವರಿಗಾಗ 78 ವರ್ಷ!

ಅವರಿಗೆ ಮಕ್ಕಳೆಂದರೆ ಬಲು ಇಷ್ಟ. ಮಗು ಹುಟ್ಟಿದ ಎರಡು ತಿಂಗಳುಗಳ ನಂತರ, ತಮ್ಮ ಯಾವುದೇ ಮಗನನ್ನು ಅವರು ದಾದಿಗಳ ಆರೈಕೆಗೆ ಬಿಡಲಿಲ್ಲ. ಒಂದು ಮಗುವಿನ ಬೆಳವಣಿಗೆಗೆ ತಂದೆತಾಯಿಗಳ ಪ್ರೀತಿ-ಗಮನಗಳು ಅತಿ ಅವಶ್ಯಕ ಎಂದು ಅವರು ಪರಿಗಣಿಸಿದ್ದರು. ತಾಯಿಯಂತೆ ಅವರು ಮಗುವನ್ನು ಲಾಲಿಸಿ, ಪಾಲಿಸಿ, ನಗಿಸಲೂ ಬಲ್ಲವರಾಗಿದ್ದರು. ಒಮ್ಮೆ ದಕ್ಷಿಣ ಆಫ್ರಿಕಾದ ಒಂದು ಸೆರೆಮನೆಯಿಂದ ಬಿಡುಗಡೆಯಾಗಿ ಮನೆಗೆ ಬಂದಾಗ ಅವರ ಮಿತ್ರರ ಪತ್ನಿ ಶ್ರೀಮತಿ ಪೋಲಾಕ್ ಮನೆಯಲ್ಲಿದ್ದರು. ಆಕೆ ಅತ್ಯಂತ ಕೃಶಕಾಯರಾಗಿದ್ದರು, ನಿಶ್ಶಕ್ತಿಯಿಂದಿದ್ದರು. ತಮ್ಮ ಮಗುವಿಗೆ ಎದೆಹಾಲು ಬಿಡಿಸಲು ಪ್ರಯತ್ನಿಸುತ್ತಿದ್ದರು. ಆ ಮಗುವೋ, ಆಕೆಗೆ ಸ್ವಲ್ಪವೂ ವಿಶ್ರಾಂತಿಯನ್ನೇ ಕೊಡುತ್ತಿರಲಿಲ್ಲ. ರಚ್ಚೆ ಹಿಡಿದು ಅಳುತ್ತಿತ್ತು. ಅದೇ ರಾತ್ರಿ ಗಾಂಧಿ ಮಗುವಿನ ಜವಾಬ್ದಾರಿ ವಹಿಸಿಕೊಂಡರು. ಇಡೀ ದಿನವೆಲ್ಲಾ ದುಡಿದ ಬಳಿಕ, ಸಾರ್ವಜನಿಕ ಸಭೆಗಳಲ್ಲಿ ಭಾಷಣಗಳನ್ನು ಮಾಡಿದ ನಂತರ, ನಾಲ್ಕು ಮೈಲಿ ಪ್ರಯಾಣ ಮಾಡಿದ ನಂತರ, ಗಾಂಧಿ ಕೆಲವೊಮ್ಮೆ ಮನೆ ಸೇರುತ್ತಿದ್ದುದ್ದು ರಾತ್ರಿ ಒಂದು ಗಂಟೆಗೆ. ಆಗ ಮಗುವನ್ನು ತಾಯ ಬಳಿಯಿಂದ ಎತ್ತಿಕೊಂಡು, ತಮ್ಮ ಹಾಸಿಗೆಯ ಮೇಲೆ ಮಲಗಿಸಿಕೊಳ್ಳುತ್ತಿದ್ದರು. ಮಗುವನ್ನು ಸಮಾಧಾನಗೊಳಿಸಲು ತಮ್ಮ ಬಳಿ ಒಂದು ಹೂಜಿಯಲ್ಲಿ ನೀರನ್ನಿಟ್ಟುಕೊಳ್ಳುತ್ತಿದ್ದರು. ಆದರೆ ಅದರ ಅಗತ್ಯವೇ ಬರುತ್ತಿರಲಿಲ್ಲ. ಮಗು ಅಳುತ್ತಲೇ ಇರಲಿಲ್ಲ; ಸುಖವಾಗಿ ನಿದ್ದೆ ಮಾಡುತ್ತಿತ್ತು. ಹದಿನೈದು ದಿನಗಳ ಬಳಿಕ, ಹಾಲು ಬಿಡಿಸುವ ಪ್ರಯತ್ನ ಯಶಸ್ವಿಯಾಯಿತು.

ಗಾಂಧಿಯವರಿಗೆ ಹಿರಿಯರು ಎಂದರೆ ಅಪಾರ ಗೌರವ. ಗೋಖಲೆಯವರು ಅವರೊಡನೆ ಉಳಿದುಕೊಂಡಾಗ, ಗೋಖಲೆಯವರ ಕಂಠವಸ್ತ್ರವನ್ನು ಇಸ್ತ್ರಿ ಮಾಡಿದರು, ಹಾಸಿಗೆ ಹಾಸಿಕೊಟ್ಟರು, ಊಟ ಬಡಿಸಿದರು; ಅವರ ಕಾಲು ಒತ್ತಲು ಸಹ ಸಿದ್ಧವಾಗಿದ್ದರು. ಗೋಖಲೆಯವರ ತಕರಾರುಗಳಿಗೆ ಅವರು ಕಿವಿಗೊಡಲಿಲ್ಲ. ಅವರು ಮಹಾತ್ಮರಾಗುವ ಮುಂಚೆ, ಒಮ್ಮೆ ಅವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದು, ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದರು. ಅಲ್ಲಿ ಹೊಲಸಾಗಿದ್ದ ಪಾಯಖಾನೆಗಳನ್ನು ತೊಳೆಯಲು ಸ್ವತಃ ಮುಂದಾದರು. ನಂತರ ಒಬ್ಬ ಕಾಂಗ್ರೆಸ್ ಮುಖಂಡರನ್ನು ಕೇಳಿದರು: "ನಾನು ನಿಮಗಾಗಿ ಏನು ಮಾಡಲಿ?" ಅವರು ಹೇಳಿದರು: "ರಾಶಿಗಟ್ಟಲೆ ಪತ್ರಗಳಿವೆ. ಅವಕ್ಕೆಲ್ಲಾ ಉತ್ತರಿಸಬೇಕು. ಈ ಕೆಲಸವನ್ನು ಗುಮಾಸ್ತರಿಗೆ ಒಪ್ಪಿಸೋಣ ಎಂದರೆ, ನನ್ನ ಬಳಿ ಯಾರೂ ಗುಮಾಸ್ತರಿಲ್ಲ. ಅದನ್ನು ಮಾಡುವ ಮನಸ್ಸು ನಿಮಗಿದೆಯೇ?" ಗಾಂಧಿ ಹೇಳಿದರು: "ಖಂಡಿತ. ನನ್ನ ಸಾಮರ್ಥ್ಯದಲ್ಲಿರುವ ಏನನ್ನು ಬೇಕಾದರೂ ನಾನು ಮಾಡಬಲ್ಲೆ." ಸ್ವಲ್ಪ

ಸಮಯದಲ್ಲಿಯೇ ಅವರು ಆ ಕೆಲಸ ಮಾಡಿ ಮುಗಿಸಿದರು. ಆ ಮುಖಂಡರ ಶರಟಿನ ಗುಂಡಿ ಹಾಕುವುದಲ್ಲದೆ, ಇತರ ಅಗತ್ಯಗಳನ್ನು ಪೂರೈಸುವ ಮೂಲಕ ಒಬ್ಬ ಕೈಯಾಳಿನ ಕೆಲಸವನ್ನೂ ಮಾಡಿದರು.

ಆಶ್ರಮದಲ್ಲಿ ಅನುಭವಸ್ಥರಾದ ಸಹಾಯಕರ ಸೇವೆಯ ಅಗತ್ಯ ಬಿದ್ದಾಗಲೆಲ್ಲಾ, ಅಸ್ಪೃಶ್ಯತೆಯ ಅಡ್ಡಗೋಡೆಯನ್ನು ಒಡೆಯಲೆಂದು, ಹರಿಜನ ಆಳುಗಳನ್ನೇ ನೇಮಿಸ ಬೇಕೆಂದು ಅವರು ಒತ್ತಾಯಿಸುತ್ತಿದ್ದರು. ಅವರ ಸಲಹೆ ಏನಿತ್ತೆಂದರೆ: "ಆಳುಗಳನ್ನು ಕೂಲಿ ಕಾರ್ಮಿಕರೆಂದು ನಾವು ತಿಳಿಯಬಾರದು. ನಮ್ಮ ಸೋದರರೆಂದು ಭಾವಿಸಬೇಕು. ಏನಾದರೂ ತೊಂದರೆ ಆಗಬಹುದು, ಕೆಲವು ಕಳ್ಳತನಗಳು, ಹೆಚ್ಚು ಖರ್ಚು. ಆದರೂ ಪ್ರಯತ್ನ ನಿಷ್ಫಲವಾಗುವುದಿಲ್ಲ."

ಯಾರನ್ನೇ ಆಗಲೀ, ಒಬ್ಬ ಆಳಿನಂತೆ ಹೇಗೆ ಇಟ್ಟುಕೊಳ್ಳುವುದು ಎಂದೇ ಅವರಿಗೆ ತಿಳಿದಿರಲಿಲ್ಲ. ಆದರೆ ಭಾರತದ ಸೆರೆಮನೆಯಲ್ಲಿ, ಒಮ್ಮೆ ಅವರು ಅನೇಕ ಸಹ-ಖೈದಿಗಳ ಸೇವೆಯನ್ನು ಆನಂದಿಸಿದರು. ಒಬ್ಬರು ಅವರಿಗಾಗಿ ಹಣ್ಣುಗಳನ್ನು ತೊಳೆದರೆ, ಮತ್ತೊಬ್ಬರು ಆಡುಗಳ ಹಾಲು ಕರೆದರು. ಮೂರನೆಯವರು ವೈಯಕ್ತಿಕ ಸಹಾಯಕನಂತೆ, ಮತ್ತೊಬ್ಬರು ಅವರ ಕೋಣೆಯನ್ನು ಸ್ವಚ್ಛಗೊಳಿಸಿದರು. ಓರ್ವ ಬ್ರಾಹ್ಮಣ ಅವರ ತಟ್ಟೆಗಳನ್ನೆಲ್ಲಾ ತೊಳೆದರು. ಇಬ್ಬರು ಯೂರೋಪಿಯನ್ನರು ಪ್ರತಿ ದಿನ ಬೆಳಿಗ್ಗೆ ಅವರ ಮಂಚವನ್ನು ಹೊರ ತರುತ್ತಿದ್ದರು.

ಇಂಗ್ಲೆಂಡಿನ ಗಣ್ಯವ್ಯಕ್ತಿಗಳ ಕುಟುಂಬದಲ್ಲಿ ಅವರ ಮತ್ತು ಮನೆಯ ಆಳುಕಾಳುಗಳ ನಡುವೆ ಇದ್ದ ಬಾಂಧವ್ಯ ಕಂಡು ಅವರು ಬಹಳ ಸಂತೋಷಗೊಂಡಿದ್ದರು. ಒಮ್ಮೆ ಅವರ ಅತಿಥೇಯರು ತಮ್ಮ ಆಳುಗಳನ್ನು ಅವರ ಮನೆಯ ಚಾಕರರೆಂದು ಹೇಳದೆ, ಕುಟುಂಬದ ಸದಸ್ಯರು ಎಂದು ಪರಿಚಯಿಸಿದಾಗ ಗಾಂಧಿಗೆ ಬಹಳ ಖುಷಿಯಾಗಿತ್ತು.

ಒಬ್ಬ ಭಾರತೀಯ ಅತಿಥೇಯರ ಮನೆಯಲ್ಲಿ ಬಹಳ ದಿನ ತಂಗಿದ್ದ ಗಾಂಧಿ ಅಲ್ಲಿಂದ ಹೊರಡುವಾಗ, ಅಲ್ಲಿನ ಸೇವಕರಿಗೆ ವಿದಾಯ ಹೇಳುತ್ತಾ ಹೀಗೆಂದರು: "ನಾನು ನಿಮಗೆ ಎಷ್ಟು ಆಭಾರಿಯಾಗಿದ್ದೇನೆ ಎಂದು ಹೇಳಲಾರೆ. ನನ್ನ ಜೀವಮಾನದಲ್ಲೇ ನಾನು ಯಾರನ್ನೂ ನನ್ನ ಅಣ್ಣತಮ್ಮನೋ, ಅಕ್ಕತಂಗಿಯೋ ಎಂದಲ್ಲದೆ ನನ್ನ ಆಳು ಎಂದು ಎಂದೂ ಭಾವಿಸಿಲ್ಲ. ನೀವೂ ಇದಕ್ಕೆ ಹೊರತಾಗಿಲ್ಲ. ನಿಮಗೆ ಪ್ರತಿಫಲ ಒದಗಿಸುವುದು ನನ್ನ ಕೈಯಲ್ಲಿಲ್ಲ. ಆದರೆ ದೇವರು ಅದನ್ನು ಯಥೇಚ್ಛವಾಗಿ ಮಾಡುತ್ತಾನೆ."

ಬಾಣಸಿಗ

ಮಹಾದೇವ ದೇಸಾಯಿ ಒಮ್ಮೆ ಗಾಂಧಿಯನ್ನು ಕೇಳಿದರು: "ಬಾಪೂಜೀ, ಫ್ಲೀನಿಕ್ಸ್ ವಸಾಹತನ್ನು ಸೇರುವ ಮೊದಲು ನಿಮ್ಮಲ್ಲಿ ಅಡುಗೆಯವರಿದ್ದರಾ ?" ಗಾಂಧಿ ಉತ್ತರಿಸಿದರು: "ಇಲ್ಲ, ನಾನು ಅಡುಗೆಯವರನ್ನು ಮೊದಲೇ ಕಳಿಸಿಬಿಟ್ಟೆ. ಒಬ್ಬ ಒಳ್ಳೆಯ ಅಡುಗೆಯವನಿದ್ದ. ಆದರೆ ಮಸಾಲೆ ಮತ್ತು ಸಂಬಾರ ಸಾಮಗ್ರಿಗಳಿಲ್ಲದೆ ಅಡುಗೆಯನ್ನೇ ಮಾಡಲು ಅವನಿಗಾಗುವುದಿಲ್ಲ ಎಂದು ಅವನು ಹೇಳಿದ. ತಕ್ಷಣವೇ ನಾನು ಅವನಿಗೆ ರಜೆ ಕೊಟ್ಟು ಕಳುಹಿಸಿದೆ. ಆಮೇಲೆ ಯಾವ ಅಡುಗೆಯವರನ್ನೂ ಇಟ್ಟುಕೊಳ್ಳಲಿಲ್ಲ." ಈ ಘಟನೆ ನಡೆದದ್ದು ಗಾಂಧಿ ಸುಮಾರು 35 ವರ್ಷದವರಾಗಿದ್ದಾಗ.

18 ವಯಸ್ಸಿನವರಾಗಿದ್ದಾಗ, ಇಂಗ್ಲೆಂಡಿನಲ್ಲಿದ್ದಾಗ, ಮೊದಲ ಬಾರಿಗೆ ಗಾಂಧಿ ಅಡುಗೆ ಮಾಡಲು ಕೈಹಾಕಿದರು. ಅವರು ಶುದ್ಧ ಸಸ್ಯಾಹಾರಿಗಳಾಗಿದ್ದರು. ತುಲನಾತ್ಮಕವಾಗಿ ನೋಡಿದರೆ, ಇಂಗ್ಲೆಂಡಿನಲ್ಲಿ ಆ ಸಮಯದಲ್ಲಿ ಸಸ್ಯಾಹಾರ ಎನ್ನುವುದು ಒಂದು ನವೀನ ಮತಶ್ರದ್ಧೆಯೇ ಆಗಿತ್ತು. ಅಲ್ಲಿ ಸಾಮಾನ್ಯವಾಗಿ ಅವರಿಗೆ ಸಿಗುತ್ತಿದ್ದುದು ಬ್ರೆಡ್, ಬೆಣ್ಣೆ, ಜಾಮ್ ಮತ್ತು ಮೇಲೋಗರ ಹಾಕದ ಬೇಯಿಸಿದ ತರಕಾರಿಗಳು. ತಾಯಿ ತಯಾರಿಸಿದ ರುಚಿರುಚಿಯಾದ ಮಸಾಲೆಭರಿತ ಊಟ-ತಿಂಡಿತಿನಿಸುಗಳನ್ನು ತಿಂದು ಅಭ್ಯಾಸವಾಗಿದ್ದ ಗಾಂಧಿಗೆ ಅಲ್ಲಿ ಎಲ್ಲವೂ ಸಪ್ಪೆ ಸಪ್ಪೆಯಾಗಿತ್ತು.

ಕೆಲವು ತಿಂಗಳುಗಳ ಕಾಲ ಸಸ್ಯಾಹಾರಿ ಹೋಟೆಲುಗಳಲ್ಲಿ ಊಟ ಮಾಡುತ್ತಿದ್ದ ಅವರು ಸ್ವಲ್ಪ ಮಿತವ್ಯಯ ಮಾಡೋಣ ಎಂದು ನಿರ್ಧರಿಸಿದರು. ಒಂದು ಕೋಣೆ ಹಾಗೂ ಒಂದು ಒಲೆಯನ್ನು ಬಾಡಿಗೆಗೆ ತೆಗೆದುಕೊಂಡರು. ಬೆಳಗಿನ ತಿಂಡಿ ಮತ್ತು ರಾತ್ರಿಯ ಊಟ ಅವರೇ ಮಾಡಿಕೊಳ್ಳುತ್ತಿದ್ದರು. ದಿನಕ್ಕೆ ಸುಮಾರು 12 ಆಣೆಗಳ ವೆಚ್ಚದ ತಮ್ಮ ಊಟ ತಯಾರಿಸಿಕೊಳ್ಳಲು ಅವರಿಗೆ 20 ನಿಮಿಷಗಳೂ ಬೇಕಾಗುತ್ತಿರಲಿಲ್ಲ. ಗಾಂಧಿ ಸಾಲ್ಟ್ ಬರೆದ 'ಪ್ಲೀ ಫಾರ್ ವೆಜಿಟೆರಿನಿಯಸಮ್' ಎಂಬ ಪುಸ್ತಕ ಓದಿದಾಗ ಹಾಗೂ ಲಂಡನ್ ವೆಜಿಟೇರಿಯನ್ ಸೊಸೈಟಿಯ ಸಂಪರ್ಕದಲ್ಲಿ ಬಂದಾಗ, ತಮ್ಮ ಆಹಾರಪದ್ಧತಿಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಿಕೊಂಡರು.

ಗಾಂಧಿ ಅಧಿಕೃತ ಬ್ಯಾರಿಸ್ಟರ್ ಆಗಿ ಭಾರತಕ್ಕೆ ಹಿಂತಿರುಗಿ ಬಂದಮೇಲೆ, ಮುಂಬೈಯಲ್ಲಿ ಚಿಕ್ಕದೊಂದು ಫ್ಲಾಟನ್ನು ಬಾಡಿಗೆಗೆ ತೆಗೆದುಕೊಂಡರು. ಒಬ್ಬ ಬ್ರಾಹ್ಮಣ ಅಡುಗೆಯವನನ್ನೂ ನೇಮಿಸಿಕೊಂಡರು. ಅರ್ಧ ಅಡುಗೆ ಅವರೇ ಮಾಡುತ್ತಿದ್ದರು. ಹಾಗೆಯೇ ಆ ಅಡುಗೆಯವನಿಗೆ ಇಂಗ್ಲಿಷರ ಸಸ್ಯಾಹಾರಿ ವ್ಯಂಜನಗಳನ್ನೂ ಕಲಿಸಿಕೊಟ್ಟರು. ಸುವ್ಯವಸ್ಥೆ ಮತ್ತು ಸ್ವಚ್ಛತೆಯ ವಿಷಯದಲ್ಲಿ ಅವರನ್ನು ಮೆಚ್ಚಿಸುವುದು ಅಸಾಧ್ಯವಾಗಿತ್ತು, ಅದರಲ್ಲೂ ಅಡುಗೆಮನೆಯಲ್ಲಿ. ಅವರು ಆ ಅಡುಗೆಯವನಿಗೆ ದಿನಾ ತಮ್ಮ ಉಡುಪುಗಳನ್ನು ಒಗೆದುಕೊಳ್ಳಲು ಮತ್ತು ಸ್ನಾನ ಮಾಡಲು ಸಹ ಹೇಳಿಕೊಟ್ಟರು.

ದಕ್ಷಿಣ ಆಫ್ರಿಕಾದಲ್ಲೇ ಆಗಲೀ, ಭಾರತದಲ್ಲೇ ಆಗಲೀ, ಗಾಂಧಿಯವರ ಆಶ್ರಮಗಳಲ್ಲಿ ಸಂಬಳ ಕೊಟ್ಟು ಅಡುಗೆಯವರನ್ನು ಇಟ್ಟುಕೊಳ್ಳುತ್ತಲೇ ಇರಲಿಲ್ಲ. ಒಂದು ಊಟಕ್ಕಾಗಿ ಹಲವಾರು ವ್ಯಂಜನಗಳನ್ನು ತಯಾರಿಸುವುದು ಎಂದರೆ ಸಮಯ ಹಾಗೂ ಶ್ರಮಗಳ ವ್ಯರ್ಥಾ

ಪೋಲು ಎಂದು ಅವರು ಭಾವಿಸಿದ್ದರು. ಆಶ್ರಮದಲ್ಲಿದ್ದ ವಿವಿಧ ಸದಸ್ಯರ ವಿವಿಧ ರುಚಿಗಳಿಗೆ ತಕ್ಕಂತೆ ಊಟತಿಂಡಿ ಒದಗಿಸುವುದಕ್ಕೆ ಅವರು ಸಿದ್ಧರಿರಲಿಲ್ಲ. ಎಲ್ಲರೂ ಸರಳವಾದ ಊಟವನ್ನು ಮಾಡಬೇಕೆಂದು ಅವರು ಹೇಳುತ್ತಿದ್ದರು. ಆಹಾರವನ್ನು ಎಲ್ಲರಿಗೂ ಸೇರಿದ್ದ ಒಂದು ಸಾಮುದಾಯಿಕ ಅಡುಗೆಮನೆಯಲ್ಲಿ ತಯಾರಿಸುತ್ತಿದ್ದರು.

ಬಹಳ ಸಂಕೀರ್ಣವಾದ ಮತ್ತು ಕಷ್ಟಕರವಾದ ಅಡುಗೆಯ ಕಲೆಯನ್ನು ಅವರು ಬಹಳ ಸರಳಗೊಳಿಸಿದರು. ಅವರ ಆಶ್ರಮದಲ್ಲಿ, ಅನ್ನ-ಗಂಜಿ, ಬ್ರೆಡ್, ಹಸಿ ತರಕಾರಿಗಳು, ಮಸಾಲೆಗಳಿಲ್ಲದ ಬೇಯಿಸಿದ ತರಕಾರಿಗಳು, ಹಣ್ಣುಗಳು ಮತ್ತು ಹಾಲು ಅಥವಾ ಮೊಸರು ಬಡಿಸಲಾಗುತ್ತಿತ್ತು. ಸಿಹಿತಿನಿಸುಗಳು ಮತ್ತು ಹಾಲಿನ ತಯಾರಿಕೆಗಳ ಬದಲಿಗೆ ತಾಜಾ ಬೆಲ್ಲ ಮತ್ತು ಜೇನುತುಪ್ಪ. ನಾಲಗೆಯನ್ನು ತೃಪ್ತಿಪಡಿಸಲೆಂದು ಯಾರೂ ತಿನ್ನಬಾರದು, ಬದಲಿಗೆ ದೇಹವನ್ನು ಸುಸ್ಥಿತಿಯಲ್ಲಿಡಲಷ್ಟೇ ತಿನ್ನಬೇಕು ಎಂಬ ಅಂಶವನ್ನು ಜಸ್ಟ್ ಎಂಬಾತ ಬರೆದಿದ್ದ 'ರಿಟರ್ನ್ ಟು ನೇಚರ್' (ಮರಳಿ ಪ್ರಕೃತಿಗೆ) ಪುಸ್ತಕ ಅವರಿಗೆ ಮನವರಿಕೆ ಮಾಡಿಕೊಟ್ಟಿತ್ತು. ಗಾಂಧಿ ಆಹಾರಪದ್ಧತಿಯಲ್ಲಿ ಪ್ರಯೋಗಗಳನ್ನು ಮಾಡತೊಡಗಿದರು. ಇದು ಜೀವನವಿಡೀ ಅವರ ಹವ್ಯಾಸವಾಗಿ ಉಳಿಯಿತು. ಕೆಲವು ಪ್ರಯೋಗಗಳಲ್ಲಿ ಅಡುಗೆ ಮಾಡುವುದೇ ಬೇಕಿರಲಿಲ್ಲ; ಇನ್ನು ಕೆಲವು ಪ್ರಯೋಗಗಳು ಅವರನ್ನು ತೊಂದರೆಗೀಡುಮಾಡಿದವು. ಐದು ವರ್ಷಗಳ ಕಾಲ ಅವರು ಫಲಾಹಾರಿಯಾಗಿದ್ದರು. ಒಮ್ಮೆ ನಾಲ್ಕು ತಿಂಗಳುಗಳ ಕಾಲ ಮೊಳಕೆಕಾಳುಗಳು ಹಾಗೂ ಬೇಯಿಸದ ಆಹಾರದ ಮೇಲೆ ಜೀವಿಸಿದರು. ಆಮೇಲೆ ಆಮಶಂಕೆಯನ್ನೂ ಅನುಭವಿಸಿದರು. ಫೀನಿಕ್ಸ್ ವಸಾಹತಿನಲ್ಲಿ ಅವರು ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಪ್ರಧಾನ ಅಡುಗೆಯವರಂತಿದ್ದರು. ದಕ್ಷಿಣ ಆಫ್ರಿಕಾದ ಭಾರತೀಯರು ಯೂರೋಪಿಯನ್ನರಿಗೆ ಕೊಟ್ಟ ಒಂದು ಔತಣಕೂಟದಲ್ಲಿ ಅವರೇ ಅಡುಗೆ ಮಾಡಿದರು; ಬಡಿಸಿದರು.

ಫೀನಿಕ್ಸ್ ವಸಾಹತಿನ ಸತ್ಯಾಗ್ರಹಿಗಳ ಮೊದಲ ತಂಡ ಆಶ್ರಮವನ್ನು ಬಿಟ್ಟು ಹೋಗುತ್ತಿದ್ದಾಗ, ಗಾಂಧಿ ಅವರಿಗೆ ಒಂದು ಭರ್ಜರಿ ಅಡುಗೆ ಮಾಡಿ ಬಡಿಸಿದರು. ಒಂದು ರಾಶಿ ಚಪಾತಿ, ಟೊಮ್ಯಾಟೊ ಚಟ್ನಿ, ಅನ್ನ, ಪಲ್ಯ ಮತ್ತು ಖರ್ಜೂರದಿಂದ ಮಾಡಿದ ಒಂದು ಸಿಹಿ ತಿನಿಸನ್ನು ಅವರು ತಯಾರಿಸಿದ್ದರು. ಇತ್ತ ಕೈಗಳು ಅಡುಗೆ ಮಾಡುವುದರಲ್ಲಿ ಮಗ್ನವಾಗಿದ್ದಂತೆ, ಅತ್ತ ಸತ್ಯಾಗ್ರಹದ ಅಭ್ಯಾಸ ಹಾಗೂ ಸೆರೆಮನೆಯಲ್ಲಿನ ಜೀವನ ವಿಧಾನದ ಬಗ್ಗೆ ವಿವರವಾಗಿ ಅವರು ಸಲಹೆ ಕೊಡುತ್ತಿದ್ದರು. ಸತ್ಯಾಗ್ರಹಿಗಳ ಸಂಖ್ಯೆ 2500ಕ್ಕೆ ಏರಿದಾಗ, ಆ ಪಡೆಯ ನೇತೃತ್ವವನ್ನು ವಹಿಸಿದರು; ಅಡುಗೆಯವರಂತೆ ಬಡಿಸಿದರು. ಒಮ್ಮೆ ಬೇಳೆ ತೊವ್ವೆ ನೀರು ನೀರಾಯಿತು, ಮತ್ತೊಮ್ಮೆ ಅನ್ನ ಅರೆಬೆಂದಿತ್ತು. ಆದರೆ ಆ ಸತ್ಯಾಗ್ರಹಿಗಳು ಗಾಂಧಿಯವರನ್ನು ಎಷ್ಟು ಆರಾಧಿಸುತ್ತಿದ್ದರೆಂದರೆ, ತುಟಿಪಿಟಕ್ಕೆನ್ನದೆ ಎಲ್ಲವನ್ನೂ ನುಂಗಿದರು. ದಕ್ಷಿಣ ಆಫ್ರಿಕಾದ ಸೆರೆಮನೆಯಲ್ಲಿ ತಮ್ಮ ಸಹೋದ್ಯೋಗಿಗಳಿಗೆ ಅಡುಗೆ ಮಾಡುವುದರಲ್ಲಿ ಅವರು ನೆರವಾಗುತ್ತಿದ್ದರು. ಅಡುಗೆ ಮಾಡುವುದು ಶಿಕ್ಷಣದ ಒಂದು ಅವಶ್ಯಕ ಭಾಗ ಎಂದು ಅವರು ಪರಿಗಣಿಸಿದ್ದರು. ಟಾಲ್‌ಸ್ಟಾಯ್ ಫಾರಂನಲ್ಲಿದ್ದ ಬಹುತೇಕ ಎಲ್ಲಾ ಕಿರಿಯರಿಗೂ ಅಡುಗೆ ಮಾಡುವುದು ಬರುತ್ತದೆ ಎಂದು ಹೆಮ್ಮೆಯಿಂದ ಹೇಳಿದ್ದರು. ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದ ಒಡನೆ ಶಾಂತಿನಿಕೇತನದ ವಿದ್ಯಾರ್ಥಿಗಳಿಗೆ ಅಡುಗೆ ಮಾಡುವ ಹುಚ್ಚು ಹತ್ತಿಸಿದರು. ಸಾಮುದಾಯಿಕ ಅಡುಗೆಮನೆ ನಡೆಸುವ ಮತ್ತು ಸರತಿಯ ಪ್ರಕಾರ ಅವರೇ ಆಹಾರ ತಯಾರಿಸುವ ವಿಚಾರವನ್ನು ಅವರೂ ಸ್ವಾಗತಿಸಿದರು. ಠಾಕೂರರು

ಇದು ಎಷ್ಟರ ಮಟ್ಟಿಗೆ ಕಾರ್ಯಸಾಧು ಎಂಬ ಅನುಮಾನ ವ್ಯಕ್ತಪಡಿಸಿದರಾದರೂ ಪ್ರಯತ್ನಕ್ಕೆ ಶುಭ ಕೋರಿದರು.

ಗಾಂಧಿ ಒಮ್ಮೆ ಮದ್ರಾಸಿನಲ್ಲಿಯ ವಿದ್ಯಾರ್ಥಿನಿಲಯವೊಂದರಲ್ಲಿ ಬೇರೆ ಬೇರೆ ಜಾತಿಗಳವರಿಗೆ ಬೇರೆ ಬೇರೆ ಅಡುಗೆಮನೆಗಳಲ್ಲದೆ, ಆ ಅಡುಗೆಮನೆಗಳು ವಿವಿಧ ಗುಂಪುಗಳಿಗೆ, ಅವರ ಮಧುರ ರುಚಿಗೆ ತಕ್ಕಂತೆ ವಿವಿಧ ರೀತಿಯ ಸಂಬಾರ ಪದಾರ್ಥಗಳನ್ನೊಳಗೊಂಡ ಅಡುಗೆಗಳನ್ನು ಒದಗಿಸುವುದನ್ನು ನೋಡಿ ದಿಗ್ಭ್ರಾಂತರಾದರು. ಒಬ್ಬ ಬಂಗಾಲೀ ಆತಿಥೇಯರ ಮನೆಯಲ್ಲಿ ಬಹಳ ಪದಾರ್ಥಗಳನ್ನು ಬಡಿಸಿದಾಗಲೂ ಅವರು ಅಷ್ಟೇ ಸಿಡಿಮಿಡಿಗೊಂಡಿದ್ದರು. ಅಂದಿನಿಂದಲೇ ಅವರು ದಿನಕ್ಕೆ ಕೇವಲ ಐದು ಆಹಾರವಸ್ತುಗಳನ್ನು ಸೇವಿಸುವ ವ್ರತ ತೊಟ್ಟರು. ಬಿಹಾರದಲ್ಲಿ ಅನತಿಕಾಲದಿಂದಲೂ ಇದ್ದ ಅಸ್ಪೃಶ್ಯತೆಯ ಪಕ್ಷಪಾತವನ್ನು ಸಹ ಅವರು ಮುರಿದರು. ಅಲ್ಲದೆ, ಚಂಪಾರಣ್ ತನಿಖೆಯಲ್ಲಿ ತಮಗೆ ಸಹಾಯ ಮಾಡುತ್ತಿದ್ದ ಎಲ್ಲಾ ವಕೀಲರೂ ಒಂದೇ ಸಾಮಾನ್ಯ ಅಡುಗೆಮನೆಯಲ್ಲಿ ಊಟ ಮಾಡುವಂತೆ ಮಾಡಿದರು. ನಾಲಗೆಯನ್ನು ಸಂತೃಪ್ತಿಗೊಳಿಸಲು ಆಹಾರಕ್ಕೆ ಒಗ್ಗರಣೆ ಹಾಕುವುದಕ್ಕಿಂತ ಆರೋಗ್ಯಕ್ಕೆ ಒಳ್ಳೆಯದಾದ ಮತ್ತು ಸ್ವಚ್ಛತೆಯಿಂದ ಮಾಡಲಾದ ಅಡುಗೆಗೆ ಅವರು ಒತ್ತು ನೀಡುತ್ತಿದ್ದರು.

ಗಾಂಧಿಯ ಆಹಾರಪಟ್ಟಿಯಲ್ಲಿದ್ದ ಕೆಲವು ಭಿನ್ನ ಮಾದರಿಗಳೆಂದರೆ ಕ್ವಿನೈನ್ ಗುಳಿಗೆಗಳಷ್ಟು ಕಹಿಯಾದ ತಾಜಾ ಬೇವಿನೆಲೆಗಳ ಚಟ್ನಿ, ಮೊಸರು ಮತ್ತು ಆಶ್ರಮದ ಪಕ್ಕದಲ್ಲಿಯೇ ಇದ್ದ ಗಾಣದಿಂದ ಬಂದ ಎಣ್ಣೆಹಿಂಡಿಗಳ ಮಿಶ್ರಣ, ಹುಣಿಸೆಹಣ್ಣು ಮತ್ತು ಬೆಲ್ಲದಿಂದ ಮಾಡಿದ ಸಿಹಿ ಪಾನಕ, ಬೇಯಿಸಿ ಮತ್ತು ಜಜ್ಜಲಾದ, ಒಗ್ಗರಣೆ ಹಾಕದ ಸೋಯಾ ಬೀನ್ ಕಾಳುಗಳು, ಯಾವುದಾದರೂ ತಿನ್ನಬಲ್ಲಂಥ ತಾಜಾ ಹಸಿರೆಲೆಗಳ

ಹಸಿಪಚ್ಚಡಿ, ಚಪಾತಿಗಳನ್ನು ಪುಡಿ ಮಾಡಿ ಮಾಡಲಾದ ಒಂದು ರೀತಿಯ ಕಡುಬು, ಗೋಧಿತರಿಯ ಗಂಜಿ ಮತ್ತು ಬೇಯಿಸಿದ ಗೋಧಿಹಿಟ್ಟಿನಿಂದ ಮಾಡಿದ ಕಾಫಿ.

ಇಂಗ್ಲೆಂಡಿಗೆ ಒಮ್ಮೆ ಹಡಗಿನಲ್ಲಿ ಹೋಗುತ್ತಿದ್ದಾಗ, ಗಾಂಧಿ ತಮ್ಮ ಅಣ್ಣನ ಮಗನಿಗೆ ಹೀಗೆ ಬರೆದರು: "ಎರಡು ಅಳತೆ ಬಾಳೆಹಣ್ಣಿನ ಹಿಟ್ಟು ಮತ್ತು ಒಂದು ಅಳತೆ ಗೋಧಿಹಿಟ್ಟಿನಿಂದ ನಾವು ಬಿಸ್ಕತ್ತುಗಳು ಮತ್ತು ರೊಟ್ಟಿಗಳನ್ನು ಮಾಡಿದ್ದೇವೆ." ಒಮ್ಮೆ ಕೇಕ್ ಮಾಡಲು ಅವರು ಈ ವಿಧಾನ ಬರೆದು ಕಳುಹಿಸಿದರು: "ಹಿಟ್ಟನ್ನು ತಣ್ಣೀರಿನಲ್ಲಿ ಸುಮಾರು ಮೂರು ಗಂಟೆಗಳ ಕಾಲ ನೆನೆಸಿಡಬೇಕು. ಹಿಟ್ಟಿಗೆ ನೀರು ಸೇರಿಸುವ ಮೊದಲು ಅದಕ್ಕೆ ತುಪ್ಪವನ್ನು ಸೇರಿಸಿ ಚೆನ್ನಾಗಿ ನಾದಿ ಕಲಸಬೇಕು."

ಕೇಕ್, ಅನ್ನ, ದಾಲ್, ತರಕಾರಿ ಸೂಪ್, ಸಲಾಡ್‌ಗಳು, ಕಿತ್ತಳೆ ಹಣ್ಣು ಮತ್ತು ಕಿತ್ತಳೆ ಸಿಪ್ಪೆಯ ಮುರಬ್ಬಾಗಳು, ಬುರುಗು ಸೇರಿಸದ ಬ್ರೆಡ್, ಚಪಾತಿ ಮತ್ತು ಒಳ್ಳೆಯ ಖಾಕ್ರಾಗಳು – ಇವೆಲ್ಲವನ್ನೂ ಗಾಂಧಿ ಮಾಡಬಲ್ಲವರಾಗಿದ್ದರು.

ಆಶ್ರಮದ ಅಡುಗೆಮನೆಯಲ್ಲಿ ಬ್ರೆಡ್ ಮತ್ತು ಬಿಸ್ಕತ್ ಮಾಡುವುದನ್ನು ಅವರು ಪರಿಚಯಿಸಿದರು. ಸೇವಾಗ್ರಾಮದಲ್ಲಿ ನೂರಾರು ಜನರಿಗೆ ಅನ್ನ ಮಾಡಲು, ಬ್ರೆಡ್ ಮಾಡಲು ಮತ್ತು ತರಕಾರಿಗಳನ್ನು ಬೇಯಿಸಲು ಕಡಿಮೆ ವೆಚ್ಚದ ವಿಶೇಷ ಒಲೆಯನ್ನು ಉಪಯೋಗಿಸಲಾಗುತ್ತಿತ್ತು. ಒಮ್ಮೆ ಅವರ ಜತೆಗಾರರೊಬ್ಬರು ಹೀಗೆ ಟೀಕಿಸಿದರು: "ಹುಲ್ಲಿನಲ್ಲಿ ಬಹಳಷ್ಟು ವಿಟಮಿನ್‌ಗಳಿವೆ ಎಂದು ಇತ್ತೀಚೆಗೆ ವರದಿಯಾಗಿತ್ತು. ಪುಣ್ಯಕ್ಕೆ, ಗಾಂಧೀಜೀ ಆಶ್ರಮದಲ್ಲಿದ್ದಾಗ ಈ ವಿಷಯ ಕಂಡುಹಿಡಿಯಲಿಲ್ಲ. ಇಲ್ಲದೇ ಹೋದಲ್ಲಿ, ಅವರು ಅಡುಗೆಮನೆಯನ್ನೇ ಮುಚ್ಚಿ, ನಮ್ಮನ್ನೆಲ್ಲಾ ಹುಲ್ಲು ಮೇಯಲು ಹೇಳುತ್ತಿದ್ದರು."

ಗಾಂಧಿ ಒಮ್ಮೆ ಒಂದು ಮಾದರಿ ವಸತಿಶಾಲೆಗೆ ಭೇಟಿ ಇತ್ತರು. ಅಲ್ಲಿನ ಅಡುಗೆಮನೆಯ ವ್ಯವಸ್ಥೆ ಅವರಿಗೆ ಒಡಿಸಲಿಲ್ಲ. ಅವರು ಅಲ್ಲಿನ ಶಿಕ್ಷಕರಿಗೆ ಹೇಳಿದರು: "ಮಕ್ಕಳಿಗೆ ಸಾಹಿತ್ಯಕ ಶಿಕ್ಷಣ ಒದಗಿಸುವುದರ ಜೊತೆಗೆ, ಅವರನ್ನು ಒಳ್ಳೆಯ ಅಡುಗೆಯವರನ್ನಾಗಿ ಮತ್ತು ಗುಡಿಸುವವರನ್ನಾಗಿ ಮಾಡಿದರೆ, ನಿಮ್ಮ ಸಂಸ್ಥೆಯನ್ನು ಮಾದರಿಯನ್ನಾಗಿ ಮಾಡುತ್ತೀರಿ."

ವೈದ್ಯ

ಗಾಂಧಿ ರಾಜ್‌ಕೋಟ್‌ನಲ್ಲಿಯ ಆಲ್‌ಫ್ರೆಡ್ ಹೈಸ್ಕೂಲ್‌ನಿಂದ ಮೆಟ್ರಿಕ್ ಪರೀಕ್ಷೆ ಪಾಸು ಮಾಡಿದರು. ಒಡನೆಯೇ, ಅವರ ಪೋಷಕರು ಕಾನೂನು ಅಧ್ಯಯನ ಮಾಡಲೆಂದು ಅವರನ್ನು ಇಂಗ್ಲೆಂಡಿಗೆ ಕಳುಹಿಸಲು ನಿರ್ಧರಿಸಿದಾಗ, ಗಾಂಧಿ ಕೇಳಿದರು: "ಕಾನೂನಿಗೆ ಬದಲು, ವೈದ್ಯವೃತ್ತಿಯ ಅರ್ಹತೆ ಪಡೆಯಲು ನನ್ನನ್ನು ಕಳುಹಿಸಬಾರದೆ?" ಅವರ ದೊಡ್ಡಣ್ಣ ಅದಕ್ಕೆ ಆಕ್ಷೇಪಿಸಿದರು. ಏಕೆಂದರೆ ಒಬ್ಬ ವೈಷ್ಣವ ಅಂಗವಿಚ್ಛೇದನ ಮಾಡುವಂತಿರಲಿಲ್ಲ. ಆ ವೇಳೆಗೆ ದೈವಾಧೀನರಾಗಿದ್ದ ಗಾಂಧಿಯ ತಂದೆಗೆ ಅದು ಸ್ವಲ್ಪವೂ ಇಷ್ಟವಿರಲಿಲ್ಲ.

39 ವರ್ಷದವರಾಗಿದ್ದಾಗ, ಮತ್ತೆ ಇಂಗ್ಲೆಂಡಿನಿಂದ ದಕ್ಷಿಣ ಆಫ್ರಿಕಾಕ್ಕೆ ಹೋದ ಗಾಂಧಿ ವೈದ್ಯಕೀಯ ವೃತ್ತಿಯನ್ನು ತೆಗೆದುಕೊಳ್ಳುವ ಯೋಚನೆ ಮಾಡಿದರು. ಈಗಲೂ ಮತ್ತೆ ಸಜೀವಚ್ಛೇದನವೇ ಅಡ್ಡಿಯಾಯಿತು. ಜೀವಂತ ಪ್ರಾಣಿಗಳ ಅಂಗವಿಚ್ಛೇದನೆ, ಲಸಿಕೆ ಹಾಗೂ ಸೂಜಿಮದ್ದುಗಳನ್ನು ತಯಾರಿಸಲು ಜೀವವಿರುವ ಜಂತುಗಳ ಮೇಲೆ ಪ್ರಯೋಗಗಳು – ಇವೆಲ್ಲವನ್ನೂ ಅವರಿಗೆ ಸಹಿಸಲಾಗಲಿಲ್ಲ. ಯಾವ ಧರ್ಮವೂ ಸಜೀವಚ್ಛೇದನವನ್ನು ಸಹಿಸದು. ನಮ್ಮ ದೇಹಗಳ ಸಲುವಾಗಿ ಇಷ್ಟೊಂದು ಜೀವಗಳನ್ನು ಬಲಿ ತೆಗೆದುಕೊಳ್ಳುವ ಅಗತ್ಯವಿಲ್ಲ ಎಂದೇ ಎಲ್ಲವೂ ಹೇಳುತ್ತವೆ. ಗಾಂಧಿಯವರ ಪಾಲಿಗೆ, ಅಲೋಪತಿ ವೈದ್ಯರೆಂದರೆ ರಾಕ್ಷಸರ ಅನುಯಾಯಿಗಳು ಹಾಗೂ ಪಾಶ್ಚಾತ್ಯ ದೇಶದ ಔಷಧಿಗಳು ಮಾಟಮಂತ್ರಗಳ ಸಾರಸತ್ವ. ಹೊಸ ಹೊಸ ಪ್ರಯೋಗಗಳನ್ನು ನಡೆಸುವ ಬಗ್ಗೆ ಆಯುರ್ವೇದದ ವೈದ್ಯರಿಗಿದ್ದ ನಿರಾಸಕ್ತಿಗಾಗಿ ಅವರು ದುಃಖಿಸುತ್ತಿದ್ದರು. ಹೋಮಿಯೋಪತಿ ಬಗ್ಗೆ ಅವರಿಗೆ ಅಂತಹ ಆಕರ್ಷಣೆಯೇನೂ ಇರಲಿಲ್ಲ. ಅಸ್ಪೃಶ್ಯರನ್ನು ಉಪಚರಿಸುವುದರಲ್ಲಿ ಅವರಿಗಿದ್ದ ಅಪಾರ ಆಸಕ್ತಿ, ಅವರೇ ಒಬ್ಬ ಪ್ರಕೃತಿವೈದ್ಯರಾಗುವವರೆಗೂ ಅವರಿಗೆ ನೆಮ್ಮದಿ ಕೊಡಲಿಲ್ಲ.

ಅವರು ಕುಹ್ನೆಯ ಬಗ್ಗೆ ಓದಿದರು. ರೋಗಗಳನ್ನು ವಾಸಿ ಮಾಡುವುದಕ್ಕಾಗಿ ಆತ ನೀರನ್ನೇ ಬಳಸುತ್ತಿದ್ದರೆಂಬ ವಿಷಯದಿಂದ ಪ್ರಭಾವಿತರಾದರು. ನಿಧಾನವಾಗಿ ತಮ್ಮ ಮೇಲೆ ಹಾಗೂ ತಮ್ಮ ಹೆಂಡತಿ ಮಕ್ಕಳ ಮೇಲೆ ಪ್ರಯೋಗಗಳನ್ನು ಮಾಡಿಕೊಂಡರು. ನಮ್ಮ ಸುತ್ತಮುತ್ತಲಿನ ಧಾತುಗಳಾದ ನೀರು ಮತ್ತು ಮಣ್ಣು, ತಾಜಾ ಗಾಳಿ ಮತ್ತು ಸೂರ್ಯನ ರಶ್ಮಿಗಳ ಬಳಕೆಯನ್ನು ಆಧರಿಸಿದ ರೋಗೋಪಚಾರದಲ್ಲಿ ತೊಡಗಿಕೊಂಡರು. ಗುಳಿಗೆ ಮತ್ತು ಪುಡಿಗಳಿಂದ ಅವರು ದೇಹವನ್ನು ಎಂದಿಗೂ ವಿಷಯುಕ್ತ ಮಾಡಿಕೊಳ್ಳಲಿಲ್ಲ; ಉಪವಾಸ, ಆಹಾರಪದ್ಧತಿಯಲ್ಲಿ ಬದಲಾವಣೆ ಮತ್ತು ಗಿಡಮೂಲಿಕೆಗಳ ಬಳಕೆಗೆ ಒತ್ತು ಕೊಟ್ಟರು.

ಅಸ್ಪೃಶ್ಯರನ್ನು ಗಮನಿಸುವ ಮತ್ತು ಒಂದು ರೋಗಪ್ರಕರಣವನ್ನು ಸಂಪೂರ್ಣವಾಗಿ ಅಧ್ಯಯನ ಮಾಡುವಂಥ ಅವರ ಅಸಾಮಾನ್ಯ ಶಕ್ತಿ ರೋಗಿಗಳ ಔಷಧೋಪಚಾರವನ್ನು ಯಶಸ್ವಿಯಾಗಿ ನಡೆಸುವಲ್ಲಿ ಸಹಾಯ ಮಾಡಿತು. ದಕ್ಷಿಣ ಆಫ್ರಿಕಾದಲ್ಲಿ, ಮೊದಲ ಕೂಲಿ ಬ್ಯಾರಿಸ್ಟರ್ ಅವರೇ ಆಗಿದ್ದರು ಹಾಗೂ ಮೊದಲ ಕೂಲಿ ಅಳಲೆಕಾಯಿ ಪಂಡಿತರೂ ಸಹ

ಅವರೇ ಆಗಿದ್ದರು. ಅನೇಕ ಯೂರೋಪಿಯನ್ನರು ಹಾಗೂ ಭಾರತೀಯರು ಅವರ ಸಲಹೆ ಕೇಳುತ್ತಿದ್ದರು. ತಮ್ಮ ಕೆಲವು ಕಕ್ಷಿದಾರರಿಗೆ ಅವರು ಮನೆ ವೈದ್ಯರೇ ಆಗಿಬಿಟ್ಟರು. ಅಂದಿನ ದಿನಗಳಲ್ಲಿ, ಅವರ ರೋಗೋಪಚಾರದ ವಿಧಾನ ಅಂದು ಪ್ರಸ್ತುತವಿದ್ದ ವೈದ್ಯಕೀಯ ವಿಜ್ಞಾನದ ನಿಯಮಗಳಿಗೆ ವಿರುದ್ಧವಾಗಿತ್ತು. ಆಮೇಲೆ ವೈದ್ಯರಿಂದ ಭಾಗಶಃ ಸಮರ್ಥನೆ ಸಿಕ್ಕಿತು.

ಗಾಂಧಿಯವರ ಮಗ ಟೈಫಾಯ್ಡ್‌ನಿಂದ ಬಳಲುತ್ತಿದ್ದಾಗ, ವೈದ್ಯರು ಮೊಟ್ಟೆ ಹಾಗೂ ಕೋಳಿ ಸಾರು ತೆಗೆದುಕೊಳ್ಳಬೇಕೆಂದು ಹೇಳಿದರು. ಗಾಂಧಿ ಮಗನಿಗೆ ಮಾಂಸಾಹಾರ ಕೊಡಲು ಒಪ್ಪಲಿಲ್ಲ. ತಾವೇ ಈ ಪ್ರಕರಣವನ್ನು ಕೈಗೆತ್ತಿಕೊಂಡರು ಹಾಗೂ ಹುಡುಗನಿಗೆ ನೀರು ಮತ್ತು ಕಿತ್ತಳೆ ರಸ ಕೊಡತೊಡಗಿದರು; ಒದ್ದೆ ಹೊದಿಕೆಗಳಲ್ಲಿ ಸುತ್ತಿಟ್ಟರು. ಹುಡುಗ ಸನ್ನಿ ಹಿಡಿದಂತಾದಾಗ, ಗಾಂಧಿ ಸ್ವಲ್ಪ ಅಧೀರರಾದರೂ ಪ್ರಕೃತಿ ಚಿಕಿತ್ಸಾ ವಿಧಾನಗಳಿಗೇ ಅಂಟಿಕೊಂಡಿದ್ದು, ಅವನನ್ನು ವಾಸಿ ಮಾಡಿದರು. ಟೈಫಾಯ್ಡ್‌ನ ಇನ್ನೂ ಬಹಳ ಪ್ರಕರಣಗಳನ್ನು ಸೂಜಿಮದ್ದುಗಳಿಲ್ಲದೆ ವಾಸಿ ಮಾಡುವುದರಲ್ಲಿ ಅವರು ಯಶಸ್ವಿಯಾದರು.

ಗಾಂಧಿ ಅನೇಕ ಬಾರಿ ವೈದ್ಯರು ಹೇಳಿದ್ದನ್ನು ವಿರೋಧಿಸಿದರು. ಒಮ್ಮೆ ಕಸ್ತೂರ್‌ಬಾ ಒಂದು ತೀವ್ರ ರೀತಿಯ ರಕ್ತಹೀನತೆಯಿಂದ ಬಳಲುತ್ತಿದ್ದಾಗ, ವೈದ್ಯರು ಗೋಮಾಂಸದ ಚಹಾ ಕುಡಿಯಲು ಹೇಳಿದರು. ಆದರೆ ಗಾಂಧಿ ಮತ್ತು ಕಸ್ತೂರ್‌ಬಾ ಇಬ್ಬರೂ ಇದನ್ನು ನಿರಾಕರಿಸಿದರು. ಗಾಂಧಿ ಬಾ ಅವರಿಗೆ ದಿನಗಟ್ಟಲೆ ನಿಂಬೆರಸವನ್ನೇ ಕುಡಿಸಿ, ವಾಸಿ ಮಾಡಿದರು. ಬೇಳೆ ಮತ್ತು ಉಪ್ಪನ್ನು ತಿನ್ನಬಾರದೆಂದು ಗಾಂಧಿ ಬಾ ಅವರಿಗೆ ಸಲಹೆ ನೀಡಿದರು. ಆಗ ಗಾಂಧಿಯವರ ಖಿಡಕ್ ಸ್ವಭಾವವನ್ನು ಒಂದು ಕ್ಷಣ ಮರೆತ ಕಸ್ತೂರ್‌ಬಾ ಗೊಣಗಿದರು: "ನಿಮಗೆ ಪರವಾಗಿಲ್ಲ... ಹೇಳಿಬಿಡುತ್ತೀರಾ. ಅವನ್ನು ಬಿಡುವುದು ನಿಮಗೆ ಸಾಧ್ಯವೇ ?" ತಟ್ಟನೆ ಬಂತು ಉತ್ತರ: "ವೈದ್ಯರು ಹೇಳಿದ ಪಕ್ಷದಲ್ಲಿ, ಖಂಡಿತ. ಆದರೆ ಈಗ, ಯಾವುದೇ ವೈದ್ಯಕೀಯ ಸಲಹೆಗಳಲ್ಲದೆಯೇ, ನಾನು ಒಂದು ವರ್ಷದವರೆಗೆ ಉಪ್ಪು ಮತ್ತು ಬೇಳೆಗಳನ್ನು ಬಿಡುತ್ತೇನೆ." ಕಸ್ತೂರ್‌ಬಾರವರ ಕಣ್ಣೀರಾಗಲೀ, ಬೇಡಿಕೆಗಳಾಗಲೀ ಗಾಂಧಿ ತಮ್ಮ ಪ್ರತಿಜ್ಞೆಯನ್ನು ಹಿಂತೆಗೆದುಕೊಳ್ಳುವಂತೆ ಮಾಡಲಾಗಲಿಲ್ಲ. ರೋಗಿ ಹಾಗೂ ವೈದ್ಯ – ಇಬ್ಬರೂ ಉಪ್ಪು ಮತ್ತು ಬೇಳೆಗಳನ್ನು ತ್ಯಜಿಸಿದರು.

ಮತ್ತೊಂದು ಸಂದರ್ಭದಲ್ಲಿ, ಕಸ್ತೂರ್‌ಬಾ ಹದಿನೈದು ದಿನಗಳ ಕಾಲ ಉಪವಾಸವಿದ್ದು, ನಿಯಮಿತವಾಗಿ ಬೇವಿನ ರಸ ಸೇವಿಸಬೇಕಾಗಿತ್ತು. ಹೊಟ್ಟೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವುದಕ್ಕೂ ಗಾಂಧಿ ವಿಶೇಷ ಒತ್ತುಕೊಡುತ್ತಿದ್ದರು. ಹೊಟ್ಟೆಯಲ್ಲಿ ಸಂಗ್ರಹವಾಗಿದ್ದ ವಿಷವನ್ನು ನಾಶಗೊಳಿಸಲು ಅವರು ನಿಟ್ಟುಪವಾಸ, ಅರೆ ಉಪವಾಸ ಮತ್ತು ವಸ್ತಿಯ (ಎನೀಮಾ) ಬಳಕೆ ಮಾಡುವ ಸಲಹೆ ಅವರು ಕೊಡುತ್ತಿದ್ದರು. ತಲೆನೋವುಗಳು, ಅಜೀರ್ಣ, ಆಮಶಂಕೆ ಮತ್ತು ಮಲಬದ್ಧತೆಗಳೆಲ್ಲವೂ ಅತಿಯಾಗಿ ತಿನ್ನುವುದರಿಂದ ಹಾಗೂ ನಿಯಮಿತವಾಗಿ ದೈಹಿಕ ವ್ಯಾಯಾಮದ ಕೊರತೆಯಿಂದಾಗುತ್ತದೆ ಎಂದು ಅವರು ನಂಬಿದ್ದರು. ಅವರ ಪ್ರಕಾರ, ದೇಹವನ್ನು ಸುಸ್ಥಿತಿಯಲ್ಲಿಡುವಲ್ಲಿ ಉಪಯುಕ್ತ ಮಾರ್ಗ ಎಂದರೆ ದೀರ್ಘವಾದ ಬಿರುನಡಿಗೆ. ಸೆರೆಮನೆಗಳಲ್ಲಿಯೂ ಅವರು ಪ್ರತಿ ಬೆಳಿಗ್ಗೆ ಮತ್ತು ಸಾಯಂಕಾಲ, ಮೀಸಲಾಗಿದ್ದ ಸ್ಥಳದಲ್ಲಿ ತಮ್ಮ ನಡೆಯುವ ಅಭ್ಯಾಸವನ್ನು ಕಾಯ್ದುಕೊಂಡು ಬಂದರು. ಉಸಿರಾಟದ ವ್ಯಾಯಾಮಗಳನ್ನು ಸಹ ಸಮರ್ಥಿಸಿದರು. ಕೆಲವು ಸಮಯ ಮಾನಸಿಕ ಏರುಪೇರಿನ ಕಾರಣದಿಂದಲೇ ದೈಹಿಕ ದಾರ್ಢ್ಯತೆಯಲ್ಲಿಯೂ ಏರುಪೇರುಗಳಾಗುತ್ತವೆ ಎಂಬುದು ಅವರಿಗೆ ತಿಳಿದಿತ್ತು. ರಾಮನಾಮ ಎಂದರೆ ಅವರ ಪಾಲಿಗೆ ಎಲ್ಲಾ ಚಿಂತೆಗಳನ್ನು ಮರೆತು, ದೇವರ ಇಚ್ಛೆಯಲ್ಲಿ ಸಂಪೂರ್ಣ ವಿಶ್ವಾಸವಿಡುವುದು ಎಂದಾಗಿತ್ತು. ಎಲ್ಲಾ ದೋಷ-ಕೆಡುಕುಗಳಿಗೆ ಅದು ಪರಿಹಾರವಾಗಿತ್ತು.

ದಕ್ಷಿಣ ಆಫ್ರಿಕಾದಲ್ಲಿ ಅವರು ಒಬ್ಬ ಪಠಾಣನಿಂದ ಹಲ್ಲೆಗೊಳಗಾದಾಗ, ಗಾಯಗೊಂಡ ತಮ್ಮ ಬಾಯಿ, ಹಣೆ ಮತ್ತು ಪಕ್ಕೆಗಳ ಮೇಲೆ ಸ್ವಚ್ಛ ಮಣ್ಣಿನ ಪಟ್ಟಿ ಹಾಕಿಕೊಂಡರು. ಊತ ಒಡನೆಯೇ ಇಳಿಯಿತು.

ಪ್ಲೇಗ್, ಕರುಳಿನ ಜ್ವರ, ಮಲೇರಿಯಾ, ಅಜೀರ್ಣವ್ಯಾಧಿ, ಕಾಮಾಲೆ, ರಕ್ತದೊತ್ತಡ, ತೀವ್ರತರವಾದ ಸುಟ್ಟಗಾಯ, ಸಿಡುಬು ಮತ್ತು ಮೂಳೆಮುರಿತಗಳಿಗೂ ಸಹ ಅವರು ಮಣ್ಣಿನ ಪಟ್ಟಿಯನ್ನೇ ಹಾಕುತ್ತಿದ್ದರು. ಒಮ್ಮೆ ಪ್ರಯಾಣದಲ್ಲಿದ್ದಾಗ, ಅವರ ಮಗನ ತೋಳು ಮುರಿಯಿತು. ಗಾಂಧಿ ಅದರ ಮೇಲೆ ಮಣ್ಣಿನ ಪಟ್ಟಿಯ ಪ್ರಯೋಗ ಪ್ರಯತ್ನಿಸಿದರು. ಗಾಯ ಮಾಗಿತು. ಅನೇಕ ಪ್ರಸಂಗಗಳಲ್ಲಿ ತಮ್ಮ ಔಷಧೋಪಚಾರಗಳಲ್ಲಿ ಅವರು ಯಶಸ್ವಿಯಾದರು, ಆದರೂ ತಮ್ಮ ಪ್ರಯೋಗಗಳನ್ನು ವೇದವಾಕ್ಯದಂತೆ ಪರಿಗಣಿಸಬಾರದೆಂಬ ಎಚ್ಚರಿಕೆಯನ್ನೂ ಸಹ ಕೊಟ್ಟರು. ಇಂತಹ ಅಸಾಂಪ್ರದಾಯಿಕ ಪ್ರಯೋಗಗಳನ್ನು ಮಾಡುವುದರಲ್ಲಿ ಬಹಳ ಅಪಾಯವಿದೆ ಎಂಬುದೂ ಅವರಿಗೆ ತಿಳಿದಿತ್ತು. ತಮ್ಮ 'ಗೈಡ್ ಟು ಹೆಲ್ತ್' (ಆರೋಗ್ಯಕ್ಕೊಂದು ಮಾರ್ಗದರ್ಶನ) ಪುಸ್ತಕದಲ್ಲಿ ದೇಹವನ್ನು ಸುಸ್ಥಿತಿಯಲ್ಲಿಡುವ ಬಗ್ಗೆ ದಿಟ್ಟ ಅಭಿಪ್ರಾಯಗಳಿವೆ ಎಂಬುದನ್ನು ಅವರು ಒಪ್ಪಿಕೊಂಡರು. ಕೆಲವು ಪ್ರಸೂತಿ ಗೃಹಗಳು, ಆಸ್ಪತ್ರೆಗಳು ಮತ್ತು ಔಷಧಾಲಯಗಳನ್ನು ತೆಗೆಯುವ ಬಗ್ಗೆ ಅವರು ಅಷ್ಟಾಗಿ ಉತ್ಸುಕರಾಗಿರಲಿಲ್ಲ, ಆದರೆ ಜನರಿಗೆ ಸ್ವಚ್ಛತೆಯ ಬಗ್ಗೆ ಮತ್ತು ಆರೋಗ್ಯಕರವಾಗಿ ಬದುಕುವ ಬಗ್ಗೆ ಹೇಳಿಕೊಡುವುದರಲ್ಲಿ ಉತ್ಸಾಹವಿತ್ತು. ರೋಗಗಳನ್ನು ವಾಸಿ ಮಾಡುವುದಕ್ಕಿಂತ ರೋಗಪ್ರತಿಬಂಧಕ ಕ್ರಮಗಳನ್ನು ತೆಗೆದುಕೊಳ್ಳುವ ವಿಚಾರ ಅವರದಾಗಿತ್ತು.

ಅಲೋಪಥಿ ಔಷಧಿಗಳಿಗೆ ಬಹಿಷ್ಕಾರವೇನಿರಲಿಲ್ಲ. ಒಮ್ಮೆ ಸೇವಾಗ್ರಾಮದಲ್ಲಿ ಕಾಲರಾ ಸಾಂಕ್ರಾಮಿಕ ತಲೆದೋರಿದ್ದಾಗ, ಗ್ರಾಮಸ್ಥರು ಮತ್ತು ಆಶ್ರಮವಾಸಿಗಳು ಲಸಿಕೆಗಳನ್ನು ಹಾಕಿಸಿಕೊಳ್ಳಲು ಅನುವು ಮಾಡಿಕೊಟ್ಟರು. ಸೆರೆಮನೆಯಲ್ಲಿದ್ದಾಗ, ಅವರಿಗೇ ಅಪೆಂಡಿಸೈಟಿಸ್‌ಗಾಗಿ ಶಸ್ತ್ರಚಿಕಿತ್ಸೆಯಾಯಿತು. ಆಗ ಜನರಿಂದ ನಿರ್ದಯ ಪತ್ರಗಳ ಹೊಳೆಯೇ ಹರಿದು ಬಂತು. ತಮ್ಮ ತಪ್ಪನ್ನು ಗಾಂಧಿ ಒಪ್ಪಿಕೊಂಡರು.

ಪ್ರಕೃತಿ ಚಿಕಿತ್ಸೆಯಲ್ಲಿದ್ದ ಮಿತಿಗಳನ್ನು ಗಾಂಧಿ ಅರಿತಿದ್ದರು, ಆದರೂ ಅನೇಕ ಕಾರಣಗಳಿಂದಾಗಿ ಅದನ್ನೇ ಪ್ರತಿಪಾದಿಸುತ್ತಿದ್ದರು. ಅದು ಭಾರತದ ಬಡಜನತೆಯ ಕೈಗೆಟಕುವಂತಿತ್ತು. ಅದು ನೂರಕ್ಕೆ ನೂರರಷ್ಟು ಸ್ವದೇಶಿಯಾಗಿತ್ತು. 77ನೆಯ ವಯಸ್ಸಿನಲ್ಲಿ, ಇಮ್ಮಡಿಗೊಂಡ ಉತ್ಸಾಹದಲ್ಲಿ ಅವರು ಅದನ್ನು ಕೈಗೆತ್ತಿಕೊಂಡು, ಉರುಲಿ ಕಂಚನ್ ಎಂಬ ಹಳ್ಳಿಯಲ್ಲಿ ಒಂದು ಪ್ರಕೃತಿ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಿದರು. ಅಲ್ಲಿ ದುಬಾರಿ ಹಾಗೂ ಯಾಂತ್ರಿಕ ಸಲಕರಣೆಗಳಾವುವೂ ಇರಲಿಲ್ಲ. ಒಬ್ಬ ಮಾದರಿ ವೈದ್ಯ, ಔಷಧಿಗಳ ಬಗ್ಗೆ ಒಳ್ಳೆಯ ಜ್ಞಾನ ಹೊಂದಿರಬೇಕು ಹಾಗೂ ಇದನ್ನು ಜನರ ಜೊತೆ ಉಚಿತವಾಗಿ ಹಂಚಿಕೊಳ್ಳಬೇಕು ಎಂದು ಅವರು ನಂಬಿದ್ದರು. ವೈದ್ಯರು ತಮ್ಮ ರೋಗಿಗಳಿಂದ, ಅವರು ಬಡವರೇ ಆಗಿರಲಿ, ಶ್ರೀಮಂತರೇ ಆಗಿರಲಿ – ಏನನ್ನೂ ನಿರೀಕ್ಷಿಸದಂತಿರಲು ಅವರಿಗೆ ವಾರ್ಷಿಕ ಭತ್ಯೆ ನಿಗದಿ ಮಾಡಬೇಕೆಂದು ಅವರು ಬಯಸಿದ್ದರು. ಕೆಲವು ದಿನಗಳವರೆಗೆ ಅವರು ರೋಗಿಗಳನ್ನು ಪರೀಕ್ಷಿಸಿದರು, ಔಷಧಿಚೀಟಿಗಳನ್ನು ಬರೆದುಕೊಟ್ಟರು. ರಾಜುವಿಗೆ ಒಂದು ಚೀಟಿ:

"ಸೂರ್ಯಸ್ನಾನ, ಬೆನ್ನುಹುರಿಸ್ನಾನ, ಉಜ್ಜುಸ್ನಾನ. ಹಣ್ಣಿನ ರಸ ಮತ್ತು ಮಜ್ಜಿಗೆ, ಹಾಲು ಕೂಡದು. ಮಜ್ಜಿಗೆ ಜೀರ್ಣವಾಗದಿದ್ದಲ್ಲಿ, ಹಣ್ಣಿನ ರಸ ಮತ್ತು ಕುದಿಸಿದ ನೀರು ಉಪಯೋಗಿಸಬೇಕು." ಪಾರ್ವತಿಗೆ ಮತ್ತೊಂದು: "ಬರೀ ಮೋಸಂಬಿ ರಸ. ಬೆನ್ನುಹುರಿಸ್ನಾನ, ಉಜ್ಜು ಸ್ನಾನ, ಹೊಟ್ಟೆಯ ಮೇಲೆ ಮಣ್ಣಿನ ಪಟ್ಟಿ. ದಿನಾ ತಪ್ಪದೆ ಸೂರ್ಯಸ್ನಾನ. ಇಷ್ಟನ್ನು ಮಾಡಿದರೆ, ಆಕೆಗೆ ಗುಣವಾಗುತ್ತದೆ. ರಾಮನಾಮದ ಮಹಿಮೆಯನ್ನು ಆಕೆಗೆ ವಿವರಿಸಿ."

ಗಾಂಧಿಯ ಆಶ್ರಮದಲ್ಲಿ ಸಾಮಾನ್ಯ ಹಾಸ್ಯೋಕ್ತಿ ಏನಿತ್ತೆಂದರೆ: "ಬಾಪೂ ನಿಮ್ಮ ಹತ್ತಿರ ಇರಬೇಕು ಎಂದರೆ, ನೀವು ಕಾಯಿಲೆ ಬೀಳಬೇಕು." ಪ್ರತಿಯೊಬ್ಬ ಅಸ್ವಸ್ಥ ವ್ಯಕ್ತಿಯ ಅತಿ ಸೂಕ್ಷ್ಮ ವಿವರಗಳು ಗಾಂಧಿಗೆ ತಿಳಿದಿರುತ್ತಿತ್ತು. ತಮ್ಮ ದೈನಂದಿನ ವಾಕಿಂಗ್‌ನಿಂದ ವಾಪಸು ಬರುವಾಗ ಅವರು ಪ್ರತಿಯೊಬ್ಬ ರೋಗಿಯನ್ನು ಭೇಟಿ ಮಾಡುತ್ತಿದ್ದರು. ಅವರಿಗೆ ಆಹಾರ ಯಾವ ರೀತಿ ತಯಾರಿಸಬೇಕು, ಸ್ಟಾಂಜಿನಿಂದ ಮೈ ಹೇಗೆ ಒರೆಸಬೇಕು, ಮಾಲೀಶ್ ಹೇಗೆ ಮಾಡಬೇಕು ಮತ್ತು ವಸ್ತಿಯಲ್ಲಿ ಎಷ್ಟು ಕಾಳು ಉಪ್ಪು, ಅಥವಾ ಸೋಡಾ ಹಾಕಬೇಕು ಎಂಬ ಬಗ್ಗೆ ಸವಿವರವಾದ ಸೂಚನೆಗಳನ್ನು ಕೊಡುತ್ತಿದ್ದರು. ಸೇವಾಗ್ರಾಮದಲ್ಲಿ ರೋಗಿಗಳಿಗಾಗಿ

ಒಂದು ಗಂಟೆ ಕಾಲವನ್ನು ಮೀಸಲಾಗಿಡಲು ನಿರ್ಧರಿಸಿದಾಗ, ಸುತ್ತಮುತ್ತಲಿನ ಹಳ್ಳಿಗಳಿಂದ ರೋಗಪೀಡಿತ ಜನಪ್ರವಾಹ ಹರಿದು ಬಂತು. ಅವರ ಸಲಹೆ: ತರಕಾರಿ ತಿನ್ನಿ, ಮಜ್ಜಿಗೆ ಕುಡಿಯಿರಿ ಮತ್ತು ಮಣ್ಣಿನ ಪಟ್ಟಿ ಹಾಕಿಕೊಳ್ಳಿ. ಕೆಲವೊಮ್ಮೆ ಅವರೇ ರೋಗಿಯ ಮಲಪರೀಕ್ಷೆ ಮಾಡುತ್ತಿದ್ದರು. ರೋಗಿಗೆ ನಿಶ್ಶಕ್ತಿ ಇಲ್ಲದಿದ್ದಲ್ಲಿ, ಅವರನ್ನು ಬಯಲುಹವೆಯಲ್ಲಿ ಇಡಲಾಗುತ್ತಿತ್ತು. ರೋಗಪ್ರಕರಣವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದ ನಂತರವೇ ಅವರು ಸಮಸ್ಯೆಗೆ ಪರಿಹಾರ ಸೂಚಿಸುತ್ತಿದ್ದರು. ಒಬ್ಬ ಸಹ ಕೆಲಸಗಾರ ನರ ನಿಶ್ಶಕ್ತಿಯ ಕಾರಣದಿಂದ ರಕ್ತದೊತ್ತಡ ಏರಿ ಬಳಲುತ್ತಿದ್ದ. ಅದರ ಹಿಂದಿದ್ದ ಕಾರಣವನ್ನು ತಿಳಿಯಲು ಗಾಂಧಿ ಅವನೊಂದಿಗೆ ಒಂದು ಗಂಭೀರ ಚರ್ಚೆ ನಡೆಸಿದರು. ಚರ್ಚೆಗೆ ಮುಂಚೆ ಮತ್ತು ನಂತರ ಆತನ ರಕ್ತದೊತ್ತಡವನ್ನು ಪರೀಕ್ಷಿಸಿದರು. ಮರುದಿನ, ಆ ರೋಗಿಗೆ ಒಂದು ಮರದ ಹಲಗೆಯನ್ನು ಕೊಟ್ಟು, ಅದರ ಮೇಲೆ ಎಳೆದಿವ್ಯ ಗೆರೆಯ ಮೇಲೆ ಗರಗಸದಿಂದ ಕೊಯ್ಯುವಂತೆ ಹೇಳಿದರು. ಕೊಯ್ಯುವ ಮುಂಚೆ ಮತ್ತು ನಂತರ ಪರೀಕ್ಷಿಸಿದರು. ಮೂರನೆಯ ದಿನ, ಆಶ್ರಮದ ಮೈದಾನದಲ್ಲಿ ಆತ ಒಂದು ಫರ್ಲಾಂಗ್ ದೂರ ಓಡುವ ಮುಂಚೆ ಮತ್ತು ನಂತರ ಪರೀಕ್ಷಿಸಲಾಯಿತು. ಕೊನೆಯ ದಿನ, ಅವನ ರಕ್ತದೊತ್ತಡ ಇಳಿದಿತ್ತು. ಹಿಂದಿನ ಎರಡು ದಿನಗಳು, ಒತ್ತಡದಲ್ಲಿ ಏರಿಕೆ ಇತ್ತು. ಆತನಿಗೆ ಗಾಂಧಿ ನೀಡಿದ ಸಲಹೆ ಏನೆಂದರೆ: "ನಿಮಗೆ ರಕ್ತದೊತ್ತಡ ಇದೆ ಎಂದನ್ನಿಸಿದಾಗಲೆಲ್ಲಾ, ನಡೆದು ಬಿಡಿ." ಎಷ್ಟೇ ಮಹತ್ವದ ಕೆಲಸಲ್ಲಿದ್ದರೂ ಅಥವಾ ಮಾತುಕತೆಯಲ್ಲಿದ್ದರೂ, ಯಾರೇ ಆಗಲಿ, ಆಹಾರದ, ಸ್ನಾನದ ಅಥವಾ ರೋಗಿಗಳ ಔಷಧೋಪಚಾರಗಳ ಬಗ್ಗೆ ಗಾಂಧಿಯವರ ಸಲಹೆ ಕೇಳುವುದಿದ್ದರೆ, ಮಧ್ಯೆ ಪ್ರವೇಶಿಸಿ ಕೇಳಬಹುದಿತ್ತು. ಅನೇಕ ಮಂದಿ ಸುಪರಿಚಿತ ಮುಖಂಡರು ಅವರ ಕಟ್ಟಾ ನಿಗಾದಲ್ಲಿರುತ್ತಿದರು; ಅವರು ಗಾಂಧಿಯವರ ಆದೇಶಗಳನ್ನು ಉಲ್ಲಂಘಿಸಿಬಿಟ್ಟರೆ... ? ಸೆರೆಮನೆಯಲ್ಲಿ ಸಹ, ತಮ್ಮ ಸಹ ಕೆಲಸಗಾರರನ್ನು ಉಪಚರಿಸುವ ಸಲುವಾಗಿ ಒಪ್ಪಿಗೆ ಪಡೆದುಕೊಂಡಿದ್ದರು.

ಅಸ್ತಮಾದಿಂದ ನರಳುತ್ತಿದ್ದ ಒಬ್ಬ ಸಹ ಕೆಲಸಗಾರ ಅವರ ಸಹಾಯ ಕೇಳಿದ. ಗಾಂಧಿ ಧೂಮಪಾನ ನಿಲ್ಲಿಸುವಂತೆ ಅವನಿಗೆ ಹೇಳಿದರು ಹಾಗೂ ಆತನೂ ಒಪ್ಪಿದ. ಮೂರು ದಿನಗಳು ಕಳೆದವು. ಆದರೆ ಯಾವುದೇ ಸುಧಾರಣೆ ಇರಲಿಲ್ಲ. ದಿನಕ್ಕೆ ಒಂದೆರಡು ಸಿಗರೇಟುಗಳನ್ನು ರಹಸ್ಯವಾಗಿಯಾದರೂ ಸೇದದಿರಲು ಅವನಿಂದಾಗುತ್ತಿರಲಿಲ್ಲ. ಒಂದು ರಾತ್ರಿ ಸಿಗರೇಟು ಹಚ್ಚಲು ಅವನು ಕಡ್ಡಿ ಗೀರಿದಾಗ ಒಂದು ಟಾರ್ಚಿನ ಬೆಳಕು ಅವನ ಮುಖದ ಮೇಲೆ ಬಿತ್ತು. ಗಾಂಧಿ ತನ್ನ ಎದುರಿಗೆ ನಿಂತಿರುವುದನ್ನು ಅವನು ನೋಡಿದ. ಗಾಂಧಿಯ ಕ್ಷಮೆಯನ್ನು ಯಾಚಿಸಿದ ಅವನು, ಧೂಮಪಾನವನ್ನು ಬಿಟ್ಟ. ಅಸ್ತಮಾ ಸಹ ಅವನನ್ನು ಬಿಟ್ಟಿತು. ಬಾದ್‌ಶಹಾ ಖಾನ್‌ಗೆ ನೆತ್ತಿಯ ಚರ್ಮದ ತೊಂದರೆ ವಿನೋ ಇತ್ತು. ಗಾಂಧಿ ಒಂದು ಮನೆ ಔಷಧವನ್ನು ಹೇಳಿದರು. ಆಳೆತ್ತರದ ಆ ಪಠಾಣ ಮುಖಂಡನಿಗೆ ರೋಗಕ್ಕಿಂತ ಆ ಔಷಧಿಯೇ ಹೆಚ್ಚು ನೋವುಂಟುಮಾಡಿತು. ಒಮ್ಮೆ ವಲ್ಲಭ್‌ಭಾಯ್ ಅವರ ಕಾಲಿಗೆ ಒಂದು ಮುಳ್ಳು ಹೊಕ್ಕಿತು. ಆಗ ಗಾಂಧಿ ಗುರುತು ಮಾಡಲು ಬಳಸುವ ಬಿಬ್ಬ ಎಂಬ ಸುಟ್ಟ ಬೀಜವನ್ನು ಅಯೋಡಿನ್‌ಗೆ ಬದಲಾಗಿ ಉಪಯೋಗಿಸಿದರು. ವಲ್ಲಭ್ ಭಾಯ್ ಹೇಳಿದರು: "ಈ ನೋವು ನಿವಾರಕಕ್ಕಿಂತ ಮುಳ್ಳಿನ ನೋವೇ ವಾಸಿ."

ದಾಯಿ

ಕೆಲವು ಕಾಂಗ್ರೆಸ್ ಮುಖಂಡರು ಗಾಂಧಿಯವರ ಸಲಹೆ ಪಡೆಯಲು ಸೇವಾಗ್ರಾಮಕ್ಕೆ ಹೋದರು. ಜ್ವರದಿಂದ ನರಳುತ್ತಿದ್ದ ಇಬ್ಬರು ಆಶ್ರಮವಾಸಿಗಳಿಗೆ ಒದ್ದೆಬಟ್ಟೆಯ ಉಪಚಾರ ಮತ್ತು ಬೆನ್ನುಹುರಿಸ್ನಾನಗಳನ್ನು ಕೊಡುವುದರಲ್ಲಿ ಗಾಂಧಿ ಮಗ್ನರಾಗಿದ್ದುದನ್ನು ಅವರು ಕಂಡರು. ಅವರಲೊಬ್ಬರು ಗಾಂಧಿಯನ್ನು ಕೇಳಿದರು: "ಇವೆಲ್ಲವನ್ನೂ ನೀವೇ ಮಾಡಬೇಕೆ ?" ಗಾಂಧಿ ಉತ್ತರಿಸಿದರು: "ಇನ್ಯಾರು ಮಾಡಬೇಕು? ನೀವು ಹಳ್ಳಿಗೇನಾದರೂ ಹೋದಲ್ಲಿ, 600 ಮಂದಿಯ ಪೈಕಿ 300 ಮಂದಿ ಜಡ್ಡಾಗಿರುವುದನ್ನು ನೀವು ನೋಡುತ್ತೀರಿ." ಚಿಕ್ಕ ಹುಡುಗನಾಗಿದ್ದಾಗಿನಿಂದ ಆರೈಕೆ ಮಾಡುವುದೆಂದರೆ ಗಾಂಧಿಗೆ ಅಪಾರ ಆಸೆ. ಶಾಲೆ ಮುಗಿದ ಕೂಡಲೆ ಅಸ್ವಸ್ಥರಾಗಿದ್ದ ತಂದೆಯ ಆರೈಕೆ ಮಾಡಲು ಮನೆಗೆ ಧಾವಿಸುತ್ತಿದ್ದರು. ತಮ್ಮ ತಂದೆಗೆ ಔಷಧಿಗಳನ್ನು ಕೊಡುತ್ತಿದ್ದರು, ಗಾಯಗಳನ್ನು ತೊಳೆದು ಔಷಧಿಪಟ್ಟಿ ಹಚ್ಚುತ್ತಿದ್ದರು ಹಾಗೂ ವೈದ್ಯರು ಸೂಚಿಸಿದ ಔಷಧಿಗಳನ್ನು ತಯಾರಿಸುತ್ತಿದ್ದರು. ಅವರು ಬೆಳೆಯುತ್ತಾ ಹೋದಂತೆ, ರೋಗಿಗಳಿಗೆ ಸೇವೆ ಮಾಡಬೇಕೆನ್ನುವ ಅಭಿಲಾಷೆಯು ಸಹ ದೃಢವಾಗುತ್ತಾ ಹೋಯಿತು. ದಕ್ಷಿಣ ಆಫ್ರಿಕಾದ ಧರ್ಮದ ಆಸ್ಪತ್ರೆಗಳಲ್ಲಿ ರೋಗಿಗಳ ಆರೈಕೆ ಮಾಡಲು ದಿನಕ್ಕೆ ಎರಡು ಗಂಟೆಗಳ ಕಾಲ ಮೀಸಲಿಡಲು ಅವರು ನಿರ್ಧರಿಸಿದರು. ಔಷಧಿಚೀಟಿಗಳನ್ನು ಓದಿ, ಔಷಧಿಗಳನ್ನು ವಿತರಿಸಲು ಅಲ್ಲಿ ಅವರು ಕಲಿತರು. ಈ ಕೆಲಸಕ್ಕಾಗಿ ಸಮಯ ವ್ಯಯಿಸಲು ಹಾಗೂ ಅವರಿಗೆ ಬಂದಂತಹ ಎಲ್ಲಾ ಕಾನೂನಿನ ಕೆಲಸಗಳಿಗೆ ಗಮನ ಕೊಡಲು ಅವರಿಂದ ಆಗುತ್ತಿರಲಿಲ್ಲವಾದ ಕಾರಣ, ಬಹಳಷ್ಟು ಕಾನೂನಿನ ಕೇಸ್‌ಗಳನ್ನು ತಮ್ಮ ಮುಸಲ್ಮಾನ ಗೆಳೆಯರೊಬ್ಬರಿಗೆ ವಹಿಸುತ್ತಿದ್ದರು.

1896ರಲ್ಲಿ, ಸ್ವಲ್ಪ ಸಮಯಕ್ಕಾಗಿ ಗಾಂಧಿ ಭಾರತಕ್ಕೆ ಬಂದಾಗ, ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿದ್ದ ಭಾರತೀಯರ ದುರ್ಅವಸ್ಥೆಯ ಬಗ್ಗೆ ಭಾರತದಲ್ಲಿನ ಮುಖಂಡರಿಗೆ ತಿಳಿಸಿ ಹೇಳುವುದರಲ್ಲಿ ಮಗ್ನರಾಗಿದ್ದರು. ಅವರ ಸಮಯವೆಲ್ಲಾ ಹಸಿರು ಕರಪತ್ರಗಳನ್ನು ಬರೆದು ಹಂಚುವುದರಲ್ಲೇ ಕಳೆದುಹೋಯಿತು. ಆದರೂ, ತನ್ನ ಭಾವನಿಗೆ ತೀವ್ರ ಅನಾರೋಗ್ಯ ಉಂಟಾಗಿದೆ ಹಾಗೂ ತನ್ನ ಸೋದರಿಗೆ ದಾದಿಯೊಬ್ಬಳನ್ನು ನೇಮಕ ಮಾಡಿಕೊಳ್ಳುವ ಶಕ್ತಿಯಿಲ್ಲ ಎಂಬುದು ಗೊತ್ತಾದ ತಕ್ಷಣವೇ, ರೋಗಿಯನ್ನು ಮನೆಗೆ ಕರೆತಂದು ತನ್ನ ಕೋಣೆಯಲ್ಲಿಯೇ ಇಟ್ಟುಕೊಂಡು, ರಾತ್ರಿ-ಹಗಲು ಆರೈಕೆ ಮಾಡಿದರು.

ಸುಮಾರು ಒಂದು ತಿಂಗಳ ಕಾಲ, ಗಾಂಧಿ ತೋಳು ಮುರಿದುಕೊಂಡಿದ್ದ ತಮ್ಮ ಎಂಟು ವರ್ಷದ ಮಗನ ಗಾಯಕ್ಕೆ ಮುಲಾಮುಪಟ್ಟಿ ಹಚ್ಚಿದರು. ಅವರು ವೈದ್ಯರು ಹಾಕಿದ್ದ ಪಟ್ಟಿಯನ್ನು ಬಿಚ್ಚಿದರು. ಗಾಯವನ್ನು ತೊಳೆದು, ಸ್ವಚ್ಛವಾದ ಮಣ್ಣಿನ ಪಟ್ಟಿಯನ್ನು ಹಾಕಿ, ಗುಣ ಕಾಣುವವರೆಗೂ ತೋಳಿಗೆ ಪಟ್ಟಿ ಕಟ್ಟಿದರು. ಹತ್ತು ವರ್ಷದ ಮತ್ತೊಬ್ಬ ಮಗನಿಗೆ ಟೈಫಾಯ್ಡ್ ಬಂದಿತು. 40 ದಿನಗಳ ಕಾಲ ಗಾಂಧಿ ಅವನ ಆರೈಕೆ ಮಾಡಿದರು. ಮಗ ದಯನೀಯವಾಗಿ ಅಳುತ್ತಿದ್ದರೂ ಕೂಡ, ಅವರು ಅವನನ್ನು ಒದ್ದೆಬಟ್ಟೆಯಲ್ಲಿ ಸುತ್ತಿ, ಐಸ ಕಂಬಳಿಗಳ ನಡುವೆ ಇಟ್ಟರು. ತಮ್ಮ ರೋಗಿಗಳ ಬಗ್ಗೆ ಅವರು ಅಪಾರ ಎಚ್ಚರಿಕೆ ವಹಿಸುತ್ತಿದ್ದರು, ಕೋಮಲ ಪ್ರೀತಿ ತೋರುತ್ತಿದ್ದರು. ಆದರೆ ಔಷಧೋಪಚಾರದಲ್ಲಿ ಯಾವುದೇ ತಪ್ಪು/ನ್ಯೂನತೆ ಸಂಭವಿಸಲು ಬಿಡುತ್ತಿರಲಿಲ್ಲ. ಮತ್ತೊಂದು ಟೈಫಾಯ್ಡ್ ಪ್ರಕರಣದಲ್ಲಿ, ಹದಿನೈದು ದಿನಗಳ ಕಾಲ ಗಾಂಧಿ ಆ ಮಗುವಿಗೆ ಮಣ್ಣಿನ ಪಟ್ಟಿ ಹಾಕುತ್ತಿದ್ದರು ಮತ್ತು ಬೆನ್ನುಹುರಿಸ್ನಾನ ಮಾಡಿಸುತ್ತಿದ್ದರು. ಪ್ರತಿ ಒಂದೂವರೆ ಗಂಟೆಗೊಮ್ಮೆ, ಮಗುವಿನ ಹೊಟ್ಟೆಯ ಮೇಲೆ ಒಂದು ಇಂಚು ದಪ್ಪದ ಮಣ್ಣಿನ ಹೊಸ ಹೊಸ ಪಟ್ಟಿಗಳನ್ನು ಹಾಕುತ್ತಿದ್ದರು. ಜ್ವರ ಬಿಟ್ಟ ನಂತರ, ಕಳಿತ ಬಾಳೆಹಣ್ಣುಗಳನ್ನು ಮಗುವಿಗೆ ತಿನ್ನಿಸಲಾಯಿತು. ಗಾಂಧಿಯವರೇ ಸ್ವತಃ 15 ನಿಮಿಷಗಳ ಕಾಲ ಬಾಳೆಹಣ್ಣುಗಳನ್ನು ಕಿವುಚಿ, ಅವನ್ನು ತಿನ್ನುವಂತೆ ಮಗುವಿನ ಮನ ಒಲಿಸಿದರು. ಮಗುವಿನ ತಾಯಿ ಹೆಚ್ಚಾಗಿ ತಿನ್ನಿಸಿಬಿಟ್ಟಾಳೆಂಬ ಕಾರಣಕ್ಕಾಗಿ, ಆ ಕೆಲಸವನ್ನು ಆ ತಾಯಿಗೂ ಅವರು ವಹಿಸಲಿಲ್ಲ. ರೋಗಿಗಳನ್ನು ಉಪಚರಿಸುವಾಗ, ರೋಗಿಗಳ ಮನಸ್ಸನ್ನು ಶಾಂತವಾಗಿಡಲು ಗಾಂಧಿ ಪ್ರಯತ್ನಿಸುತ್ತಿದ್ದರು. ಯಾವುದೇ ರೀತಿಯ ಚಟಗಳಿಗೆ ಅವರು ವಿರುದ್ಧವಾಗಿದ್ದರು. ಆದರೆ ಒಮ್ಮೆ ಒಬ್ಬ ದಕ್ಷಿಣ ಭಾರತೀಯ ಹುಡುಗ ಹುಷಾರಿಲ್ಲದಿದ್ದಾಗ, ಒಂದು ಲೋಟ ಕಾಫಿಗಾಗಿ ಚಡಪಡಿಸುತ್ತಿದ್ದ. ಆಗ ಅವರೇ ಖುದ್ದಾಗಿ ಕಾಫಿ ತಯಾರಿಸಿ ಅವನಿಗೆ ಕುಡಿಸಿದರು.

ಅವರು ರೋಗಿಗಳ ಮೈಯನ್ನು ಸ್ಪಂಜಿನಿಂದ ಒರೆಸುತ್ತಿದ್ದರು, ವಸ್ತಿ ಕೊಟ್ಟು ಸ್ನಾನ ಮಾಡಿಸುತ್ತಿದ್ದರು ಮತ್ತು ಮಣ್ಣಿನ ಪಟ್ಟಿಗಳನ್ನು ಹಾಕುತ್ತಿದ್ದರು. ರೋಗಿಗಳಿಗೆ ಅವರು ದಾಯಿಗಿಂತಲೂ ಮಿಗಿಲಾಗಿದ್ದರು. ಯಾವುದೇ ಸೋಂಕು ತಗುಲೀತೆಂಬ ಭಯವಿರಲಿಲ್ಲ ಅವರಿಗೆ. ಒಮ್ಮೆ ಒಬ್ಬ ಕುಷ್ಠರೋಗಿ ಭಿಕ್ಷುಕ ಅವರಲ್ಲಿಗೆ ಬಂದ. ಗಾಂಧಿ ಕೆಲವು ದಿನಗಳ ಕಾಲ ಅವನಿಗೆ ಆಶ್ರಯ ನೀಡಿದರು, ಅವನ ಗಾಯಗಳನ್ನು ತೊಳೆದರು; ಆಮೇಲೆ ಅವನನ್ನು ಒಂದು ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಒಬ್ಬ ಸಹ ಖೈದಿಯಲ್ಲಿ ಕುಷ್ಠರೋಗದ ಚಿಹ್ನೆಗಳು ಕಂಡುಬಂದವು. ಅವನನ್ನು ದಿನಾ ಭೇಟಿ ಮಾಡಲು ಅವರು ಪರವಾನಗಿ ಪಡೆದುಕೊಂಡರು. ನಂತರ ಹಲವಾರು ವರ್ಷಗಳವರೆಗೆ ಅವನು ಸೇವಾಗ್ರಾಮದ ಆಶ್ರಯದಲ್ಲಿದ್ದ. ಗಾಂಧಿ ದಿನವೂ ಅವನ ಗಾಯಗಳಿಗೆ ಮುಲಾಮುಪಟ್ಟಿ ಹಾಕುತ್ತಿದ್ದರು.

ದಾಯಿಯಾಗಿ ಸೇವೆ ಸಲ್ಲಿಸಲು ಎರಡು ಚಾರಿತ್ರಿಕ ಸಂದರ್ಭಗಳಲ್ಲಿ ಗಾಂಧಿಯವರಿಗೆ ಮಹತ್ತರ ಅವಕಾಶ ಒದಗಿಬಂತು. ಒಂದು, ಬೋಯರ್ ಯುದ್ಧ ಮತ್ತು ಇನ್ನೊಂದು ಜುಲು ದಂಗೆ. ಎರಡೂ ಸಂದರ್ಭಗಳಲ್ಲಿ, ಅಸ್ವಸ್ಥರನ್ನು ಆರೈಕೆ ಮಾಡುತ್ತಿದ್ದ ಹಾಗೂ ಗಾಯಗೊಂಡವರನ್ನು ಸಾಗಿಸುತ್ತಿದ್ದ 'ಇಂಡಿಯನ್ ಅಂಬ್ಯುಲೆನ್ಸ್ ಕಾರ್ಪ್ಸ್' (ಭಾರತೀಯ ಅಂಬ್ಯುಲೆನ್ಸ್ ಪಡೆ) ಅನ್ನು ಅವರು ರಚಿಸಿದರು. ಗಾಯಾಳುಗಳನ್ನು 'ಕೈಮಂಚದ' ಮೇಲೆ ಮಲಗಿಸಿ ಮೈಲು ಮೈಲು ದೂರ ನಡೆದ ಅವರು ತಾವು ದಾಯಿಗಳ ತಂಡದ ಸಮರ್ಥ ನಾಯಕ ಎಂದು ನಿರೂಪಿಸಿದರು. ಹೊಡೆತ ತಿಂದ ಜುಲು ಜನರ ಆರೈಕೆ ಮಾಡಲು 'ವೈಟ್ ಸಿಸ್ಟರ್ಸ್ ಆಫ್ ಮರ್ಸಿ' (ಒಂದು ದಾಯಿ ಸಮುದಾಯ) ನಿರಾಕರಿಸಿದಾಗ, ಅವರನ್ನು ನೋಡಿಕೊಳ್ಳುವವರು ಯಾರೂ ಇರಲಿಲ್ಲ. ಅಂತಹ ಸಮಯದಲ್ಲಿ, ಅವರ ಆರೈಕೆ ಮಾಡುವುದು ಗಾಂಧಿಗೆ ಸಂತೋಷಕರವಾಗಿತ್ತು. ಅವರ ಗಾಯಗಳು ಕೀವುಗಟ್ಟಿದ್ದವು. ಗಾಂಧಿ ಬಿಳಿಯ ಸೈನಿಕರಿಗೂ ಔಷಧಿಗಳನ್ನಿತ್ತರು. ಅವರ ಈ ಸೇವೆಗಾಗಿ ಅವರಿಗೆ ಜುಲು ಯುದ್ಧ ಪದಕ ಮತ್ತು ಕೈಸರ್-ಎ-ಹಿಂದ್ ಚಿನ್ನದ ಪದಕಗಳು ಲಭಿಸಿದವು.

ದಕ್ಷಿಣ ಆಫ್ರಿಕಾದ ಚಿನ್ನದ ಗಣಿಯಲ್ಲಿ ಪ್ಲೇಗ್ ಕಾಣಿಸಿಕೊಂಡಾಗ, ಬಹಳಷ್ಟು ಮಂದಿ ಭಾರತೀಯ ಕಾರ್ಮಿಕರು ಕಾಯಿಲೆ ಬಿದ್ದರು. ಆ ಸುದ್ದಿ ಕೇಳಿದ ಒಡನೆಯೇ ಗಾಂಧಿ ನಾಲ್ವರು ಸಹಾಯಕರೊಂದಿಗೆ ಅಲ್ಲಿಗೆ ಹೋದರು. ಅಲ್ಲಿ ಹತ್ತಿರದಲ್ಲೆಲ್ಲೂ ಆಸ್ಪತ್ರೆಯಿರಲಿಲ್ಲ.

ಒಂದು ಖಾಲಿ ಉಗ್ರಾಣದ ಬೀಗ ಮುರಿಯಲಾಯಿತು; ಅಲ್ಲಿ ಕೆಲವು ಹಾಸಿಗೆಗಳನ್ನು ಇರಿಸಲಾಯಿತು ಹಾಗೂ 23 ಮಂದಿ ರೋಗಿಗಳನ್ನು ಅಲ್ಲಿ ಮಲಗಿಸಲಾಯಿತು. ಅಲ್ಲಿನ ನಗರಸಭೆ ಗಾಂಧಿಯವರ ಈ ತುರ್ತುಕ್ರಮಕ್ಕಾಗಿ ಅವರಿಗೆ ಧನ್ಯವಾದ ಅರ್ಪಿಸಿತು ಹಾಗೂ ಅವರಿಗೆ ಸೋಂಕುನಿವಾರಕಗಳನ್ನು ಪೂರೈಕೆ ಮಾಡಿತಲ್ಲದೆ, ಓರ್ವ ದಾಯಿಯನ್ನೂ ಕಳುಹಿಸಿತು. ಆಕೆ ರೋಗನಿರೋಧಕವಾಗಿ ಬ್ರಾಂಡಿಯ ಒಳ್ಳೆಯ ಸಂಗ್ರಹ ಹೊಂದಿದ್ದಳು. ಗಾಂಧಿಗೆ ಅದರಲ್ಲಿ ವಿಶ್ವಾಸವಿರಲಿಲ್ಲ. ಅವರು ವೈದ್ಯಕೀಯ ನೆರವು ಒದಗಿಸುತ್ತಿದ್ದರು. ರೋಗಿಗಳ ಹಾಸಿಗೆಗಳನ್ನು ಸ್ವಚ್ಛಗೊಳಿಸುತ್ತಿದ್ದರು, ರಾತ್ರಿಯೆಲ್ಲಾ ರೋಗಿಗಳ ಪಕ್ಕದಲ್ಲೇ ಕುಳಿತುಕೊಳ್ಳುತ್ತಿದ್ದರು ಹಾಗೂ ಅವರಲ್ಲಿ ಉತ್ಸಾಹ ತುಂಬುತ್ತಿದ್ದರು. ಅಲ್ಲಿನ ಕರ್ತವ್ಯನಿರತ ವೈದ್ಯರ ಒಪ್ಪಿಗೆ ಪಡೆದು, ಮೂರು ರೋಗಿಗಳಿಗೆ ಮಣ್ಣಿನ ಪಟ್ಟಿ ಹಾಕುತ್ತಿದ್ದರು. ಅವರಲ್ಲಿ ಇಬ್ಬರು ಬದುಕುಳಿದರು. ಇತರ ಎಲ್ಲರೂ, ದಾಯಿಯೂ ಸೇರಿದಂತೆ ರೋಗಿಗಳ್ಯಾರೂ ಉಳಿಯಲಿಲ್ಲ. ಸೇವೆ ಸಲ್ಲಿಸಲು ಸುಸ್ಥಿತಿಯಲ್ಲಿರಬೇಕಾದರೆ, ರೋಗಿಯ ಅವಶ್ಯಕತೆಗಳನ್ನು ಗಮನಿಸುವುದಷ್ಟೇ ಅಲ್ಲದೆ ತನ್ನನ್ನು ತಾನು ನೋಡಿಕೊಳ್ಳಬೇಕಾದದ್ದು ಸಹ ಓರ್ವ ದಾಯಿಯ ಕರ್ತವ್ಯ ಎಂದು ಅವರು ಪರಿಗಣಿಸಿದರು. ಈ ಬಗ್ಗೆ ಅವರು ಬಹಳ ಎಚ್ಚರಿಕೆ ವಹಿಸುತ್ತಿದ್ದರು ಹಾಗೂ ಎಂದಿಗೂ ಹೆಚ್ಚು ಕೆಲಸ ಮಾಡಿದಾಗ ಹೊಟ್ಟೆ ತುಂಬ ಉಣ್ಣುತ್ತಿರಲಿಲ್ಲ. ವಸ್ತಿ ಕೊಡುವುದು, ಬೆಣ್ಣುಹುರಿಸ್ನಾನ ಮತ್ತು ಕುಳಿತು ಮಾಡುವ ಸ್ನಾನ ಮಾಡಿಸುವುದು, ಎಣ್ಣೆಮಾಲೀಸು, ಮಣ್ಣಿನ ಪಟ್ಟಿ ಹಾಕುವುದು ಮತ್ತು ಒದ್ದೆಬಟ್ಟೆಯಲ್ಲಿ ಸುತ್ತುವುದು – ಇವುಗಳಲ್ಲಿ ಗಾಂಧಿ ಪರಿಣತರಾಗಿದ್ದರು. ತಮ್ಮ ರಕ್ತದೊತ್ತಡವನ್ನು ಕಡಿಮೆ ಮಾಡಲು ಅವರು ಆಗಾಗ್ಗೆ ತಲೆಯ ಮೇಲೆ ಮಣ್ಣಿನ ಪಟ್ಟಿ ಹಾಕಿಕೊಳ್ಳುತ್ತಿದ್ದರು. ಒಮ್ಮೆ ಹಣೆಯ ಮೇಲೆ ಮಣ್ಣಿನ ಪಟ್ಟಿ ಹಾಕಿಕೊಂಡು, ಜಪಾನೀ ಕವಿ ಯೋನೆ ನೊಗುಚಿಗೆ ಅವರು ಹೇಳಿದರು: "ನಾನು ಹುಟ್ಟಿ ಬಂದದ್ದು ಭಾರತೀಯ ಮಣ್ಣಿನಿಂದ. ಅದಕ್ಕಾಗಿಯೇ ನನಗೆ ಭಾರತೀಯ ನೆಲದ್ದೇ ಕಿರೀಟ."

ರೋಗಿಯ ಪರಿಸ್ಥಿತಿ ಹದಗೆಟ್ಟಾಗ ಬಹಳ ಅಪರೂಪಕ್ಕಷ್ಟೆ ಆತಂಕಗೊಳ್ಳುತ್ತಿದ್ದ ಅವರು, ಅತ್ಯಂತ ಶಾಂತರೀತಿಯಿಂದ ತಮ್ಮ ಪತ್ನಿ ಮತ್ತು ಮಗಂದಿರ ಆರೈಕೆ ಮಾಡುತ್ತಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಕಸ್ತೂರ್‌ಬಾ ಎರಡು ಬಾರಿ ತೀವ್ರ ಅನಾರೋಗ್ಯಕ್ಕೊಳಗಾದರು. ಆಕೆಗೆ ವಾಸಿಯಾಗುತ್ತದೆಂಬ ಭರವಸೆಯನ್ನೇ ವೈದ್ಯರು ಕೊಡಲಿಲ್ಲ. ಗಾಂಧಿ ತಾಳ್ಮೆ, ಧೈರ್ಯ ಮತ್ತು ಎಚ್ಚರಿಕೆಯಿಂದ ಆಕೆಯ ಆರೈಕೆ ಮಾಡಿದರು. ದಕ್ಷಿಣ ಆಫ್ರಿಕಾದ ಸೆರೆಮನೆಯಿಂದ ಕಸ್ತೂರ್‌ಬಾ ಬಿಡುಗಡೆ ಹೊಂದಿದ ಬಳಿಕ ಬಹಳ ನಿಶ್ಶಕ್ತರಾಗಿದ್ದರು. ಆಗ ಆಕೆಗೆ ಹಲ್ಲುಜ್ಜುವಲ್ಲಿ ಗಾಂಧಿ ನೆರವಾಗುತ್ತಿದ್ದರು. ಕಾಫಿ ಮಾಡಿ ಕೊಡುತ್ತಿದ್ದರು, ವಸ್ತಿ ಕೊಡುತ್ತಿದ್ದರು, ಬೆಡ್ ಪ್ಯಾನ್ ಸ್ವಚ್ಛಗೊಳಿಸುತ್ತಿದ್ದರು. ಒಮ್ಮೆ ತಲೆ ಬಾಚಲು ಸಹ ಪ್ರಯತ್ನಿಸಿದರು. ಮುಂಜಾನೆ ಆಕೆಯನ್ನು ಮಲಗುವ ಕೋಣೆಯಿಂದ ಆಚೆ ಎತ್ತಿ ಒಯ್ದು, ಇಡೀ ದಿನ ಹೊರಗೆ ಮುಕ್ತ ಹವೆಯಲ್ಲಿ, ಮರದ ನೆರಳಲ್ಲಿ ಮಲಗಿಸುತ್ತಿದ್ದರು. ಸೂರ್ಯನ ದಿಕ್ಕು ಬದಲಾಗುತ್ತಿದ್ದಂತೆ, ಹಾಸಿಗೆಯನ್ನು ಕದಲಿಸುತ್ತಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ಒಬ್ಬ ನುರಿತ ದಾಯಿಯನ್ನು ಹೊಂದಿಸುವುದು ಬಹಳ ಕಷ್ಟದ ಕೆಲಸವಾಗಿತ್ತು. ಒಬ್ಬ ವರ್ಣೀಯ ಮಹಿಳೆಯ ಆರೈಕೆ ಮಾಡಲು ಬಿಳಿಯ ಸೂಲಗಿತ್ತಿ ನಿರಾಕರಿಸುವ ಸಾಧ್ಯತೆಗಳೇ ಹೆಚ್ಚಾಗಿತ್ತು. ಒಮ್ಮೆ ಕಸ್ತೂರ್‌ಬಾ ಮಗುವನ್ನು ಹೆರುತ್ತಿದ್ದಾಗ, ಸೂಲಗಿತ್ತಿಯ ಕೆಲಸಗಳನ್ನು ಪರಿಶೀಲಿಸಿ ನೋಡಿದ ಗಾಂಧಿ ತಮ್ಮ ಕೊನೆಯ ಮಗುವಿನ ಹೆರಿಗೆ ಕ್ಷೇಮವಾಗಿ ಆಗುವುದಕ್ಕೆ ಸಹಾಯ ಮಾಡಿದರು.

ಆಗಾಖಾನ್ ಅರಮನೆಯಲ್ಲಿ, ಕಸ್ತೂರ್‌ಬಾ ಅವರು ಕೊನೆಯ ಬಾರಿಗೆ ಅನಾರೋಗ್ಯಕ್ಕೀಡಿತರಾಗಿದ್ದಾಗ, ಗಾಂಧಿ–ತಮ್ಮ 75ನೇ ವಯಸ್ಸಿನಲ್ಲಿ, ಆಕೆಗೆ ಬೆಣ್ಣುಹುರಿಸ್ನಾನ ಮಾಡಿಸುವ ಮೂಲಕ ಸ್ವಲ್ಪ ಆರಾಮ ಒದಗಿಸಲು ಪ್ರಯತ್ನಿಸಿದರು. ಯರವಾಡ ಸೆರೆಮನೆಯಲ್ಲಿ ಅವರು ಅಪೆಂಡಿಸೈಟಿಸ್ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಾಗ, ಅವರ ಆರೈಕೆ ಮಾಡಿದ ಎಲ್ಲಾ ದಾಯಿಗಳನ್ನು ಮತ್ತು ಕಾಂಪೌಂಡರನನ್ನು ಬಹಳವಾಗಿ ಪ್ರಶಂಸಿಸಿದರು. ಒಬ್ಬಾಕೆ ಹೇಳಿದಳು: "ಆರೈಕೆ ಮಾಡುವ ಕೆಲಸ ಯಾವಾಗಲೂ ಸಂತೋಷದಾಯಕವಾಗಿರುವುದಿಲ್ಲ. ಆದರೆ ಶ್ರೀ ಗಾಂಧಿಯವರನ್ನು ಆರೈಕೆ ಮಾಡುವುದು ಒಂದು ಸುಯೋಗ. ವೈದ್ಯರು ನನಗೆ ಹೇಳಿದರು: 'ಈ ಹಿಂದೆ ನೀವೆಂದೂ ಇಂತಹ ವರದಿಗಳನ್ನು ಬರೆದಿಲ್ಲವಲ್ಲ!'. ನಾನು ಹೇಳಿದೆ: ಈ ಹಿಂದೆ ನನಗಿಂಥ ರೋಗಿ ಸಿಕ್ಕಿರಲಿಲ್ಲವಲ್ಲ!"

ಶಿಕ್ಷಕ

ಗಾಂಧಿಗೆ 13 ವರ್ಷ ವಯಸ್ಸಾಗಿದ್ದಾಗ ಅವರ ಮದುವೆ ಕಸ್ತೂರ್‌ಬಾ ಅವರೊಂದಿಗೆ ಆಯಿತು. ಕಸ್ತೂರ್‌ಬಾ ಅವರಿಗೂ ಅಷ್ಟೇ ವಯಸ್ಸು. ಆಕೆಗೆ ಓದುಬರಹ ಗೊತ್ತಿರಲಿಲ್ಲ. ಆಕೆಯ ಯುವಕ ಪತಿ ಆಕೆಗೆ ಮೂರು ಪ್ರಾಥಮಿಕ ಕೌಶಲಗಳಾದ ಓದುವುದು, ಬರೆಯುವುದು ಮತ್ತು ಗಣಿತವನ್ನು ಹೇಳಿಕೊಡಲು ಪ್ರಯತ್ನಿಸಿದರೂ, ಅದರಲ್ಲಿ ಸಂಪೂರ್ಣ ವಿಫಲರಾದರು. 1914ರಲ್ಲಿ ಇಂಗ್ಲೆಂಡಿಗೆ ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಕಲ್ಲೇನ್‌ಬ್ಯಾಕ್‌ಗೆ ಪ್ರತಿದಿನ ಗುಜರಾತಿ ಭಾಷೆ ಹೇಳಿಕೊಡುತ್ತಿದ್ದರು, ಹಾಗೂ ಕಸ್ತೂರ್‌ಬಾಗೆ ಗೀತೆ ಮತ್ತು ರಾಮಾಯಣಗಳನ್ನು ಓದಿ ಹೇಳಿ, ವಿವರಿಸುತ್ತಿದ್ದರು. ಇವೆರಡನ್ನೂ ಕಸ್ತೂರ್‌ಬಾ ಬಹಳ ಆಸಕ್ತಿಯಿಂದ ಕಿವಿಗೊಟ್ಟು ಕೇಳಿಸಿಕೊಳ್ಳುತ್ತಿದ್ದರು. ಕಸ್ತೂರ್‌ಬಾ ತಮ್ಮ 73ನೇ ವಯಸ್ಸಿನಲ್ಲಿ ಗಾಂಧಿಯವರೊಂದಿಗೆ ಆಗಾಖಾನ್ ಅರಮನೆಯ ಸೆರೆಮನೆಯಲ್ಲಿದ್ದರು. ಗಾಂಧಿಗೆ ಆಗ ಸ್ವಲ್ಪ ವಿರಾಮವೇಳೆಯಿತ್ತು. ಆಗ ಆಕೆಗಾಗಿ ರಾಮಾಯಣ ಹಾಗೂ ಭಾಗವತದ ಕೆಲವು ಅಧ್ಯಾಯಗಳನ್ನು ಸಂಪಾದನೆ ಮಾಡಿಕೊಟ್ಟರು. ದಿನವೂ ಆಕೆಯೊಟ್ಟಿಗೆ ಕುಳಿತು, ಭೂಗೋಳ, ಗುಜರಾತಿ ಸಾಹಿತ್ಯ ಮತ್ತು ವ್ಯಾಕರಣಗಳ ಬಗ್ಗೆ ಪಾಠ ಮಾಡುತ್ತಿದ್ದರು. ಇಳಿವಯಸ್ಸು ಹಾಗೂ ದುಃಖಗಳಿಂದ ಬಾಗಿಹೋಗಿದ್ದ ಅವರ ಆ ಶಿಷ್ಯೆ ಪಾಠಗಳಿಗೆ ಸ್ಪಂದಿಸಲು ವಿಫಲರಾಗುತ್ತಿದ್ದರು. ಒಬ್ಬ ಖೈದಿಯಾಗಿ ಗಾಂಧಿ ಒಬ್ಬ ಚೀನೀಯ ಸಹಖೈದಿಗೆ ಇಂಗ್ಲಿಷ್ ಹೇಳಿಕೊಡುತ್ತಿದ್ದರು; ಐರಿಶ್ ಜೈಲರ್‌ನಿಗೆ ಗುಜರಾತಿಯನ್ನೂ, ತಮ್ಮ ಸೋದರನ ಮೊಮ್ಮಗಳಿಗೆ ಚರಿತ್ರೆ, ಭೂಗೋಳ ಹಾಗೂ ಜ್ಯಾಮಿತಿಯನ್ನು ಹೇಳಿಕೊಡುತ್ತಿದ್ದರು. 74ರ ವಯಸ್ಸಿನಲ್ಲಿ, ಅವರು ಜ್ಯಾಮಿತೀಯ ಚಿತ್ರಗಳ ರೇಖೆಗಳನ್ನು ನಿಖರವಾಗಿ ಮತ್ತು ಸರಾಗವಾಗಿ ಎಳೆಯಬಲ್ಲವರಾಗಿದ್ದರು.

ಓರ್ವ ಶಿಕ್ಷಕನಾಗಿ ತಮ್ಮ ಸಾಮರ್ಥ್ಯದ ಮೇಲೆ ಗಾಂಧಿಯವರಿಗೆ ಒಳ್ಳೆಯ ವಿಶ್ವಾಸವಿತ್ತು. ಆದರೆ ಶಿಕ್ಷಣದ ಬಗ್ಗೆ ಅವರಿಗಿದ್ದ ದೃಷ್ಟಿಕೋನಗಳು ಮತ್ತು ಅವರ ಶಿಕ್ಷಣ ವಿಧಾನಗಳು ಅಂಗೀಕೃತ ಮಟ್ಟಗಳಿಗಿಂತ ಭಿನ್ನವಾಗಿದ್ದವು. ದಕ್ಷಿಣ ಆಫ್ರಿಕಾದಲ್ಲಿ ಮೂರು ಮಂದಿ – ಒಬ್ಬ ಕ್ರೌರಿಕ, ಒಬ್ಬ ಗುಮಾಸ್ತ ಹಾಗೂ ಒಬ್ಬ ಅಂಗಡಿಯವ – ಇಂಗ್ಲಿಷ್ ಕಲಿಯಬಯಸಿದರು. ಆದರೆ ಅವರ ಬಳಿ ಒಬ್ಬ ಶಿಕ್ಷಕರನ್ನು ಇಟ್ಟುಕೊಳ್ಳುವಷ್ಟು ಹಣವಿರಲಿಲ್ಲ. ಅವರಿಗೆ ಯಾವಾಗಲೂ ವಿಪರೀತ ಕೆಲಸ. ದೈನಂದಿನ ತರಗತಿಗಳಿಗೆ ಹೋಗುವಷ್ಟು ಸಮಯವೂ ಇರಲಿಲ್ಲ. ಗಾಂಧಿ ಅವರಿರುವ ಸ್ಥಳಗಳಿಗೇ ಹೋಗಿ, ಎಂಟು ತಿಂಗಳುಗಳಲ್ಲಿ ಲೆಕ್ಕಪತ್ರಗಳನ್ನು ಮತ್ತು ವ್ಯಾಪಾರ ವಹಿವಾಟಿನ ಪತ್ರಗಳನ್ನು ಬರೆಯುವಷ್ಟು ಇಂಗ್ಲಿಷ್ ಅವರಿಗೆ ಹೇಳಿಕೊಟ್ಟರು.

ಕೆಲವು ಸಮಯದವರೆಗೆ ಗಾಂಧಿ ತಮ್ಮ ಮಗಂದಿರಿಗೆ ಬಾಯಿಪಾಠ ಹೇಳಿಕೊಡುತ್ತಿದ್ದರು. ಆಗ ಅವರಿಗೆ ಸಮಯದ ಅಭಾವ ಇದ್ದ ಕಾರಣ, ಮಕ್ಕಳು ತಂದೆ ಕಚೇರಿಗೆ ಹೋಗುವಾಗ ಅವರೊಟ್ಟಿಗೇ ನಡೆದು ಹೋಗುತ್ತಿದ್ದರು. ದಾರಿಯಲ್ಲಿ ಗಾಂಧಿ ಅವರಿಗೆ ಸಾಹಿತ್ಯ, ಕವನ ಹಾಗೂ ಇತರ ವಿಷಯಗಳ ಬಗ್ಗೆ ಗುಜರಾತಿ ಭಾಷೆಯಲ್ಲಿ ಮಾತನಾಡುತ್ತಿದ್ದರು. ಸ್ವಲ್ಪ ಕಾಲ, ಮಕ್ಕಳಿಗೆ ಇಂಗ್ಲಿಷ್ ಹೇಳಿಕೊಡಲೆಂದು ಗಾಂಧಿ ಓರ್ವ ಇಂಗ್ಲಿಷ್ ಶಿಕ್ಷಕಿಯನ್ನು ನೇಮಕ ಮಾಡಿದ್ದರು. ಗಾಂಧಿಯವರ ಇಂಗ್ಲಿಷ್ ಮಿತ್ರರಿಂದಲೂ ಆ ಮಕ್ಕಳು ಇಂಗ್ಲಿಷ್ ಕಲಿತರು.

ಫೀನಿಕ್ಸ್ ವಸಾಹತಿನಲ್ಲಿದ್ದಾಗ, ಅಲ್ಲಿನ ವಾಸಿಗಳ ಮಕ್ಕಳಿಗಾಗಿ ಗಾಂಧಿ ಒಂದು ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿದರು.

ಅವರೇ ಪ್ರಧಾನ ಶಿಕ್ಷಕರು. ಇತರ ಕೆಲಸಗಾರರು ಅವರಿಗೆ ಸಹಾಯಕರಾಗಿದ್ದರು. ವಿದ್ಯಾರ್ಥಿಗಳು ವಿವಿಧ ಮತಧರ್ಮಗಳಿಗೆ ಸೇರಿದವರಾಗಿದ್ದರು. ಶಿಕ್ಷಕರು ಇಂಗ್ಲೆಂಡ್, ಜರ್ಮನಿ ಮತ್ತು ಭಾರತ – ಹೀಗೆ ಬೇರೆ ಬೇರೆ ದೇಶಗಳವರಾಗಿದ್ದರು. ಶಿಕ್ಷಕರು ದೈಹಿಕ ಶ್ರಮದ ಕೆಲಸಗಳಲ್ಲಿ ಎಷ್ಟು ಮಗ್ನರಾಗಿರುತ್ತಿದ್ದರೆಂದರೆ, ಕೆಲವೊಮ್ಮೆ ತರಗತಿಗಳಿಗೆ ನೇರವಾಗಿ ಹೊಲಗದ್ದೆಗಳಿಂದಲೇ ಮಣ್ಣುಮಣ್ಣಾದ ಪಾದ-ಹಿಮ್ಮಡಿಗಳಲ್ಲೇ ಬರುತ್ತಿದ್ದರು. ಕೆಲಬಾರಿ ಗಾಂಧಿ ತಮ್ಮ ತೋಳುಗಳಲ್ಲಿ ಒಂದು ಮಗುವನ್ನು ಲಾಲಿಸುತ್ತಾ ಪಾಠ ಮಾಡುತ್ತಿದ್ದರು. ತಾವು ಮಿದ್ದಾಗಿ ಅಭ್ಯಾಸ ಮಾಡದ ಯಾವ ಕೆಲಸವನ್ನೂ ಅವರು ವಿದ್ಯಾರ್ಥಿಗಳಿಗೆ ಮಾಡಲು ಹೇಳುತ್ತಿರಲಿಲ್ಲ. ಒಬ್ಬ ಅಂಜುಕುಳಿ ಶಿಕ್ಷಕ ತನ್ನ ವಿದ್ಯಾರ್ಥಿಗಳನ್ನೆಂದಿಗೂ ಧೈರ್ಯಶಾಲಿಯನ್ನಾಗಿ ಮಾಡಲಾರ ಎಂದು ಅವರು ತಿಳಿದಿದ್ದರು. ಒಬ್ಬ ಶಿಕ್ಷಕ ತನ್ನ ವಿದ್ಯಾರ್ಥಿಗಳಿಗೆ ಉದಾಹರಣೆಯಾಗಿರಬೇಕು, ವಸ್ತು-ಪಾಠವಾಗಿರಬೇಕು. ಗಾಂಧಿ ಬಹಳ ಆಳವಾಗಿ ಅಧ್ಯಯನ ಮಾಡುತ್ತಿದ್ದರು. ಹೊಸಹೊಸತನ್ನು ಕಲಿಯುವ ಆಸಕ್ತಿ ಅವರಲ್ಲಿತ್ತು. 65ರ ವಯಸ್ಸಿನಲ್ಲಿ ಅವರು ತಾರೆಗಳ ಬಗ್ಗೆ ಅಧ್ಯಯನ ಆರಂಭಿಸಿದರು.

ಫೀನಿಕ್ಸ್ ವಸಾಹತಿನಲ್ಲಿದ್ದ ಶಾಲೆ ಪ್ರಯೋಗಾತ್ಮಕವಾಗಿ ನಡೆಯುತ್ತಿತ್ತು. ಅಲ್ಲಿ ಕೆಲವು ಕಠಿಣ ನಿಯಮಗಳಿದ್ದವು. ಜೀವನ ಸರಳವಾಗಿಯೂ ಇತ್ತು, ಕಷ್ಟಕರವಾಗಿಯೂ ಇತ್ತು. ಚಹಾ, ಕಾಫಿ ಮತ್ತು ಕೋಕೋಗಳು ಜೀತದಾಳುಗಳಿಂದ ಉತ್ಪನ್ನವಾಗುತ್ತಿದ್ದುದ್ದರಿಂದ ಅವು ನಿಷಿದ್ಧವಾಗಿದ್ದವು. ಬಹಳಷ್ಟು ಮಂದಿ ವಿದ್ಯಾರ್ಥಿಗಳ ವಸತಿಯೂ ಶಾಲೆಯಲ್ಲಿಯೇ ಇತ್ತು. ಪಾಠ ಮಾಡುವಾಗ ಗಾಂಧಿ ಪುಸ್ತಕಗಳ ಸಹಾಯ ತೆಗೆದುಕೊಳ್ಳುತ್ತಿರಲಿಲ್ಲ. ಪುಸ್ತಕದ ಕಲಿಕೆಯನ್ನು ಹೇರಿ ವಿದ್ಯಾರ್ಥಿಗಳ ಬುದ್ಧಿಮತ್ತೆಯನ್ನು ದುರ್ಬಲಗೊಳಿಸಲು ಅವರು ಬಯಸುತ್ತಿರಲಿಲ್ಲ. ತಮ್ಮ ಬಾಲ್ಯದಲ್ಲಿ ಉರುಹೊಡೆಯಬೇಕೆಂಬ ಒತ್ತಡ, ಓದುವುದರ ಆನಂದವನ್ನೇ ಕೊಂದುಹಾಕಿತು ಎಂಬುದನ್ನು ಅವರು ಜ್ಞಾಪಿಸಿಕೊಳ್ಳುತ್ತಿದ್ದರು. ಓದುವ, ಬರೆಯುವ ಮತ್ತು ಗಣಿತದ ಜ್ಞಾನಗಳಿಗೆ ಅವರು ಹೆಚ್ಚು ಮಹತ್ವವನ್ನೂ ಕೊಡುತ್ತಿರಲಿಲ್ಲ. ಹೃದಯವಂತಿಕೆ ಮತ್ತು ವ್ಯಕ್ತಿತ್ವ ನಿರ್ಮಾಣಗಳು ಅವರ ಬೋಧನೆಯ ಗುರಿಯಾಗಿದ್ದವು. ಎಲ್ಲಾ ಮತಧರ್ಮಗಳನ್ನು ಗೌರವಿಸಬೇಕೆಂದು ಮಕ್ಕಳಿಗೆ ಹೇಳಿಕೊಡಲಾಗುತ್ತಿತ್ತು. ರಮ್‌ಜ಼ಾನ್ ತಿಂಗಳಿನಲ್ಲಿ ಮುಸಲ್ಮಾನ ಬಾಲಕರೊಂದಿಗೆ ಹಿಂದೂ ಬಾಲಕರು ಸಹ ಉಪವಾಸ ಮಾಡುತ್ತಿದ್ದರು. ಕೆಲವು ಮುಸಲ್ಮಾನ ಬಾಲಕರನ್ನು ಹಿಂದೂ ಕುಟುಂಬಗಳಲ್ಲಿ ಕೆಲವು ತಿಂಗಳುಗಳ ಕಾಲ ಇರಿಸಲಾಗುತ್ತಿತ್ತು. ತಮ್ಮ ಆತಿಥೇಯರು ಉಣ್ಣುತ್ತಿದ್ದ ಆಹಾರವನ್ನೇ ಅವರು ಉಣ್ಣುತ್ತಿದ್ದರು. ಅವರೆಲ್ಲ ಸಸ್ಯಾಹಾರಿಗಳೇ ಆಗಿದ್ದರು. ಅವರು ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದರು; ತೋಟಗಾರಿಕೆಯಲ್ಲಿ, ಕಸ ಗುಡಿಸಿ ಸ್ವಚ್ಛಗೊಳಿಸುವಲ್ಲಿ, ಚಪ್ಪಲಿ–ಬೂಟುಗಳ ತಯಾರಿಕೆಯಲ್ಲಿ, ಮರಗೆಲಸದಲ್ಲಿ ಮತ್ತು ಅಡುಗೆ ಮಾಡುವುದರಲ್ಲಿ ಅವರು ಪಾಲ್ಗೊಳ್ಳುತ್ತಿದ್ದರು. ವಿದ್ಯಾರ್ಥಿಗಳ ಕಿವಿಗಳಿಗೆ ಸಂಗೀತವನ್ನು ಆಸ್ವಾದಿಸುವ ಬಗ್ಗೆಯೂ ತರಬೇತಿ ನೀಡಲಾಗುತ್ತಿತ್ತು. ಪ್ರತಿ ಸಂಜೆ ಭಜನೆಗಳು ಮತ್ತು ಸ್ತೋತ್ರಗೀತೆಗಳನ್ನು ಪಿಯಾನೋದ ಸಹವಾದನದೊಂದಿಗೆ ಹಾಡಲಾಗುತ್ತಿತ್ತು. ವಿದ್ಯಾರ್ಥಿಗಳು ಕ್ರಿಕೆಟ್ ಅಥವಾ ಟೆನ್ನಿಸ್ ಆಡುವುದಕ್ಕಿಂತ ದಿನನಿತ್ಯದ ದೈಹಿಕಶ್ರಮದ ಕೆಲಸವನ್ನು

ಹಂಚಿಕೊಳ್ಳಬೇಕು; ಹೀಗೆ ಬಲಿಷ್ಠರಾಗಿ ಬೆಳೆಯಬೇಕು. ಟಾಲ್‌ಸ್ಟಾಯ್ ಫಾರಂ ಮತ್ತು ಸಬರಮತಿ ಆಶ್ರಮಗಳೆರಡರಲ್ಲೂ ಗಾಂಧಿ ಬೂಟು ತಯಾರಿಕೆಯನ್ನು ಹೇಳಿಕೊಡುತ್ತಿದ್ದರು. ಟಾಲ್‌ಸ್ಟಾಯ್ ಫಾರಂನಲ್ಲಿ ಅವರು ಉರ್ದು ಮತ್ತು ತಮಿಳು ಭಾಷೆಗಳ ಪ್ರಾಥಮಿಕ ಪಾಠಗಳನ್ನು ಮಾಡುತ್ತಿದ್ದರು. ಸಾಹಿತ್ಯದ ಬಗ್ಗೆ ತರಬೇತಿ ಮಾತೃಭಾಷೆಯಲ್ಲಿಯೇ ಆಗುತ್ತಿತ್ತು. ಗಾಂಧಿಗೆ ಗುಜರಾತಿ, ಮರಾಠಿ, ಹಿಂದಿ, ಉರ್ದು, ತಮಿಳು, ಇಂಗ್ಲಿಷ್, ಫ್ರೆಂಚ್ ಮತ್ತು ಲ್ಯಾಟಿನ್ ಭಾಷೆಗಳು ತಿಳಿದಿತ್ತು.

ಸಬರಮತಿ ಆಶ್ರಮದಲ್ಲಿ ಯಾವುದೇ ಶುಲ್ಕ ವಿಧಿಸಲಾಗುತ್ತಿರಲಿಲ್ಲ. ಆಶ್ರಮದ ನಿಧಿಗೆ ಪಾಲಕರು ಸ್ವಯಂಪ್ರೇರಣೆಯಿಂದ ಕೊಡುಗೆ ನೀಡಬೇಕೆಂಬ ನಿರೀಕ್ಷೆ ಇತ್ತು. ನಾಲ್ಕು ವರ್ಷಗಳಿಗೆ ಮೇಲ್ಪಟ್ಟ ಮಕ್ಕಳನ್ನು ವಸತಿಶಾಲೆಯ ವಿದ್ಯಾರ್ಥಿಗಳಾಗಿ ಸೇರಿಸಿಕೊಳ್ಳ ಲಾಗುತ್ತಿತ್ತು. ಚರಿತ್ರೆ, ಭೂಗೋಳ, ಗಣಿತ ಮತ್ತು ಅರ್ಥಶಾಸ್ತ್ರಗಳನ್ನು ಪ್ರಾಂತೀಯ ಭಾಷೆಗಳಲ್ಲಿ ಹೇಳಿಕೊಡಲಾಗುತ್ತಿತ್ತು. ಸಂಸ್ಕೃತ ಮತ್ತು ಹಿಂದಿ ಮತ್ತು ಒಂದು ದ್ರಾವಿಡ ಭಾಷೆ ಕಡ್ಡಾಯವಾಗಿತ್ತು. ಇಂಗ್ಲಿಷ್ ಎರಡನೆಯ ಭಾಷೆಯಾಗಿತ್ತು. ಉರ್ದು, ತಮಿಳು, ತೆಲುಗು ಮತ್ತು ಬಂಗಾಲಿ ಅಕ್ಷರಗಳನ್ನು ಸಹ ಹೇಳಿಕೊಡಲಾಗುತ್ತಿತ್ತು. ದಿನಕ್ಕೆ ಮೂರು ಬಾರಿ ಆಹಾರ ಕೊಡಲಾಗುತ್ತಿತ್ತು. ಆಹಾರ ಬಲು ಸರಳವಾಗಿರುತ್ತಿತ್ತು. ಉಪ್ಪಲ್ಲದೆ ಬೇರೆ ಯಾವುದೇ ಸಂಬಾರ ಪದಾರ್ಥಗಳಿರುತ್ತಿರಲಿಲ್ಲ. ಸರಳವಾದ ಏಕರೂಪದ ಉಡುಗೆಯನ್ನು ಉಪಯೋಗಿಸ ಲಾಗುತ್ತಿತ್ತು. ಸ್ವದೇಶಿ ವಸ್ತ್ರಕ್ಕೆ ಹೆಚ್ಚು ಒತ್ತುಕೊಡಲಾಗುತ್ತಿತ್ತು. ಗಾಂಧಿ ಸಹಶಿಕ್ಷಣವನ್ನು ಪ್ರತಿಪಾದಿಸುತ್ತಿದ್ದರು: "ಈ ಲೈಂಗಿಕ ಮನೋಭಾವದಿಂದ ನಾವು ಹೊರಗೆ ಬರಬೇಕು. ಈ ಸವಾಲನ್ನು ಎದುರಿಸಲು ನಾನು ಮಕ್ಕಳಿಗೆ ಅನುವು ಮಾಡಿಕೊಡುತ್ತೇನೆ. ಅತಿಯಾದ ರಕ್ಷಣೆಯಿಂದ ಪ್ರಯೋಜನವಿಲ್ಲ." ಹುಡುಗ-ಹುಡುಗಿಯರ ನಡುವೆ ಏನಾದರೂ ದುರ್ವರ್ತನೆಯ ಪ್ರಸಂಗಗಳು ನಡೆದಲ್ಲಿ, ಗಾಂಧಿ ಶುದ್ಧೀಕರಣದ ಉಪವಾಸ ಕೈಗೊಳ್ಳುತ್ತಿದ್ದರು.

ನೂಲುವುದು ಮಾತ್ರವಲ್ಲದೆ, ಹಿಂಜುವುದು ಮತ್ತು ಅರಳೆರಾಟೆಯಿಂದ ಹತ್ತಿಬೀಜ ಬೇರ್ಪಡಿಸುವುದನ್ನು ಸಹ ಹೇಳಿಕೊಡಲಾಗುತ್ತಿತ್ತು. ಕೆಲವು ವೃತ್ತಿಕೆಲಸಗಳನ್ನು ಕಲಿಯಲು ಕಿರಿಯರಿಗೆ ತರಬೇತಿ ಕೊಡಲಾಗುತ್ತಿತ್ತು. ಹೀಗೆ ಅವರ ಶಿಕ್ಷಣಕ್ಕೆ ತಗುಲುತ್ತಿದ್ದ ವೆಚ್ಚದ ಭಾಗಾಂಶವನ್ನು ಸರಿತೂಗಿಸಲಾಗುತ್ತಿತ್ತು. ಆ ವಿದ್ಯಾರ್ಥಿಗಳಿಗೆ ರಜಾ ಎಂಬುದರ ಮಜಾ ಇರುತ್ತಿರಲಿಲ್ಲ. ತಮ್ಮ ಸ್ವಂತ ಕೆಲಸಗಳನ್ನು ಮಾಡಿಕೊಳ್ಳಲು ಅವರಿಗೆ ವಾರದಲ್ಲಿ ಎರಡು ದಿನಗಳು ಸ್ವಲ್ಪ ವಿರಾಮ ಸಿಗುತ್ತಿತ್ತು. ವರ್ಷದಲ್ಲಿ ಮೂರು ತಿಂಗಳುಗಳು ಅವರು ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡಬಹುದಿತ್ತು, ಅದೂ ಸುಸ್ಥಿತಿಯಲ್ಲಿದ್ದರೆ. ಗುಜರಾತಿನ ವಿದ್ಯಾಪೀಠದಲ್ಲಿ ಗಾಂಧಿ 'ಹೊಸ ಒಡಂಬಡಿಕೆ'ಯಿಂದ ಕಥೆಗಳನ್ನು ಬೋಧಿಸುತ್ತಿದ್ದರು. ಇಂಗ್ಲಿಷ್ ಸಾಹಿತ್ಯದ ಆಯ್ದ ವಿಷಯಗಳ ಬಗ್ಗೆ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು.

ಕೆಲವೇ ಕೆಲವು ಮಧ್ಯಮವರ್ಗದ ಜನರ ಅವಶ್ಯಕತೆಗಳನ್ನು ಪೂರೈಸುವುದಕ್ಕಿಂತ ಲಕ್ಷಗಟ್ಟಲೆ ಜನರ ಅವಶ್ಯಕತೆಗಳನ್ನು ಪೂರೈಸಲು ಉನ್ನತ ಶಿಕ್ಷಣದ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪುನಃ ರೂಪಿಸಬೇಕೆಂಬುದರ ಅಗತ್ಯವನ್ನು ಗಾಂಧಿ ಮನಗಂಡರು. ವಿದ್ಯಾರ್ಥಿಗಳಿಗೆ ಪರಕೀಯವಾದ ಇಂಗ್ಲಿಷ್ ಭಾಷೆಯನ್ನು ಕರಗತ ಮಾಡಿಕೊಳ್ಳುವುದರಲ್ಲಿ ಅರಳುತ್ತಿರುವ ಮನಸ್ಸುಗಳ ಸಮಯ ಮತ್ತು ಶಕ್ತಿ ಹೇಗೆ ಸುಮ್ಮನೆ ವ್ಯಯವಾಗುತ್ತದೆ ಹಾಗೂ ಹೀಗೆ ಅವರು ತಮ್ಮದೇ ಆದ ಸಂಸ್ಕೃತಿಯಿಂದ, ಸಾಹಿತ್ಯದಿಂದ ಹಾಗೂ ಭಾಷೆಯಿಂದ ಕ್ರಮೇಣವಾಗಿ ದೂರ ಸರಿದುಹೋಗುತ್ತಾರೆ ಎಂಬುದನ್ನು ಅವರು ಗಮನಿಸಿದರು. ಶಾಲೆ

ಕಾಲೇಜುಗಳಲ್ಲಿ ತಮ್ಮ ವಿದ್ಯಾಭ್ಯಾಸ ಪೂರೈಸಿದ ಮೇಲೆ ಏನು ಮಾಡುವುದು ಎಂದು ಯೋಚಿಸುತ್ತಿದ್ದ ಆ ವಿದ್ಯಾರ್ಥಿಗಳಲ್ಲಿ ಉನ್ನತ ಶಿಕ್ಷಣವೂ ಯಾವುದೇ ರೀತಿಯಲ್ಲಿ ಆತ್ಮವಿಶ್ವಾಸ ವನ್ನು ತುಂಬುತ್ತಿರಲಿಲ್ಲ. ಉನ್ನತ ಶಿಕ್ಷಣವೆಂದರೆ, ಅದು ಹಳೆಯ ಸಂಪ್ರದಾಯಗಳ ಆಧಾರ ಹೊಂದಿರುವ ಭಾರತದ ವಿವಿಧ ಸಂಸ್ಕೃತಿಗಳ ಸಂಯೋಗವಾಗಿರಬೇಕು; ಹಾಗೂ ಆಧುನಿಕ ಕಾಲದ ಅನುಭವಗಳಿಂದ ಶ್ರೀಮಂತ ವಾಗಿರಬೇಕು ಎಂದು ಗಾಂಧಿ ಬಯಸಿದ್ದರು. ವಿದ್ಯಾರ್ಥಿಗಳು ಆರೋಗ್ಯವಂತ, ಪ್ರಾಮಾಣಿಕ ಹಾಗೂ ಬುದ್ಧಿವಂತ ಗ್ರಾಮಸ್ಥರಾಗಿ ರೂಪುಗೊಳ್ಳಬೇಕು. ಯಾವತ್ತಿದ್ದರೂ ತಮ್ಮ ಜೀವನಾಧಾರಕ್ಕೆ ಗಳಿಸುವಂತಿರಬೇಕು. ಒಂದು ಮಗು ಬರೆಯುವುದನ್ನು ಕಲಿಯುವ ಮುಂಚೆ, ಓದುವುದನ್ನು ಕಲಿತಿರಬೇಕು ಎಂದು ಅವರು ಒತ್ತಿ ಹೇಳುತ್ತಿದ್ದರು. ಒಳ್ಳೆಯ ಗುಂಡಗಿನ ಕೈಬರಹ ಸಹ ಶಿಕ್ಷಣದ ಒಂದು ಭಾಗ ಎಂದು ಅವರು ಪರಿಗಣಿಸುತ್ತಿದ್ದರು ಮತ್ತು ತಮ್ಮ ಸ್ವಂತ ಕೈಬರಹದ ಬಗ್ಗೆ ಅವರಿಗೆ ಬಹಳ ನಾಚಿಕೆಯಾಗುತ್ತಿತ್ತು. ಮಗುವಿಗೆ ಮೊದಲು ಸರಳ ರೇಖೆಗಳು, ವಕ್ರರೇಖೆಗಳು, ತ್ರಿಕೋನಗಳು, ಪಕ್ಷಿಗಳ, ಹೂವುಗಳ ಮತ್ತು ಎಲೆಗಳ ಚಿತ್ರಗಳನ್ನು ಬರೆಯುವುದನ್ನು ಕಲಿಸಿ ಕೊಡಬೇಕು. ಇದರಿಂದ ಅಕ್ಷರಗಳನ್ನು ಬರೆಯಲು ಸಹಾಯವಾಗುತ್ತದೆ, ಅವನ್ನು ಗೀಚುವುದಕ್ಕಲ್ಲ ಎಂದು ಅವರು ಶಿಕ್ಷಕರಿಗೆ ಹೇಳುತ್ತಿದ್ದರು. ಅವರ ಪ್ರಕಾರ, ಪ್ರಸಕ್ತ ಪ್ರಾಥಮಿಕ ಶಿಕ್ಷಣವು ಹಳ್ಳಿಗಳ ಭಾರತದ ಅವಶ್ಯಕತೆಗಳನ್ನು ಕಡೆಗಣಿಸಿದೆಯಾದ್ದರಿಂದ ಅದು ಒಂದು ತಮಾಷೆಯಷ್ಟೆ ಆಗಿದೆ.

ಮಕ್ಕಳನ್ನು ಕೇವಲ ವಿದ್ಯಾವಂತರನ್ನಾಗಿಸುವ ಬದಲು ಅವರನ್ನು ನೀತಿವಂತರಾಗಿಯೂ ಮಾಡಬೇಕು. ಅದಕ್ಕಾಗಿ, ಆ ಮಕ್ಕಳಿಂದ ಅತ್ಯುತ್ತಮವಾದದ್ದೇ ಹೊರಹೊಮ್ಮಬೇಕು ಎಂದು ಗಾಂಧಿ ಬಯಸಿದ್ದರು. 30 ವರ್ಷಗಳವರೆಗೆ ಶಿಕ್ಷಣದ ಬಗ್ಗೆ ಆಲೋಚನೆ ಮಾಡಿದ ಬಳಿಕ, ವೃತ್ತಿಕಸುಬುಗಳ ಮೂಲಕ ಶಿಕ್ಷಣ ಒದಗಿಸುವ ವ್ಯವಸ್ಥೆಯನ್ನು ಪರಿಚಯಿಸಿದರು.

63ನೇ ವಯಸ್ಸಿನಲ್ಲಿ, ತಮ್ಮ ವಿಚಾರಸರಣಿಯನ್ನು ಅವರು ಸೆರೆಮನೆಯಲ್ಲಿ ಮಂಡಿಸಿದರು; ಆಮೇಲೆ ಅದು ಮೂಲ ಶಿಕ್ಷಣ ಅಥವಾ ವಾರ್ಧಾ ಶಿಕ್ಷಣ ಯೋಜನೆಯಾಗಿ ರೂಪುಗೊಂಡಿತು.

ಗಾಂಧಿ ಯಾವುದೇ ರೀತಿಯ ದೈಹಿಕ ಶಿಕ್ಷೆ ಕೊಡುವುದರ ವಿರೋಧಿಯಾಗಿದ್ದರು. ತಮ್ಮ ಜೀವಮಾನದಲ್ಲಿ, ಒಂದೇ ಒಂದು ಬಾರಿ ಒಬ್ಬ ತುಂಟ ಹುಡುಗನಿಗೆ ದೊಣ್ಣೆಯಿಂದ ಹೊಡೆದಿದ್ದರು. ಆಮೇಲೆ ಸ್ವಯಂ ಹತೋಟಿ ಕಳೆದುಕೊಂಡಿದ್ದಕ್ಕಾಗಿ ಅವರ ಇಡೀ ದೇಹ ಕಂಪಿಸಿತ್ತು. ಆ ಹುಡುಗ ಅಳುತ್ತಾ ಗಾಂಧಿಯ ಕ್ಷಮೆ ಯಾಚಿಸಿದ. ಗಾಂಧಿ ಹೊಡೆದ ಏಟಿನಿಂದ ನೋವಾಯಿತೆಂದಲ್ಲ, ಅವರ ಸಮಚಿತ್ತವನ್ನು ಕೆಡಿಸಿದ್ದಕ್ಕೆ.

ಕ್ರೀಡೆಗಳಲ್ಲಿ ಪರಸ್ಪರ ಸ್ಪರ್ಧಿಸಬೇಕೆಂದು ಗಾಂಧಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುತ್ತಿದ್ದರು, ಆದರೆ ಓದಿನಲ್ಲಿ ಒಬ್ಬರನ್ನೊಬ್ಬರು ಮೀರಿಸಬೇಕೆಂದು ಎಂದೂ ಒತ್ತಾಯಿಸುತ್ತಿರಲಿಲ್ಲ. ಅಂಕಗಳನ್ನು ಕೊಡುವ ಅವರ ವಿಧಾನ ಅಸಾಮಾನ್ಯ ರೀತಿಯದಾಗಿತ್ತು. ಒಬ್ಬ ವಿದ್ಯಾರ್ಥಿಯ ಕೆಲಸವನ್ನು ತರಗತಿಯಲ್ಲಿನ ಅತ್ಯುತ್ತಮ ವಿದ್ಯಾರ್ಥಿಯ ಕೆಲಸದೊಂದಿಗೆ ಅವರು ಹೋಲಿಸುತ್ತಿರಲಿಲ್ಲ; ಬದಲಿಗೆ ಆ ವಿದ್ಯಾರ್ಥಿ ತನ್ನ ತರಗತಿಯ ಅಥವಾ ಮನೆಯ ಪಾಠಗಳಲ್ಲಿ ಸುಧಾರಣೆ ತೋರಿದರೆ, ಹೆಚ್ಚು ಅಂಕಗಳನ್ನು ಕೊಡುತ್ತಿದ್ದರು. ಅವರು ವಿದ್ಯಾರ್ಥಿಗಳಲ್ಲಿ ಸಂಪೂರ್ಣ ವಿಶ್ವಾಸ ಇರಿಸಿದ್ದರು ಹಾಗೂ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವಾಗ ಕಾವಲಿಗೆ ಯಾರನ್ನೂ ಇಡುತ್ತಿರಲಿಲ್ಲ. ಆಶ್ರಮದ ಶಿಕ್ಷಣದಲ್ಲಿ ಮಗುವಿಗೆ ಸ್ವಾತಂತ್ರ್ಯ ಎನ್ನುವುದೇ ಮಾರ್ಗದರ್ಶಕ ಸಿದ್ಧಾಂತವಾಗಿತ್ತು. 'ನಾನೂ ಒಬ್ಬ ವಿಶೇಷ ವ್ಯಕ್ತಿ' ಎಂದು ಅತ್ಯಂತ ಕಿರಿಯ ಮಗುವಿಗೂ ಅನ್ನಿಸಬೇಕು ಎಂಬುದೇ ಅವರ ಸಲಹೆಯಾಗಿತ್ತು.

ಪ್ರತಿಯೊಂದು ಗ್ರಾಮದಲ್ಲೂ ಪ್ರಾಥಮಿಕ ಶಾಲೆಗಳಿರಬೇಕು ಎಂದು ಗಾಂಧಿ ಬಯಸಿದ್ದರು. ಆದರೆ ಎಂದಿನವರೆಗೆ ಶಾಲೆಗಳು ಅಥವಾ ಕಡೇ ಪಕ್ಷ ಶಿಕ್ಷಕರು ತಮಗೆ ತಾವೇ ಆಧಾರವಾಗುವುದಿಲ್ಲವೋ, ಇದು ಸಾಧ್ಯವಿಲ್ಲ ಎಂಬುದೂ ಅವರಿಗೆ ತಿಳಿದಿತ್ತು. ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಯಾವುದಾದರೂ ಕರಕುಶಲ ಕಲೆಯನ್ನು ಕಲಿಯಲೇ ಬೇಕಾಗಿತ್ತು. ಇದರಲ್ಲಿ ನೂಲುವುದು ಅತ್ಯಂತ ಸಾಮಾನ್ಯವಾಗಿತ್ತು. ಸಮಾನತೆಯ ನಿಜವಾದ ಅರ್ಥವನ್ನು ಅರಳಿಸಬೇಕೆಂದರೆ ಮತ್ತು ಪ್ರಪಂಚದಲ್ಲಿ ನಿಜವಾದ ಶಾಂತಿಯನ್ನು ಗಳಿಸಬೇಕೆಂದರೆ, ಅದು ಮಕ್ಕಳೊಂದಿಗೇ ಆರಂಭವಾಗಬೇಕು ಎಂದು ಗಾಂಧಿ ನಂಬಿದ್ದರು. ಓದುವುದು, ಬರೆಯುವುದು ಮತ್ತು ಗಣಿತವು ವಿದ್ಯಾರ್ಥಿಗಳು ತಮ್ಮ ಕೈಗಳ ಬಳಕೆಯನ್ನೇ ಮರೆಯುವಂತೆ ಮಾಡಿದರೆ ಅಥವಾ ಯಾವುದೇ ದೈಹಿಕ ಶ್ರಮ ಮಾಡಲು ಅವರಿಗೆ ನಾಚಿಕೆಯಾಗುವಂತೆ ಮಾಡಿದರೆ, ಅವರು ಅನಕ್ಷರಸ್ಥರಾಗಿಯೇ ಉಳಿದು, ಕಲ್ಲುಗಳನ್ನು ಒಡೆಯುವುದೇ ಲೇಸು. ಹತ್ತಿ ಹೇಗೆ ಬೆಳೆಯಲಾಗುತ್ತದೆ, ಚರಕಾದ ಚಕ್ರ ಹೇಗೆ ಮಾಡುತ್ತಾರೆ, ನೂಲಿನಿಂದ ಬಟ್ಟೆ ಹೇಗೆ ನೇಯಲಾಗುತ್ತದೆ ಹಾಗೂ ಎಳೆಗಳ ಸುತ್ತುಗಳನ್ನು ಎಣಿಸುವುದು ಹೇಗೆ ಎಂದು ಅವರು ಖುದ್ದಾಗಿ ತಮ್ಮ ಪುಟ್ಟ ಮೊಮ್ಮಗನಿಗೆ ವಿವರಿಸುತ್ತಿದ್ದರು. ಹೀಗೆ ಆ ಮಗುವಿಗೆ ಭೂಗೋಳ, ಪರಿಸರದ ಅಧ್ಯಯನ, ಗಣಿತ, ಜ್ಯಾಮಿತಿ ಮತ್ತು ನಾಗರಿಕತೆಯ ಬೆಳವಣಿಗೆಯನ್ನು ಹೇಳಿಕೊಡಲಾಗುತ್ತಿತ್ತು.

ನೂಲುವುದು ಮತ್ತು ಅದಕ್ಕೆ ಸಂಬಂಧಿಸಿದ ಇತರ ಪ್ರಕ್ರಿಯೆಗಳ ಬಗ್ಗೆ, ಬೆಳೆದ ವಿದ್ಯಾರ್ಥಿಗಳ ಜ್ಞಾನವನ್ನು ಪರೀಕ್ಷಿಸಲು ಗಾಂಧಿ ರೂಪಿಸುತ್ತಿದ್ದ ಪ್ರಶ್ನೆಗಳು ಸ್ವಲ್ಪ ಕಠಿಣವಾಗಿಯೇ ಇರುತ್ತಿದ್ದವು. ಅವುಗಳನ್ನು ಉತ್ತರಿಸಲು ಕೈಯಿಂದ ನೂಲುವುದರಲ್ಲಿನ ತಾತ್ವಿಕ ಹಾಗೂ ಪ್ರಾಯೋಗಿಕ ಸಮಸ್ಯೆಗಳ ಬಗ್ಗೆ ನೈಪುಣ್ಯತೆ ಇರಬೇಕಾಗಿತ್ತು. ಹೇಗೆ ಪ್ರಾಥಮಿಕ ಶಿಕ್ಷಣ ವಿದ್ಯಾರ್ಥಿಗಳನ್ನು, ಅವರು ಅರ್ಥಮಾಡಿಕೊಳ್ಳುವ ವಯಸ್ಸನ್ನು ತಲುಪಿದ ಕ್ಷಣದಿಂದಲೇ ಕುಟುಂಬದ ಭಾಗಶಃ ಗಳಿಸುವ ಸದಸ್ಯರನ್ನಾಗಿ ಮಾಡುತ್ತದೆ ಎಂಬುದನ್ನು ಗಾಂಧಿ ತೋರಿಸಿದರು. ಆದರೆ, ಈ ಹೊಸ ಅಭ್ಯಾಸದ ಉದ್ದೇಶ ಒಂದು ವೃತ್ತಿಯನ್ನು ಕಲಿಸುವುದಷ್ಟೇ ಅಲ್ಲ, ಬದಲಿಗೆ ಒಂದು ಮಗುವಿನಲ್ಲಿಯ ಸಂಪೂರ್ಣ ವ್ಯಕ್ತಿಯನ್ನು ಬೆಳೆಸುವುದೇ ಆಗಿತ್ತು. ವಿದ್ಯಾರ್ಥಿಗಳನ್ನು ಕುರ್ಚಿಯ ಮೇಲೆ ಕೂರಿಸಿದರೆ, ಅವರು ಉಬ್ಬಿಹೋಗಬಾರದು, ಪೊರಕೆಯನ್ನು ಉಪಯೋಗಿಸಬೇಕೆಂದರೆ ನಾಚಿಕೆ ಪಟ್ಟುಕೊಳ್ಳಬಾರದು ಎಂದು ಅವರು ಬಯಸುತ್ತಿದ್ದರು. ಕೇವಲ ಸಾಕ್ಷರತಾ ತರಬೇತಿ ಯಾರೊಬ್ಬರ ನೈತಿಕ ಮಟ್ಟವನ್ನು ಅಥವಾ ವ್ಯಕ್ತಿತ್ವ ನಿರ್ಮಾಣವನ್ನು ಒಂದು ಇಂಚಿನಷ್ಟೂ ಹೆಚ್ಚಿಸುವುದಿಲ್ಲ ಎಂದು ಅವರು ಒತ್ತಿ ಹೇಳುತ್ತಿದ್ದರು.

ವಿದ್ಯಾರ್ಥಿಗಳ ಸಭೆಗಳಲ್ಲಿ ಅವರು ಆಗಿಂದಾಗ್ಗೆ ಮಾಡುತ್ತಿದ್ದ ಭಾಷಣಗಳಲ್ಲಿ ಮತ್ತು ಕಾಶಿ ವಿದ್ಯಾಪೀಠದಲ್ಲಿನ ಪದವಿಪ್ರದಾನ ಸಮಾರಂಭದ ಭಾಷಣದಲ್ಲಿ, "ವಿದ್ಯಾರ್ಥಿಗಳು ಒಳ್ಳೆಯ ಹುದ್ದೆ ಮತ್ತು ಉದ್ಯೋಗಗಳನ್ನು ಪಡೆಯಲೆಂದು ಅವರನ್ನು ಶಿಕ್ಷಿತರನ್ನಾಗಿ ಮಾಡುತ್ತಿಲ್ಲ. ಬದಲಿಗೆ ರಾಷ್ಟ್ರೀಯ ಜೀವನವನ್ನು ಬಲಗೊಳಿಸಲು, ಅವರನ್ನು ಸಾಹಸಿ ಸೈನಿಕರನ್ನಾಗಿ ಉಳಿಸಲು ಹಾಗೂ ಪ್ರಾಮಾಣಿಕ ಮನುಷ್ಯರನ್ನಾಗಿಸಲು ಅವರಿಗೆ ಶಿಕ್ಷಣ ನೀಡಲಾಗುತ್ತಿದೆ" ಎಂದು ಹೇಳುತ್ತಿದ್ದರು. ರೈತರ ಜೀವನವನ್ನು ಅಭ್ಯಾಸ ಮಾಡುವುದು ಮತ್ತು ಅವರ ಜನರನ್ನು ಹೇಗೆ ಅಭಿವೃದ್ಧಿಪಡಿಸಬಹುದೆಂಬ ಬಗ್ಗೆ ಯೋಚಿಸುವುದು ಸಹ ಅವರ ಕರ್ತವ್ಯವಾಗಿರುತ್ತದೆ. ಲಕ್ಷಗಟ್ಟಲೆ ಜನರಲ್ಲಿನ ಅಸಹಾಯಕತೆಯ ಭಾವನೆಯನ್ನು ನಿರ್ಮೂಲ ಮಾಡಲು ಮತ್ತು ಮೂಢನಂಬಿಕೆಗಳನ್ನು ಹೊಡೆದೋಡಿಸಲು ವಯಸ್ಕರ ಶಿಕ್ಷಣ ಅಗತ್ಯವಾಗಿತ್ತು. ಶಿಕ್ಷಣದ ಬಗ್ಗೆ ರಸ್ಕಿನ್, ಟಾಲ್‌ಸ್ಟಾಯ್ ಮತ್ತು ಠಾಕೂರರಿಗಿದ್ದ ದೃಷ್ಟಿಕೋನಗಳು ಗಾಂಧಿಯವರನ್ನು ಪ್ರಭಾವಿತಗೊಳಿಸಿದವು. ಒಬ್ಬ ಶಿಕ್ಷಣತಜ್ಞನಾಗಿ, ಅವರನ್ನು ವಿಶ್ವದ ಮಹಾನ್ ಪ್ರಯೋಗಶೀಲರಲ್ಲಿ ಒಬ್ಬರೆಂದು ಪರಿಗಣಿಸಬಹುದು. ಬಿಹಾರದಲ್ಲಿ ಅವರು ಕೆಲವು ಶಾಲೆಗಳನ್ನು ತೆರೆದರು. ಬಂಗಾಲದಲ್ಲಿ ಒಂದು ರಾಷ್ಟ್ರೀಯ ಕಾಲೇಜು ಮತ್ತು ಅಹಮದಾಬಾದಿನಲ್ಲಿ ರಾಷ್ಟ್ರೀಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು. ಇಂತಹ ಅನೇಕ ಮೂಲ ವಿಚಾರಗಳನ್ನು ಹೊಂದಿದ್ದ ಈ ಶಿಕ್ಷಕನಿಗೆ ಆತನ ತಾರುಣ್ಯದ ದಿನಗಳಲ್ಲಿ ತಿಂಗಳಿಗೆ 75 ರೂಪಾಯಿಗಳ ಸಂಬಳದ ಶಿಕ್ಷಕನ ಕೆಲಸವನ್ನು ನಿರಾಕರಿಸಲಾಗಿತ್ತು, ಯಾಕೆಂದರೆ, ಗಾಂಧಿ ಪದವೀಧರರಾಗಿರಲಿಲ್ಲ! ಆದರೆ ಅವರು ಆಗ ಲಂಡನ್ನಿನಲ್ಲಿ ಮೆಟ್ರಿಕ್ ಮಾಡಿದ್ದರು ಮತ್ತು ಒಬ್ಬ ಬ್ಯಾರಿಸ್ಟರ್ ಆಗಿದ್ದರು.

ನೇಕಾರ

ಗಾಂಧಿಯವರ ಬಂಧನವಾದ ಮೇಲೆ, ಒಮ್ಮೆ ಮ್ಯಾಜಿಸ್ಟ್ರೇಟರು ಗಾಂಧಿಯವರ ವೃತ್ತಿ ಯಾವುದೆಂದು ಕೇಳಿದರು. ಗಾಂಧಿ ಹೇಳಿದರು: "ನಾನೊಬ್ಬ ನೂಲುವವ, ನೇಕಾರ ಮತ್ತು ರೈತ." ಅವರಿಗಾಗ 74 ವರ್ಷ. ಇಪ್ಪತ್ತೈದು ವರ್ಷಗಳ ಮೊದಲು ಅವರು 'ಹಿಂದ್ ಸ್ವರಾಜ್' ಬರೆದಿದ್ದರು. ಅದರಲ್ಲಿ ಸ್ವದೇಶೀ ವಸ್ತುಗಳನ್ನು ಉಪಯೋಗಿಸುವ ಹಾಗೂ ಭಾರತವನ್ನು ಒಳಗಿನಿಂದ ಮತ್ತು ಹೊರಗಿನಿಂದ ಆಗುವ ಶೋಷಣೆಯಿಂದ ಮುಕ್ತಗೊಳಿಸಬೇಕಾದ ಅವಶ್ಯಕತೆಗೆ ಒತ್ತುಕೊಟ್ಟಿದ್ದರು. ಅಲ್ಲಿಯವರೆಗೂ, ಅವರು ಕೈಮಗ್ಗವನ್ನೇ ನೋಡಿರಲಿಲ್ಲ; ಹಾಗೂ ಚರಕಾ ಮತ್ತು ಕೈಮಗ್ಗಗಳಿಗಿರುವ ವ್ಯತ್ಯಾಸಗಳೂ ಗೊತ್ತಿರಲಿಲ್ಲ. ಆದರೆ ಇಂಗ್ಲೆಂಡಿನಿಂದ ಆಗುತ್ತಿದ್ದ ಬಟ್ಟೆಯ ಆಮದು ಭಾರತದ ನೇಕಾರರನ್ನು ಹೇಗೆ ನಾಶ ಮಾಡಿತ್ತು ಎಂಬುದು ಅವರಿಗೆ ತಿಳಿದಿತ್ತು. ಭಾರತೀಯರು ಸೊಗಸಾದ ವಿದೇಶೀ ಬಟ್ಟೆಗಳಿಗೆ ಒಲವು ತೋರಿಸುವ ಮೂಲಕ, ಒಂದು ವಿದೇಶೀ ಸರ್ಕಾರವು ಭಾರತದ ನೆಲದ ಮೇಲೆ ತನ್ನನ್ನು ತಾನು ದೃಢವಾಗಿ ಸ್ಥಾಪಿಸಿಕೊಳ್ಳಲು ನೆರವಾಗಿದ್ದರು. ಬಟ್ಟೆ ಗಿರಣಿಗಳಲ್ಲಿ ತಯಾರಿಸಿದ ವಸ್ತ್ರಗಳ ರಫ್ತನ್ನು ಹೇಗೆ ಹೆಚ್ಚಿಸಬೇಕೆಂಬ ಬಗ್ಗೆ ಅವರು ಪುಸ್ತಕಗಳಲ್ಲಿ ಓದಿದರು. ಈಸ್ಟ್ ಇಂಡಿಯಾ ಕಂಪೆನಿಯು ಭಾರತೀಯ ನೇಕಾರರನ್ನು ಹೆದರಿಸಿ, ಅತಿ ಸೊಗಸಾದ ಮಸ್ಲಿನ್ ಬಟ್ಟೆಯನ್ನು ನೇಯುತ್ತಿದ್ದ ತಮ್ಮ ಹೆಬ್ಬೆರಳುಗಳನ್ನು ಕತ್ತರಿಸಿಕೊಳ್ಳಲು ಅವರಿಗೆ ಒತ್ತಾಯ ಮಾಡುತ್ತಿತ್ತು.

ಇನ್ನೂರು ವರ್ಷಗಳ ಹಿಂದೆ ವರ್ಷವೊಂದಕ್ಕೆ 30 ಲಕ್ಷ ರೂಪಾಯಿಗಳ ಮೌಲ್ಯದ, ಕೈಯಲ್ಲಿ ನೇಯ್ದ ಬಟ್ಟೆಯನ್ನು ರಫ್ತು ಮಾಡಲಾಗುತ್ತಿತ್ತು. ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಂಡ ಮೇಲೆ, 40 ವರ್ಷಗಳ ಸಮಯದಲ್ಲಿ, ಎಲ್ಲಾ ರಫ್ತುಗಳು ನಿಂತುಹೋದವು; 100 ವರ್ಷಗಳ ನಂತರ, ಭಾರತ ವಾರ್ಷಿಕವಾಗಿ 60 ಕೋಟಿ ರೂಪಾಯಿಗಳ ಮೌಲ್ಯದ, ಬ್ರಿಟನ್ನಿನ ರಫ್ತಿನಲ್ಲಿ ಕಾಲು ಭಾಗದಷ್ಟನ್ನು ಉಪಯೋಗಿಸುತ್ತಿತ್ತು. ಹೀಗೆ, ವಿಶ್ವದ ಅಸೂಯೆಗೆ ಪಾತ್ರವಾಗಿದ್ದ ಭಾರತದ ಕೈಮಗ್ಗದ ಉತ್ಪಾದನೆ ನಾಶವಾಗಿ ಹೋಯಿತು. ನೇಕಾರರು ತಮ್ಮ ಕಸುಬನ್ನು ಕಳೆದುಕೊಂಡು, ಕೃಷಿಯತ್ತ ಹೊರಳಿದರು; ಉಪವಾಸದಿಂದ ಸತ್ತರು. ಒಬ್ಬ ವೈಸ್‌ರಾಯ್ ಹೀಗೆ ಹೇಳಿಕೆ ಇತ್ತರು: "ಹತ್ತಿಬಟ್ಟೆ ನೇಕಾರರ ಮೂಳೆಗಳು ಭಾರತದ ಬಯಲುಸೀಮೆಗಳನ್ನು ಬೆಳ್ಳಗಾಗಿಸಿವೆ. ವಾಣಿಜ್ಯದ ಇತಿಹಾಸದಲ್ಲೇ ಇಂತಹ ಮತ್ತೊಂದು ಕಡುಬಡತನವಿಲ್ಲ."

ವಿಶ್ವವಿಖ್ಯಾತ ಶಬ್ನಂಗಳನ್ನು ನೇಯುತ್ತಿದ್ದ ಬಂಗಾಳದ ಮುಸಲ್ಮಾನರು ಹೇಗೆ ಕೆಲಸವಿಲ್ಲದವರಾಗುತ್ತಿದ್ದಾರೆ ಎಂಬುದನ್ನು ಗಾಂಧಿ ಅರಿತರು. ಪಂಜಾಬಿನ ಹೆಮ್ಮೆಯ ನೇಕಾರರು ತಮ್ಮ ಮಗ್ಗಗಳನ್ನು ಬಿಟ್ಟು ಸೇನೆಯನ್ನು ಸೇರಿ, ಭಾರತವನ್ನು ಬಂಧನದಲ್ಲಿ ಉಳಿಸಲು ಸಹಾಯ ಮಾಡಿದರು. ಒಂದು ಕಾಲದಲ್ಲಿ ಗೌರವಾನ್ವಿತ ಮತ್ತು ಕಲಾತ್ಮಕ ಕಲೆಯಾಗಿದ್ದುದು ಅಪಕೀರ್ತಿಯ ವಿಷಯವಾಯಿತು. ಗುಜರಾತಿನ ನೇಕಾರರು ಕೆಲಸ ಹುಡುಕುತ್ತಾ ತಮ್ಮ ಮನೆಮಠಗಳನ್ನು ತೊರೆದು, ಬೊಂಬಾಯಿಯಂತಹ ದೊಡ್ಡ ದೊಡ್ಡ ನಗರಗಳಿಗೆ ಹೋಗಿ ಝಾಡಮಾಲಿಗಳಾದರು. ತಮ್ಮ ಆರೋಗ್ಯ ನಾಶ ಮಾಡಿಕೊಂಡು, ಕುಡಿತ, ಜೂಜು ಹಾಗೂ ಇನ್ನಿತರ ದುಶ್ಚಟಗಳಿಗೆ ಬಲಿಯಾದರು. ಬಹಳಷ್ಟು ಮನೆಗಳು ಮುರಿದು ಬಿದ್ದವು. ಈ ಕುಶಲಕಲೆಯ ಕಸಬುಗಾರರು ಕೌಶಲ್ಯಹೀನ ಕೆಲಸಗಾರರಾದರು. ನೂಲಿನ ಗಿರಣಿಗಳು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರಾಗಿಸಿದವು.

ಈ ಅವಲಂಬನೆಯಿಂದ, ವಿದೇಶೀ ಬಟ್ಟೆಯ ಆಮದಿನಿಂದ, ತನ್ನ ದೇಶವನ್ನು ಮುಕ್ತಗೊಳಿಸಲು ಗಾಂಧಿ ನಿರ್ಧರಿಸಿದರು. ಅವರಿಗೆ, ಸ್ವದೇಶೀತತ್ವದ ಪಾಲನೆ, ಅಂದರೆ ಸ್ಥಳೀಯವಾಗಿ ಉತ್ಪಾದಿಸಿದ ವಸ್ತುಗಳ ಬಳಕೆಯೇ ಸ್ವರಾಜ್ಯದ ಅಡಿಪಾಯವಾಗಿತ್ತು. ಅವರ ಜೀವನದ ಧ್ಯೇಯ ತನ್ನ ದೇಶವಾಸಿಗಳನ್ನು ಸ್ವಾವಲಂಬಿ ಮತ್ತು ಸ್ವಸಂಪೂರ್ಣರನ್ನಾಗಿ ಮಾಡುವುದಾಗಿತ್ತು. ಅದನ್ನು ಈಡೇರಿಸಲು ಅವರು ಕೆಲವು ನಿಯಮಗಳನ್ನು ಮಂಡಿಸಿದರು. ಸ್ವದೇಶಿ ಬಟ್ಟೆಯನ್ನು ಉತ್ಪಾದಿಸಲು ಹೆಚ್ಚು ಬಟ್ಟೆಗಿರಣಿಗಳನ್ನು ಸ್ಥಾಪಿಸುವುದನ್ನು ಅವರು ಬಯಸಲಿಲ್ಲ. "ಒಂದು ಗಿರಣಿಯನ್ನು ಬಂಡವಾಳಶಾಹಿ ಹೊಂದಿರುತ್ತಾನೆ. ಆ ಗಿರಣಿಯ ಸಂಕೀರ್ಣವಾದ ಯಂತ್ರಭಾಗಗಳು ಹೊರಗಿನಿಂದ ಆಮದಾಗುತ್ತವೆ. ಬಹಳಷ್ಟು ಮಂದಿ ಕೆಲಸಗಾರರು ತಮ್ಮ ಕೈಗಳನ್ನು ಬಳಸುವುದರಿಂದ ವಂಚಿತರಾಗುತ್ತಾರೆ; ಅಲ್ಲದೆ, ಗಿರಣಿಯ ಕಾರ್ಮಿಕರ ಶೋಷಣೆಯಾಗುತ್ತದೆ. ಕೆಲಸಗಾರರನ್ನು ಅವರ ಸ್ವಂತ ಊರುಗಳಿಂದ ಎತ್ತಂಗಡಿ ಮಾಡಿ, ರೋಬೋಗಳಂತೆ ಯಾಂತ್ರಿಕವಾಗಿ ಮಡಿಸಲಾಗುತ್ತದೆ. ನಮ್ಮ ಅಭಿರುಚಿಗಳು ಹೀನಾಯವಾಗದಿದ್ದಲ್ಲಿ, ನಾವು ಮೈಗಂಟಿಕೊಳ್ಳುವ ಕ್ಯಾಲಿಕೋಗೆ ಬದಲು ಖದ್ದರನ್ನೇ ಆಯ್ಕೆ ಮಾಡಿಕೊಳ್ಳುತ್ತೇವೆ. ಜೀವ ತೆಗೆಯುವ ಕಲೆಯೂ ಒಂದಿದೆ, ಜೀವ ಕೊಡುವ ಕಲೆಯೂ ಒಂದಿದೆ. ಅಪಾರ ಪ್ರಮಾಣದಲ್ಲಿ ಯಂತ್ರಗಳಿಂದಾಗುವ ಉತ್ಪಾದನೆ ಒಬ್ಬ ಕಲಾಕಾರನ ಸೃಜನಶೀಲ ತುಡಿತ ಮತ್ತು ಬೆರಳುಗಳ ಕುಶಲತೆಯನ್ನು ಮೊಂಡುಗೊಳಿಸುತ್ತದೆ" ಎಂಬುದನ್ನು ಗಾಂಧಿ ಗಮನಿಸಿದರು. ಅಸ್ಸಾಮಿನ ಸುಂದರ ಮಹಿಳೆಯರು ತಮ್ಮ ಮಗ್ಗಗಳಲ್ಲಿ ಕವನಗಳನ್ನು ನೇಯುವುದನ್ನು ಕಂಡು ಅವರು ಮುದಗೊಂಡಿದ್ದರು.

ಕೈಯಿಂದ ನೇಯುವ ಕಲೆಯನ್ನು ಪುನರ್ಚೇತನಗೊಳಿಸಲು ಗಾಂಧಿ ಬಯಸಿದ್ದರು. "ಒಬ್ಬ ವಕೀಲನಾಗಿದ್ದಲ್ಲಿ, ಆತ ತನ್ನ ವೃತ್ತಿಯನ್ನು ಬಿಟ್ಟು ಕೈಮಗ್ಗ ನೇಕಾರಿಕೆಯನ್ನು ಮಾಡುತ್ತಾನೆ; ಒಬ್ಬ ವೈದ್ಯನಾಗಿದ್ದರೆ, ಆತ ವೈದ್ಯವೃತ್ತಿ ಬಿಟ್ಟು ಕೈಮಗ್ಗವನ್ನು ಹಿಡಿಯುತ್ತಾನೆ" ಎಂದು ಗಾಂಧಿ ಸಲಹೆ ನೀಡಿದರು. ನೇಕಾರರೊಡನೆ ನೇರ ಸಂಪರ್ಕಕ್ಕೆ ಬಂದ ಗಾಂಧಿ, ಕೈಮಗ್ಗಗಳ ಬಗ್ಗೆ ಪ್ರಥಮ ಮಾಹಿತಿ ಪಡೆದರು. ಅಹಮದಾಬಾದ್ ಕೈಮಗ್ಗ ಉದ್ದಿಮೆಯ ಕೇಂದ್ರವಾಗಿ ಇದ್ದುದರಿಂದ, ಭಾರತದಲ್ಲಿ ತಮ್ಮ ಮೊದಲ ಆಶ್ರಮವನ್ನು ಸ್ಥಾಪಿಸಲು ಅಹಮದಾಬಾದನ್ನೇ ಆಯ್ದುಕೊಂಡರು. ಸಬರಮತಿ ಆಶ್ರಮದಲ್ಲಿ ಅವರು ಕೈಮಗ್ಗಗಳನ್ನು ಅಳವಡಿಸಿದರು. ಎಲ್ಲಾ ಆಶ್ರಮವಾಸಿಗಳು ಸ್ವದೇಶೀ ತತ್ವವನ್ನು ಪಾಲಿಸಿದರು. ತಮ್ಮದೇ ಕೈಮಗ್ಗದಲ್ಲಿ ತಯಾರಿಸಲಾದ ಬಟ್ಟೆಗಳನ್ನೇ ಅವರು ಉಪಯೋಗಿಸಿದರು. ಧ್ಯೇಯ ಏನಿತ್ತೆಂದರೆ: "ನಿಮಗೆ ಅಗತ್ಯವಾದದ್ದನ್ನೇ ನೇಯಿರಿ ಅಥವಾ ಅದಿಲ್ಲದಿದ್ದರೆ ಇರಿ." ಒಬ್ಬ ನುರಿತ ನೇಕಾರನನ್ನಿಟ್ಟು, ನೇಯ್ಗೆಯ ತರಗತಿಯನ್ನು ಸಹ ಆರಂಭಿಸಲಾಯಿತು. ಆಶ್ರಮದ ಕೆಲ ಸದಸ್ಯರು ದಿನಕ್ಕೆ ಎಂಟು ಗಂಟೆಗಳ ಕಾಲ ಮಗ್ಗ ಆಡಿಸಲಾರಂಭಿಸಿದರು. 45 ವಯಸ್ಸಿನ ಗಾಂಧಿ ಪ್ರತಿ ದಿನಾ ನಾಲ್ಕೈದು ಗಂಟೆಗಳವರೆಗೆ ಮಗ್ಗದ ಕೆಲಸ ಮಾಡತೊಡಗಿದರು. ಪ್ರತಿಯೊಬ್ಬ ನೇಕಾರನೂ ದಿನಕ್ಕೆ 12 ಆಣೆಗಳಷ್ಟು ಕೂಲಿ ಪಡೆಯುತ್ತಿದ್ದ. ಆರಂಭದಲ್ಲಿ, 30 ಇಂಚು ಅಗಲದ ಬಟ್ಟೆಯನ್ನು ನೇಯಲಾಗುತ್ತಿತ್ತು. ಆದರೆ ಅದು ಮಹಿಳೆಯರು ಉಡುವಷ್ಟು ಅಗಲ

ವಾಗಿರಲಿಲ್ಲ. ಹೀಗಾಗಿ, ಆಶ್ರಮದ ಮಹಿಳೆಯರು ಬಟ್ಟೆಯ ತುಂಡುಗಳನ್ನು ಸೇರಿಸಿ ಸೀರೆಯಾಗಿ ಹೊಲಿದಿದ್ದನ್ನು ಉಡಬೇಕಾಗುತ್ತಿತ್ತು. ಒಂದು ದಿನ ಒಬ್ಬ ಮಹಿಳೆ ತನ್ನ ಸೀರೆಯ ಅಗಲ ಕಡಿಮೆ ಇದೆಯೆಂದು ದೂರಿ, ಗಿರಣಿಬಟ್ಟೆಯನ್ನು ಉಪಯೋಗಿಸಬಯಸಿದಳು. ಆಕೆಯ ಗಂಡ ಗಾಂಧಿಯ ಸಲಹೆಯನ್ನು ಕೇಳಿದ; ಗಾಂಧಿ ಅಗಲದ ಮಗ್ಗದ ಮೇಲೆ ನೇಯುವುದನ್ನು ಕಲಿಯಬೇಕೆಂದು ಆತನಿಗೆ ಹೇಳಿದರು. ನಂತರ, ಬಹಳ ಬೇಗನೆಯೆ, ಆಶ್ರಮದಲ್ಲಿ ಹೆಚ್ಚು ಅಗಲವಿದ್ದ ಸೀರೆ ಮತ್ತು ಧೋತಿಗಳನ್ನು ನೇಯತೊಡಗಿದರು. ಇತರ ವೃತ್ತಿಪರ ನೇಕಾರರು ಕೈಯಿಂದ ತೆಗೆದ ನೂಲಿನಿಂದ ನೇಯತೊಡಗಿದರು, ಆದರೆ ಅವರು ಅದಕ್ಕೆ ಹೆಚ್ಚು ದರ ವಿಧಿಸುತ್ತಿದ್ದರು. ಅಲ್ಲದೆ, ಗಿರಣಿ ನೂಲಿನಲ್ಲಿ ನೇಯುವುದು ಸುಲಭದ ಕೆಲಸವಾದ್ದರಿಂದ, ಅದನ್ನೇ ಹೆಚ್ಚು ಇಷ್ಟಪಡುತ್ತಿದ್ದರು. ಸ್ವಾತಂತ್ರ್ಯದ ನಂತರ, ಸರ್ಕಾರವು ನೂಲುವವರಿಗೆ ಸಹಾಯಧನ ನೀಡಬೇಕೆಂದು ಒಬ್ಬ ಖಾದಿ ಕಾರ್ಮಿಕ ಸಲಹೆ ನೀಡಿದ. ನೇಕಾರರು ಒಂದು ನಿರ್ದಿಷ್ಟ ಪ್ರಮಾಣದ ಕೈಯಿಂದ ತೆಗೆದ ನೂಲನ್ನು ನೇಯುವವರೆಗೂ, ಅವರಿಗೆ ಸಲ್ಲಬೇಕಾದ ಹಿಸ್ಸೆಯ ಗಿರಣಿ ನೂಲನ್ನು ಅವರಿಗೆ ಕೊಡಬಾರದೆಂದರು. ಇಂತಹ ಯಾವುದೇ ವಿಧವಾದ ಬಲವಂತದಿಂದ ಅವರಿಗೆ ಖಾದಿ ಎಂದರೇನೇ ಇಷ್ಟವಾಗದಿರಬಹುದು, ನೇಕಾರರೂ ಹೀಗೆ ಬಲವಂತಕ್ಕೊಳಗಾಗಲು ನಿರಾಕರಿಸಬಹುದು ಎಂದ ಗಾಂಧಿ ಈ ವಿಚಾರಗಳನ್ನು ಬೆಂಬಲಿಸಲಿಲ್ಲ. ಕೈಯಿಂದ ತೆಗೆದ ನೂಲನ್ನು ನೇಯುವುದರಲ್ಲಿ ನೇಕಾರರಿಗೆ ಆಗುವ ಕಷ್ಟ ಕಡಿಮೆಯಾಗುವಂತೆ ನೂಲನ್ನೇ ಸುಧಾರಿತಗೊಳಿಸಲು ಗಾಂಧಿ ಅವರಿಗೆ ಸಲಹೆ ನೀಡಿದರು. ಗಿರಣಿ ನೂಲಿನ ಮೇಲೆ ನೇಕಾರರಿಗಿರುವ ಅವಲಂಬನೆಯು ಕೊನೆಯಲ್ಲಿ ಅವರ ವೃತ್ತಿಗೇ ಮುಳುವಾಗುತ್ತದೆ ಎಂದೂ ಸಹ ಅವರು ನೇಕಾರರನ್ನು ಎಚ್ಚರಿಸಿದರು. ಗಿರಣಿ ಮಾಲೀಕರು ಪರೋಪಕಾರಿಗಳೇನಲ್ಲ. ಕೈಮಗ್ಗದ ವಸ್ತ್ರಗಳು ಗಿರಣಿ ವಸ್ತ್ರಗಳೊಂದಿಗೆ ಸಿದ್ಧವಾಗುತ್ತಿರುವುದನ್ನು ಗ್ರಹಿಸಿದ ಕ್ಷಣದಲ್ಲೇ ಅವರು ಕೈಮಗ್ಗ ನೇಕಾರರ ಕೊರಳ ಸುತ್ತ ಜೀರುಕುಣಿಕೆಯನ್ನು ಬಿಗಿಯಾಗಿ ಎಳೆಯುತ್ತಾರೆ. "ನಾವು ಸಾರ್ವತ್ರಿಕ ನೇಕಾರಿಕೆಯನ್ನು ಅಳವಡಿಸಿಕೊಂಡಿದ್ದಲ್ಲಿ, ಕೈಯಿಂದ ತೆಗೆದ ನೂಲಿನಿಂದ ನೇಯುವ ಬಗ್ಗೆ ಇರುವ ಈ ಎಲ್ಲಾ ಕಷ್ಟಗಳು ಉದ್ಭವಿಸುತ್ತಿರಲಿಲ್ಲ. ನೂಲುವ ವಿಷಯದಲ್ಲಿ ಮಾಡಿದಂತೆ, ಎಲ್ಲರೂ ನೇಕಾರಿಕೆಯನ್ನು ಕಲಿಯಬೇಕೆಂದು ನಾನು ಒತ್ತಾಯಿಸದೇ ಇದ್ದುದ್ದು ತಪ್ಪಾಯಿತು" ಎಂದು ಗಾಂಧಿ ಒಪ್ಪಿಕೊಂಡರು.

ನೂಲುವವ

ಗಿರಣಿಗಳು ಒದಗಿಸಿದ ನೂಲಿನಿಂದ ಕೈಮಗ್ಗದ ಮೇಲೆ ನೇಯುವುದನ್ನು ಗಾಂಧಿ ಕಲಿತರು. ಅವರಿಗೆ ಇದೇನೂ ತೃಪ್ತಿ ಕೊಡಲಿಲ್ಲ. ಯಾಕೆಂದರೆ, ಅದು ಸ್ವಯಂಪೂರ್ಣತೆ ಅಲ್ಲವಲ್ಲ. ಹತ್ತಿ ಬೆಳೆಯುವುದರಿಂದ ಹಿಡಿದು, ಅದರ ಬೀಜಗಳನ್ನು ಬೇರ್ಪಡಿಸಿ ಹಿಂಜುವವರೆಗೂ ಬಟ್ಟೆ ತಯಾರಿಕೆಯ ಸಂಪೂರ್ಣ ಪ್ರಕ್ರಿಯೆಯನ್ನು ಅವರು ಕರಗತ ಮಾಡಿಕೊಳ್ಳಬಯಸಿದ್ದರು. ಒಂದು ಕಾಲದಲ್ಲಿ ಹಳ್ಳಿಯ ಪ್ರತಿಯೊಂದು ಮನೆಯಲ್ಲೂ ಗುಂಯ್‌ಗುಡುತ್ತಿದ್ದ, ಈಗ ಮೂಲೆಗುಂಪಾಗಿರುವಂಥ ಒಂದು ಚರಕಾಕ್ಕಾಗಿ ಅವರು ಹುಡುಕಲಾರಂಭಿಸಿದರು. ಒಬ್ಬ ಮಹಿಳಾ ಕೆಲಸಗಾರ್ತಿ ಒಂದು ಹಳ್ಳಿಯಲ್ಲಿ ಚರಕಾ ಕೆಲಸ ಮಾಡುತ್ತಿದ್ದುದನ್ನು ಮೊದಲು ಕಂಡುಹಿಡಿದಳು. ಆ ಬಗ್ಗೆ ಅವಳು ಗಾಂಧಿಗೆ ಸೂಚನೆ ಕೊಟ್ಟಳು. ಗಾಂಧಿ ಒಡನೆಯೆ ಆಶ್ರಮವಾಸಿಗಳಿಗೆ ಚರಕಾ ಬಳಸುವುದನ್ನು ಹೇಳಿಕೊಡಲು ಒಬ್ಬ ನಿಪುಣ ನೂಲುವವನನ್ನು ನೇಮಿಸಿದರು. ಅನಾರೋಗ್ಯದಿಂದ ಚೇತರಿಸಿಕೊಳ್ಳುತ್ತಿದ್ದ ಅವರಿಗೆ ಚಕ್ರದ ಗುಂಯ್‌ಗುಡುವ ಸಂಗೀತ ಹಾಯೆನಿಸಿತು. ಆಮೇಲೆ ಅವರು ಚರಕಾ ತಿರುಗಿಸುವುದನ್ನು ಕಲಿತರು. ಪ್ರತೀ ದಿನ ಅರ್ಧ ಗಂಟೆಯಷ್ಟು ನೂಲುವವರೆಗೂ ಆಹಾರ ತೆಗೆದುಕೊಳ್ಳುವುದಿಲ್ಲ ಎಂದು ಅವರು ಶಪಥ ತೊಟ್ಟರು.

ನೂಲುವುದು ಎಂದರೆ ಅವರಿಗೆ ಒಂದು ಧಾರ್ಮಿಕ ಕರ್ಮವಾಗಿತ್ತು. ತಮ್ಮ ಈ ಶಪಥಕ್ಕೆ ಅವರು ತಾವು ಬದುಕಿರುವವರೆಗೂ, 30 ವರ್ಷಗಳ ಕಾಲ, ಬದ್ಧರಾಗಿದ್ದರು. ಪ್ರಯಾಣ ಮಾಡುವಾಗಲೂ ಚಲಿಸುತ್ತಿದ್ದ ರೈಲಿನಲ್ಲಿ ಅಥವಾ ಹೊಯ್ದಾಡುತ್ತಿದ್ದ ಹಡಗಿನಲ್ಲಿ ನೂಲುತ್ತಿದ್ದರು. ಇಡೀ ದಿನ ಜನರನ್ನು ಭೇಟಿ ಮಾಡುವುದರಲ್ಲಿ, ಅವರೊಂದಿಗೆ ಪ್ರಮುಖ ವಿಷಯಗಳನ್ನು ಚರ್ಚಿಸುವುದರಲ್ಲಿ ಅಥವಾ ಸಾರ್ವಜನಿಕ ಸಭೆಗಳಲ್ಲಿ ಮಾತನಾಡುವುದರಲ್ಲಿ ಮಗ್ನರಾಗಿದ್ದರೆ, ಮಧ್ಯರಾತ್ರಿಯಲ್ಲಿ ತಮ್ಮ ಅಂದಿನ ಪಾಲನ್ನು ನೂಲುತ್ತಿದ್ದರು. ಒಮ್ಮೆ ಹಲವಾರು ತಿಂಗಳುಗಳ ಕಾಲ ಅವರ ಬಲತೋಳು ನೋಯುತ್ತಿತ್ತು. ಆದರೆ ಅವರು ನೂಲುವುದನ್ನು ಎಡಗೈಯಿಂದ ಮುಂದುವರಿಸಿದರು.

ಸಾರ್ವಜನಿಕ ಸಭೆಗಳಲ್ಲಿ ವೇದಿಕೆಯ ಮೇಲೆ ಕುಳಿತಾಗಲೂ ಅವರು ನೂಲುತ್ತಿದ್ದರು. ಒಮ್ಮೆ ಗಾಂಧಿಯವರೊಡನೆ ದೀರ್ಘ ಮಾತುಕತೆ ನಡೆಸಿದ ರವೀಂದ್ರನಾಥ ಠಾಕೂರರು ಗಾಂಧಿಯವರ ಸಮಯವನ್ನು ತಾವು ವೃಥಾ ಪೋಲು ಮಾಡಿದೆನೇನೋ ಎಂದರು. ಗಾಂಧಿ ಉತ್ತರಿಸಿದರು: "ಇಲ್ಲ. ಸಂಭಾಷಣೆ ನಡೆಸುತ್ತಿದ್ದಾಗ, ನಾನು ಬಿಡುವೇ ಇಲ್ಲದಂತೆ ನೂಲುತ್ತಿದ್ದೆ. ನಾನು ನೂಲುವ ಒಂದೊಂದು ನಿಮಿಷಕ್ಕೂ, ದೇಶದ ಸಂಪತ್ತಿಗೆ ನಾನು ಸೇರಿಸುತ್ತಿದ್ದೇನೆ ಎಂದು ನನಗನ್ನಿಸುತ್ತದೆ. ಒಂದು ಕೋಟಿ ಜನ ದಿನವೊಂದಕ್ಕೆ ಒಂದು ತಾಸು ಕಾಲ ನೂಲು ತೆಗೆದರೆ, ರಾಷ್ಟ್ರೀಯ ಸಂಪತ್ತಿಗೆ ನಾವು ಪ್ರತೀ ದಿನ 50000 ರೂಪಾಯಿಗಳನ್ನು ಸೇರಿಸಬಲ್ಲೆವು. ಈ ನೂಲುವ ಚಕ್ರ ಒಬ್ಬ ಅಥವಾ ಒಬ್ಬಳನ್ನು ಅವರ ಕಸುಬಿನಿಂದ ಉಚ್ಚಾಟನೆ ಮಾಡುವುದಕ್ಕಾಗಿ ಇಲ್ಲ." ಬಡವರು ತಮ್ಮದೇ ನೂಲಿನಿಂದ ತಯಾರಿಸಿದ ಖಾದಿಯನ್ನು ಬಳಕೆ ಮಾಡುವ ಮೂಲಕ ಸ್ವಸಂಪೂರ್ಣರಾಗಬೇಕು; ಮತ್ತು ಶ್ರೀಮಂತರು ಒಂದು ವಿಧಿಯಂತೆ ನೂಲು ತೆಗೆದು ಬಡವರಿಗೆ ದಾನ ಮಾಡಬೇಕೆಂದು

ಗಾಂಧಿ ಬಯಸಿದ್ದರು. ಅಂದಿನ ಕಾಲದ ಯಾವುದೇ ಭಾರತೀಯ ಕರ್ಮಯಜ್ಞವನ್ನು ಮಾಡದೇ ಇರಲು ಅವರು ಬಿಡಲಿಲ್ಲ. ರಾಮನ್ ಮತ್ತು ಠಾಕೂರರಂತಹ ವ್ಯಕ್ತಿಗಳು ಸಾಂಕೇತಿಕವಾಗಿ ನೂಲಬೇಕೆಂದು ಅವರು ಅಪೇಕ್ಷಿಸಿದರು. ರಾಜಕುಮಾರ ಹಾಗೂ ರೈತರಿಬ್ಬರೂ ಹೇಗೆ ಉಣಬೇಕು ಹಾಗೂ ಉಡಬೇಕೋ, ಅದೇ ರೀತಿ ಇಬ್ಬರೂ ಶ್ರಮ ಪಡಬೇಕು ಎಂಬುದು ಗಾಂಧಿಯವರ ನಂಬಿಕೆಯಾಗಿತ್ತು. "ನಾನು ಎಳೆಯುವ ಒಂದೊಂದು ನೂಲಿನಿಂದಲೂ ನಾನು ಭಾರತದ ಅದೃಷ್ಟವನ್ನು ನೂಲುತ್ತಿದ್ದೇನೆ ಎಂಬುದು ನನ್ನ ನಿಶ್ಚಿತವಾದ ಅಭಿಪ್ರಾಯ. ನೂಲುವ ಚಕ್ರವಿಲ್ಲದೇ ಹೋದಲ್ಲಿ, ನಮ್ಮ ಈ ದೇಶಕ್ಕೆ ಮೋಕ್ಷವೆಂಬುದೇ ಇಲ್ಲ" ಎಂಬ ಹೇಳಿಕೆಯನ್ನು ಗಾಂಧಿ ಇತ್ತರು. ವಿದ್ಯಾರ್ಥಿಗಳಿಗೆ ಅವರು ಹೀಗೆ ಹೇಳಿದರು: "ನೀವು ಖಾದಿ ಧರಿಸಿದರೆಂದರೆ, ಧರಿಸುವ ಒಂದೊಂದು ಗಜಕ್ಕೂ ಒಂದಷ್ಟು ಯಡ್ಡು ಬಡವರ ಜೇಬಿಗೆ ಹೋಗುತ್ತದೆ ಎಂದರ್ಥ. ಕೈಮಗ್ಗದ ಒರಟು ಬಟ್ಟೆ ಜೀವನದ ಸರಳತೆಯನ್ನು ಸೂಚಿಸುತ್ತದೆ. ಖಾದಿಗೆ ಅದರದೇ ಆದ ಆತ್ಮವೊಂದಿದೆ." ತಮ್ಮ ಜೀವಮಾನದಲ್ಲಿ, ಖಾದಿಯ ಗುಣಮಟ್ಟವನ್ನು ಕಳಪೆಗೊಳಿಸುವುದನ್ನಾಗಲೀ, ಗ್ರಾಹಕರ ಮೂಲ ಅಭಿರುಚಿಗಳನ್ನು ಕೆಡಿಸುವುದನ್ನಾಗಲೀ ಅವರು ಎಂದೂ ಪ್ರೋತ್ಸಾಹಿಸಲಿಲ್ಲ. ಖಾದಿಯನ್ನು ಬಿಳಿ ಮಾಡುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಜನಪ್ರಿಯ ಖಯಾಲಿ ಗಳನ್ನು ಪ್ರೋತ್ಸಾಹಿಸದೆ, ಜನರಲ್ಲಿ ಹೊಸ ಅಭಿರುಚಿಯನ್ನು ಹುಟ್ಟುಹಾಕಬೇಕೆಂದು ಅವರು ಖಾದಿ ಭಂಡಾರಗಳಿಗೆ ಹೇಳಿದರು.

ವರ್ಷದಲ್ಲಿ ನಾಲ್ಕಾರು ತಿಂಗಳುಗಳ ಕಾಲ ಕೆಲಸವಿಲ್ಲದೆ ಸುಮ್ಮನೆ ಇರುತ್ತಿದ್ದ ಗ್ರಾಮಸ್ಥರು ಚರಕಾ ತಿರುಗಿಸಬೇಕೆಂದು ಅವರು ಬಯಸಿದರು. ಈ ಯಂತ್ರಯುಗದಲ್ಲಿ ಈ ಪುರಾತನವಾದ ಕಲೆಯನ್ನು ಪುನಶ್ಚೇತನಗೊಳಿಸುವ ಗಾಂಧಿಯವರ ಪ್ರಯತ್ನಕ್ಕೆ ವಿಮರ್ಶಕರೆಲ್ಲಾ ನಕ್ಕರು. ಗಾಂಧಿ ವಾದಿಸಿದರು: "ಸೂಜಿ ಹೊಲಿಗೆಯಂತ್ರಕ್ಕೆ ಇನ್ನೂ ಸ್ಥಾನ ಬಿಟ್ಟುಕೊಟ್ಟಿಲ್ಲ. ಟೈಪ್‌ರೈಟರ್ ಇದ್ದಾಗ್ಯೂ ಕೂಡ ಕೈ ತನ್ನ ನೈಪುಣ್ಯತೆಯನ್ನು ಕಳೆದುಕೊಂಡಿಲ್ಲ. ನೂಲಿನ ಗಿರಣಿಗಳು ಮತ್ತು ನೂಲುವ ಚಕ್ರಗಳು ಒಟ್ಟೊಟ್ಟಿಗೇ ಅಸ್ತಿತ್ವದಲ್ಲಿರಬಹುದು. ನೂಲುವ ಚಕ್ರವನ್ನು ಸಾರ್ವತ್ರಿಕವಾಗಿಸಬಹುದು; ಅವು ಮೂಲೆಯಲ್ಲಿರುವ ಗ್ರಾಮಸ್ಥರನ್ನೂ ತಲುಪ ಬಹುದು. ಆದರೆ ಗಿರಣಿ ಜನತೆಯ ಒಂದು ಅಂಶದಷ್ಟನ್ನೂ ಸಹ ತಲುಪುವುದು ಸಾಧ್ಯವಿಲ್ಲ."

1921ರಲ್ಲಿ, ಅಸಹಕಾರ ಚಳುವಳಿಯನ್ನು ಆರಂಭಿಸುವ ಮತ್ತು ವಿದೇಶೀ ವಸ್ತ್ರಗಳನ್ನು ಬಹಿಷ್ಕರಿಸುವ ಮೊದಲು ಅವರನ್ನು ನೋಡಲೆಂದು ಸಂದರ್ಶಕರು ಬಂದಾಗ, ಅವರ ಮುಂದೆ ಕುಳಿತುಕೊಂಡು, ತಾವು ಮತ್ತು ತಮ್ಮ ಪತ್ನಿ ತಮ್ಮ ಬಟ್ಟೆಯನ್ನು ತಾವೇ ಹೇಗೆ ನೇಯುತ್ತಿದ್ದರು ಎಂಬುದನ್ನು ತೋರಿಸಲು, ಚರಕಾ ಕೆಲಸದಲ್ಲಿ ತೊಡಗಿಕೊಂಡರು. ಹಗಲೂ ರಾತ್ರಿ ಅದರ ಬಗ್ಗೆಯೇ ಮಾತನಾಡುತ್ತಿದ್ದರು. ಅದರ ಬಗ್ಗೆಯೇ ಬರೆದರು ಮತ್ತು ಇಡೀ ದೇಶಕ್ಕೆ ಸ್ಫೂರ್ತಿ ತುಂಬಿದರು. ಮೋತಿಲಾಲ್ ನೆಹರೂ ತಮ್ಮ ಎಲ್ಲಾ ವಿದೇಶೀ ವಸ್ತ್ರಗಳನ್ನು ಸುಟ್ಟುಹಾಕಿ, ಖಾದಿ ಧರಿಸತೊಡಗಿದರು. ಒಮ್ಮೆ ಅಲಹಾಬಾದಿನ ಬೀದಿಗಳಲ್ಲಿ ತಿರುಗುತ್ತಾ ಖಾದಿಯನ್ನು ಮಾರಿದರು. ಸಾವಿರಾರು ಮಂದಿ ಇದನ್ನೇ ಅನುಸರಿಸಿದರು.

1925ರಲ್ಲಿ ಚರಕ ಸಂಘವನ್ನು ಸ್ಥಾಪಿಸಲಾಯಿತು ಮತ್ತು 50,000 ಚರಕಾಗಳು ತಿರುಗಲಾರಂಭಿಸಿದವು. 1,500 ಹಳ್ಳಿಗಳಲ್ಲಿ, ನೇಕಾರರು, ಮುದ್ರಣಕಾರರು, ಬಣ್ಣ ಹಾಕುವವರು ಮತ್ತು ದರ್ಜಿಗಳಲ್ಲದೆ ಸುಮಾರು 50,000 ನೂಲುವವರಿಗೆ ಕೆಲಸ ಸಿಕ್ಕಿತು. ತಕಲಿ ಮತ್ತು ಚರಕಾಗಳ ತಯಾರಿಕೆ ಹಳ್ಳಿಯ ಬಡಗಿಗಳಿಗೆ ಮತ್ತು ಕಮ್ಮಾರರಿಗೆ ಕೆಲಸ ಒದಗಿಸಿತು. ಚರಕಾ ಮತ್ತೆ ಜನತೆಗೆ ಜೀವದಾಯಿ ಆಯಿತು. ಮಹಿಳೆಯರ ಪರಿಶುದ್ಧತೆಯ ರಕ್ಷಕನಾಯಿತು ಹಾಗೂ ಹಸಿದ ಬಾಯಿಗಳಿಗೆ ತುತ್ತು ತುಂಬುವ ಚೀಲವಾಯಿತು.

ಮುಂದಿನ ಐದು ವರ್ಷಗಳ ಸಮಯದಲ್ಲಿ, ಖಾದಿಯ ಉತ್ಪಾದನೆ ಮತ್ತು ಮಾರಾಟ ಹೆಚ್ಚಿತು ಹಾಗೂ ಒಂದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ನೂಲುವವರ ನೇಮಕವಾಯಿತು. ಖಾದಿ ತಯಾರಿಕೆಯ ಎಲ್ಲಾ ಪ್ರಕ್ರಿಯೆಗಳಲ್ಲಿಯೂ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಯಿತು. ಗಾಂಧಿ ದೃಢವಾಗಿ ಹೇಳಿದರು: "ನನಗೆ ಕಂಡುಬರುವಂತೆ, ಈ ಪುಟಾಣಿ ಗಿರಣಿಯ ಜೊತೆ ಸ್ಪರ್ಧಿಸುವಂಥದ್ದು ಈ ವಿಶ್ವದಲ್ಲೇ ಯಾವುದೂ ಇಲ್ಲ. ಚರಕಾ ಸಂಘವು 18 ವರ್ಷಗಳಲ್ಲಿ ತೊಡಗಿಸಿದ ಬಂಡವಾಳ ವೆಚ್ಚದಷ್ಟೇ ಮೊತ್ತದಲ್ಲಿ, ಕಡುಬಡವ ಪುರುಷರ-ಮಹಿಳೆಯರ ಕಿಸೆಗಳಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ತುಂಬಿದಂಥ, ಮತ್ತೊಂದು ಕೈಗಾರಿಕೆ ಅಥವಾ ಕೈಗಾರಿಕಾ ನಿಗಮವನ್ನು ತೋರಿಸಿ" ಹತ್ತಿಗಾಗಿ ಒಂದೇ ಒಂದು ಪೈಸ (ಒಂದು ಅರ್ಧಾಣೆ) ತೊಡಗಿಸಿ ನೂಲುವುದರಲ್ಲಿ ತೊಡಗಿಕೊಂಡ ಕುಟುಂಬಗಳಿದ್ದವು. ಇದು ಮರುದಿನ ಆದ ಮಾರಾಟದಿಂದ ಇಮ್ಮಡಿಯಾಯಿತು. ಹೀಗೆ ನಿಧಾನವಾಗಿ ನೂಲುವವರು ತಮ್ಮದೇ ಆದ ಬಟ್ಟೆ ಹೊಂದುವುದು ಸಾಧ್ಯವಾಯಿತು.

ಕಡಿಮೆ ವೆಚ್ಚದಲ್ಲಿ ಒಳ್ಳೆಯ ನೂಲನ್ನು ಕೊಡಬಲ್ಲಂಥ ಚರಕಾಕ್ಕಾಗಿ ಒಂದು ಲಕ್ಷ ರೂಪಾಯಿಗಳ ಬಹುಮಾನವನ್ನು ಘೋಷಿಸಲಾಯಿತು. ಯರವಾಡ ಸೆರೆಮನೆಯಲ್ಲಿ ಗಾಂಧಿ ಒಂದು ಚರಕಾದ ಬಾಕ್ಸ್ ಮಾದರಿಗೆ ಸೂಕ್ತವಾದ ಆಕಾರವನ್ನು ರೂಪಿಸಿದರು. ಇದೇ ಯರವಾಡ ಚಕ್ರ ಎಂದು ಹೆಸರುವಾಸಿಯಾಯಿತು. ಮತ್ತೊಂದು ಅಗ್ಗದ ಮತ್ತು ಸರಳವಾದ ನೂಲು ತೆಗೆಯುವ ಯಂತ್ರರಚನೆಯುಳ್ಳ ಧನುಶ್ ತಕಲಿಯನ್ನೂ ಗಾಂಧಿಯವರು ಜನಪ್ರಿಯಗೊಳಿಸಿದರು. ತಾವು ಚರಕಾದಲ್ಲಿ ತೆಗೆಯುವಷ್ಟು ವೇಗದಲ್ಲೇ, ಇದರಲ್ಲೂ ಅಷ್ಟೇ ಉತ್ತಮವಾದ ಮತ್ತು ಗಟ್ಟಿಯಾದ ನೂಲನ್ನು ತೆಗೆಯಬಲ್ಲೆ ಎಂದು ಅವರು ಕಂಡುಕೊಂಡರು. ಅವರು ತಕಲಿಯ ಮೇಲೂ ನೂಲುತ್ತಿದ್ದರು. ಅವರ ನೂಲು ಅಷ್ಟು ಉತ್ತಮವಾಗಿರುತ್ತಿರಲಿಲ್ಲವಾದರೂ, ಚೆನ್ನಾಗಿ ಮತ್ತು ಸಮನಾಗಿ ಹೊಸೆದಿರುತ್ತಿತ್ತು. ಅವರು ಕಸ್ತೂರ್‌ಬಾಗೆ ತಮ್ಮ ನೂಲಿನಿಂದ ಮಾಡಿದ ಸೀರೆಗಳನ್ನು ಉಡುಗೊರೆಯಾಗಿ ಕೊಡುತ್ತಿದ್ದರು. ಕಸ್ತೂರ್‌ಬಾ ಸಹ ನಿಯಮಿತವಾಗಿ ನೂಲುತ್ತಿದ್ದರು.

ನೂಲುವುದರಿಂದ ನೂಲುವವರ ಆದಾಯಕ್ಕೆ ದಿನಕ್ಕೆ ಒಂಯೋ ಎರಡೋ ಆಣೆ ಸೇರುತ್ತದೆ ಎಂದು ಯಾರೋ ಒಮ್ಮೆ ಹೇಳಿದರು. ಗಾಂಧಿ ಆಗ ಹೇಳಿದರು: "ಭಾರತದಲ್ಲಿ ಪ್ರತಿ ತಲೆಗೆ ದಿನವೊಂದಕ್ಕೆ ಇರುವ ಸರಾಸರಿ ಆದಾಯ ಕೇವಲ ಮೂರು ಪೈಸೆ. ಆ ಆದಾಯವನ್ನು ಚರಕಾದ ಸಹಾಯದಿಂದ ಇನ್ನೂ ಮೂರು ಪೈಸೆಗಳಿಂದ ನಾನು ಹೆಚ್ಚಿಸಬಲ್ಲೆನಾದರೆ, ಚರಕಾವನ್ನು ನಾನು ಕಾಮಧೇನು ಎಂದು ಕರೆಯುವುದು ಸರಿಯಾಗಿಯೇ ಇದೆ ತಾನೆ ?"

ಕೆಲವೊಮ್ಮೆ ಒಂದು ತಾಸಿಗೆ ಕೇವಲ ಎರಡು ಪೈಸೆಗಳನ್ನು ಗಳಿಸಲು ದಿನಕ್ಕೆ 10 ಮೈಲು ದೂರ ನಡೆಯುವ ಹಳ್ಳಿಯ ಮಹಿಳೆಯರು ಮತ್ತು ನೂಲುವವರಿಗೆ ಒಂದು ಜೀವನಭತ್ಯೆಯನ್ನು ಕೊಡಬೇಕೆಂದು ಗಾಂಧಿ ಆಗ್ರಹಿಸಿದರು. ಆಮೇಲೆ ದಿನಕ್ಕೆ ಮೂರು ಆಣೆಗಳನ್ನು ಕನಿಷ್ಠ ಭತ್ಯೆಯಾಗಿ ನಿಗದಿ ಮಾಡಲಾಯಿತು.

ಗಾಂಧಿ ಚರಕಾದ ಮೌಲ್ಯವನ್ನು ಹಣದಿಂದ ಅಳೆಯಲಿಲ್ಲ; ಜನತೆಯಲ್ಲಿ ಅದು

ಉತ್ಪಾದಿಸುವ ಶಕ್ತಿಯಿಂದ ಅಳೆದರು. ಚರಕಾ ಸಂಘಟನೆಯ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಜನರಲ್ಲೂ ತಾವೆಲ್ಲ ಸರಿಸಮಾನರು ಎಂಬ ಭಾವನೆ ಉಂಟುಮಾಡುತ್ತದೆ. ಅದು ಕೆಲಸದ ಘನತೆಯನ್ನು ಗುರುತಿಸುತ್ತದೆ; ಅದು ಅಹಿಂಸೆ ಮತ್ತು ವಿನಯ, ಸ್ವಾತಂತ್ರ್ಯ ಮತ್ತು ಸೇವೆಗಳ ಸಂಕೇತ. ಅದನ್ನು ಅಗ್ಗದ, ಸರಳವಾದ ವಸ್ತುವಿನಿಂದ ಮಾಡಲಾಗಿರುತ್ತದೆ. ಅದನ್ನು ಸುಲಭವಾಗಿ ದುರಸ್ತಿ ಮಾಡಬಹುದು. ಅಲ್ಲದೆ, ಅದನ್ನು ಉಪಯೋಗಿಸುವ ಕೈಗಳು ಕುಶಲತೆಯನ್ನು ಬೆಳೆಸಿಕೊಳ್ಳುತ್ತವೆ. ಇದು ಮೂಲ ಕಲೆ ಎನಿಸಿಕೊಂಡಿರುವ ವ್ಯವಸಾಯದಲ್ಲಿ ಸಾಧ್ಯವಿಲ್ಲ. ಚರಕಾವನ್ನು ತಯಾರಿಸಲು ಉನ್ನತ ಪರಿಣತಿ ಪಡೆದ ಎಂಜಿನಿಯರುಗಳ ಅಗತ್ಯವಿಲ್ಲ ಅಥವಾ ಈ ಸುಂದರ ಸೃಜನಶೀಲ ಕಲೆಯನ್ನು ಹೇಳಿಕೊಡಲು ಹೆಚ್ಚಿನ ಪರಿಣತಿ ಪಡೆದ ಶಿಕ್ಷಕರ ಅಗತ್ಯವಿಲ್ಲ. ಚರಕಾದಿಂದ ಮನೆಯಲ್ಲೇ ಅಶಕ್ತರಾಗಲೀ, ವಯಸ್ಸಾದವರಾಗಲೀ ಮತ್ತು ಐದು ವರ್ಷದ ಹುಡುಗ–ಹುಡುಗಿಯರಾಗಲೀ ಕೆಲಸ ಮಾಡಬಹುದು.

ಒಂದು ಕಾಲದಲ್ಲಿ ಯಾವ ಯಂತ್ರವೂ ತಯಾರಿಸದಂಥ ನವಿರಾದ ಎಳೆಗಳನ್ನು ಉತ್ಪಾದಿಸಿದ ಮತ್ತು ತಮ್ಮ ತತ್‌ಕ್ಷಣದ ಅಗತ್ಯಗಳಲ್ಲದೆ ದೂರದ ನೆಲಗಳ ಅವಶ್ಯಕತೆಗಳನ್ನು ಸಹ ಪೂರೈಸಿದ ಭಾರತೀಯರು, ಯಾಕೆ ಬಡವರಾದರು ಮತ್ತು ಗುಲಾಮರಾದರು ಎಂದು ಒಬ್ಬ ವಿಮರ್ಶಕರು ಕೇಳಿದರು. ಗಾಂಧಿ ಉತ್ತರಿಸಿದರು: "ಹಳೆಯ ಕಾಲದಲ್ಲಾದರೆ, ಚರಕಾಕ್ಕೂ ಸ್ವಾತಂತ್ರ್ಯಕ್ಕೂ ಏನೂ ಸಂಬಂಧವಿರಲಿಲ್ಲ. ಅದಕ್ಕೆ ಗುಲಾಮಗಿರಿಯ ಒಂದು ಹಿನ್ನೆಲೆಯಿತ್ತು. ಆಂದಿನ ಸರ್ಕಾರ ಎಸೆಯುತ್ತಿದ್ದ ಒಂದು ಒಣ ರೊಟ್ಟಿಯ ತುಣುಕು ಅಥವಾ ಕವಡೆ ಕಾಸುಗಳಿಗಾಗಿ ಬಡ ಮಹಿಳೆಯರು ನೂಲುತ್ತಿದ್ದರು. ನಾವು ಬುದ್ಧಿವಂತಿಕೆಯಿಂದ ನೂಲಬೇಕು. ಹಾಗೂ ನೂಲು ತೆಗೆಯುವ ಬಗ್ಗೆ ಪ್ರತಿಯೊಂದು ವಿವರವನ್ನೂ ವೈಜ್ಞಾನಿಕವಾಗಿ ಅರ್ಥ ಮಾಡಿಕೊಳ್ಳಬೇಕು. ಜೀವವೇ ಇಲ್ಲದ ರೀತಿಯಲ್ಲಿ ಚರಕಾ ತಿರುಗಿಸುವುದೆಂದರೆ ಜಪಮಾಲೆಯ ಮಣಿಗಳನ್ನು ತಿರುಗಿಸಿದಂತೆ. ಈ ರೀತಿ ಚರಕಾವನ್ನು ಯಾಂತ್ರಿಕವಾಗಿ ಬಳಸುವುದನ್ನು ನಾಶ ಮಾಡಬೇಕು." ನೂಲುವಿಕೆಯ ಶೈಕ್ಷಣಿಕ ಮೌಲ್ಯಕ್ಕೆ ಒತ್ತು ಕೊಡುತ್ತಾ, ಚರಕಾ ಎನ್ನುವುದು ಸೇವೆಯ ಒಂದು ಸಾಧನ. ಮರಗೆಲಸ, ಕುಂಬಾರಿಕೆ ಮತ್ತು ವರ್ಣಚಿತ್ರಕಲೆ ಮುಂತಾದ ವೃತ್ತಿಗಳಂತಲ್ಲ ಎಂದು ಪ್ರಾಥಮಿಕ ಶಾಲಾಶಿಕ್ಷಕರಿಗೆ ಹೇಳಿದರು. ಚರಕಾವನ್ನು ಸೂರ್ಯನಿಗೆ ಹೋಲಿಸಿದ ಗಾಂಧಿ, ಇದರ ಸುತ್ತಲೂ ಇತರ ಕರಕುಶಲಕಲೆಗಳು ಸುತ್ತುಹಾಕುತ್ತವೆ ಎಂದರು. ಒಬ್ಬ ವಿದ್ಯಾರ್ಥಿ ಹೇಗೆ ನೂಲಿನ ಎಳೆಗಳ ಸುತ್ತುಗಳನ್ನು ಎಣಿಸುತ್ತಾ ಗಣಿತವನ್ನೂ ಕಲಿಯಬಹುದು ಎಂದು ಅವರು ಹೇಳಿದರು. ಹತ್ತಿಯನ್ನು ಮೊದಲು ಯಾಕೆ ಮತ್ತು ಹೇಗೆ ಬೆಳೆಯಲಾಯಿತು, ಎಂತಹ ಮಣ್ಣಿನಲ್ಲಿ ಅದು ಬೆಳೆಯಿತು ಮತ್ತು ಬೇರೆ ಬೇರೆ ದೇಶಗಳೊಂದಿಗೆ ಹತ್ತಿಯ ವ್ಯಾಪಾರದ ಅಭಿವೃದ್ಧಿಯಲ್ಲಿನ ಹಂತಗಳನ್ನು ವಿವರಿಸುವ ಮೂಲಕ ಭೂಗೋಳ, ಚರಿತ್ರೆ ಮತ್ತು ಪರಿಸರ ಅಧ್ಯಯನವನ್ನು ಸಹ ಹೇಳಿಕೊಡಬಹುದು, ಎಂದು ತಿಳಿಸಿದರು. ಈಗ ತಕಲಿಯ ಕದರಣಗೆಯನ್ನು ಉಕ್ಕಿನಿಂದ ಯಾಕೆ ಮಾಡಲಾಗುತ್ತದೆ ಮತ್ತು ಅದರಲ್ಲಿನ ಹಿತ್ತಾಳೆಯ ಬಿಲ್ಲೆಯು ಒಂದು ನಿರ್ದಿಷ್ಟ ವ್ಯಾಸವನ್ನೇ ಯಾಕೆ ಹೊಂದಿರುತ್ತದೆ, ಮುಂತಾದುವನ್ನು ಸಹ ತಕಲಿ ನೂಲುವಿಕೆಯು ಒಬ್ಬ ವಿದ್ಯಾರ್ಥಿಗೆ ತಿಳಿಸಿಕೊಡುತ್ತದೆ. ಹೀಗೆ ಅದರ ಬಳಕೆ ಗಣಿತ ಬೋಧನೆಯತ್ತಲೂ ತಿರುವು ತೆಗೆದುಕೊಳ್ಳುತ್ತದೆ.

ತಮ್ಮ ಜನ್ಮದಿನ ಚರಕಾ ಜಯಂತಿಯೊಂದಿಗೆ ಹೊಂದಿಕೊಂಡಾಗಷ್ಟೇ ಗಾಂಧಿ ತಮ್ಮ ಹುಟ್ಟುಹಬ್ಬವನ್ನು ರಾಷ್ಟ್ರೀಯವಾಗಿ ಆಚರಿಸಲು ಅನುಮತಿ ಇತ್ತರು. ಖಾದಿ ಮತ್ತು ಸ್ವಯಂ ನೂಲುವಿಕೆಯನ್ನು ಜನಪ್ರಿಯಗೊಳಿಸಲು ಅವರು ಒಂದೇ ಒಂದು ಅವಕಾಶವನ್ನೂ ಬಿಟ್ಟುಕೊಡಲಿಲ್ಲ. ಅವರು ಕಾಂಗ್ರೆಸ್ ಅಧ್ಯಕ್ಷರಾದಾಗ, ಕಾಂಗ್ರೆಸ್ ಸದಸ್ಯತ್ವಕ್ಕಾಗಿ ಇದ್ದ ನಾಲ್ಕು ಆಣೆಯ ಚಂದಾ ಶುಲ್ಕಕ್ಕೆ ಬದಲಾಗಿ ಖಾದಿ ನೂಲುವುದನ್ನು ಪರಿಚಯಿಸಿದರು. ಪ್ರತಿಯೊಬ್ಬ ಸದಸ್ಯರಿಗೂ, ಅವರು ದಿನಕ್ಕೆ ಅರ್ಧ ತಾಸು ನೂಲು ತೆಗೆದು ಪ್ರತಿ ತಿಂಗಳು ಖಾದಿ ಮಂಡಳಿಗೆ ನಿಗದಿತ ಹಿಸ್ಸೆಯ ಪ್ರಮಾಣದ ನೂಲನ್ನು ಕಳುಹಿಸಬೇಕೆಂದು ಹೇಳಲಾಯಿತು. ತಮ್ಮ ಜೀವನದ ಕೊನೆಯ ವರ್ಷಗಳಲ್ಲಿ, ಖಿದ್ದರನ್ನು ಖರೀದಿಸುವ ಪ್ರತಿಯೊಬ್ಬರೂ ಕೈಯಲ್ಲಿ ತೆಗೆದ ನೂಲಿನ ಒಂದು ಅಲ್ಪ ಪ್ರಮಾಣದ ಹಿಸ್ಸೆಯನ್ನು ಒಪ್ಪಿಸುವಂತೆ ಮಾಡಬೇಕೆಂದು ಚರಕಾ ಸಂಘಕ್ಕೆ ಸಲಹೆ ನೀಡಿದರು. ತಮ್ಮಿಂದ ನೂಲಿನ ಉತ್ಪಾದನೆ ಸಾಧ್ಯವಿಲ್ಲವೆಂದು ಜನ ಗೊಣಗಿದಾಗ, ಜನ ನೂಲದಿದ್ದರೆ, ಖಾದಿ ಎಲ್ಲಿಂದ ಬರುತ್ತದೆ ಎಂದು ಕೇಳಿದರು.

ಭಾರತದಲ್ಲಿ ಬಟ್ಟೆಯ ಕೊರತೆಯಿದೆ ಎಂಬ ಯಾವುದೇ ಪ್ರಸ್ತಾಪಗಳನ್ನು ಅವರು ತಳ್ಳಿಹಾಕಿದರು. ಭಾರತ ಅಗತ್ಯಕ್ಕಿಂತ ಹೆಚ್ಚಿಗೆ ಹತ್ತಿಯನ್ನು ಉತ್ಪಾದಿಸುತ್ತದೆ ಹಾಗೂ ಇಲ್ಲಿ ಅತಿ ದೊಡ್ಡ ಮಾನವಬಲ ಇದೆ ಎಂಬುದು ಅವರ ನಂಬುಗೆಯಾಗಿತ್ತು. ನೂಲುವ ಚಕ್ರ ಅಥವಾ ತಕಲಿಯಂತಹ ಪುಟ್ಟದಾದ ಗಿರಣಿಯನ್ನು ಪ್ರತಿಯೊಂದು ಮನೆಯಲ್ಲಿ ನೆಲೆಗೊಳಿಸುವ ಮೂಲಕ ಬಟ್ಟೆಯ ಕೊರತೆಯನ್ನು ಪರಿಹರಿಸಬಹುದು. ನೂಲುವುದು ಅವರಿಗೆ ಹೆಚ್ಚು ಹೆಚ್ಚು ಆಂತರಿಕ ಅವಶ್ಯಕತೆಯಾಗತೊಡಗಿತು. ಈ ರೀತಿ ಅವರಿಗೆ ಬಡವರಲ್ಲಿ ಬಡವರ

ತೀರಾ ಹತ್ತಿರಕ್ಕೆ ಹೋಗುತ್ತಿದ್ದೇನೆ, ಅವರ ಮೂಲಕ ದೇವರತ್ತ ಹೋಗುತ್ತಿದ್ದೇನೆಂದು ಅನ್ನಿಸಿತ್ತು. "ಚರಕಾದ ನಿಧಾನಗತಿಯಿಂದ ಭ್ರಮನಿರಸನ ಹೊಂದುವುದಕ್ಕೆ ನನಗೆ ಹಲವಾರು ಜನ್ಮಗಳು ಬೇಕಾಗುತ್ತವೆ. ನೀವೆಲ್ಲಾ ನನ್ನ ಕೈಬಿಟ್ಟರೂ ಅಥವಾ ಕೊಂದುಹಾಕಿದರೂ, ನಾನು ಮಾತ್ರ ಚರಕಾವನ್ನು ಬಿಡಲೊಲ್ಲೆ" ಎಂದು ಅವರು ಖಂಡಿತವಾಗಿ ನುಡಿದರು.

ವ್ಯಾಪಾರಿ

ಗಾಂಧಿ ಒಮ್ಮೆ ಹೇಳಿದರು: "ನಾನೊಬ್ಬ ವ್ಯಾಪಾರಿ. ನನ್ನ ದುರಾಸೆಗೆ ಮಿತಿಯೇ ಇಲ್ಲ." ಜಾತಿಯಿಂದ ಗಾಂಧಿ ಬಣಜಿಗರಾಗಿದ್ದರು. ತಂದೆಯ ದಿವಾನಗಿರಿ ಹುದ್ದೆಯ ವಾರಸುದಾರರಾಗಲು ಅವರನ್ನು ತಯಾರು ಮಾಡಲಾಯಿತು. ಆದರೆ, ಅವರು ಎಂದಿಗೂ ದಿವಾನರಾಗಲಿಲ್ಲ. ಬದಲಿಗೆ, ಒಬ್ಬ ಯಾಚಕನ ಜೀವನ ಸಾಗಿಸುವ ಆಯ್ಕೆಯನ್ನು ಅವರು ಮಾಡಿಕೊಂಡರು. ಆದರೆ ವ್ಯಾಪಾರೀ ಮನೋಭಾವ ಮಾತ್ರ ಅವರಲ್ಲಿ ಆಳವಾಗಿ ಬೇರೂರಿತ್ತು.

ಅವರು ಬಹಳ ಮಿತವ್ಯಯಿಗಳಾಗಿದ್ದರು. ಬಾಳಿಕೆ ಬರುವ, ಅಗ್ಗದ ಆದರೆ ಕಲಾತ್ಮಕವಾದ ವಸ್ತುಗಳ ಬಗ್ಗೆ ನಿಗಾ ಇರುತ್ತಿತ್ತು. ಎಲ್ಲಾ ವೈಭವೋಪೇತ ಮತ್ತು ಸೊಗಸುಗಾರಿಕೆಯ ವಸ್ತುಗಳ ಬಳಕೆಯನ್ನು ತ್ಯಜಿಸಿ, ತಾವೇ ತಯಾರಿಸಿದ ಖಾದಿ ಬಟ್ಟೆ, ಒರಟಾದ ಚಾದರ ಮತ್ತು ಕೈಯಲ್ಲೇ ತಯಾರಿಸಿದ ಗಟ್ಟಿಯಾದ ಚಪ್ಪಲಿಗಳನ್ನು ಉಪಯೋಗಿಸತೊಡಗಿದರು. ತಮ್ಮ ಹೆಂಡತಿ ಮತ್ತು ಮಕ್ಕಳು ಸಹ ಸರಳ ಹಾಗೂ ಒರಟಾದ ಖಾದಿ ಉಡುಪುಗಳನ್ನೇ ಧರಿಸುವಂತೆ ಮಾಡಿದರು. ಗಾಂಧಿ ಬಹುಪದಾರ್ಥಗಳಿರುವ ಊಟ ಮಾಡುತ್ತಿರಲಿಲ್ಲ. ಒಂದೆರಡು ಒಣರೊಟ್ಟಿಗಳು, ಅನ್ನ, ಬೇಯಿಸಿದ ತರಕಾರಿಗಳು, ಹಸಿ ಸೊಪ್ಪು, ಆಡಿನ ಹಾಲು, ಬೆಲ್ಲ, ಜೇನುತುಪ್ಪ ಮತ್ತು ಹಣ್ಣುಗಳೇ ಅವರ ಆಹಾರ. ಒಂದು ದಿನದಲ್ಲಿ ಐದಕ್ಕಿಂತ ಹೆಚ್ಚು ಬಗೆಯ ಆಹಾರವನ್ನು ಅವರು ಊಣ್ಣುತ್ತಿರಲಿಲ್ಲ. ಒಂದು ದಿನಕ್ಕೆ ಒಂದು ಆಣೆಯಷ್ಟು ಆದಾಯ ಗಳಿಸುವ ಬಡ ಮನುಷ್ಯರಿರುವ ಭಾರತದಂತಹ ದೇಶದಲ್ಲಿ ಆಭರಣಗಳು ಮತ್ತು ಆಲಂಕಾರಿಕ ವಸ್ತುಗಳ ರೂಪದಲ್ಲಿ ಹಣ ಸಂಗ್ರಹವಾಗುವುದಕ್ಕೆ ಅನುವು ಮಾಡಿಕೊಡುವುದು ಒಂದು ಅಪರಾಧ ಎಂದು ಗಾಂಧಿ ನಂಬಿದ್ದರು. ಅವರ ಪತ್ನಿಯ ಬಳಿ ಯಾವುದೇ ಆಭರಣಗಳಿರಲಿಲ್ಲ.

ಭಾರತದಲ್ಲಿನ ಲಕ್ಷಗಟ್ಟಲೆ ಬಡವರಿಗೆ ಕೈಗೆಟುಕದಂಥ ದುಬಾರಿ ಶಿಕ್ಷಣಕ್ಕಾಗಿ ತಮ್ಮ ನಾಲ್ಕು ಮಗಂದಿರನ್ನು ಅವರು ಶಾಲೆ ಅಥವಾ ಕಾಲೇಜಿಗೆ ಕಳುಹಿಸಲಿಲ್ಲ. ಗಾಂಧಿಯೇ ಅವರ ಶಿಕ್ಷಕರಾದರು. ಸಂಬಳ ಕೊಟ್ಟು ಯಾವುದೇ ಆಳುಗಳನ್ನು ಅವರು ನೇಮಿಸಿಕೊಳ್ಳಲಿಲ್ಲ. ಎಲ್ಲಾ ರೀತಿಯ ದೈಹಿಕ ಕೆಲಸಗಳನ್ನು ಅವರೇ ಖುದ್ದಾಗಿ ಮಾಡುತ್ತಿದ್ದರು. ಮಣ್ಣಿನ ಗುಡಿಸಲುಗಳಲ್ಲಿ ವಾಸಿಸಲು ಅವರು ಬಯಸಿದರು. ಭಾರತದಾದ್ಯಂತ ಅವರು ಮತ್ತೆ ಮತ್ತೆ ಪ್ರವಾಸ ಕೈಗೊಂಡರು, ಅದೂ ಮೂರನೇ ದರ್ಜೆಯ ಪ್ರಯಾಣಿಕರಾಗಿ. ಅವರ ಮತ್ತೊಂದು ಜೊತೆ ಬಟ್ಟೆ ಅಥವಾ ಕಾಗದ ಕಟ್ಟುಗಳನ್ನೇ ರೈಲಿನಲ್ಲಿ ತಲೆದಿಂಬಾಗಿ ಉಪಯೋಗಿಸಲಾಗುತ್ತಿತ್ತು. ಅವರ ಹಾಸಿಗೆಯೆಂದರೆ, ಸ್ವದೇಶೀ ಕಂಬಳಿಗಳು ಮತ್ತು ಖಾದಿ ದುಪ್ಪಟಿಗಳು. ಒಮ್ಮೆ ಅವರು ಸೊಳ್ಳೆಪರದೆ ಇಲ್ಲದೆಯೇ ನಿದ್ರಿಸುವ ಪ್ರಯತ್ನ ಮಾಡಿದರು. ರಾತ್ರಿ ಮಲಗುವ ಮುನ್ನ, ದುಪ್ಪಟಿಯಿಂದ ತಮ್ಮನ್ನು ಚೆನ್ನಾಗಿ ಸುತ್ತಿಕೊಂಡು, ಮುಖಕ್ಕೆ ಸೀಮೆಯೆಣ್ಣೆ ಬಳಿದುಕೊಂಡರು. ಸೊಳ್ಳೆಪರದೆ ಕೊಳ್ಳಲಾಗದ ಬಡ ರೈತರು ಹೀಗೆಯೇ ಮಾಡುತ್ತಾರೆಂಬುದನ್ನು ಅವರು ಕೇಳಿದ್ದರು.

ಬ್ರಿಟಿಷ್ ಪ್ರಭುತ್ವಕ್ಕೆ, ಭಾರತಕ್ಕೆ ಸ್ವಾತಂತ್ರ್ಯವನ್ನು ದಯಪಾಲಿಸುವ ಮನಸ್ಸು ನಿಜಕ್ಕೂ ಇದೆಯೇ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಅವರು ಇಂಗ್ಲೆಂಡಿಗೆ ನಾಲ್ಕನೆಯ

ಬಾರಿಗೆ ಹೋದಾಗ, ಹಡಗಿನಲ್ಲಿ ಡೆಕ್ ಪ್ರಯಾಣಿಕನಾಗಿ ಅವರು ಪ್ರಯಾಣ ಮಾಡಿದರು. ತಮ್ಮ ಸಹಚರರು ಮತ್ತು ಕಾರ್ಯದರ್ಶಿಗಳು ಪೆಟ್ಟಿಗೆಗಳ ತುಂಬಾ ಉಡುಪುಗಳನ್ನು ಹೊತ್ತು ಬರುವುದನ್ನು ಗಾಂಧಿ ತಡೆದರು; ಇಂಗ್ಲೆಂಡಿನಲ್ಲಿ ಭಾರತೀಯ ಶೈಲಿಯ ಧೋತಿ, ಕುರ್ತಾ ಮತ್ತು ಒಂದು ಜೊತೆ ಚಪ್ಪಲಿಗಳನ್ನು ಧರಿಸಬೇಕೆಂದು ಅವರಿಗೆ ಹೇಳಿದರು. ಪ್ರಯಾಣ ಸಮಯದಲ್ಲಿ ಒಬ್ಬ ಸ್ನೇಹಿತರು ಗಾಂಧಿಗೆ 700 ರೂಪಾಯಿಗಳ ಮೌಲ್ಯದ ಉತ್ತಮವಾದ ಒಂದು ಶಾಲನ್ನು ಉಡುಗೊರೆಯಾಗಿತ್ತರು. ಅದನ್ನು ಹಡಗಿನಲ್ಲಿ 7000 ರೂಪಾಯಿಗಳಿಗೆ ಮಾರಿದ ಗಾಂಧಿ ಹೇಳಿದರು: "ಬಡವರ ಏಕೈಕ ಪ್ರತಿನಿಧಿ ಮಾಡಬಹುದಾದದ್ದು ಇಷ್ಟೇ!" ತಮ್ಮ ಗೆಳೆಯರು ತಮಗೆ ಉಡುಗೊರೆಯಾಗಿ ನೀಡಿದ ಶಾಲುಗಳಿಂದ ತಾವು ಒಂದು ಅಂಗಡಿಯನ್ನೇ ನಡೆಸಬಹುದಿತ್ತು ಎಂದು ಅವರು ಹೇಳಿದರು. ಹೀಗೆ ಬಂದ ಎಲ್ಲಾ ಹಣವನ್ನು ಅವರು ಹರಿಜನೋದ್ಧಾರಕ್ಕೆ ಉಪಯೋಗಿಸಿದರು.

ಗಾಂಧಿ ಫ್ರಾನ್ಸಿನಲ್ಲಿ ಇಳಿದಾಗ, ತುಂಡುಪಂಚೆಯುಟ್ಟಿದ್ದ ಗಾಂಧಿಯನ್ನು ಕಂಡು ಫ್ರಾನ್ಸಿನ ಜನ ದಿಗ್ಭ್ರಮೆಗೊಂಡರು. ಗಾಂಧಿ ನಗುತ್ತಾ ಅವರಿಗೆ ಹೇಳಿದರು: "ನಿಮ್ಮ ದೇಶದಲ್ಲಿ ನೀವು ಪ್ಲಸ್ ಫೋರ್ಸ್(ಮಂಡಿಯಿಂದ ನಾಲ್ಕು ಇಂಚು ಉದ್ದವಿರುವ ಪ್ಯಾಂಟು) ಧರಿಸುತ್ತೀರಿ. ಆದರೆ ನಾನು ಮೈನಸ್ ಫೋರ್ಸ್ ಧರಿಸಲು ಬಯಸುತ್ತೇನೆ." ಇವರು ತಮ್ಮ ತುಂಡುಡುಗೆಯಲ್ಲಿ ಇಂಗ್ಲೆಂಡಿನ ದೊರೆಯನ್ನು ಭೇಟಿಯಾಗಲು ಹೋಗುತ್ತಾರೆಯೇ ಅಥವಾ ಒಂದು ಶೀತ ದೇಶದಲ್ಲಿ ಮತ್ತು ಶಿಷ್ಟ ಉಡುಪು ತೊಟ್ಟ ಜನರ ಮಧ್ಯದಲ್ಲಿ ಓಡಾಡುತ್ತಾರೆಯೇ ಎಂದು ಕೆಲವರು ವಿಸ್ಮಯಗೊಂಡರು. ತಮ್ಮ ಕಣ್ಣುಗಳಲ್ಲಿ ಮಿಂಚು ಮೂಡಿಸುತ್ತಾ ಗಾಂಧಿ ಭರವಸೆ ಇತ್ತರು: "ನಮ್ಮಿಬ್ಬರಿಗೂ ಸಾಕಾಗುವಷ್ಟು ಬಟ್ಟೆ ದೊರೆಯಬಲ್ಲ ಬಳಿ ಇದೆ." ತಮ್ಮ ತುಂಡು ಪಂಚೆ, ತೇಪೆ ಹಾಕಿದ ಶಾಲು ಮತ್ತು ಚಪ್ಪಲಿಗಳಲ್ಲೇ ಅವರು ದುಂಡು ಮೇಜಿನ ಪರಿಷತ್ತಿನಲ್ಲಿ ಕುಳಿತರು, ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳಿಗೆ ಹಾಗೂ ಬಕಿಂಗ್‌ಹ್ಯಾಮ್ ಅರಮನೆಗೆ ಹೋದರು. ಚರ್ಚಿಲ್ ಕೋಪದಿಂದ ಅವರನ್ನು 'ಭಾರತದ ಅರೆಬೆತ್ತಲೆ ಫಕೀರ' ಎಂದು ಕರೆದರು ಹಾಗೂ ಗಾಂಧಿ ಅದಕ್ಕಾಗಿ ಹೆಮ್ಮೆಪಟ್ಟುಕೊಂಡರು. ಲಂಡನ್ನಿನಲ್ಲಿ ಅವರ ಪ್ರತಿದಿನದ ಆಹಾರ ವೆಚ್ಚ ಹನ್ನೆರಡು ಆಣೆಗಳನ್ನು ಮೀರಲಿಲ್ಲ.

ಯಾವುದೇ ವಿಧದ ಪೋಲು ಗಾಂಧಿಯವರಿಗೆ ಕಿರಿಕಿರಿ ಉಂಟುಮಾಡುತ್ತಿತ್ತು. ಚಿಂದಿಗಳನ್ನು ಮಾರಬಹುದು, ಹಲ್ಲುಜ್ಜಲು ಉಪಯೋಗಿಸಲಾಗುವ ಟೊಂಗೆ, ಕಡ್ಡಿಗಳನ್ನು ತೊಳೆದು, ಒಣಗಿಸಿ, ಪುಡಿ ಮಾಡಿ ಇಂಧನವಾಗಿ ಬಳಸಬಹುದು ಎಂದು ಅವರು ಹೇಳಿದರು. ದಿನದ ಇಪ್ಪತ್ನಾಲ್ಕು ಗಂಟೆಗಳನ್ನು ವಿವಿಧ ಚಟುವಟಿಕೆಗಳಿಗಾಗಿ ಅವರು ಉಪಯೋಗಿಸುತ್ತಿದ್ದರು. ಅವರಿಗೆ ಅತಿಯಾದ ಸಮಯನಿಷ್ಠೆ ಇತ್ತು. ಯಾವ ಕೆಲಸ ಮಾಡಲೂ ತಡ ಮಾಡುತ್ತಿರಲಿಲ್ಲ, ಆದರೆ ಯಾವುದನ್ನೂ ಅವಸರವಸರವಾಗಿ ಮಾಡುತ್ತಿರಲಿಲ್ಲ. ಪದಗಳ ಮಿತಬಳಕೆಯಲ್ಲೂ ಅವರಿಗೆ ನಂಬಿಕೆ ಇತ್ತು. ಅವರು ಬಹಳಷ್ಟು ಭಾಷಣಗಳನ್ನು ಮಾಡಿದರು ಮತ್ತು ಹಲವಾರು ಲೇಖನಗಳನ್ನು ಬರೆದರು, ಆದರೆ ಅನಾವಶ್ಯಕ ಪದಗಳ ಬಳಕೆಯನ್ನು ದೂರವಿರಿಸಿದ್ದರು. ಉಪಯೋಗಿಸಲಾದ ಮತ್ತು ಒಂದು ಬದಿಯಲ್ಲಿ ಖಾಲಿಯಿದ್ದ ಪ್ರತಿಯೊಂದು ಪತ್ರ, ಕಾಗದ ಮತ್ತು ಲಕೋಟೆಯನ್ನು ಅವರು ಕೂಡಿಡುತ್ತಿದ್ದರು. ಅವುಗಳ ಗಾತ್ರಗಳಿಗನುಗುಣವಾಗಿ, ಕೈಯಲ್ಲಿ ಅವುಗಳ ಕಟ್ಟು ಸಿದ್ಧವಾಗಿಯೇ ಇರುತ್ತಿತ್ತು. ಅವನ್ನು ಅವರು ಪತ್ರಲೇಖನ ಕಾಗದಗಳಾಗಿ ಉಪಯೋಗಿಸುತ್ತಿದ್ದರು. ಅವರ ಕೆಲವು ಮಹತ್ವದ ಹೇಳಿಕೆಗಳು, ಕರಡುಪತ್ರಗಳು ಮತ್ತು ವೈಸ್‌ರಾಯ್‌ಗಳಿಗೆ, ರಾಜಕುಮಾರರಿಗೆ ಮತ್ತು ಬ್ರಿಟಿಷ್ ಪ್ರಧಾನಮಂತ್ರಿಗಳಿಗೆ ಬರೆದ ಉತ್ತರಗಳು ಇಂತಹ ಚೀಟಿಗಳ ಮೇಲೆಯೇ ಇರುತ್ತಿದ್ದವು. ಚಿಕ್ಕ ಹುಡುಗ ಉಡುಗೊರೆಯಾಗಿ ಕೊಟ್ಟಿದ್ದ ಒಂದು ಚಿಕ್ಕ ಪೆನ್ಸಿಲ್ ಮತ್ತು ವರ್ಷಾನುಗಟ್ಟಲೆಯಿಂದ ಉಪಯೋಗಿಸಿಕೊಂಡು ಬರುತ್ತಿದ್ದ ಪ್ಯುಮೈಸ್ ಕಲ್ಲು ಒಮ್ಮೆ ಕಳೆದುಹೋದಾಗ ಅದನ್ನು ಬಹಳವಾಗಿ ಹುಡುಕಿದರು. ಅವು ಕೈಗೆ ಸಿಗುವವರೆಗೂ ಅವರಿಗೆ ನೆಮ್ಮದಿಯೇ ಇರಲಿಲ್ಲ. ಸ್ವಾತಂತ್ರ್ಯಾನಂತರ, ತಮ್ಮ ಖಾಸಗಿ ಪತ್ರವ್ಯವಹಾರಕ್ಕಾಗಿ ಅತ್ಯಂತ ದುಬಾರಿಯಾದ, ಉಬ್ಬು ಅಕ್ಷರಗಳಿದ್ದ ಲೆಟರ್‌ಹೆಡ್ ಮತ್ತು ಕಚೇರಿಯ ಬರವಣಿಗೆ ಸಾಮಗ್ರಿಗಳನ್ನು ಉಪಯೋಗಿಸಿದ್ದಕ್ಕಾಗಿ ಅವರು ಮಂತ್ರಿಗಳನ್ನು ಮತ್ತು ಸಭಾಸದಸ್ಯರನ್ನು ಗದರಿಸಿದರು. ಇಂಗ್ಲಿಷ್ ಜನರ ಶೈಲಿ ಮತ್ತು ಅಭ್ಯಾಸಗಳನ್ನು ಅನುಕರಣೆ ಮಾಡುವುದರಿಂದ ಅವರು ತಮ್ಮನ್ನು ತಾವೇ ನಾಶ ಮಾಡಿಕೊಳ್ಳುತ್ತಾರೆ ಹಾಗೂ ಭಾರತವನ್ನೂ ವಿನಾಶದತ್ತ ನೂಕುತ್ತಾರೆ ಎಂದು ಎಚ್ಚರಿಕೆ ನೀಡಿದರು. ಇಂಗ್ಲಿಷ್ ಮಂದಿ ತಮ್ಮ ಅಧೀನ ದೇಶದಲ್ಲಿ ಭಯ ಉತ್ಪನ್ನ ಮಾಡಲು ಬಯಸಿದ್ದರು. ಈ ಎಲ್ಲಾ ದುಬಾರಿ ಹವ್ಯಾಸಗಳನ್ನು ತ್ಯಜಿಸಲೇಬೇಕು. ದೇವನಾಗರಿ ಮತ್ತು ಉರ್ದು ಭಾಷೆಗಳ ಸಾಮಾನ್ಯ ಮುದ್ರಣವಿರುವ, ಕೈಯಿಂದ ತಯಾರಿಸಿದ ಕಾಗದಗಳ ಲೆಟರ್‌ಹೆಡ್‌ಗಳನ್ನೇ ಉಪಯೋಗಿಸಬೇಕು. ಜನರ ಸೇವಕರು ಹೆಚ್ಚು ಬೆಲೆಯ ಮಾನಪತ್ರಗಳನ್ನು ಮತ್ತು ಪುಷ್ಪಕಾಣಿಕೆಗಳನ್ನು ಸ್ವೀಕರಿಸಬಾರದು.

ತಾವು ಸಂಗ್ರಹಿಸಿದ ಒಂದೊಂದು ಪೈಯನ್ನೂ ಬಡವರಿಗಾಗಿ ಕೂಡಿಡಲು ಗಾಂಧಿ ಬಹಳ ಉತ್ಸುಕರಾಗಿದ್ದರು. ಸಾರ್ವಜನಿಕ ನಿಧಿಗಳಿಗಾಗಿ ತಾವು ಸ್ವೀಕರಿಸಿದ ಮನಿ ಆರ್ಡರ್‌ಗಳು, ಡ್ರಾಫ್ಟ್‌ಗಳು ಮತ್ತು ಚೆಕ್‌ಗಳ ಮೇಲಿನ ಕಮಿಷನ್ ಶುಲ್ಕವನ್ನು ಕೂಡಿಡಲು ಅವರು ಪ್ರಯತ್ನಿಸಿದರು. ಸ್ವಯಂಸೇವಕರು ಮತ್ತು ವ್ಯವಸ್ಥಾಪಕರು ಸಾರ್ವಜನಿಕ ನಿಧಿಗಳ ಬಗ್ಗೆ ನಿಷ್ಕಾಳಜಿ ತೋರಿದಾಗ ಅವರನ್ನು ದಂಡಿಸಿದರು. 1896ರಲ್ಲಿ, ಗಾಂಧಿ ಭಾರತಕ್ಕೆ ಭೇಟಿ ಇತ್ತಾಗ, ಭಾರತೀಯ ಸಮುದಾಯದಿಂದ ಅವರಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡಲಾಯಿತು. ಅವರು ತಮ್ಮ ಎಲ್ಲಾ ವೆಚ್ಚಗಳ ಬಗ್ಗೆ ವಿಸ್ತಾರವಾದ ಲೆಕ್ಕ ವಿವರಗಳನ್ನು ಒಪ್ಪಿಸಿದರು. ಕೆಲವು ಆಸಕ್ತಿದಾಯಕ ವಿವರಗಳು ಹೀಗಿದ್ದವು: ಟ್ರಾಂ ಗೆ 1 ಆಣೆ, ನೀರಿಗೆ 6 ಪೈಸೆ, ತಂತ್ರಗಾರನಿಗೆ 6 ಪೈಸೆ, ಜಾದೂಗಾರನಿಗೆ 8 ಆಣೆಗಳು, ನಾಟಕ/ವ್ಯಾಖ್ಯಾನಮಂದಿರಕ್ಕೆ 4 ರೂಪಾಯಿಗಳು.

ಗಾಂಧಿ ಆಗಾಗ್ಗೆ ಹೇಳುತ್ತಿದ್ದರು: "ನಮ್ಮ ಕಾರ್ಯಾಚರಣೆಗಳಲ್ಲಿ ದುಂದುವೆಚ್ಚಕ್ಕೆ ಅವಕಾಶವೇ ಇಲ್ಲ. ಸ್ಥಳೀಯ ಕೆಲಸಗಾರರು ನನಗಾಗಿ ಅತ್ಯುತ್ತಮವಾದ ಕಿತ್ತಳೆ ಅಥವಾ ದ್ರಾಕ್ಷಿಗಳನ್ನು ತಂದರೆ ಅಥವಾ ನನಗೆ 12ರ ಅಗತ್ಯವಿದ್ದಾಗ, 120 ಅನ್ನು ತಂದರೆ, ಇದರಿಂದ ಏನು ತಾನೆ ಪರಿಣಾಮವಿದ್ದೀತು? ನಾವು ಲಕ್ಷಗಟ್ಟಲೆ ಮೂಕಮಂದಿಯ ನಿಕ್ಷೇಪವನ್ನು ನಿಜವಾಗಿಯೂ ಕಾಪಾಡುವವರಾಗಬೇಕು." ಅವರ ಸಲಹೆ ಏನಿತ್ತೆಂದರೆ: "ನೀವು ನಡೆಯಬಲ್ಲಿರಾದರೆ, ವಾಹನ ವಿರಬೇಡಿ." ತಮ್ಮ ತಾರುಣ್ಯದ ದಿನಗಳಲ್ಲಿ ಅವರೇ ಇದನ್ನು ಪಾಲಿಸಿದರು. ದಕ್ಷಿಣ ಆಫ್ರಿಕಾದಲ್ಲಿ, ಒಂದಕ್ಕಿಂತಲೂ ಹೆಚ್ಚು ಬಾರಿ ಅವರು ಹತ್ತಿರದ ಅಂಗಡಿಯಿಂದ ಖರೀದಿ ಮಾಡಲು ಒಂದು ದಿನದಲ್ಲಿ 42 ಮೈಲಿಗಳನ್ನು ನಡೆದಿದ್ದರು, ಅದೂ ಕೆಲವು ರೂಪಾಯಿಗಳ ಉಳಿತಾಯ ಮಾಡಲು. ಪ್ರತಿದಿನ ಕಚೇರಿ–ನ್ಯಾಯಾಲಯ–ಕಚೇರಿಗೆ ನಡೆದೇ ಹೋಗುತ್ತಿದ್ದರು.

ಒಮ್ಮೆ "ರಾಷ್ಟ್ರಾಭಿಮಾನಕ್ಕೆ ಜನಾಂಗೀಯ ದ್ವೇಷ ಅವಶ್ಯಕವೇ?" ಎಂಬ ಅವರ ಉಪನ್ಯಾಸಕ್ಕೆ ಟಿಕೆಟ್‌ಗಳ ಮೂಲಕ ಪ್ರವೇಶದ ವ್ಯವಸ್ಥೆ ಮಾಡಲಾಗಿತ್ತು. ಸಂಗ್ರಹಿತ ನಿಧಿಯನ್ನು ದೇಶಬಂಧು ಸ್ಮಾರಕ ನಿಧಿಗೆ ದೇಣಿಗೆಯಾಗಿ ಕೊಡಲಾಯಿತು. ಮೊದಲ ಬಾರಿಗೆ ಒಂದು ಗ್ರಾಮಾಫೋನ್ ಕಂಪೆನಿಯಲ್ಲಿ ಗಾಂಧಿಯವರ ಧ್ವನಿಪರೀಕ್ಷೆ ಮೂಲಕ 'ದೇವರೇ ಸತ್ಯ' ಎಂಬ ಅವರ ಭಾಷಣವನ್ನು ಧ್ವನಿಮುದ್ರಿಸಿಕೊಳ್ಳಲಾಯಿತು. ಅರ್ಧ ಗಂಟೆಯಲ್ಲಿ ಅವರು 65000 ರೂಪಾಯಿಗಳನ್ನು ಗಳಿಸಿದರು ಹಾಗೂ ಅದನ್ನು ಹರಿಜನ ನಿಧಿಗೆ ಸಮರ್ಪಿಸಿದರು. ಎಷ್ಟು ಚೆನ್ನಾಗಿ ಹಣ ಉಳಿತಾಯ ಮಾಡುತ್ತಿದ್ದರೋ, ಅಷ್ಟೇ ಚೆನ್ನಾಗಿ ಹಣ ಗಳಿಸುತ್ತಿದ್ದರು. ಸರ್ಕಾರ ಅವರ ಪುಸ್ತಕಗಳನ್ನು ಬಹಿಷ್ಕರಿಸಿದಾಗ, ಅವರು ಮುಕ್ತವಾಗಿ ಅವನ್ನು ಬೀದಿಬೀದಿಗಳಲ್ಲಿ ಮಾರಿದರು; 'ಹಿಂದ್ ಸ್ವರಾಜ್'ದ ಕೆಲವು ಪ್ರತಿಗಳನ್ನು ಐದು, ಹತ್ತು ಮತ್ತು ಐವತ್ತು ರೂಪಾಯಿಗಳಿಗೆ ಮಾರಿದರು. ಅದರ ಮೂಲಬೆಲೆ ನಾಲ್ಕು ಆಣೆಗಳಾಗಿತ್ತು. ದಂಡಿಯಾತ್ರೆಯ ಸಮಯದಲ್ಲಿ, ಅವರು ತೆಗೆದ ಅರ್ಧ ತೊಲದಷ್ಟು ಸ್ವಾಭಾವಿಕ ಉಪ್ಪನ್ನು ಅವರ ಅಭಿಮಾನಿಯೊಬ್ಬರು 525 ರೂಪಾಯಿಗಳಿಗೆ ಖರೀದಿಸಿದರು. ಆ ಕಾಲದಲ್ಲಿ, ಅರ್ಧ ತೊಲ ಚಿನ್ನದ ಬೆಲೆ 40 ರೂ.ಗಳಾಗಿತ್ತು. ಪ್ರಪಂಚದ ಯಾವುದೇ ಊರಿನಲ್ಲೂ ಯಾವ ವರ್ತಕನೂ ಉಪ್ಪನ್ನು ಅಂಥ ಅದ್ಭುತ ಬೆಲೆಗೆ ಮಾರಿರಲಿಲ್ಲ.

ತಮ್ಮ ಹಸ್ತಾಕ್ಷರವನ್ನು ಸಂಗ್ರಹಿಸಲು ಜನ ಕಾತುರರಾಗಿದ್ದಾರೆ ಎಂಬುದು ಅವರಿಗೆ ಗೊತ್ತಿತ್ತು. ತಮ್ಮ ಹಸ್ತಾಕ್ಷರಕ್ಕಾಗಿ ಅವರು ಐದು ರೂ.ಗಳನ್ನು ಬೇಡುತ್ತಿದ್ದರು. ಸಾವಿರಾರು ರೂಪಾಯಿ ದೇಣಿಗೆ ಕೂಡುತ್ತಿದ್ದ ದಾನಿಗಳು ಗಾಂಧಿಯವರ ಹಸ್ತಾಕ್ಷರವನ್ನು ತೆಗೆದುಕೊಂಡಾಗ, ಅವರಿಗೂ ಸಹ ಈ ಶುಲ್ಕಪಾವತಿಯಲ್ಲಿ ವಿನಾಯಿತಿ ಇರುತ್ತಿರಲಿಲ್ಲ. ಖಾದಿಯ ಮಾರಾಟವನ್ನು ಏರಿಸಲು, ಗಾಂಧಿ ಒಮ್ಮೆ ಮಾರಾಟಗಾರನಂತೆ ಅಭಿನಯಿಸಿದರು. ಬಲಕ್ಕೆ ಗಜಕಡ್ಡಿ ಮತ್ತು ಎಡಕ್ಕೆ ರಾಶಿ ರಾಶಿ ಖಾದಿ ಇಟ್ಟುಕೊಂಡು, ಅವರು ರಸೀದಿಗಳಿಗೆ ಸಹಿ ಹಾಕುತ್ತಾ ಹೋದರು. ಭರಭರಾಟೆಯಿಂದ ಮಾರಾಟ ಮಾಡಿದರು. 50 ನಿಮಿಷಗಳಲ್ಲಿ ಅವರು 500 ರೂಪಾಯಿಗಳ ಮೌಲ್ಯದ ಖಾದಿ ಮಾರಾಟ ಮಾಡಿದ್ದರು. ಮತ್ತೊಂದು ಸಂದರ್ಭದಲ್ಲಿ, ಪ್ರಯಾಣ ಮಾಡುತ್ತಿದ್ದಾಗ, ರಸ್ತೆಬದಿಯ ಪ್ರತಿಯೊಂದು ರೈಲು ನಿಲ್ದಾಣದಲ್ಲೂ ಖಾದಿ ಮಾರಾಟ ಮಾಡಿದರು. ಸಾಮಾನ್ಯವಾಗಿ, ಅಲ್ಲಿ ಖಾದಿಯ ವಾರ್ಷಿಕ ಮಾರಾಟ 6000 ರೂಪಾಯಿಗಳನ್ನು ದಾಟುತ್ತಿರಲಿಲ್ಲ. ಅವರ ಮನವಿಯಿಂದಾಗಿ, ಒಂದು ಖಾದಿ ಭಂಡಾರವು ತನ್ನ ಮಾರಾಟವನ್ನು ವರ್ಷಕ್ಕೆ 48 ರೂಪಾಯಿಗಳಿಂದ 65,312 ರೂಪಾಯಿಗಳಿಗೆ ಏರಿಸಲು ಶಕ್ತವಾಯಿತು. ಕಾಂಗ್ರೆಸ್ ಅಧಿವೇಶನದಲ್ಲಿನ ಕರಕುಶಲ ಕಲೆಯ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲಾಗುತ್ತಿದ್ದ ಕೈಯಿಂದ ಮಾಡಿದ ವಸ್ತುಗಳ ಬಗ್ಗೆ, ಸ್ವತಃ ತಾವೇ ಜಾಹೀರಾತು ಪ್ರತಿನಿಧಿಗಳಾಗಬೇಕೆಂದು, ಅಲ್ಲಿಗೆ ಭೇಟಿ ನೀಡುತ್ತಿದ್ದ ಎಲ್ಲರಿಗೂ ಗಾಂಧಿ ಹೇಳುತ್ತಿದ್ದರು.

ವಿದೇಶಿ ವಸ್ತುಗಳನ್ನು ಬಹಿಷ್ಕರಿಸಬೇಕೆಂದು ಅವರು ಮಾಡಿದ ಉಪನ್ಯಾಸದಿಂದಾಗಿ, ಬಂಗಾಲದಲ್ಲಿ ಆ ವಸ್ತುಗಳ ಮಾರಾಟ ವಾರ್ಷಿಕವಾಗಿ ಶೇ. 50ರಷ್ಟು ಇಳಿಮುಖವಾಯಿತು. ಇತರ ಪ್ರಾಂತ್ಯಗಳಲ್ಲೂ ಇದೇ ಆಯಿತು ಹಾಗೂ ವಿದೇಶೀ ವಹಿವಾಟು ಹೆಚ್ಚುಕಡಿಮೆ ನಿಷ್ಕ್ರಿಯವಾಯಿತು. ಭಾರತಕ್ಕೆ ಅದರ ಅವಶ್ಯಕತೆಗಳು ಹೆಚ್ಚುತ್ತಿವೆಯಾದ್ದರಿಂದ, ಅದು ಸಹ ಆಮದನ್ನು ಹೆಚ್ಚಿಸಿಕೊಳ್ಳಬೇಕು, ಆದರೆ ಭಾರತಕ್ಕೆ ಘಾಸಿಯಾಗದಂತಿದ್ದರೆ ಮಾತ್ರ ಬ್ರಿಟಿಷರೊಂದಿಗೆ ವ್ಯಾಪಾರ ಪರಿಗಣಿಸಬಹುದು ಎಂದು ಅವರಿಗೆ ಅನ್ನಿಸಿತು. ಖಾದಿಯನ್ನು ತೊಟ್ಟು, ಸುತ್ತಲೂ ವಿದೇಶೀ ವಸ್ತುಗಳಿಂದ ಆವೃತವಾಗಿದ್ದರೆ, ಏನೂ ಸಾಲದು ಎಂಬುದನ್ನು ಗಾಂಧಿ ಮನಗಂಡಿದ್ದರು. ದೊಡ್ಡ ದೊಡ್ಡ ವ್ಯಾಪಾರಿಗಳು ಮತ್ತು ಕೈಗಾರಿಕೋದ್ಯಮಿಗಳು, ಬ್ರಿಟಿಷ್ ಸಹಭಾಗಿತ್ವದೊಂದಿಗೆ ತಮ್ಮ ದೇಶ ಲೂಟಿಯಾಗುವುದಕ್ಕೆ ಅವಕಾಶವಿತ್ತಿದ್ದರು. ಇಡೀ ಭಾರತವನ್ನೇ ಖಾದಿಮಯವಾಗಿ ಮಾಡಿ, ಅಳಿವಿನ ಅಂಚಿಗೆ ಸರಿಯುತ್ತಲಿದ್ದ ಗೃಹ ಕೈಗಾರಿಕೆಗಳಿಗೆ ಪುನಶ್ಚೇತನ ತುಂಬಲು ಅವರು ಬಯಸಿದ್ದರು.

ಅವರಿಗೆ ವೈರಿ ಸರ್ಕಾರದಿಂದ ಯಾವ ಸಹಾಯಧನವೂ ಸಿಗಲಿಲ್ಲ. ಜನರ ಉದಾಸೀನತೆ ನಿರುತ್ಸಾಹದಾಯಕವಾಗಿತ್ತು. ಆದರೂ ಜನರು ಆಹಾರ, ಉಡುಗೆ ಮತ್ತು ಇತರ ಮೂಲಭೂತ ಅವಶ್ಯಕತೆಗಳಿಗಾಗಿ ತಮ್ಮ ಶ್ರಮವನ್ನೇ ಆಧರಿಸಿಕೊಳ್ಳಲೆಂದು ಅವರಿಗೆ ಸ್ವಸಹಾಯವನ್ನು ಬೋಧಿಸಲು ಅವರು ನಿರ್ಧರಿಸಿದ್ದರು. ಅಖಿಲ ಭಾರತ ಗ್ರಾಮ ಕೈಗಾರಿಕಾ ಸಂಘ ಮತ್ತು ಅಖಿಲ ಭಾರತ ನೂಲುವವರ ಸಂಘಗಳ ಸ್ಥಾಪನೆಯಾಯಿತು. ಭಾರತದಾದ್ಯಂತ ಅವುಗಳ ಹಲವಾರು ಶಾಖೆಗಳು ತೆರೆಯಲ್ಪಟ್ಟವು. ವಾರ್ಧಾದಲ್ಲಿದ್ದ 'ಮಗನ್ ವಸ್ತು ಸಂಗ್ರಹಾಲಯ ಮ್ಯೂಸಿಯಂ' ನೂಲುವುದು, ನೇಯುವುದು, ಕಾಗದ ತಯಾರಿಕೆ, ಚರ್ಮದ ಕೆಲಸ, ಎಣ್ಣೆ ತೆಗೆಯುವುದು, ಭತ್ತದ ಹೊಟ್ಟು ತೆಗೆಯುವುದು, ಸಾಬೂನು ತಯಾರಿಕೆ, ಜೇನು ಸಾಕಣಿಕೆ, ಮರಗೆಲಸ ಮತ್ತು ಕಮ್ಮಾರಿಕೆ ಮುಂತಾದ ಚಟುವಟಿಕೆಗಳ ಕೇಂದ್ರವಾಗಿ ಪರಿವರ್ತನೆಗೊಂಡಿತು. ತಮ್ಮದೇ ಮನೆಯಲ್ಲಿ ಬೆಳೆದ

ಕಾಳುಗಳಿಂದ ತಯಾರಿಸಿದ ರೊಟ್ಟಿಗಳಿಗಿಂತ ಅಗ್ಗದ ರೊಟ್ಟಿ ಹೇಗೆ ದೊರಕಬಾರದೋ ಅದೇ ರೀತಿ, ತಮ್ಮ ಮನೆಯಲ್ಲೇ ನೂತು, ನೇಯ್ದ ಬಟ್ಟೆಯ ಬೆಲೆಗಿಂತ ಬೇರೆ ಯಾವುದೇ ಬಟ್ಟೆ ಅಗ್ಗವಾಗಿರಬಾರದು ಎಂಬುದನ್ನು ಗಾಂಧಿ ಒತ್ತಿ ಹೇಳಿದರು. ಅವರ ಪ್ರಕಾರ, ಜೀವನವೆಂದರೆ, ಹಣಕ್ಕಿಂತ ಮಿಗಿಲಾದದ್ದು ಹಾಗೂ ನಿರಂತರ ನಿರುದ್ಯೋಗದಿಂದ ಜನರಲ್ಲಿ ಉಂಟಾಗುವ ಆಲಸ್ಯವು ಬಹಳ ದುಃಖಿಕರವಾದದ್ದು. ರಾಷ್ಟ್ರೀಯ ಹಿತರಕ್ಷಣೆಯ ದೃಷ್ಟಿಯಿಂದ ಪರಾಮರ್ಶಿಸುತ್ತಾ, ಅರ್ಥಶಾಸ್ತ್ರದ ಬಗೆಗಿನ ನಮ್ಮ ಅಭಿಪ್ರಾಯಗಳನ್ನು ಪರಿಷ್ಕರಿಸಲು ಯತ್ನಿಸಿದರು. ನಾವು ಸಾಕಷ್ಟು ಪ್ರಮಾಣದ ಆಹಾರವಸ್ತುಗಳನ್ನು ಉತ್ಪಾದಿಸಿದರೂ, "ಗೋಧಿಯನ್ನು ಹೊರಗಿನಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ, ನಿಮಗೆ ಗೊತ್ತೆ? ನಾವು ಸತ್ವ ತೆಗೆದು ಹೊಳಪು ಮಾಡಿದ ಅಕ್ಕಿಯನ್ನು ಹಾಗೂ ಕಡಿಮೆ ಪೌಷ್ಟಿಕಾಂಶವಿರುವ ಸಕ್ಕರೆಯನ್ನು ತಿನ್ನುತ್ತೇವೆ. ಗಿರಣಿಯಲ್ಲಿ ಪುಡಿ ಮಾಡಿದ ಕಡಿಮೆ ಪೌಷ್ಟಿಕಾಂಶದ ವಸ್ತುಗಳಿಗೆ ಹಣ ತೆರುತ್ತೇವೆ. ಬದಲಿಗೆ, ಅನಾರೋಗ್ಯವನ್ನು ಖರೀದಿಸುತ್ತೇವೆ. ಹಳ್ಳಿಯ ಗಾಣಿಗನನ್ನು ಅಳಿವಿನತ್ತ ನೂಕಿ ಅವನನ್ನು ನರಳಿಸಿದ್ದೇವೆ. ಇಂದಿನ ಗ್ರಾಮಸ್ಥನಲ್ಲಿ 50 ವರ್ಷಗಳ ಹಿಂದಿನ ಗ್ರಾಮಸ್ಥನಲ್ಲಿ ಇದ್ದಂಥ ಬುದ್ಧಿವಂತಿಕೆಯಾಗಲೀ, ಸಂಪನ್ಮೂಲವಾಗಲೀ ಇಲ್ಲ. ಒಂದೇ ಸಮನೆ ಅವನು ಕೊಡುತ್ತಾ ಹೋಗುತ್ತಾನೆ. ಅದಕ್ಕೆ ಬದಲಾಗಿ ಅವನು ಪಡೆಯುವುದು ಅತ್ಯಲ್ಪ. ನನ್ನ ಯೋಜನೆಯಲ್ಲಿ, ಹಳ್ಳಿಗಳಲ್ಲಿ ಚೆನ್ನಾಗಿ ಉತ್ಪಾದನೆಯಾಗುವ ಯಾವುದನ್ನೂ ನಗರಗಳಲ್ಲಿ ಉತ್ಪಾದಿಸಲು ನಾನು ಬಿಡುವುದಿಲ್ಲ" ಎಂದು ಅವರು ವಾದಿಸಿದರು. ತಮ್ಮ ಭತ್ತದ ಹೊಟ್ಟು ತಾವೇ ತೆಗೆಯಬೇಕು, ತಮ್ಮ ಗೋಧಿ ತಾವೇ ಬೀಸಿಕೊಳ್ಳಬೇಕು, ಸಕ್ಕರೆಯ ಬದಲು ತಾಜಾ ಬೆಲ್ಲವನ್ನು ಉಪಯೋಗಿಸಬೇಕು ಮತ್ತು ನೂಲಬೇಕು–ನೇಯಬೇಕು ಎಂದು ಅವರು ಜನರಿಗೆ ಹೇಳಿದರು. ವಿದೇಶೀ ಸಂದರ್ಶಕರಿಗೆ ಅವರು ಶ್ರೀಮಂತವಾಗಿದ್ದ ಕಂದುಬಣ್ಣದ ಬೆಲ್ಲದ ಮಾದರಿ ಕೊಡುತ್ತಿದ್ದರು.

ಗಿರಣಿ ಬಟ್ಟೆಗಳೊಂದಿಗೆ ಖಾದಿ ಪೈಪೋಟಿ ಮಾಡಬೇಕಾಗಿದೆಯೆಂಬ ಅಂಶವನ್ನು ಮರೆತುಬಿಡುವಂತೆ ಗಾಂಧಿ ತಮ್ಮ ದೇಶವಾಸಿಗಳಿಗೆ ಹೇಳಿದರು. "ಗಿರಣಿ ಮಾಲೀಕ ಯಾವಾಗಲೂ ಅದನ್ನು ಅಗ್ಗವಾಗಿಸುವ ಬಗ್ಗೆಯೇ ಗಮನ ಇಡುತ್ತಾನೆ. ಆದರೆ ನಾವು ನ್ಯಾಯ ಮತ್ತು ನ್ಯಾಯವಾದ ಜೀವನಭತ್ಯೆಯ ಬಗ್ಗೆ ಗಮನ ಕೊಡಬೇಕು. ಇಲ್ಲದಿದ್ದಲ್ಲಿ, ಅದು ಅರಿವಿಲ್ಲದ ಶೋಷಣೆಯಾಗುತ್ತದೆ." ಒಬ್ಬ ಕಾಗದ ತಯಾರಿಕೆಗಾರ ತನ್ನ ಆಳುಗಳಿಗೆ ದಿನಕ್ಕೆ 6 ಪೈಸೆಗಳನ್ನು ಕೊಡುತ್ತಿದ್ದ ಹಾಗೂ ಕೈಯಿಂದ ತಯಾರಿಸಿದ ಕಾಗದವನ್ನು ಮತ್ತಷ್ಟು ಅಗ್ಗಗೊಳಿಸುವ ಆಶಯ ಹೊಂದಿದ್ದ. ಅಗ್ಗದ ದರಕ್ಕೆ ತಾವು ಖರೀದಿಸುವುದಿಲ್ಲವೆಂದು ಗಾಂಧಿ ಹೇಳಿದರು.

ರೈತರು ಮತ್ತು ಹಳ್ಳಿಯ ಕಲಾಕಾರರನ್ನು ಅವಲಂಬಿಸಿ, ಅವರನ್ನೇ ಹೀರುತ್ತಿದ್ದ ಮಧ್ಯವರ್ತಿಗಳನ್ನು ನಿರ್ಮೂಲ ಮಾಡಲು ಗಾಂಧಿ ಬಯಸಿದ್ದರು. ನೆಲ ಉಳುವವರಿಗೆ ಅವರ ಉತ್ಪನ್ನಗಳಿಗೆ ತಕ್ಕ ಮೌಲ್ಯ ಸಿಗುತ್ತಿರಲಿಲ್ಲ ಎಂಬುದು ಅವರಿಗೆ ತಿಳಿದಿತ್ತು. ಗ್ರಾಹಕರು ನೀಡುವ ಮೊತ್ತದಲ್ಲಿ ಕೇವಲ ಒಂದು ಭಾಗಾಂಶ ಅವರನ್ನು ತಲಪುತ್ತಿತ್ತು. ಅವರಿಗಿದ್ದ ತೊಂದರೆ ಎಂದರೆ ಕಡಿಮೆ ದರಗಳಲ್ಲ, ಬದಲಿಗೆ ಮಧ್ಯವರ್ತಿಗಳೇ. ಆಹಾರ ಮತ್ತು ಬಟ್ಟೆಯ ನಿಯಂತ್ರಣಕ್ಕೆ ಅವರು ವಿರೋಧಿಯಾಗಿದ್ದರು. ಕಪ್ಪು ದಂಧೆ ಮತ್ತು ಹೆಚ್ಚು ಲಾಭ ಹೊಡೆಯುವ ವ್ಯಾಪಾರಿಗಳ ರೂಢಿಯನ್ನು ಅವರು ಖಂಡಿಸಿದರು. ವ್ಯಾಪಾರಿಗಳು ಮೋಸದಿಂದ ಹಣ ಸಂಗ್ರಹ ಮಾಡುತ್ತಾರೆ ಮತ್ತು ತಪ್ಪುದಾರಿಯಿಂದ ಸಂಪಾದಿಸಿದ ಲಾಭಗಳೆಲ್ಲವನ್ನು ಧಾರ್ಮಿಕ ಉದ್ದೇಶಗಳಿಗಾಗಿ ಮತ್ತು ಸಾರ್ವಜನಿಕ ದತ್ತಿಗಳಿಗೆ ವಿನಿಯೋಗಿಸಿದರೆ ತಮ್ಮ ಪಾಪಗಳೆಲ್ಲಾ ತೊಳೆದುಹೋಗುತ್ತವೆ ಎಂದು ಯೋಚಿಸಿ ತಮ್ಮನ್ನು ತಾವೇ ಮೋಸಗೊಳಿಸಿಕೊಳ್ಳುತ್ತಾರೆ ಎಂದು ಅವರು ಆಕ್ಷೇಪಿಸಿದರು. "ದೊಡ್ಡ ವರ್ತಕರು ಮತ್ತು ಬಂಡವಾಳಶಾಹಿಗಳು ಬ್ರಿಟಿಷ್ ಸರ್ಕಾರದ ವಿರುದ್ಧ ಮಾತನಾಡುತ್ತಾರೆ, ಆದರೆ ಕೆಲಸ ಮಾಡುವಾಗ ಸರ್ಕಾರದ ಇಚ್ಛೆಯಂತೆ ನಡೆಯುತ್ತಾರೆ ಹಾಗೂ ಆ ಮೂಲಕ ಲಾಭ ಗಳಿಸುತ್ತಾರೆ; ಈ ಲಾಭದ ಪ್ರಮಾಣ ಸರ್ಕಾರದ ಶೇ. 95ರಷ್ಟಕ್ಕೆ ವಿರುದ್ಧವಾಗಿ ಶೇ. 5ರಷ್ಟೇ ಇರಬಹುದು. ಭಾರತೀಯ ವರ್ತಕರು ವಿದೇಶೀ ವಸ್ತುಗಳನ್ನು ಸ್ವದೇಶೀ ವಸ್ತುಗಳೆಂದು ಹೇಳಿ ತಳ್ಳಿದ್ದರಿಂದಲೇ ಸ್ವದೇಶೀ ಚಳುವಳಿ ಕುಸಿಯಿತು ಎಂದು ನನಗೆ ಅರ್ಥವಾಗಿದೆ. ಭಾರತ ಸೋತದ್ದು ವರ್ತಕರಿಂದಲೇ. ಅದನ್ನು ನಾವು ಅವರ ಮೂಲಕವೇ ಮರಳಿ ಪಡೆಯುತ್ತೇವೆ ಎಂಬುದು ನನಗೆ ಖಚಿತ" ಎಂದು ಅವರು ವರ್ತಕರನ್ನು ಜರಿದರು.

ರೈತ

ರೈತ ವಿಶ್ವದ ತಂದೆ ಎಂದು ಬಣ್ಣಿಸುವ ಒಂದು ಪದ್ಯವನ್ನು ಗಾಂಧಿ ಓದಿದರು. ದೇವರು ಒದಗಿಸುವವನಂತೆ ಹಾಗೂ ರೈತ ಆ ದೇವರ ಕೈಯಂತೆ. ಭಾರತದ ಸ್ವಾತಂತ್ರ್ಯ ಅಡಗಿರುವುದು ಬಡತನ ಮತ್ತು ಅಜ್ಞಾನದಿಂದ ರೈತ ಬಿಡುಗಡೆ ಹೊಂದುವುದರಲ್ಲಿ ಎಂದು ಅವರು ಪ್ರತಿಪಾದಿಸಿದರು. "ಶೇಕಡ 75ಕ್ಕೂ ಹೆಚ್ಚು ಜನತೆ ವ್ಯವಸಾಯ ಮಾಡುವವರೇ. ರೈತ ಭೂಮಿಯ ಉಪ್ಪಿದ್ದಂತೆ. ಈ ಭೂಮಿ ಅವನಿಗೇ ಸಲ್ಲಬೇಕು; ಗೈರುಹಾಜರಾಗಿರುವ ಜಮೀನ್ದಾರನಿಗಲ್ಲ – ಸಭೀ ಭೂಮಿ ಗೋಪಾಲ್ ಕೀ. ಅವರ ಶ್ರಮದ ಹೆಚ್ಚುಕಡಿಮೆ ಎಲ್ಲಾ ಫಲಗಳನ್ನು ನಾವು ಕಸಿದುಕೊಂಡಲ್ಲಿ, ನಮ್ಮ ಬಗ್ಗೆ ಸ್ವನಿಯಂತ್ರಣವೇನೂ ಅಷ್ಟಾಗಿ ಇರದು. ರೈತರ ಮೂಲಕವಷ್ಟೇ ನಮ್ಮ ಉದ್ಧಾರ ಆಗಬಲ್ಲದು. ವಕೀಲರಾಗಲೀ, ವೈದ್ಯರಾಗಲೀ ಅಥವಾ ಶ್ರೀಮಂತ ಜಮೀನ್ದಾರರಾಗಲೀ ನಮ್ಮನ್ನು ಉದ್ಧಾರ ಮಾಡಲಾರರು." ರಾಜ್ಯಾಂಗದ ಆದಾಯದಲ್ಲಿ ಶೇಕಡ ಇಪ್ಪತ್ತೈದರಷ್ಟು ರೈತಾಪಿಗಳಿಂದಲೇ ಸಂಗ್ರಹವಾಗುತ್ತಿತ್ತು. ಭೂಕಂದಾಯದ ಒತ್ತಡ ಬಲವಾಗಿತ್ತು. ಭಾರತದ ಯಾವುದೇ ನಗರದಲ್ಲಿ ಭವ್ಯ ಕಟ್ಟಡಗಳು ನಿರ್ಮಾಣವಾಗುತ್ತಿರುವುದನ್ನು ಕಂಡಾಗ ಅಥವಾ ಆ ಬಗ್ಗೆ ಕೇಳಿದಾಗ, ಗಾಂಧಿ ದುಃಖದಿಂದ ಹೇಳುತ್ತಿದ್ದರು: "ಓಹ್, ಇದು ರೈತರಿಂದ ಬಂದಂತಹ ದುಡ್ಡು." ನಗರ ಪ್ರಗತಿಯ ಇಂತಹ ಯಾವುದೇ ಸಂಕೇತಗಳು ಅವರಿಗೆ ತೆರಿಗೆಗಳು, ಅನ್ಯಾಯವಾದ ಬಲವಂತದ ಸುಲಿಗೆಗಳು, ಎಂದೂ ಪಾವತಿಸಲಾಗದ ಸಾಲಸೋಲಗಳು, ಅನಕ್ಷರತೆ, ಮೂಢನಂಬಿಕೆಗಳು ಮತ್ತು ರೋಗಗಳ ಭಾರದಿಂದ ಜರ್ಜರಿತರಾದ ರೈತಾಪಿಜನರ ನೆನಪು ತರಿಸುತ್ತಿದ್ದವು.

ಗಾಂಧಿ ಜನ್ಮದಿಂದ ರೈತರೇನಲ್ಲ. ಆದರೆ, ಅವರು ಒಬ್ಬ ರೈತನಾಗಲು ಎಲ್ಲಾ ಪ್ರಯತ್ನಗಳನ್ನು ಮಾಡಿದರು. ಹುಡುಗನಾಗಿದ್ದಾಗಿಂದ ಹಣ್ಣುಗಳನ್ನು ಬೆಳೆಸುವುದು ಅವರಿಗೆ ಇಷ್ಟವಿತ್ತು. ಪ್ರತಿ ಮಧ್ಯಾಹ್ನ ಶಾಲೆಯಿಂದ ಬಂದಮೇಲೆ, ತಾರಸಿಯ ಮೇಲಿನ ಗಿಡಗಳಿಗೆ ನೀರು ಉಣಿಸಲು ಬಕೆಟ್‌ಗಟ್ಟಲೆ ನೀರು ಒಯ್ಯುತ್ತಿದ್ದರು. 36 ವಯಸ್ಸಿನವರಾಗಿದ್ದಾಗ, ಒಂದು ತೋಟದಲ್ಲಿ ರೈತನ ಜೀವನ ನಡೆಸಲಾರಂಭಿಸಿದರು. ಒಂದು ಆಶ್ರಮವನ್ನು ಕಟ್ಟಲು ಭೂಮಿಯನ್ನು ಹುಡುಕುತ್ತಿದ್ದಾಗ, ಹಣ್ಣುಗಳ ಮರಗಳಿದ್ದ ಒಂದು ಎಕರೆ ನೆಲ ಅವರನ್ನು ಆಕರ್ಷಿಸಿತು. ಅದನ್ನು ಖರೀದಿಸಿದ ಅವರು ತಮ್ಮ ಕುಟುಂಬ ಮತ್ತು ಗೆಳೆಯರೊಂದಿಗೆ ಅಲ್ಲಿಯೇ ನೆಲೆಯೂರಿದರು. ನಿಧಾನವಾಗಿ ಅವರು ಸಾಗುವಳಿಯಲ್ಲೂ ತೊಡಗಿಕೊಂಡರು ಹಾಗೂ ವಕೀಲತನದ ಶಿಷ್ಟವೃತ್ತಿಯನ್ನು ಬಿಟ್ಟರು. ತೋಟದ ನಿವಾಸಿಗಳೇ ಅಲ್ಲಿ ಚಿಕ್ಕ ಚಿಕ್ಕ ಮನೆಗಳನ್ನು ಕಟ್ಟಿಕೊಂಡರು. ಗಾಂಧಿ ನೆಲ ಉತ್ತರು, ನೀರು ಸೇದಿದರು, ತರಕಾರಿ ಮತ್ತು ಹಣ್ಣುಗಳನ್ನು ಬೆಳೆದರು ಮತ್ತು ಸೌದೆ ಒಡೆದರು. ಆ ಭೂಮಿಯನ್ನು ಅವರು ಬೇಗನೆಯೇ ಹಣ್ಣಿನ ತೋಟವಾಗಿಸಿದರು.

ದಕ್ಷಿಣ ಆಫ್ರಿಕಾದಲ್ಲಿ ಹತ್ತು ವರ್ಷಗಳ ಕಾಲದ ತೋಟದ ಜೀವನ, ಬೆಳೆ ಬೆಳೆಯುವುದರಲ್ಲಿ ಅವರಿಗೆ ಒಳ್ಳೆಯ ಜ್ಞಾನ ಮತ್ತು ಅನುಭವವನ್ನು ಒದಗಿಸಿ ಸನ್ನದ್ಧರನ್ನಾಗಿಸಿತ್ತು. ಜೇನುಗೂಡುಗಳನ್ನು ಸ್ಥಳಾಂತರ ಮಾಡದೆ ಅಥವಾ ಜೇನ್ನೊಣಗಳಿಗೆ ಯಾವುದೇ ಹಾನಿ ಮಾಡದೆ ಅಹಿಂಸಾತ್ಮಕವಾದ ಮತ್ತು ಹೆಚ್ಚು ವೈಜ್ಞಾನಿಕವಾದ ರೀತಿಯಲ್ಲಿ ಜೇನು ಸಾಕುವ ವಿಧಾನವನ್ನು ಅವರು ಜನಪ್ರಿಯಗೊಳಿಸಿದರು. ಬೆಳೆ ಬೆಳೆಯುವ ಜಮೀನಿನ ಅಥವಾ ಹಣ್ಣು-ತರಕಾರಿಗಳ ತೋಟದ ಬಳಿ ಜೇನುಸಾಕಣೆ ಮಾಡುವುದರಿಂದ ಗಿಡಗಳಿಂದ ಹೆಚ್ಚು ಉತ್ಪನ್ನ ಹೇಗೆ ಪಡೆಯಬಹುದೆಂಬುದನ್ನು ಅವರು ವಿವರಿಸಿದರು. ಹೂವುಗಳಿಂದ ಮಧುವನ್ನು ಹೀರುವ ಜೇನ್ನೊಣಗಳು ತಮ್ಮ ಕಾಲುಗಳ ಮೂಲಕ ಪರಾಗಗಳನ್ನು ಒಯ್ಯುತ್ತವೆ. ಹೀಗೆ ಬೆಳೆಗಳ ಉಭಯರೂಪ ಮತ್ತು ಇಳುವರಿಯನ್ನು ಸುಧಾರಿಸುತ್ತದೆ.

ಭೂಮಿಯ ಬಂಜರುತನ, ಒಳ್ಳೆಯ ಸಾಧನ ಸಲಕರಣೆಗಳ ಕೊರತೆ ಅಥವಾ ಅಲ್ಪ ಪ್ರಮಾಣದ ನೀರು ಪೂರೈಕೆಗಳ ಬಗ್ಗೆ ಯಾವುದೇ ದೂರುಗಳನ್ನು ಗಾಂಧಿ ತಳ್ಳಿ ಹಾಕುತ್ತಿದ್ದರು. ತಮ್ಮ ಆಳುಕಾಳುಗಳನ್ನು ಬುದ್ಧಿವಂತಿಕೆಯಿಂದ ಬಳಸಿಕೊಳ್ಳುವುದೇ ಒಬ್ಬ ಕೃಷಿಕನ ಪ್ರಮುಖ ಆಸ್ತಿ ಎಂದು ಅವರು ದೃಢವಾಗಿ ಹೇಳುತ್ತಿದ್ದರು. ಆತ ಉತ್ಸಾಹಶೀಲನಾಗಿರಬೇಕು, ಯುಕ್ತಿಸಾಧಕನಾಗಿರಬೇಕು ಮತ್ತು ಸ್ವಾವಲಂಬಿಯಾಗಿರಬೇಕು. 'ನಯೀ ತಾಲೀಮ್'ನ ವ್ಯವಸ್ಥಾಪಕರೊಬ್ಬರು ಅವರ ಪಾಲಿನ ಭೂಮಿ ಉಳುಮೆಗೆ ಯೋಗ್ಯವಾಗಿಲ್ಲ ಎಂದು ದೂರಿದಾಗ, ಗಾಂಧಿ ಹೇಳಿದರು: "ದಕ್ಷಿಣ ಆಫ್ರಿಕಾದಲ್ಲಿ ಎಂತಹ ಭೂಮಿಯಲ್ಲಿ ನಾವು ಆರಂಭಿಸಬೇಕಾಯಿತು ಎಂಬುದು ನಿಮಗೆ ಗೊತ್ತಿಲ್ಲ. ನಾನೇ ಈಗ ನಿಮ್ಮ ಜಾಗದಲ್ಲಿದ್ದಿದ್ದರೆ, ಶುರುವಿನಲ್ಲೇ ನೇಗಿಲನ್ನು ಬಳಸುತ್ತಿರಲಿಲ್ಲ. ಮಕ್ಕಳಿಗೆ ಸನಿಕೆಯನ್ನು ಕೊಟ್ಟು, ಅದನ್ನು ಬಳಸುವುದು ಹೇಗೆ ಎಂದು ಹೇಳಿಕೊಡುತ್ತಿದ್ದೆ. ಅದೊಂದು ಕಲೆ. ಎತ್ತುಗಳು ಆಮೇಲೆ ಬರಬಹುದು. ಜೇಡಿಮಣ್ಣು ಅಥವಾ ಕಾಂಪೋಸ್ಟ್ ಗೊಬ್ಬರದ ತೆಳುವಾದ ಮೇಲ್ಪದರ ಹಾಕಿದರೆ ಬಹಳಷ್ಟು ಪ್ರಯೋಜನಕಾರಿಯಾದ ತರಕಾರಿ ಮತ್ತು ಕುಂಡ ಸಸ್ಯಗಳನ್ನು ಬೆಳೆಯುವುದು ಸಾಧ್ಯವಾಗುತ್ತದೆ. ಅಷ್ಟೇನೂ ಆಳವಿಲ್ಲದ ಕಂದಕದ ವ್ಯವಸ್ಥೆಯಿಂದ ಮಲವನ್ನು ಗೊಬ್ಬರವಾಗಿ ಪರಿವರ್ತಿಸಬಹುದು. ಇದಕ್ಕೆ ಹದಿನೈದು ದಿನಗಳಿಗಿಂತಲೂ ಹೆಚ್ಚು ಸಮಯ ಬೇಕಾಗದು. ಉಳುಮೆಯ ಕೆಲಸ ಗೌರವಾನ್ವಿತವಾದದ್ದು ಎಂದು ಪರಿಗಣಿಸುವಂತೆ ನಮ್ಮ ಮಕ್ಕಳಿಗೆ ಹೇಳಿಕೊಡಬೇಕು. ಅದೇನೂ ಅವಮಾನಕರವಲ್ಲ: ಅದೊಂದು ಕುಲೀನ ವೃತ್ತಿ." ಪ್ರಾಥಮಿಕ ಶಿಕ್ಷಣ ಯೋಜನೆಯಲ್ಲಿ ಕೃಷಿಯು ಪ್ರಮುಖ ಪಾತ್ರ ವಹಿಸಬಲ್ಲದು ಎಂದು ಗಾಂಧಿ ಯೋಚಿಸಿದ್ದರು.

ಭಾರತದ ವಿಭಜನೆಗೆ ಮುನ್ನ, ನೋಖಾಲಿಯ ಹಿಂದೂಗಳು ಅವರನ್ನು ಕೇಳಿದರು: "ನಾವಿಲ್ಲಿ ಮುಂದುವರಿಯುವುದು ಹೇಗೆ? ನಾವೇನು ತಿನ್ನಬೇಕು? ಮುಸಲ್ಮಾನ ರೈತರು ನಮಗೆ ಸಹಕಾರವನ್ನೇ ಕೊಡುತ್ತಿಲ್ಲ. ನಮಗೆ ಎತ್ತುಗಳನ್ನಾಗಲೀ, ನೇಗಿಲುಗಳನ್ನಾಗಲೀ ಒದಗಿಸುತ್ತಿಲ್ಲ." ಗಾಂಧಿ ಮರುನುಡಿದರು: "ಪಿಕಾಸಿಗಳನ್ನು ತೆಗೆದುಕೊಳ್ಳಿ, ಅಗೆಯಲು ಆರಂಭಿಸಿ. ಪಿಕಾಸಿಯಿಂದ ಅಗೆದರೆ, ಭೂಮಿಯಲ್ಲಿ ಇಳುವರಿ ಏನೂ ಕಡಿಮೆಯಾಗುವುದಿಲ್ಲ."

1943ರಲ್ಲಿ, ಗಾಂಧಿ ಸೆರೆಮನೆಯಲ್ಲಿದ್ದಾಗ, ಬಂಗಾಲದಲ್ಲಿ ಲಕ್ಷಗಟ್ಟಲೆ ಜನ ಹಸಿವಿನಿಂದ ಸತ್ತರು. ಆ ದುಃಖದಾಯಕ ಘಟನೆಯ ನೆನಪು ಜನರ ಹಾಗೂ ಸರ್ಕಾರೀ ಅಧಿಕಾರಿಗಳ ಮನಸ್ಸಿನಲ್ಲಿ ಹಸುರಾಗಿತ್ತು. 1947ರಲ್ಲಿ ಮತ್ತೊಂದು ಬರಗಾಲದ ಆಶಂಕೆ ಇದ್ದಾಗ, ಗಾಂಧಿಯವರ ಸಲಹೆ ಪಡೆಯಲು ವೈಸ್‌ರಾಯ್ ತಡಮಾಡದೆ ತಮ್ಮ ಖಾಸಗಿ ಕಾರ್ಯದರ್ಶಿಯನ್ನು ವಿಮಾನದಲ್ಲಿ ಸೇವಾಗ್ರಾಮಕ್ಕೆ ಕಳುಹಿಸಿದರು. ಗಾಂಧಿ ವಿಚಲಿತರಾಗಲಿಲ್ಲ. ಬರಲಿರುವ ವಿಪತ್ತಿನ ಬಗ್ಗೆ ಎಲ್ಲಾ ಭಯಗಳನ್ನು ತೊರೆಯಬೇಕೆಂದು

ಜನರಿಗೆ ಸಲಹೆ ಇತ್ತರು : "ಫಲವತ್ತಾದ ಭೂಮಿ ಅಪಾರವಾಗಿದೆ. ನೀರು ಸಾಕಷ್ಟಿದೆ ಹಾಗೂ ಮಾನವಬಲಕ್ಕೆ ಬರವೇನೂ ಇಲ್ಲ. ಇಂತಹುದರಲ್ಲಿ ಆಹಾರದ ಕೊರತೆ ಯಾಕಾಗಬೇಕು? ಜನ ಸ್ವಾವಲಂಬಿಗಳಾಗಬೇಕಾದರೆ, ಅವರನ್ನು ಶಿಕ್ಷಿತರನ್ನಾಗಿಸಬೇಕು. ಎರಡು ಕಾಳು ತಿನ್ನುವವ ನಾಲ್ಕು ಕಾಳುಗಳನ್ನು ಉತ್ಪಾದಿಸಬೇಕು. ಎಲ್ಲರೂ ಸ್ವಂತ ಬಳಕೆಗಾಗಿ ಯಾವುದಾದರೂ ಆಹಾರವಸ್ತುವನ್ನು ಬೆಳೆಯಬೇಕು. ಅದನ್ನು ಮಾಡಲು ಸುಲಭಸಾಧ್ಯ ವಿಧಾನವೆಂದರೆ – ಸ್ವಲ್ಪ ಸ್ವಚ್ಛ ಮಣ್ಣನ್ನು ಸಂಗ್ರಹಿಸುವುದು, ಅದಕ್ಕೆ ಸಾವಯವ ಗೊಬ್ಬರ ಮಿಶ್ರ ಮಾಡುವುದು – ಒಣಗಿದ ಸಗಣಿ/ಜೆರಣಿ ಸಹ ಒಳ್ಳೆಯ ಸಾವಯವ ಗೊಬ್ಬರವೇ – ಅದನ್ನು ಮಣ್ಣು ಅಥವಾ ತಗಡಿನ ಕುಂಡದಲ್ಲಿ ಹಾಕುವುದು. ತರಕಾರಿಗಳ ಹಲವು ಬೀಜಗಳನ್ನು ಅದರೊಳಕ್ಕೆ ಎಸೆಯುವುದು, ಮತ್ತೆ ದಿನಾ ಕುಂಡಗಳಿಗೆ ನೀರುಣಿಸುವುದು. ಎಲ್ಲಾ ಸಾಂಪ್ರದಾಯಿಕ ಸಮಾರಂಭಗಳನ್ನು ನಿಲ್ಲಿಸಬೇಕು. ಎಲ್ಲಾ ಬೀಜಗಳ ರಫ್ತುಗಳನ್ನು ನಿಲ್ಲಿಸಬೇಕು. ಕ್ಯಾರಟ್‌ಗಳು, ಮೂಲಂಗಿಯಂಥ ಗಡ್ಡೆ ಸಸ್ಯಗಳು, ಆಲೂಗಡ್ಡೆ, ಗೆಣಸು ಮತ್ತು ಬಾಳೆಹಣ್ಣುಗಳಿಂದ ಶರ್ಕರಪಿಷ್ಟಗಳು ಸಿಗುತ್ತವೆ. ಇಲ್ಲಿನ ವಿಚಾರವೇನೆಂದರೆ, ಈಗಿನ ಆಹಾರಸೇವನೆಯ ಪದ್ಧತಿಯಿಂದ ಧಾನ್ಯಗಳು ಮತ್ತು ಬೇಳೆಕಾಳುಗಳನ್ನು ಹೊರತುಪಡಿಸಿ, ಅವನ್ನು ಸಂಗ್ರಹಿಸಿಡುವುದು." ಸ್ವಸಹಾಯಕ್ಕಾಗಿ ಅವರು ನೀಡಿದ ಕರೆಗೆ ಕಠಿಣ ಶಿಸ್ತು-ಸಂಯಮಗಳನ್ನು ದೃಢವಾಗಿ ಪಾಲಿಸುವ, ಹೊಸ ವಿಧಾನದ ಆಹಾರ ಪದ್ಧತಿಗೆ ಹೊಂದಿಕೊಳ್ಳಬೇಕಾದ ಮತ್ತು ಪರದೇಶಗಳ ಮುಂದೆ ಕೈಚಾಚದಿರಬೇಕಾದ ಅವಶ್ಯಕತೆ ಇತ್ತು.

ಆಹಾರ ಮತ್ತು ಬಟ್ಟೆಯ ಮೇಲೆ ನಿಯಂತ್ರಣವಿದ್ದಾಗ, ಗಾಂಧಿಗೆ ಸರ್ಕಾರೀ ದಾಸ್ತಾನಿನಿಂದ ಆಹಾರಧಾನ್ಯಗಳನ್ನು ಪಡೆಯುವ ಅವಶ್ಯಕತೆ ಇರಲಿಲ್ಲ. ಅಕ್ಕಿ, ಗೋಧಿ ಮತ್ತು ಬೇಳೆಕಾಳುಗಳಿಲ್ಲದೆಯೇ ಅವರಿಗೆ ನಡೆಯುತ್ತಿತ್ತು. ಅವರು ಸಕ್ಕರೆ ಉಪಯೋಗಿಸುತ್ತಿರಲಿಲ್ಲ. ತಮ್ಮ ಬಟ್ಟೆ ತಾವೇ ತಯಾರಿಸಿಕೊಳ್ಳುತ್ತಿದ್ದರು.

'ಹರಿಜನ್' ಪತ್ರಿಕೆಯಲ್ಲಿ, ಕೈಗೆ ಸಿಗುವ ವಸ್ತುಗಳಿಂದಲೇ, ಅಂದರೆ – ಬಿಟ್ಟಿಯಾಗಿ ಸಿಗುವ ಸಗಣಿ, ಮಲ, ಮೂತ್ರ, ತರಕಾರಿಗಳ ಸಿಪ್ಪೆಗಳು ಮತ್ತು ಮಾರಕ ಜಲಸಸ್ಯಗಳು – ಇವುಗಳಿಂದ ಕಾಂಪೋಸ್ಟ್ ಗೊಬ್ಬರ ತಯಾರಿಸುವುದು ಹೇಗೆ ಎಂಬ ಬಗ್ಗೆ ವಿವರವಾದ ಸೂಚನೆಗಳನ್ನು ಕೊಟ್ಟರು. ಸ್ವಲ್ಪ ಶ್ರಮ ಮತ್ತು ಆನ್ವಯಿಕೆಗಳಿಂದ ಕಾಂಪೋಸ್ಟ್ ಗೊಬ್ಬರವನ್ನು ಯಾವುದೇ ಬಂಡವಾಳವಿಲ್ಲದೆ ಮಾಡಬಹುದು. ಅವರ ಆಶ್ರಮಗಳಲ್ಲಿ, ಆಳವಿಲ್ಲದ ಗುಂಡಿಗಳಲ್ಲಿ ಮಲ-ಮೂತ್ರಗಳನ್ನು ಕಾಯ್ದಿಡಲಾಗುತ್ತಿತ್ತು. ಏಕೆಂದರೆ ಭೂಮಿಯ ಮೇಲ್ಭಾಗದಿಂದ ಒಂದು ಅಡಿ ಆಳದವರೆಗೆ ಜೀವಾಣುಗಳ ಹಿಂಡು ಹಿಂಡೇ ಇರುತ್ತವೆ. ಇವು ಹೊಲಸನ್ನು ಗೊಬ್ಬರವಾಗಿ ಪರಿವರ್ತಿಸುತ್ತವೆ. ಈ ಭಂಗಿ–ರೈತನ ಕೆಲಸ ಸಾಂಪ್ರದಾಯಿಕ ರೈತರಿಗೆ ಹಿಡಿಸಲಿಲ್ಲ. ಗಾಂಧಿ ರಾಸಾಯನಿಕ ಗೊಬ್ಬರಕ್ಕಿಂತ ಸಾವಯವ ಗೊಬ್ಬರವೇ ಮೇಲು ಎಂದರು. ರಾಸಾಯನಿಕ ಗೊಬ್ಬರವನ್ನು ತತ್‌ಕ್ಷಣದ ಪ್ರತಿಫಲಕ್ಕಾಗಿ ಬಳಸುವುದು ಅಪಾಯಕಾರಿ ಎಂಬುದು ಅವರ ಅಭಿಪ್ರಾಯವಾಗಿತ್ತು. ಅದು ನೀಡುವ ಆ ಕ್ಷಣಕ್ಕೆ ಅದ್ಭುತ ಫಲಿತಾಂಶಗಳ ಭರವಸೆಯನ್ನು ಕೊಟ್ಟರೂ, ಅದು ಮಣ್ಣನ್ನೇ ಬರಿದು ಮಾಡಬಲ್ಲದು.

ಗಾಂಧಿ ನೇಗಿಲು–ಎತ್ತಿನ ಬದಲಿಗೆ ಟ್ರ್ಯಾಕ್ಟರ್ ಬಳಕೆಯ ಪರವಾಗಿರಲಿಲ್ಲ. ಸಬರಮತಿ ಆಶ್ರಮದಲ್ಲಿ ಎಲ್ಲಾ ಸುಧಾರಿತ ನೇಗಿಲುಗಳನ್ನು ಪ್ರಯತ್ನಿಸಿ ನೋಡಿದರು. ಆದರೆ, ಹಳೆಯ ಕಾಲದ ನೇಗಿಲು-ಎತ್ತು ಹೆಚ್ಚು ಸೂಕ್ತವಾಗಿ ಕಂಡುಬಂದಿತು. ಏಕೆಂದರೆ ಅದು ಬೆಳೆಗೆ ಸಾಕಾಗುವಷ್ಟು ಆಳಕ್ಕೆ ಅಗೆಯುತ್ತಿತ್ತು, ಆದರೆ ಹಾನಿಯಾಗುವಷ್ಟು ಅಲ್ಲ. ಇದರಿಂದ ಮಣ್ಣಿನ ಸಂರಕ್ಷಣೆಯಾಗುತ್ತಿತ್ತು. ಅಲ್ಲದೆ, ನೂರಾರು ಜನರ ದೈಹಿಕಶ್ರಮವನ್ನು ಒಂದು ಟ್ರ್ಯಾಕ್ಟರಿನಿಂದ ಪಲ್ಲಟಗೊಳಿಸುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಅವರನ್ನು ಫಲಕಾರಿಯಾದ ಉತ್ಪಾದನಾ ಕೆಲಸದಲ್ಲಿ ತೊಡಗಿಸಲು ಅವರು ಬಯಸುತ್ತಿದ್ದರು. ರೈತರ ಸೃಜನಶೀಲ ಸಾಮರ್ಥ್ಯವನ್ನು ಈ ಯಂತ್ರಸಾಧನ ಮೊಂಡು ಮಾಡಬಹುದೆಂಬ ಭಯವೂ ಅವರಿಗಿತ್ತು. ಚಿಕ್ಕ ಚಿಕ್ಕ ಜಮೀನುಗಳನ್ನು ಪ್ರತ್ಯೇಕವಾಗಿ ಉಳುಮೆ ಮಾಡುವ ಹಳೆಯ ಕಾಲದಿಂದ ಬಂದ ಪದ್ಧತಿಯನ್ನು ಅವರು ಒಪ್ಪಲಿಲ್ಲ. ಏಕೆಂದರೆ "ಭೂಮಿಯನ್ನು ನೂರು ಭಾಗ ಮಾಡುವುದಕ್ಕಿಂತ, ನೂರು ಕುಟುಂಬಗಳು ಸೇರಿ ಒಟ್ಟಿಗೆ ವ್ಯವಸಾಯ ಮಾಡಿ, ಬಂದ ಆದಾಯವನ್ನು ಭಾಗ ಮಾಡಿಕೊಳ್ಳುವುದು ಒಳ್ಳೆಯದು. ಹಳ್ಳಿಯಲ್ಲಿ ಒಬ್ಬೊಬ್ಬರೂ ಎತ್ತು ಮತ್ತು ಎತ್ತಿನಗಾಡಿ ಇಟ್ಟುಕೊಳ್ಳುವುದು ವ್ಯರ್ಥ." ಜಾನುವಾರು ಕೃಷಿಯಲ್ಲಿ ಅವರು ಸಹಕಾರಿ ಪದ್ಧತಿಯನ್ನು ಪ್ರತಿಪಾದಿಸಿದರು. ಜಾನುವಾರುಗಳನ್ನು ಸಾಂಘಿಕವಾಗಿ ಬೆಳೆಸಿದಾಗ, ಪ್ರಾಣಿಗಳಿಗೆ ಔಷಧೋಪಚಾರ ಸರಿಯಾಗಿ ಸಿಗುವ ಖಾತ್ರಿ ಇರುತ್ತದೆ. ಅವುಗಳು ಮೇಯಲು ಒಂದೇ ಮೈದಾನದ ವ್ಯವಸ್ಥೆ ಮಾಡಬಹುದು ಮತ್ತು ಹಲವಾರು ಹಸುಗಳಿಗೆ ಒಂದೇ ಒಂದು ತಳಿಹೋರಿ ಆಯ್ಕೆ ಮಾಡಿಕೊಳ್ಳಬಹುದು; ಈ ಎಲ್ಲಾ ವ್ಯವಸ್ಥೆಗಳನ್ನು ಒಬ್ಬ ಸಾಧಾರಣ ರೈತ ಮಾಡಿಕೊಳ್ಳಲಾರ. ಕೆಲವೊಮ್ಮೆ ಹಸುವಿನಿಂದ ಸಿಗುವ ಪ್ರತಿಫಲಕ್ಕಿಂತ ಅದರ ಆಹಾರಕ್ಕೆ ತಗುಲುವ ವಿರ್ಚೇ ಹೆಚ್ಚಿರುತ್ತದೆ. ಹಸುಗಳ ಸಂಖ್ಯೆ ಹೆಚ್ಚಿದಂತೆ, ಬಡತನದ ಒತ್ತಡಕ್ಕೆ ಸಿಲುಕಿ ರೈತ ಕರುಗಳನ್ನು ಮಾರುತ್ತಾನೆ, ಗಂಡು ಕರುಗಳನ್ನು ಕೊಲ್ಲುತ್ತಾನೆ ಅಥವಾ ಉಪವಾಸ ಕೆಡವಿ ಸಾಯಿಸುತ್ತಾನೆ. ಜಾನುವಾರುಗಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ ಮತ್ತು ಅವುಗಳೊಂದಿಗೆ ಕ್ರೂರವಾಗಿ ನಡೆದುಕೊಂಡು, ದುಡಿಸಿಕೊಳ್ಳುತ್ತಾನೆ.

ಕೃಷಿ ಆರ್ಥಿಕತೆಯಲ್ಲಿ ಅತ್ಯಮೂಲ್ಯವಾದ ಪ್ರಾಣಿಯಾದ ಹಸುವಿನ ಸಂರಕ್ಷಣೆಗೆ ಗಾಂಧಿ

ವಿಶೇಷ ಒತ್ತು ನೀಡಿದರು. ಭಾರತದಾದ್ಯಂತ ಅವರು ಪ್ರವಾಸ ಮಾಡಿದಾಗ, ರೈತರ ಚೈತನ್ಯರಹಿತ ಕಣ್ಣುಗಳು ಮತ್ತು ಹಸುಗಳ ದಯನೀಯ ಸ್ಥಿತಿ ನೋಡಿ ಅವರು ಸಂಕಟಪಟ್ಟರು. "ಹಸುವನ್ನು ಪೂಜನೀಯ ಸ್ಥಾನದಲ್ಲಿಟ್ಟಿರುವ ಭಾರತದಲ್ಲಿ ಹಸು ಮತ್ತು ಅದರ ಕರುಗಳನ್ನು ನಡೆಸಿಕೊಳ್ಳುವಷ್ಟು ಕೆಟ್ಟದಾಗಿ ಬೇರಾವ ದೇಶದ ನೆಲದ ಮೇಲೂ ನಡೆಸಿಕೊಳ್ಳುವುದಿಲ್ಲ. ಈಗ ಪೂಜ್ಯಭಾವನೆ ಎಂದರೆ ಹಸುಗಳನ್ನು ಕೊಲ್ಲುವ ವಿಷಯವಾಗಿ ಮುಸಲ್ಮಾನರೊಂದಿಗೆ ಮಾರಕ ದ್ವೇಷ ಮತ್ತು ಹಸುವಿನ ಪವಿತ್ರಸ್ಪರ್ಶದಿಂದ ನಮ್ಮನ್ನು ನಾವೇ ಪುನೀತರನ್ನಾಗಿಸಿಕೊಳ್ಳುವುದು, ಅಷ್ಟೆ. ಬಹಳಷ್ಟು ಪಿಂಜ್ರಾಪೋಲ್‌ಗಳು ಮತ್ತು ಗೋಶಾಲೆಗಳು ಹಿಂಸೆಯ ಅಡ್ಡೆಗಳಾಗಿವೆ." ಪಿಂಜ್ರಾಪೋಲ್‌ಗಳು ಬರಡು ಮತ್ತು ಅಂಗವಿಕಲಗೊಂಡ ಜಾನುವಾರುಗಳ ಆರೈಕೆ ಮಾಡಬೇಕು ಮತ್ತು ಜಾನುವಾರುಗಳ ಸಂತತಿ ಬೆಳೆಸುವ ಬಗ್ಗೆ ತಜ್ಞ ಸಲಹೆ ನೀಡಬೇಕೆಂದು ಅವರು ಅಪೇಕ್ಷಿಸಿದರು. ಅವರು ಎಮ್ಮೆಯ ಹಾಲು-ಬೆಣ್ಣೆಗಿಂತ ಹಸುವಿನ ಹಾಲು ಮತ್ತು ಬೆಣ್ಣೆಯನ್ನೇ ಬಯಸಿದರು, ಅವುಗಳ ಉತ್ಕೃಷ್ಟತೆಗಾಗಿ. ಮಿಗಿಲಾಗಿ, ಹಸುವಿನ ಮರಣಾನಂತರ ಅದರ ಚರ್ಮ, ಮೂಳೆ, ಅದರ ಒಳಭಾಗ ಮತ್ತು ಮಾಂಸ ಎಲ್ಲವೂ ಉಪಯುಕ್ತವೇ.

ಅವರ ಆಶ್ರಮದಲ್ಲಿದ್ದ ಗೋಶಾಲೆಯಲ್ಲಿ, ಗಾಂಧಿ ಒಳ್ಳೆಯ ತಳಿ ಹೋರಿಗಳನ್ನು ಇಟ್ಟಿದ್ದರು. ಹಾಗೂ ದುಬಾರಿಯಲ್ಲದ, ಆದರೆ ಮಾದರಿಯಾದ ಕೊಟ್ಟಿಗೆ ಇತ್ತು. ಗೋಶಾಲೆಯ ಪ್ರತಿಯೊಂದು ಅಂಶಕ್ಕೂ ಅವರು ಗಮನ ಕೊಡುತ್ತಿದ್ದರು. ಹೊಸತಾಗಿ ಹುಟ್ಟಿದ ಎಲ್ಲಾ ಕರುಗಳನ್ನು ಅವರು ಪ್ರೀತಿಯಿಂದ ತಟ್ಟಿ ಮಾತನಾಡಿಸುತ್ತಿದ್ದರು. ಒಮ್ಮೆ ಒಂದು ಕರು ವಾಸಿಯಾಗದ ಯಾವುದೋ ರೋಗದಿಂದ ನರಳುತ್ತಿತ್ತು. ಯಾವ ಔಷಧಿಯಿಂದಲೂ ಪ್ರಯೋಜನವಾಗಲಿಲ್ಲ. ಅದರ ಜೀವನವನ್ನು ಕೊನೆಗಾಣಿಸಲು ಗಾಂಧಿ ನಿರ್ಧರಿಸಿದರು. ವೈದ್ಯರು ಅದನ್ನು ಚಿರನಿದ್ರೆಗೆ ಕಳುಹಿಸುತ್ತಿದ್ದಾಗ, ಗಾಂಧಿಯೇ ಖುದ್ದಾಗಿ ಅದರ ಒಂದು ಗೊರಸನ್ನು ಹಿಡಿದುಕೊಂಡಿದ್ದರು. ಈ ಶ್ರೇಷ್ಠ ಅಹಿಂಸಾಧರ್ಮ ಪ್ರಚಾರಕನೇ ನಡೆಸಿದ ಇಂತಹ ಹಿಂಸಾಕೃತ್ಯದ ವಿರುದ್ಧ ಭಾರಿ ಪ್ರತಿಭಟನೆ ಎದ್ದಿತು. ಈ ಪಾಪವನ್ನು ಗಾಂಧಿಯವರ ರಕ್ತದಿಂದಲೇ ತೊಳೆಯುತ್ತೇನೆಂದು ಒಬ್ಬ ಜೈನ ಹೆದರಿಸಿದ ಕೂಡ. ಎದ್ದ ಬಿರುಗಾಳಿಯನ್ನು ಗಾಂಧಿ ಶಾಂತಚಿತ್ತರಾಗಿ ಎದುರಿಸಿದರು.

ಆಶ್ರಮದಲ್ಲಿ ಬೆಳೆಯುವ ಬೆಳೆ, ಹಣ್ಣು-ತರಕಾರಿಗಳನ್ನು ನಾಶ ಮಾಡುವ ಕೋತಿಗಳನ್ನು ಕೊಲ್ಲಬೇಕು ಎಂಬ ಪ್ರಸ್ತಾಪದ ಮೂಲಕ ಗಾಂಧಿ ಮತ್ತೊಮ್ಮೆ ಕಟ್ಟಾ ಅಹಿಂಸಾವಾದಿಗಳನ್ನು ದಿಗ್ಭ್ರಮೆಗೊಳಿಸಿದರು. ಅವರು ಹೇಳಿದರು: "ನಾನೇ ಒಬ್ಬ ರೈತನಾಗಿ, ಕನಿಷ್ಠಮಟ್ಟದ ಹಿಂಸೆಯ ಬಳಕೆಯಿಂದ, ಅವುಗಳಿಂದ ಬೆಳೆಗಳನ್ನು ಕಾಪಾಡಿಕೊಳ್ಳಲು ಏನಾದರೂ ಮಾರ್ಗ ಕಂಡುಕೊಳ್ಳಬೇಕು. ಕೋತಿಗಳ ಕಾಟ ವಿಪರೀತವಾಗಿದೆ. ಗುಂಡು ಹಾರಿಸಿದಾಗಲೂ ಅವು ಹೆದರುವುದಿಲ್ಲ. ಗುಂಡು ಹಾರಿಸಿದಾಗ, ಕೀಚುಕೀಚೆನ್ನುತ್ತವೆ, ಅರಚುತ್ತವೆ. ತಪ್ಪಿಸಲಸಾಧ್ಯ ಎಂಬಂಥ ಪ್ರಸಂಗ ಬಂದಲ್ಲಿ, ಅವುಗಳನ್ನು ಸಾಯಿಸುವ ಬಗ್ಗೆ ನಾನು ಗಂಭೀರವಾಗಿ ವಿಚಾರ ಮಾಡುತ್ತಿದ್ದೇನೆ." ಆಶ್ರಮದಲ್ಲಿ ಯಾವುದೇ ಕೋತಿಯನ್ನು ಸಾಯಿಸಲಾಗಲಿಲ್ಲ ಅಥವಾ ಬಾಣ ಅಥವಾ ಇತ್ಯಾದಿಗಳಿಂದ ಘಾಸಿ ಸಹ ಮಾಡಲಾಗಲಿಲ್ಲ.

ಬಡರೈತರ ಆದಾಯವನ್ನು ಹೆಚ್ಚಿಸುವುದು ಹೇಗೆ ಎಂಬುದೇ ಗಾಂಧಿಯವರ ಸತತ ಕಾಳಜಿಯಾಗಿತ್ತು. ವರ್ಷದಲ್ಲಿ ಆ ರೈತರು ನಾಲ್ಕರಿಂದ ಆರು ತಿಂಗಳುಗಳ ಕಾಲ ಕೆಲಸವಿಲ್ಲದೇ ಇರುತ್ತಿದ್ದರು. ಕೇವಲ ಕೃಷಿಯ ಆಧಾರದ ಮೇಲೆ ಅವರ ಜೀವನ ನಿರ್ವಹಣೆ ಆಗುತ್ತಿರಲಿಲ್ಲ. 30 ಕೋಟಿ ರೈತರ ಮೇಲಿನ ಈ ಆಲಸ್ಯದ ಹೇರಿಕೆಯನ್ನು ಸದುಪಯೋಗ ಗೊಳಿಸಲು ಅವರು ಪ್ರಯತ್ನಿಸಿದರು. ಅದಕ್ಕಾಗಿ ರೈತಮಹಿಳೆಯರಿಗೆ ನೂಲುವ ಚಕ್ರವನ್ನೂ, ಪುರುಷರಿಗೆ ಕೈಮಗ್ಗಗಳನ್ನೂ ಮತ್ತೆ ಒಪ್ಪಿಸಿದರು. ಈ ಅನಕ್ಷರಸ್ಥರಾದ, ಸರಿಯಾಗಿ ಉಡದ-ಉಣದ ರೈತರ ಆದಾಯವನ್ನು ಒಂದು ಸಮತೂಕದ ಆಹಾರವನ್ನು, ವಾಸಯೋಗ್ಯ ಮನೆಗಳನ್ನು, ಆರೋಗ್ಯದ ಅವಶ್ಯಕತೆಗಳಿಗೆ ಸಾಕಾಗುವಷ್ಟು ಬಟ್ಟೆಗಳನ್ನು ಹಾಗೂ ಸರಿಯಾದ ಶಿಕ್ಷಣವನ್ನು ಒದಗಿಸುವಂಥ ಮಟ್ಟಕ್ಕೆ ಏರಿಸಲು ಬಯಸಿದರು. ಪ್ರತಿಭಟನಾ ಸ್ವಭಾವವನ್ನೂ ಅವರು ಬೆಳೆಸಿಕೊಳ್ಳಬೇಕು. ಕಿಸಾನ್-ಮಜ್‌ದೂರ್-ಪ್ರಜಾ-ರಾಜ್ ಪರವಾಗಿದ್ದ ಅವರು ಹೀಗೆ ಎಚ್ಚರಿಕೆ ನೀಡಿದರು: "ರೈತನಿಗೆ ತನ್ನ ದುಃಸ್ಥಿತಿಯ ಅರಿವು ಸಂಪೂರ್ಣವಾಗಿ ಮೂಡಿದಾಗ, ಹಾಗೂ ಈ ಅಸಹಾಯಕ ಸ್ಥಿತಿಗೆ ತನ್ನನ್ನು ಒಡ್ಡಿರುವುದು ತನ್ನ ಅದೃಷ್ಟವಲ್ಲ ಎಂಬುದು ತಿಳಿದುಬಂದಾಗ, ಅವನು ಕಾನೂನುಬದ್ಧ ಅಥವಾ ಕಾನೂನಿಗೆ ಹೊರತಾದ ಮಾರ್ಗಗಳ ನಡುವಿನ ಭಿನ್ನತೆಗಳನ್ನೇ ನೋಡುವುದಿಲ್ಲ. ಸ್ವರಾಜ್ಯ ಎಂದರೆ ಏನೆಂದು ಭಾರತದ ರೈತಸಮುದಾಯ ಅರಿತಾಗ, ಅವರಿಂದ ಅದನ್ನು ದೂರವಿಡುವ ಸಾಹಸವನ್ನು ಯಾರೂ ಮಾಡಲಾರರು."

ಗಾಂಧಿಯವರ ನೇತೃತ್ವದಲ್ಲಿ, ರೈತರು ನಾಗರಿಕ ಉಲ್ಲಂಘನಾ ಚಳುವಳಿಯನ್ನು ಸೇರಿಕೊಂಡರು, ಅಧಿಕೃತ ವಿರೋಧವಿದ್ದಾಗ್ಯೂ ಉಪ್ಪು ತಯಾರಿಸಿದರು ಮತ್ತು ಸಾರ್ವಜನಿಕ ಸಭೆಗಳಲ್ಲಿ ಸ್ವಾತಂತ್ರ್ಯದ ಪಣತೊಟ್ಟರು. ತೆರಿಗೆ-ಬೇಡ ಚಳುವಳಿಯಲ್ಲಿ, ಅವರ ಆಸ್ತಿ ಮತ್ತು ಭೂಮಿಯನ್ನು ವಶಪಡಿಸಿಕೊಳ್ಳಲಾಯಿತು. ಅವರು ಹಣವನ್ನು ಕಳೆದುಕೊಂಡರು, ಆದರೆ ನೈತಿಕ ಮಟ್ಟದಲ್ಲಿ ಬೆಳೆದರು.

ಹರಾಜುಗಾರ

ಯಾರೇ ಆಗಲಿ, ತಮ್ಮನ್ನು ಮಹಾತ್ಮ ಎಂದು ಕರೆದಲ್ಲಿ ಅಥವಾ ತಮ್ಮ ಪಾದ ಮುಟ್ಟಿದಲ್ಲಿ ಅದೊಂದು ಅಪರಾಧ ಎಂಬ ಮಸೂದೆಯನ್ನು ಜಾರಿಗೊಳಿಸಬೇಕೆಂದು ಗಾಂಧಿ ಬಯಸಿದ್ದರು. ಆದರೆ ನಗರಗಳಲ್ಲಿ, ಹಳ್ಳಿಗಳಲ್ಲಿ ಜನ ತಮಗೆ ಒಬ್ಬ ನಾಯಕನಂತೆ ಸ್ವಾಗತ ಕೋರುವುದನ್ನಂತೂ ಅವರಿಂದ ತಪ್ಪಿಸಲಾಗಲಿಲ್ಲ. ಒಂದಲ್ಲ ಒಂದು ವಿಷಯಕ್ಕೆ ಸಹಾಯ ಮಾಡಲೆಂದು ಅವರು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಹೋಗುತ್ತಲೇ ಇದ್ದರು, ಜನರೊಂದಿಗೆ ಸಂಪರ್ಕ ಹೊಂದಿಯೇ ಇರುತ್ತಿದ್ದರು. ಎಲ್ಲೆಲ್ಲೂ ಅವರಿಗೆ ತುಂಬಿ ತುಳುಕುವ ಪ್ರೀತ್ಯಾದರ-ಭಕ್ತಿಗಳಿಂದ ಸ್ವಾಗತ ಸಿಗುತ್ತಿತ್ತು. ಜನ ಅವರಿಗೆ ಹೂಗುಚ್ಛಗಳನ್ನು, ಹಾರಗಳನ್ನು ಉಡುಗೊರೆಯಾಗಿ ಕೊಡುತ್ತಿದ್ದರು; ದುಬಾರಿ ಬೆಲೆಯ ಚೌಕಟ್ಟು ಅಥವಾ ಸಂಪುಟಗಳಲ್ಲಿ ನಾಗರಿಕ ಮಾನಪತ್ರಗಳನ್ನು ಕೊಡುತ್ತಿದ್ದರು; ದುಡ್ಡಿನ ಚೀಲಗಳನ್ನು ಮತ್ತು ಆಭರಣಗಳನ್ನು ನೀಡುತ್ತಿದ್ದರು. ಜನ ತಮ್ಮ ಪ್ರೀತಿಯನ್ನು ಹೀಗೆ ವ್ಯಕ್ತಪಡಿಸುವುದನ್ನು ಗಾಂಧಿಯೇನೋ ಮೆಚ್ಚುತ್ತಿದ್ದರು. ಆದರೆ, ಒಬ್ಬ ವ್ಯಕ್ತಿಯ ಸರಾಸರಿ ಆದಾಯ ದಿನವೊಂದಕ್ಕೆ ಮುಕ್ಕಾಲು ಆಣೆ ಇರುವಂಥ ದೇಶದಲ್ಲಿ ಹಾರಗಳು, ಧ್ವಜಪಟಗಳು ಮತ್ತು ಮಾನಪತ್ರಗಳ ಮೇಲೆ ಈ ರೀತಿ ಹಣ ಪೋಲಾಗುವುದನ್ನು ಅವರು ಇಷ್ಟಪಡುತ್ತಿರಲಿಲ್ಲ.

ಈ ರೀತಿ ಪೋಲು ಮಾಡುವುದನ್ನು ನಿಲ್ಲಿಸಬೇಕೆಂದು ಅವರು ಜನರಿಗೆ ಮನವಿ ಮಾಡಿಕೊಂಡರು. ಆದರೆ ಅದು ವ್ಯರ್ಥವಾಯಿತು. ಸರಿ, ಈ ನಷ್ಟವನ್ನು ಸಂಪತ್ತಿಗೆ ಬದಲಾಯಿಸಬೇಕೆಂದು ಅವರು ಬಯಸಿದರು. ಆಗ ಅವರಿಗೆ ಒಂದು ವಿಚಾರ ಹೊಳೆಯಿತು. ಅವರಿಗೆ ಜನ ಹಣ ಕೊಡಬೇಕೆಂದು ಬಯಸುತ್ತಿರುವಾಗ, ಹಾಗೆ ಮಾಡಲು ಉತ್ತಮವಾದ ಅವಕಾಶವನ್ನು ಸಾರ್ವಜನಿಕವಾಗಿ ಏಕೆ ಕಲ್ಪಿಸಿಕೊಡಬಾರದು ? ಸರಿ, ತಮಗೆ ಬರುವ ಎಲ್ಲಾ ಉಡುಗೊರೆಗಳನ್ನು, ಅದೂ ಅಲ್ಪಕಾಲಿಕ ವಸ್ತುಗಳನ್ನು ಹರಾಜು ಹಾಕಲು ಅವರು ನಿರ್ಧರಿಸಿದರು. ಸಾರ್ವಜನಿಕ ಸಭೆಗಳಲ್ಲಿ ವೇದಿಕೆಯ ಮೇಲೆ ಕುಳಿತು, ಅವರು ಹೇಳುತ್ತಿದ್ದರು: "ನನ್ನ ಪ್ರೀತಿಪಾತ್ರ ಹೆಣ್ಣುಮಕ್ಕಳು ಇಲ್ಲಿಲ್ಲ. ಈ ಹಾರಗಳನ್ನು ಹೇಗೆ ವಿನಿಯೋಗ ಮಾಡಬೇಕೋ, ನನಗೆ ಗೊತ್ತಾಗುತ್ತಿಲ್ಲ. ಈ ಹಾರವನ್ನು ಯಾರಾದರೂ ಕೊಳ್ಳುತ್ತೀರಾ ?" "ಎರಡು ರೂಪಾಯಿ, ಮೂರು ರೂಪಾಯಿ, ಐದು ರೂಪಾಯಿ" – ಹೀಗೆ ಹಾಸ್ಯ ಬೆರೆತ ಸ್ವರದಲ್ಲಿ ಹರಾಜು ಹಾಕುತ್ತಿದ್ದರು. ಕೇವಲ ಒಂದು ನಿಂಬೆ ಹಣ್ಣು ಅಥವಾ ಒಂದು ಹೂವಿನ ಹಾರದಂಥ ಸಣ್ಣ ವಸ್ತುವನ್ನು ಪಡೆಯಲು ಹರಾಜುದರ ಮೇಲೇರುತ್ತಿತ್ತು. ಕೆಲವೊಮ್ಮೆ ಒಂದು ಹಾರಕ್ಕೆ 30 ರೂಪಾಯಿಗಳು ಸಿಗುತ್ತಿತ್ತು, ಇನ್ನೂ ಕೆಲವು ಸಲ 300 ರೂಪಾಯಿಗಳು ! ಹರಾಜಿನ ವಸ್ತುಗಳಿಗೆ ಒಳ್ಳೆಯ ಬೆಲೆ ತೆರುವಲ್ಲಿ ಹಳ್ಳಿಗರೇನೂ ಹಿಂದೆ ಬೀಳುತ್ತಿರಲಿಲ್ಲ. ಒಮ್ಮೆ ಗಾಂಧಿ ಒಂದು ಸಂಪುಟವನ್ನು ಎತ್ತಿಕೊಂಡು ಹೇಳಿದರು: "ಇದರ ಬೆಲೆ 250 ರೂಪಾಯಿಗಳು. ಇಲ್ಲಾ ಇಲ್ಲ, ತಪ್ಪು ಹೇಳಿಬಿಟ್ಟೆ. ಇದರ ಬೆಲೆ 75 ರೂಪಾಯಿಗಳು." ಅದಕ್ಕೆ 300 ರೂಪಾಯಿಗಳು ಎಂದು ಯಾರೋ ಹರಾಜು ಕೂಗಿದಾಗ, ಅವರು ಹೇಳಿದರು : "300 ರೂಪಾಯಿ. 300 ರೂಪಾಯಿ. ಕೂಗಿ ಕೂಗಿ, ನನಗಿನ್ನೂ ಜಾಸ್ತಿ ಬೇಕು. ಇದಕ್ಕೂ ಮೊದಲು ಒಂದು ಸಂಪುಟಕ್ಕೆ ನನಗೆ 1000 ರೂಪಾಯಿಗಳು ಸಿಕ್ಕಿತ್ತು." ಕಲ್ಕತ್ತಾದ ನಾಗರಿಕರು, ಮೂರು ಸಂದರ್ಭಗಳಲ್ಲಿ ಸುಂದರವಾದ ಸಂಪುಟಗಳಲ್ಲಿ ಅವರಿಗೆ ಮಾನಪತ್ರಗಳನ್ನು ಉಡುಗೊರೆಯಾಗಿ ಕೊಟ್ಟಿದ್ದರು. ಅವೆಲ್ಲವನ್ನೂ ಗಾಂಧಿ ಹರಾಜು ಮಾಡಿದರು. ಅವರು ಹೇಳಿದರು: "ಈ ವಸ್ತುಗಳನ್ನು ಹರಾಜು ಹಾಕುವ ಮೂಲಕ ನಾನು ಆ ವಸ್ತುಗಳ ಹಿಂದಿರುವ ಪ್ರೀತಿಯನ್ನು ನಗಣ್ಯವಾಗಿ ಭಾವಿಸುತ್ತಿದ್ದೇನೆ ಎಂದು ತಿಳಿಯಬೇಡಿ. ಈ ಸಂಪುಟಗಳನ್ನೆಲ್ಲಾ ನಾನು ಹೊತ್ತೊಯ್ಯಲಾರೆ. ಯಾಕೆಂದರೆ, ನನ್ನ ಹತ್ತಿರ ಟ್ರಂಕುಗಳಿಲ್ಲ. ಆಶ್ರಮದಲ್ಲಿ ಇವುಗಳನ್ನೆಲ್ಲಾ ಇಡಲು ಯಾವುದೇ ಸೌಲಭ್ಯಗಳೂ ಇಲ್ಲ... ಹೀಗಾಗಿ, ಇವುಗಳನ್ನು ಹರಾಜು ಹಾಕುವುದರಲ್ಲಿ ಯಾವುದೇ ರೀತಿಯ ತಪ್ಪಿದೆ ಎಂದು ನನಗನ್ನಿಸುವುದೂ ಇಲ್ಲ. ಇದು ಒಂದು ಶ್ರೇಷ್ಠ ಕಾರಣಕ್ಕಾಗಿ, ಯಾರೇ ಪುರುಷ ಅಥವಾ ಮಹಿಳೆಯಲ್ಲಿ ಔದಾರ್ಯದ ಭಾವನೆಯನ್ನು ತುಂಬುವಂಥ ಆರೋಗ್ಯಕರವಾದ ಪೈಪೋಟಿಯನ್ನು ಉಂಟುಮಾಡುತ್ತದೆ. ಇವು ಮುಗ್ಧವಾದ ವಿಧಾನಗಳು. ನನ್ನ ಹರಾಜುಗಳಲ್ಲಿ ಹರಾಜು ಕೂಗುವ ಜನ ಕೇವಲ ನನ್ನನ್ನು ಸಂತೋಷ ಪಡಿಸುವ ಸಲುವಾಗಿ ಮನಸ್ಸಿಗೆ ಬಂದ ದರ ಕೊಡುವುದಿಲ್ಲ ಎಂಬುದು ನೆನಪಿನಲ್ಲಿರಲಿ."

ಉದಾರ ಮನಸ್ಸಿನಿಂದ ದಾನ ಮಾಡುವಂತೆ ಪ್ರೇಕ್ಷಕರ ಮನ ಒಲಿಸುವಲ್ಲಿ ಗಾಂಧಿ ವಿಫಲರಾದ ಕೆಲವು ಅಪರೂಪದ ಸಂದರ್ಭಗಳೂ ಇದ್ದವು. ಒಂದು ನಿಂಬೆ ಹಣ್ಣನ್ನು ಅವರು 10 ರೂಪಾಯಿಗಳಿಗೆ ಮಾರಿದರು, ಒಂದು ನೂಲಿನ ಹಾರವನ್ನು 201 ರೂಪಾಯಿಗಳಿಗೆ, ಒಂದು ಚಿನ್ನದ ತಕಲಿಯನ್ನು 5000 ರೂಪಾಯಿಗಳಿಗೆ ಹಾಗೂ ಒಂದು ಸಂಪುಟವನ್ನು 1000 ರೂಪಾಯಿಗಳಿಗೆ ಮಾರಿದರು. ಒಂದು ಸಂಸ್ಥೆಗೆ ಅಡಿಗಲ್ಲು ಹಾಕಿದ ಮೇಲೆ ಬಾಂಡಲಿ ಮತ್ತು ಕರಣೆಯನ್ನು, ಹರಾಜು ಕೂಗಿದ ಒಬ್ಬನಿಗೆ 1000 ರೂಪಾಯಿಗಳಿಗೆ ಮಾರಿದರು. ಒಮ್ಮೆ ಒಂದು ಹರಾಜಿನ ಸಮಯದಲ್ಲಿ, ಚಿನ್ನದ ಲಾಕೆಟ್ (ಸಂಪುಟಿಕೆ) ತೊಟ್ಟು ನಿಂತಿದ್ದ ಒಬ್ಬ ಚಿಕ್ಕ ಹುಡುಗನತ್ತ ತಮ್ಮ ತೋಳುಗಳನ್ನು ಚಾಚಿದರು. ಹುಡುಗನ ತಾಯಿ ಮಗುವನ್ನು ಎತ್ತಿಕೊಂಡಳು. ಗಾಂಧಿ ಅವನ ಬೆನ್ನ ಮೇಲೆ ಮೆಲ್ಲಗೆ ತಟ್ಟಿದರು, ಲಾಕೆಟ್ ಅನ್ನು ಕಳಚಿದರು, ಹರಾಜು ಹಾಕಿದರು.

ಒಮ್ಮೆ ಗಾಂಧಿ ಹೀಗೆ ಘೋಷಿಸಿದರು: "ನನ್ನ ಬಳಿ ದಾಸ್ತಾನು ತೀರದಷ್ಟು ಉಂಗುರಗಳಿವೆ. ಎಲ್ಲವನ್ನೂ ಮಾರಬೇಕೆಂದು ಅಂದುಕೊಂಡಿದ್ದೇನೆ." ಅದಾಗಲೇ ಮೂರು ಬಾರಿ ಹರಾಜಾಗಿದ್ದ ಒಂದು ಉಂಗುರ ಕೊನೆಗೂ 445 ರೂಪಾಯಿಗಳಿಗೆ ಮಾರಾಟವಾಯಿತು. ಆ ಉಂಗುರದ ಸಾಮಾನ್ಯ ಬೆಲೆ ಆಗ 30 ರೂಪಾಯಿಗಳಾಗಿತ್ತು. ರೂಪಾಯಿ ನೋಟುಗಳು, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳ ಸಂಗ್ರಹದ ಪೈಕಿ, ಒಮ್ಮೆ ಒಂದು ಕವಡೆ ಸಿಕ್ಕಿತು. ಅದನ್ನು ಬಹುವಾಗಿ ಮೆಚ್ಚಿಕೊಂಡ ಗಾಂಧಿ ಹೇಳಿದರು: "ಪಾಪ, ಆ ಬಡ ಮನುಷ್ಯನ ಬಳಿ ಕೊಡಲು ಬೇರೇನೂ ಇರಲಿಲ್ಲ ಅಂತ ಕಾಣುತ್ತದೆ. ಅವನ ಬಳಿ ಇದ್ದುದೆಲ್ಲವನ್ನೂ ಅವನು ಕೊಟ್ಟಿದ್ದಾನೆ ಅಂತ ಅನ್ನಿಸುತ್ತದೆ. ಇದನ್ನು ಒಂದು ತ್ಯಾಗದ ಚಿಹ್ನೆಯಾಗಿ ನೋಡಿದಾಗ, ಇದು ಚಿನ್ನಕ್ಕಿಂತಲೂ ಬಹಳ ಅಮೂಲ್ಯವಾದುದು." ನಿಜಕ್ಕೂ ಅದು ಅದೇ ಗಾತ್ರದ ಚಿನ್ನದ ಕವಡೆಗಿಂತಲೂ ಅಮೂಲ್ಯವಾಯಿತು. ಹರಾಜು ಕೂಗಿದವರೊಬ್ಬರು ಅದಕ್ಕೆ 111 ರೂಪಾಯಿಗಳನ್ನು ಕೊಟ್ಟರು.

ಇಡೀ ಪ್ರವಾಸಗಳ ತುಂಬಾ ಭರ್ತಿ ಕಾರ್ಯಕ್ರಮಗಳು, ಅವುಗಳ ಆಯಾಸ ಮತ್ತು ಒತ್ತಡ ಅಥವಾ ಕಗ್ಗಂಟಾದ ಸಮಸ್ಯೆಗಳ ಹೊರೆ – ಇವು ಯಾವುವೂ ಗಾಂಧಿಯೊಳಗಿದ್ದ ಚೈತನ್ಯದ ಚಿಲುಮೆಯನ್ನು, ಅಥವಾ ವ್ಯಾಪಾರೀ ಮನೋಭಾವವನ್ನು ಬತ್ತಿಸಲಿಲ್ಲ. 78ರ

ವಯಸ್ಸಿನಲ್ಲಿ, ಹಿಂದು–ಮುಸಲ್ಮಾನರ ಬಿಕ್ಕಟ್ಟು ಮತ್ತು ಜನಾಂಗೀಯ ದಂಗೆಗಳಿಂದ ಕುಗ್ಗಿದ ಗಾಂಧಿ ಬಿಹಾರಕ್ಕೆ ಭೇಟಿ ಇತ್ತರು. ಪೀಡಿತ ಮುಸಲ್ಮಾನರಿಗಾಗಿ ನಿಧಿಗಳನ್ನು ಸಂಗ್ರಹಿಸಿದರು ಮತ್ತು ಉಡುಗೊರೆಯಾಗಿ ಬಂದ ಆಭರಣಗಳನ್ನು ಹರಾಜು ಹಾಕಿದರು. ಗಾಂಧಿಯ ಬಳಿ ಅವರದೇ ಆದ ಯಾವುದೇ ಹಣ ಇರಲಿಲ್ಲ, ಆಸ್ತಿ ಇರಲಿಲ್ಲ. ಒಬ್ಬ ಬಡ ಆಶ್ರಮವಾಸಿಯಾಗಿದ್ದ ಅವರೇ ಒಮ್ಮೆ ಒಂದು ಸಾರ್ವಜನಿಕ ನಿಧಿಗೆ ಒಂದು ತಾಮ್ರದ ನಾಣ್ಯವನ್ನು ದೇಣಿಗೆಯಾಗಿತ್ತರು. ಆ ಸ್ಮಾರಕ ನಾಣ್ಯವನ್ನು ಅಭಿಮಾನಿಯೊಬ್ಬರು 500 ರೂಪಾಯಿಗಳಿಗೆ ಕೊಂಡುಕೊಂಡರು.

ಭಿಕ್ಷುಕ

ಗಾಂಧಿ ಹೆಚ್ಚು ಹೆಚ್ಚು ಸಾರ್ವಜನಿಕ ಕೆಲಸಗಳಲ್ಲಿ ತೊಡಗಿಕೊಳ್ಳಲಾರಂಭಿಸಿದರು. ಹೀಗಾಗಿ ತಮ್ಮ ಕುಟುಂಬಕ್ಕಾಗಲೀ, ಕಾನೂನಿನ ಕೆಲಸಕ್ಕಾಗಲೀ ಹೆಚ್ಚು ಸಮಯ ಅಥವಾ ಗಮನವನ್ನು ಕೊಡಲು ಆಗುತ್ತಿರಲಿಲ್ಲ. ಜನರಿಗೆ ಸೇವೆ ಸಲ್ಲಿಸಬೇಕು ಎಂದರೆ, ತಾವಾಗಿಯೇ ಎಲ್ಲಾ ವೈಭವ ಮತ್ತು ಆರಾಮದಾಯಕ ವಸ್ತುಗಳನ್ನು ನಿರಾಕರಿಸಿ, ಎಲ್ಲಾ ಸ್ವತ್ತು–ಸಂಪತ್ತುಗಳನ್ನು ತ್ಯಜಿಸಿ ಬಡತನದ ಜೀವನ ಸಾಗಿಸಬೇಕು ಎಂಬುದನ್ನು ಅವರು ಮನಗಂಡರು. ಸ್ವತ್ತುಗಳೆಲ್ಲವೂ ಒಂದು ಅಪರಾಧ ಎಂದು ಅವರಿಗೆ ಭಾಸವಾದಂಥ ಒಂದು ಸಮಯವೂ ಬಂದಿತು. ಅವನ್ನು ತ್ಯಜಿಸಿಬಿಡುವುದು ಅವರಿಗೆ ಒಂದು ಧನಾತ್ಮಕ ಆನಂದದ ವಿಷಯವಾಯಿತು. ಒಂದರ ನಂತರ ಒಂದರಂತೆ ಎಲ್ಲವೂ ಅವರಿಂದ ಕಳಚಿಕೊಳ್ಳುತ್ತಾ ಹೋದವು. ತಮ್ಮ ಪಿತ್ರಾರ್ಜಿತ ಸ್ಥಿತಿನ ಮೇಲೆ ಅವರು ಯಾವುದೇ ಹಕ್ಕು ಸಾಧಿಸಲಿಲ್ಲ; ತಮ್ಮ ವಿಮಾ ಪಾಲಿಸಿ ರದ್ದಾಗಲು ಬಿಟ್ಟರು. ತಿಂಗಳಿಗೆ 4,000 ರೂಪಾಯಿಗಳನ್ನು ತರುತ್ತಿದ್ದ ಕಾನೂನಿನ ಕೆಲಸವನ್ನು ಬಿಟ್ಟರು. ಸಾರ್ವಜನಿಕ ಉದ್ದೇಶಗಳಿಗಾಗಿ, ತಮ್ಮ ದಕ್ಷಿಣ ಆಫ್ರಿಕಾದ ಸಹೋದ್ಯೋಗಿಗಳು ಉಡುಗೊರೆಯಾಗಿ ಕೊಟ್ಟ ಬೆಳ್ಳಿ, ಚಿನ್ನ ಮತ್ತು ವಜ್ರಗಳಿಗೆ ಹಾಗೂ 65,000 ರೂಪಾಯಿ ಮೌಲ್ಯದ ಫೀನಿಕ್ಸ್ ವಸಾಹತಿಗೆ ಒಂದು ನ್ಯಾಸ ಪತ್ರ ಮಾಡಿದರು; ತಾವಾಗಿಯೇ ಒಂದು ಸುಭದ್ರ ಜೀವನವನ್ನು ನಿರಾಕರಿಸಿದರು. ಹಾಗೆಯೇ ತಮ್ಮ ಪತ್ನಿ, ಮಗಂದಿರು ಮತ್ತು ಸಂಬಂಧಿಕರ ಬಗ್ಗೆಯೂ ಅಷ್ಟೇ ಕಠಿಣವಾಗಿದ್ದರು.

ಗಾಂಧಿ, ತಮ್ಮ ಜೀವನದ ಕೊನೆಯ 40 ವರ್ಷಗಳನ್ನು ತಮ್ಮ ಗೆಳೆಯರು ಮತ್ತು ಅಭಿಮಾನಿಗಳು ಕೊಡುತ್ತಿದ್ದ ದೇಣಿಗೆಗಳ ಮೇಲೆಯೇ ಬದುಕಿದರು. ಟಾಲ್‌ಸ್ಟಾಯ್ ಫಾರಂನಲ್ಲಿ ಗಾಂಧಿ ಮತ್ತು ಅವರ ಕುಟುಂಬಕ್ಕೆ ತಗುಲುತ್ತಿದ್ದ ವೆಚ್ಚಗಳನ್ನು ಅವರ ಜರ್ಮನ್ ಸ್ನೇಹಿತ ಕಲ್ಲೇನ್‌ಬ್ಯಾಕ್ ಭರಿಸುತ್ತಿದ್ದರು. ಭಾರತದಲ್ಲಿನ ಎಲ್ಲಾ ಆಶ್ರಮಗಳು ಅವರ ಬೆಂಬಲಿಗರ ಮತ್ತು ಸ್ವಯಂ ದಾನಿಗಳ ಸಹಾಯದಿಂದ ನಡೆಯುತ್ತಿದ್ದವು.

ಪಂಡಿತ ಮಾಳವೀಯರನ್ನು ಭಿಕ್ಷುಕರ ರಾಜಕುಮಾರ ಎಂದು ಜನ ಕರೆಯುತ್ತಿದ್ದರೆ, ಗಾಂಧಿ ಭಿಕ್ಷುಕರ ರಾಜ ಅನ್ನಿಸಿಕೊಂಡಿದ್ದರು. ಸಾರ್ವಜನಿಕ ಉದ್ದೇಶಗಳಿಗಾಗಿ ಯಾಚಿಸುವ ಇತಿಹಾಸದಲ್ಲಿ, ಗಾಂಧಿ ವಿಶ್ವದಾಖಲೆ ಸ್ಥಾಪಿಸಿದರು. ದಕ್ಷಿಣ ಆಫ್ರಿಕಾದಲ್ಲಿ ನೇಟಾಲ್ ಇಂಡಿಯನ್ ಕಾಂಗ್ರೆಸ್‌ನ ಸದಸ್ಯರಿಂದ ಚಂದಾ ಸಂಗ್ರಹಿಸುವ ಕೆಲಸದ ಮುಖ್ಯಸ್ಥನಾಗಿದ್ದಾಗ ಅವರು ತಮ್ಮಲ್ಲಿ ಈ ಸಾಮರ್ಥ್ಯವಿದೆಯೆಂದು ಅರಿತುಕೊಂಡರು. ಒಮ್ಮೆ, ಸಂಜೆಯಾದ ಬಳಿಕ ಅವರು ಒಬ್ಬ ಶ್ರೀಮಂತ ದಾನಿಯ ಬಳಿ ಹೋದರು. ಆತ 80 ರೂಪಾಯಿಗಳನ್ನು ಕೊಡುತ್ತಾನೆನ್ನುವುದು ಅವರ ನಿರೀಕ್ಷೆ. ಅದಕ್ಕಾಗಿ ಅವರ ಒಲಿಸುವಿಕೆಯ ಎಲ್ಲಾ ತಂತ್ರಗಳು ನಿಷ್ಫಲವಾದವು. ಆದರೆ ಅವರಿಗೆ ದೊರೆತದ್ದು ಕೇವಲ 40 ರೂಪಾಯಿಗಳು. ಅವರಿಗೆ ಆಗ ಮಹಾಹಸಿವು–ಸುಸ್ತು. ಆದರೆ ಜಗ್ಗದ ಸ್ವಭಾವ. ಇಡೀ ರಾತ್ರಿ ಅಲ್ಲಿಯೇ ಕುಳಿತಿದ್ದರು. ಬೆಳಕು ಹರಿಯುತ್ತಿದ್ದಂತೆ, 80 ರೂಪಾಯಿಗಳನ್ನು ಸ್ವೀಕರಿಸಿದರು.

ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ನೆಲಸಿಗರ ಮಹಾನ್ ಸಂಘರ್ಷಣೆಯ ಸಮಯದಲ್ಲಿ, 5000 ಮಂದಿ ಪ್ರತಿಭಟನಾಕಾರರ ಮತ್ತು ಅವರ ಕುಟುಂಬಗಳ ಬೆಂಬಲಕ್ಕೆ ಮತ್ತು

ಪರಿಹಾರಕಾರ್ಯಕ್ಕಾಗಿ ನಡೆದ ನಿಧಿಸಂಗ್ರಹಣೆಗೆ ಗಾಂಧಿಯವರೇ ಮುಖ್ಯ ಜವಾಬ್ದಾರಿ ವಹಿಸಿಕೊಂಡಿದ್ದರು. ಆಗ ದಿನದ ವೆಚ್ಚ 3200 ರೂಪಾಯಿಗಳು. ತಂತಿ ಮೂಲಕ ಗಾಂಧಿಯವರು ಮಾಡಿದ ಮನವಿಗೆ ಭಾರತ ಉದಾರಮನಸ್ಸಿನಿಂದ ಓಗೊಟ್ಟಿತು. ರಾಜಕುಮಾರರು ಮತ್ತು ಶ್ರೀಮಂತ ವರ್ತಕರು ಹಣ ಕಳುಹಿಸಿದರು. ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧಿಯವರ ಚಳುವಳಿಗೆ ಸಹಾಯ ಮಾಡಬೇಕೆಂದು ಮನವಿ ಮಾಡಲಾಯಿತು. ಸಭಿಕರು ರೂಪಾಯಿ ನೋಟುಗಳು ಮತ್ತು ಚಿನ್ನ–ಬೆಳ್ಳಿಗಳ ಮಳೆ ಸುರಿಸಿದರು.

ಗಾಂಧಿ ಈ ಎಲ್ಲಾ ಉಡುಗೊರೆಗಳಿಗೆ ರಸೀದಿಗಳನ್ನು ಕಳುಹಿಸಿದರು. ಎಲ್ಲಾ ವೆಚ್ಚಗಳಿಗೆ ಲೆಕ್ಕಪಿವರಗಳನ್ನೂ ಒಪ್ಪಿಸಿದರು. ದಾನಿಗಳ ಭಾವನೆಗಳನ್ನು ಗೌರವಿಸಿದರು. ಅವರು ಪರಿಹಾರ ಕಾರ್ಯಕ್ಕೆ ದೇಣಿಗೆಯಾಗಿ ಬಂದ ಹಣದಲ್ಲಿ ಒಂದೇ ಒಂದು ತಾಮ್ರದ ನಾಣ್ಯವನ್ನೂ (ಕಾಲಾಣೆ) ಇತರ ಅಗತ್ಯಗಳಿಗಾಗಿ ಬಳಸಿಕೊಳ್ಳಲಿಲ್ಲ. ಸಾರ್ವಜನಿಕರ ಹಣವನ್ನು ಖರ್ಚು ಮಾಡುವಲ್ಲಿ ಅವರು ವಿಶೇಷ ಎಚ್ಚರಿಕೆ ವಹಿಸುತ್ತಿದ್ದರು. ಯಾರೋ ಸವಾಲು ಮಾಡಿದಾಗ, ತಿಲಕ್ ಸ್ವರಾಜ್ ನಿಧಿಯ ಪರಿಶೋಧಿತ ಲೆಕ್ಕಪತ್ರಗಳನ್ನು ತಪಾಸಣೆ ಮಾಡಲು ಅವರು ವಿಮರ್ಶಕರನ್ನು ಆಹ್ವಾನಿಸಿದರು. ಅವರು ತಿಲಕ್ ಸ್ವರಾಜ್ ನಿಧಿಗಾಗಿ, ಮೂರು ತಿಂಗಳುಗಳಲ್ಲಿ ಒಂದು ಕೋಟಿ ರೂಪಾಯಿಗಳನ್ನು ಸಂಗ್ರಹಿಸಬೇಕೆಂಬ ಗುರಿ ಹಾಕಿಕೊಂಡಿದ್ದರು. ಗಾಂಧಿ ಒಂದು ವೃತ್ತಿಪರ ನಾಟಕಾಭಿನಯದಲ್ಲಿ ಹತ್ತೇ ಹತ್ತು ನಿಮಿಷಗಳ ಕಾಲ ಭಾಗವಹಿಸಲು ಒಪ್ಪಿದಲ್ಲಿ, ಅದೇ ರಾತ್ರಿ ಆ ನಾಟಕದ ನಟರು 50,000 ರೂಪಾಯಿಗಳ ದೇಣಿಗೆ ನೀಡುತ್ತಾರೆಂದು ಒಬ್ಬ ಸ್ನೇಹಿತರು ಗಾಂಧಿಗೆ ಮನವಿ ಮಾಡಿಕೊಂಡರು. ಗಾಂಧಿ ನಿರಾಕರಿಸಿದರು. ಆದರೂ ಸಂಗ್ರಹವಾದ ಮೊತ್ತ 1,15,00,000ಗಳಾಯಿತು. ಅವರು ಆಗಾಗ್ಗೆ ಹೇಳುತ್ತಿದ್ದರು: "ಸಾರ್ವಜನಿಕ ಉದ್ದೇಶಗಳಿಗೆ ಸಾವಿರಾರು ಮಂದಿ ಶ್ರೀಮಂತರಿಗೆ ಸ್ವಾಗತವಿದ್ದರೂ, ಬಡಜನರ ತಾಮ್ರದ ನಾಣ್ಯಗಳು ಮತ್ತು ಒಂದೊಂದೇ ರೂಪಾಯಿಗಳೇ ಈ ಉದ್ದೇಶಕ್ಕೆ ಅನುಗ್ರಹಕಾರಕ. ಉದ್ದೇಶವನ್ನು ತಿಳಿದುಕೊಂಡು ಕೊಡಲಾಗುವ ಒಂದೊಂದು ತಾಮ್ರದ ನಾಣ್ಯವೂ, ಅದನ್ನು ಕೊಡುವವರ, ಸ್ವರಾಜ್ಯವನ್ನು ಸ್ಥಾಪಿಸುವ ದೃಢನಿಶ್ಚಯದ ಚಿಹ್ನೆಯಾಗಿರುತ್ತದೆ." ಬಡವರು ಪೈಸೆಗಳನ್ನು ಭದ್ರವಾಗಿ ಕೂಡಿಟ್ಟ ಗಂಟುಗಳನ್ನು ತಮ್ಮ ನಡುಗುವ ಬೆರಳುಗಳಿಂದ ಬಿಚ್ಚುವ ದೃಶ್ಯಗಳನ್ನು ಅವರಿಗೆಂದಿಗೂ ಮರೆಯಲಾಗುತ್ತಿರಲಿಲ್ಲ. ತಾವು ಕೂಡಿಟ್ಟ ಹಣವನ್ನು ಸ್ವಂತ ಇಚ್ಛೆಯಿಂದ ತಮಗೆ ಅವರು ಸಮರ್ಪಿಸುವುದನ್ನು ಗಾಂಧಿ ಬಹುವಾಗಿ ಮೆಚ್ಚುತ್ತಿದ್ದರು.

ತಿಲಕ್ ಸ್ವರಾಜ್ ನಿಧಿಯಲ್ಲದೆ, ಹುತಾತ್ಮಳಾದ ಹುಡುಗಿ ವಲಿಯಮ್ಮ, ಗೋಖಲೆ, ಲಜಪತ ರಾಯ್, ದೇಶಬಂಧು ದಾಸ್, ಆಂಡ್ರೂಸ್ ಮತ್ತು ಜಲಿಯನ್‌ವಾಲಾ ಬಾಗ್‌ನಲ್ಲಿ ಬಲಿಯಾದವರಿಗಾಗಿ ಅವರು ಸ್ಮಾರಕನಿಧಿಗಳನ್ನು ಸಂಗ್ರಹಿಸಿದರು. ಜಲಿಯನ್‌ವಾಲಾ ಬಾಗ್‌ನಲ್ಲಿ ಒಂದು ಸ್ಮಾರಕವನ್ನು ಸ್ಥಾಪಿಸುವ ಸಲುವಾಗಿ ಅಗತ್ಯವಾದ ನಿಧಿಮೊತ್ತವು ಅವರೇ ನಿಗದಿಪಡಿಸಿದ ಸಮಯಾವಧಿಯಲ್ಲಿ ಸಂಗ್ರಹವಾಗದಿದ್ದಲ್ಲಿ, ತಮ್ಮ ಆಶ್ರಮವನ್ನು ಮಾರಿ ಬಂದ ಎಲ್ಲಾ ಹಣವನ್ನೂ ನಿಧಿಗೆ ಸಮರ್ಪಿಸುತ್ತೇನೆಂದು ಗಾಂಧಿ ಜನರಿಗೆ ಹೇಳಿದರು. ಎರಡು ತಿಂಗಳುಗಳಲ್ಲಿ, ದೇಶಬಂಧು ಸ್ಮಾರಕ ನಿಧಿಗೆ ಹತ್ತು ಲಕ್ಷ ರೂಪಾಯಿಗಳು ಸಂಗ್ರಹವಾದವು. ಠಾಕೂರರು ಭಾರತದಾದ್ಯಂತ ಪ್ರವಾಸ ಮಾಡುತ್ತಾ, ತಮ್ಮ ನಾಟಕಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುವ ಮೂಲಕ ಶಾಂತಿನಿಕೇತನಕ್ಕಾಗಿ ಹಣ ಸಂಗ್ರಹಿಸುತ್ತಿದ್ದಾರೆ ಎಂಬ ವಿಷಯ ತಿಳಿದು ಬಂದ ಕೂಡಲೆ, ಗಾಂಧಿ ಈ ಪ್ರಯತ್ನವನ್ನು ಮುಂದುವರೆಸದಿರಲು ಆ ಹಿರಿಯ ಕವಿಗೆ ಮನವಿ ಮಾಡಿಕೊಂಡು, ಅವರಿಗೆ ಮೊದಲ ಕಂತಿನ ರೂಪದಲ್ಲಿ 50,000 ರೂಪಾಯಿಗಳನ್ನು ದೇಣಿಗೆಯಾಗಿತ್ತರು.

ಪ್ರವಾಹಗಳು, ಬರಗಾಲ ಅಥವಾ ಭೂಕಂಪಗಳು ನೆಲವನ್ನು ಧ್ವಂಸ ಮಾಡಿದಾಗ, ಗಾಂಧಿ ಯಾಚನೆಗೆ ಹೊರಡುತ್ತಿದ್ದರು. ಖಾದಿ ಕೆಲಸವನ್ನು ಹರಡಲು ಮತ್ತು ಅಸ್ಪೃಶ್ಯತೆಯ ಪಾಪವನ್ನು ತೊಡೆದುಹಾಕಲು, ಇಡೀ ಭಾರತವನ್ನೆಲ್ಲಾ ಸುಂಟರಗಾಳಿಯಂತೆ ಅವರು ಸುತ್ತಿದರು. ಹರಿಜನ ನಿಧಿಗಾಗಿ ಎರಡು ಕೋಟಿಗಳಿಗೂ ಮೀರಿದ ಹಣ ಸಂಗ್ರಹಿಸಿದರು. ಬಡವರ ಆಹಾರಕ್ಕಾಗಿ ಮಾತ್ರ ಹಣ ಕೊಟ್ಟಲ್ಲಿ, ಅವರು ಅದನ್ನು ನಿರಾಕರಿಸುತ್ತಿದ್ದರು. ಒಬ್ಬ ಮನುಷ್ಯನ ನಿಜವಾದ ಹಸಿವು ಕೇವಲ ಒಂದು ತುತ್ತಿನ ಆಹಾರಕ್ಕಾಗಿ ಅಲ್ಲ; ತನ್ನನ್ನು ತಾನು ಗೌರವಿಸಿಕೊಳ್ಳುವಷ್ಟು ಮರ್ಯಾದೆಯ ಬದುಕು ಸಾಗಿಸಬೇಕೆನ್ನುವುದಕ್ಕಾಗಿ: "ಬೆತ್ತಲೆಯಾಗಿರುವವರಿಗೆ ಅಗತ್ಯವಿರುವ ಕೆಲಸಗಳನ್ನು ಕೊಡುವ ಬದಲು ಬಟ್ಟೆಗಳನ್ನು ಕೊಟ್ಟು ಅವರನ್ನು ನಾನು ಅವಮಾನಿಸಲಾರೆ. ಅವರಿಗೆ ನಾನು ಆಹಾರದ ತುಣುಕುಗಳನ್ನು ಕೊಡುವುದಿಲ್ಲ ಅಥವಾ ನಾನು ಹಾಕಿ ಬಿಟ್ಟ ಬಟ್ಟೆಗಳನ್ನೂ ಕೊಡುವುದಿಲ್ಲ."

ಒಬ್ಬ ಸೆರೆಮನೆಯ ವೈದ್ಯರು ಗಾಂಧಿಯನ್ನು ಕೇಳಿದರು: "ಗಾಂಧೀಜೀ, ದೈಹಿಕ ಸಾಮರ್ಥ್ಯ ಚೆನ್ನಾಗಿಯೇ ಇರುವ ವ್ಯಕ್ತಿಗಳು ಭಿಕ್ಷೆ ಬೇಡುವುದನ್ನು ತಪ್ಪಿಸಬೇಕು ಎಂದು ನಿಮಗನ್ನಿಸುವುದಿಲ್ಲವೇ? ಅದಕ್ಕೆ ಪೂರಕವಾದ ಕಾನೂನನ್ನು ನೀವು ಜಾರಿಗೆ ತರುತ್ತೀರಾ?" ಗಾಂಧಿ ಉತ್ತರಿಸಿದರು: "ಖಂಡಿತ. ಆದರೆ ನನ್ನಂಥ ಜನರಿಗೆ ಬೇಡುವ ಸ್ವಾತಂತ್ರ್ಯ ಇರುತ್ತದೆ." "ಭಿಕ್ಷುಕರು ಆಯ್ಕೆ ಮಾಡಿಕೊಳ್ಳುವವರಾಗಬಾರದು" ಎಂಬ ನಾಣ್ಣುಡಿಯನ್ನು ಅವರು ಉಲ್ಲಂಘಿಸಿದರು. ಅವರ ಘೋಷಣೆಗಳು, ದಾನಿಗಳ ಬಳಿ ಅವರು ಸಾಗುತ್ತಿದ್ದ ರೀತಿ ಮತ್ತು ದಾನವನ್ನು ಸ್ವೀಕರಿಸಲು ಅವರು ಹಾಕುತ್ತಿದ್ದ ನಿಯಮಗಳು ಅಸಾಧಾರಣವಾಗಿದ್ದವು. ರೈಲು, ಪ್ಲಾಟ್‌ಫಾರಂ ಅಥವಾ ಚಲಿಸುವ ಕಾರುಗಳ ಮೇಲೆ ಸಭಿಕರತ್ತ ತಮ್ಮ ಭಿಕ್ಷಾಪಾತ್ರೆಯನ್ನು ಚಾಚುತ್ತಿದ್ದರು. ಸಾಮಾನ್ಯವಾಗಿ ಅವರಿಗೆ ಭಿಕ್ಷೆ ನೀಡಲು ಸೆಣಸಾಟ ಏರ್ಪಾಗುತ್ತಿತ್ತು. ನೂರಾರು ಮಂದಿ ಹಳ್ಳಿಗಾಡಿನವರು, ವಯಸ್ಸಾದವರು ಮತ್ತು ಅಶಕ್ತರು, ಪುರುಷರು ಮತ್ತು ಮಹಿಳೆಯರು ತಮ್ಮ ಅತ್ಯಲ್ಪ ವಸ್ತುಗಳನ್ನು ಸಮರ್ಪಿಸಲು ಬರುತ್ತಿದ್ದರು. ಕೆಲವರು ಬದನೆಕಾಯಿಗಳನ್ನು ತಂದರೆ, ಕೆಲವರು ಕುಂಬಳಕಾಯಿಗಳನ್ನು ಮತ್ತು ಇನ್ನೂ ಇತರರು ತಮ್ಮ ತೋಟಗಳಲ್ಲಿನ ತರಕಾರಿಗಳನ್ನು ಹೊತ್ತು ತರುತ್ತಿದ್ದರು. ಒಂದು ಮಾದರಿ ವಸತಿಶಾಲೆಯ ವಿದ್ಯಾರ್ಥಿಗಳು ಕೈಯಿಂದ ನೂತ ನೂಲಿನ ರಾಶಿಯನ್ನು, ತಾವೇ ನೇಯ್ದಿದ್ದ ಖಾದಿಯ ಬಟ್ಟೆಯ ಒಂದು ತುಣುಕನ್ನು ಮತ್ತು ತಮಗಾಗಿ ತುಪ್ಪ, ಹಾಲು ಮತ್ತು ಗೋಧಿಗಳ ಬಳಕೆ ಕೆಲವು ದಿನಗಳವರೆಗೆ ಬೇಡ ಎಂದು ಹೇಳಿ ಉಳಿತಾಯ ಮಾಡಿದ್ದ ಸ್ವಲ್ಪ ಹಣವನ್ನು ಕೊಡುಗೆಯಾಗಿತ್ತರು. ಒಮ್ಮೆ ಒಬ್ಬಳು ವಿಧವೆ ಎರಡು ಆಣೆಯನ್ನು ಬೇಡಿ ತಂದು, ಅದನ್ನು ಗಾಂಧಿಗೆ ಕೊಟ್ಟಳು. "ಯಾಕೆ ಎರಡು ಆಣೆಗಳನ್ನು ಮಾತ್ರ ಕೊಟ್ಟೆ?" ಎಂದು ಅವಳನ್ನು ಕೇಳಿದಾಗ, "ಉದ್ದೇಶಕ್ಕಾಗಿ ಸಹಾಯವಾಗಲಿ ಎಂದು ನಾನು ಕೊಡಲಿಲ್ಲ. ಬದಲಿಗೆ, ಎಲ್ಲವನ್ನೂ ತ್ಯಜಿಸಿರುವ ಮಹಾತ್ಮನಿಗೆ ದಾನ ಮಾಡಬೇಕೆಂಬ ನನ್ನ ಜೀವನದ ಕನಸನ್ನು ಸಾರ್ಥಕ ಮಾಡಿಕೊಳ್ಳಲು ಕೊಟ್ಟೆ" ಎಂದು ಅವಳು ಉತ್ತರಿಸಿದಳು.

ಮೈಕ್ರೋಫೋನುಗಳು, ತಂತಿಗಳು ಮತ್ತು ಸುದ್ದಿಪತ್ರಿಕೆಗಳ ಅಂಕಣಗಳ ಮೂಲಕ ಮನವಿಗಳನ್ನು ಕಳುಹಿಸುತ್ತಿದ್ದ ಗಾಂಧಿಗೆ ಹಲವು ಲಕ್ಷ ರೂಪಾಯಿಗಳನ್ನು ಸಂಗ್ರಹಿಸುವುದೆಂದರೆ ಮಕ್ಕಳ ಆಟವಾಗಿತ್ತು. ಒಮ್ಮೆ ಅವರು ಪತ್ರಕರ್ತನೊಬ್ಬನ ಹ್ಯಾಟನ್ನು

ಹಾರಿಸಿ, ಅದನ್ನೇ ಭಿಕ್ಷಾಪಾತ್ರೆಯಾಗಿ ಉಪಯೋಗಿಸಿಕೊಂಡರು. ಆಶ್ಚರ್ಯ ಚಕಿತನಾದ ಆ ಪತ್ರಕರ್ತನೇ ಗಾಂಧಿಯವರ ಹೊಸ ಪ್ರಯೋಗಕ್ಕೆ ಬಲಿಪಶುವಾದ ಹಾಗೂ ಈ ಹೊಸ ಸುಧಾರಿತ ಭಿಕ್ಷಾಪಾತ್ರೆಗೆ ದೇಣಿಗೆ ಕೊಡಬೇಕಾಯಿತು.

ಈ ಯಾಚನಾ ನಿಯೋಗದ ಮೇಲೆ ಗಾಂಧಿ ಬರ್ಮಾಕ್ಕೆ ಹೋದಾಗ, "14 ವರ್ಷಗಳ ನಂತರ ನಾನು ಬರ್ಮಾಗೆ ಭೇಟಿ ನೀಡುತ್ತಿದ್ದೇನೆ. ಬರಗಾಲ 14 ವರ್ಷಗಳಿಗೊಮ್ಮೆ ಬಂದರೂ, ನೀವು ಅದನ್ನು ಧೈರ್ಯದಿಂದಲೇ ಎದುರಿಸುತ್ತೀರಿ. ನಿಮ್ಮ ಮಧ್ಯೆ ಮತ್ತೆ ಎಂದಿಗೂ ಬಾರದೆಯೇ ಇರಬಹುದಾದ ದರಿದ್ರನಾರಾಯಣನ ಈ ಪ್ರತಿನಿಧಿಯ ಹಸಿವನ್ನು ನೀವು ತಣಿಸುತ್ತೀರಿ ಎಂದು ನಾನು ಆಶಿಸುತ್ತೇನೆ" ಎಂಬುದೇ ಅವರ ಆಕ್ರಂದನವಾಗಿತ್ತು. ಅಲ್ಲಿನ ಶ್ರೀಮಂತ ವರ್ತಕರು ಜಿಪುಣತನದಿಂದ ವಂತಿಕೆ ಕೊಟ್ಟಾಗ, ಅವರು ಹೀಯಾಳಿಸಿ ಮಾತನಾಡಿದರು: "ಈ ಚಂದಾಪಟ್ಟಿಯನ್ನು ಹರಿದು ಹಾಕಿ, ಹೊಸತನ್ನು ಬರೆಯಿರಿ. ಇತರರ ಜೇಬಿನೊಳಕ್ಕೆ ಕೈಹಾಕುವುದಕ್ಕಿಂತ ಖಂಡಿತವಾಗಿ ನಾನು ಗುಜರಾತಿನ ಜೇಬಿನ ಆಳಕ್ಕೆ ಕೈಹಾಕುತ್ತೇನೆ. ನಾನೊಬ್ಬ ಗುಜರಾತೀ ಚೆಟ್ಟಿ." ಅವರ ಈ ಆಕ್ಷೇಪಣೆ, ಆ ಸ್ಥಳದಲ್ಲೇ ಚಂದಾಮೊತ್ತವನ್ನು ಇಮ್ಮಡಿಗೊಳಿಸಿತು. ಸಿಲೋನೀಯರಿಗೆ ಅವರು ಹೇಳಿದರು: "ಮಹೇಂದ್ರ ಸಿಲೋನಿಗೆ ಬಂದಾಗ, ತಾಯ್ನಾಡಿನ ಮಕ್ಕಳು ಉಪವಾಸವಿರಲಿಲ್ಲ. ನಮ್ಮ ತಾರೆ ಮೇಲು ಮೇಲಕ್ಕೇರುತ್ತಿತ್ತು. ಈ ವೈಭವದಲ್ಲಿ ನೀವುಗಳೂ ಪಾಲ್ಗೊಂಡಿರಿ. ಅವರೊಂದಿಗೆ ನಿಮ್ಮ ಬಂಧುತ್ವವನ್ನು ನೀವು ತೊರೆಯದೆ, ಅದರಲ್ಲಿ ಹೆಮ್ಮೆ ಪಡುವಿರಾದಲ್ಲಿ, ನಿಮ್ಮ ಹಣ ಮಾತ್ರವಲ್ಲ, ನಿಮ್ಮ ಆಭರಣಗಳನ್ನೂ ನೀವು ಕೊಡಬೇಕು." ಕಚೇಸ್‌ಗಳು ತಮ್ಮ ದೇಣಿಗೆಗಳು ಕೇವಲ ಕಚೇಸ್‌ಗಳಿಗಷ್ಟೆ ಎಂದು ಮನವಿ ಮಾಡಿಕೊಂಡಾಗ, ಅದನ್ನು ಗಾಂಧಿ ನಿರಾಕರಿಸಿದರು. "ನನ್ನಲ್ಲಿ ಭರವಸೆ ಇಟ್ಟು ನೀವು ನನಗೆ ಹಣ ಕೊಟ್ಟಾಗ ನಾನು ಅದನ್ನು ಹೇಗೆ ಮತ್ತು ಯಾವಾಗ ಉಪಯೋಗಿಸುತ್ತೇನೆ ಎಂಬುದರ ಸಂಪೂರ್ಣ ಅರಿವು ನನಗಿದೆ ಎಂಬುದನ್ನು ತಿಳಿದೇ ನೀವು ಕೊಡಬೇಕು."

ಒಂದು ಸಂಕಟದ ಕ್ಷಣದಲ್ಲಿ ಅವರು ಹೀಗೆ ಹೇಳಿಕೆ ನೀಡಿದರು: "ನನ್ನ ಹೃದಯವನ್ನು ಹರಿದು ತೋರಿಸುವಾ ಎಂದರೆ ನನಗೆ ಹನುಮಾನನಿಗಿರುವಂಥ ಯಾವುದೇ ಶಕ್ತಿ ಇಲ್ಲ. ಆದರೆ ನಿಮಗೆ ನಾನು ಭರವಸೆ ಕೊಡುತ್ತೇನೆ, ಭಾರತದಲ್ಲಿ ಉಪವಾಸವಿರುವ ಲಕ್ಷಗಟ್ಟಲೆ ಜನರ ಮುಖಗಳಲ್ಲಿ ಕಾಣಿಸುವ ನನ್ನ ರಾಮನಿಗಾಗಿ ಪ್ರೀತಿಯಲ್ಲದೇ ಈ ಹೃದಯದಲ್ಲಿ ಮತ್ತೇನೂ ಇಲ್ಲ." ಅವರು ಆಗಾಗ್ಗೆ ಒಂದು ದಿನದಲ್ಲಿ ಹನ್ನೆರಡಕ್ಕೂ ಹೆಚ್ಚು ಸಭೆಗಳಲ್ಲಿ ಭಾಗವಹಿಸಿ, ಹೀಗೆ ಮನವಿ ಮಾಡುತ್ತಿದ್ದರು: "ನನಗೆ ಕಾಲು ಆಣೆ ಕೊಡಿ, ಅರ್ಧಾಣೆ ಕೊಡಿ, ಏನು ಸಾಧ್ಯವೋ ಅದನ್ನು ಕೊಡಿ, ಒಂದು ತಾಮ್ರದ ನಾಣ್ಯವಾದರೂ ಸರಿಯೇ." ಒಂದು ನಾಗರಿಕ ಸ್ವಾಗತ ಸಮಾರಂಭದಲ್ಲಿ, ಮಾನಪತ್ರವನ್ನು ಸ್ವೀಕರಿಸಿ, ಕೇಳಿದರು: "ಪರ್ಸ್ ಎಲ್ಲಿದೆ?" ಕೆಲವೊಮ್ಮೆ ಅವರು ಹೇಳುತ್ತಿದ್ದರು: "ನಾನು ಹೋಗುವುದಿಲ್ಲ. ಇಲ್ಲಿಯೇ ಕುಳಿತಿರುತ್ತೇನೆ." ಹೀಗೆ ಹೇಳಿ ದೇಣಿಗೆ ಕೊಡುವಂತೆ ಜನರ ಮನ ಒಲಿಸುತ್ತಿದ್ದರು. ಇನ್ನೂ ಹಲವು ಸಲ, ಮುನ್ನುಗ್ಗುತ್ತಿದ್ದ ಜನಸಾಗರ ತಮ್ಮ ಮನೆಗಳು, ಆಭರಣಗಳು, ಚೆಕ್‌ಗಳು, ರೂಪಾಯಿ ನೋಟುಗಳು, ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು, ರಾಶಿಗಟ್ಟಲೆ ನೂಲು ಮತ್ತು ಖದ್ದರುಗಳ ಉಡುಗೊರೆ ಕೊಡಲು ಮಧ್ಯರಾತ್ರಿಯವರೆಗೂ ಕಾಯುತ್ತಿತ್ತು. ಗಾಂಧಿಯ 78ನೇ ಹುಟ್ಟುಹಬ್ಬದಂದು, 78 ಲಕ್ಷ ಲಡಿಗಳ ನೂಲನ್ನು ಅವರಿಗೆ ಉಡುಗೊರೆಯಾಗಿ ಕೊಡಲಾಯಿತು.

ಒಮ್ಮೆ ಅವರ ಸಂಗ್ರಹದಲ್ಲಿ ಒಂದು ಕವಡೆ ಸಿಕ್ಕಿತು. ಅದು ಅವರಿಗೆ ಮಹಾನ್ ತ್ಯಾಗದ ಸಂಕೇತವಾಗಿ ಕಂಡಿತು. ಚಿನ್ನಕ್ಕಿಂತಲೂ ಅಮೂಲ್ಯವಾಗಿ ತೋರಿತು. ಗಲ್ಲಿಗೇರುವ ಮೊದಲು ಒಬ್ಬ ಕೊಲೆಗಾರನ ಕೊನೆಯ ಸೂಚನೆ ಏನಾಗಿತ್ತೆಂದರೆ, ತನ್ನೆಲ್ಲಾ ಹಣವನ್ನು – 100 ರೂಪಾಯಿಗಳನ್ನು ರಾಷ್ಟ್ರದ ಕೆಲಸಕ್ಕಾಗಿ ಗಾಂಧಿಗೆ ಕೊಡಬೇಕೆನ್ನುವುದು. ನಿಯಮದ ಪ್ರಕಾರ, ಸಭೆಯೊಂದರಿಂದ ಸಂಗ್ರಹವಾದ ಹೊರೆಯನ್ನು ಹೊತ್ತೊಯ್ಯಲು ಅಥವಾ ಹಣವನ್ನು ಎಣಿಸಲು ಗಾಂಧಿಗೆ ಮೂರರಿಂದ ನಾಲ್ಕು ಜನರ ಸಹಾಯದ ಅವಶ್ಯಕತೆಯಿತ್ತು. ಸಂಗ್ರಹಕಾರ್ಯದ ಕೊನೆಯಲ್ಲಿ, ತಾಮ್ರದ ನಾಣ್ಯಗಳೇ ಹೆಚ್ಚಾಗಿದ್ದ ಒಂದು ಸಂದರ್ಭದಲ್ಲಿ, ಒಬ್ಬ ಸ್ವಯಂಸೇವಕ, ಗಾಂಧಿಯ ಬಳಿಗೆ ಬಂದು ತನ್ನ ಅಂಗೈಗಳನ್ನು ತೋರಿಸಿದ. ಬಡವರು ನೆಲದಡಿಯಲ್ಲಿ ಹೂತಿಡುತ್ತಿದ್ದ ಈ ತಾಮ್ರದ ನಾಣ್ಯಗಳ ಮೇಲೆ ಕೈಯಾಡಿಸಿ ಆಡಿಸಿ ಅವನ ಅಂಗೈಗಳಲ್ಲಿ ಹಸಿರು ಕಲೆಗಳಾಗಿದ್ದವು. ಅದನ್ನು ನೋಡಿ ಗಾಂಧಿ ಹೇಳಿದರು: "ಇದೊಂದು ಅನುಗ್ರಹದ ಕೊಡುಗೆ. ನಮಗೆ ಇದು ನಿಷ್ಠೆ. ಆದರೆ ಅವರಿಗೆ ಹತಾಶೆ ಮುಸುಕಿರುವ ವಿಶ್ವದಲ್ಲಿ ಒಂದು ಆಸೆಯ ಕಿರಣ. ಬರಲಿರುವ ಒಳ್ಳೆಯ ದಿನಗಳ ಬಗ್ಗೆ ಅವರಿಗೊಂದು ಸಂಕೇತ."

ವೃತ್ತಿಪರ ಭಿಕ್ಷೆಗೆ ಪ್ರೋತ್ಸಾಹ ನೀಡದಿರುವುದು ಗಾಂಧಿಯವರ ವಿರೋಧಾಭಾಸ ಸಂಜ್ಞೆಗಳಲ್ಲಿ ಒಂದಾಗಿತ್ತು. ಸಭ್ಯತೆ ಮತ್ತು ಆತ್ಮಗೌರವದ ಎಲ್ಲಾ ಭಾವನೆಗಳನ್ನು ಅಲ್ಲಗಳೆದು, ಆಹಾರಕ್ಕಾಗಿ ಭಿಕ್ಷುಕ ನಡೆಸುವ ಹತಾಶೆಯ ಹೋರಾಟ ಅವರಿಗೆ ಜಿಗುಪ್ಸೆ ಉಂಟು ಮಾಡುತ್ತಿತ್ತು. ಬಡವರಿಗೆ ಕೆಲಸ ಒದಗಿಸಬೇಕು. ಅದರ ಬದಲು ಅವರಿಗೆ ಭಿಕ್ಷೆ ನೀಡುವ ಪದ್ಧತಿಗೆ ಅವರ ಸಮ್ಮತಿ ಇರಲಿಲ್ಲ. ಭಾರತದಲ್ಲಿ ಭಿಕ್ಷುಕರ ಸಂಖ್ಯೆ 65 ಲಕ್ಷಕ್ಕೂ ಮೀರಿ ಬೆಳೆಯುತ್ತಿರುವುದನ್ನು ಕಂಡು ಅವರು ದುಃಖಿಸಿದರು. ದೈಹಿಕವಾಗಿ ಸರಿಯಿಲ್ಲದವರನ್ನು ಹೊರತುಪಡಿಸಿ, ಒಬ್ಬನೇ ಒಬ್ಬ ಮನುಷ್ಯನೂ ಸಮಾಜಕ್ಕಾಗಿ ಯಾವ ಪ್ರಯೋಜನಕಾರೀ ಕೆಲಸವನ್ನೂ ಮಾಡದೆ, ಸುಮ್ಮನೆ ಯಾರದೋ ದಯೆಯ ಮೇಲೆ ಬದುಕುವುದು ಅವರಿಗೆ ಹಿಡಿಸುತ್ತಿರಲಿಲ್ಲ. ಭಿಕ್ಷೆ ಸ್ವೀಕರಿಸುವುದು ಮತ್ತು ಕೊಡುವುದು – ಎರಡೂ ತಪ್ಪು ಎಂಬುದು

ಅವರ ವಿಚಾರವಾಗಿತ್ತು. ದೇಹಸಾಮರ್ಥ್ಯ ಇರುವವರು ಭಿಕ್ಷೆ ಬೇಡುವುದು ಎಂದರೆ ಅವರು ಕಳ್ಳರಾದಂತೆ.

ಬಿಹಾರದಲ್ಲಿನ ಭೂಕಂಪಪೀಡಿತರಿಗೆ ಹಾಗೂ ನಿರಾಶ್ರಿತರಿಗೆ ಅಲ್ಲಿನ ಶಿಬಿರಗಳಲ್ಲಿ ಸಿಗುತ್ತಿದ್ದ ಆಹಾರ, ಆಶ್ರಯ ಮತ್ತು ಬಟ್ಟೆಬರೆಗಾಗಿ ಕೆಲಸ ಮಾಡಬೇಕೆಂದು ಗಾಂಧಿ ಹೇಳಿದರು. ಇಲ್ಲದೇ ಹೋದಲ್ಲಿ, ಅವರು ಸಾರ್ವಜನಿಕರ ದಯೆಯನ್ನು ಸ್ವಇಚ್ಛೆಯಿಂದಲೇ ಅವಲಂಬಿಸಿ ಬದುಕುವ ಮನೋಭಾವವನ್ನು ಬೆಳೆಸಿಕೊಳ್ಳಬಹುದು. ಯಾರೇ ಆಗಲಿ, ಸಾರ್ವಜನಿಕರ ದಾನಧರ್ಮದ ಮೇಲೆ ಬದುಕುವುದು ತಪ್ಪು. ಅವರಿಗೆ ಗಾಂಧಿಯವರ ಸಲಹೆ ಹೀಗಿತ್ತು: "ಪ್ರಾಮಾಣಿಕವಾದ ಒಳ್ಳೆಯ ಕೆಲಸ ಮಾಡಿ. ನನಗೆ ಭಿಕ್ಷುಕರು ಬೇಕಾಗಿಲ್ಲ. 'ಮಾಡಲು ಕೆಲಸ ಬೇಕು' ಎಂದು ಕೇಳಿ, ಆ ಕೆಲಸವನ್ನು ಶ್ರದ್ಧೆಯಿಂದ ಮಾಡಿ. ಮಾಡಿ, ಕೆಲಸ ಮಾಡಿ. ಭಿಕ್ಷೆ ಮಾತ್ರ ಬೇಡಬೇಡಿ."

ಸುಲಿಗೆಕೋರ

ಗಾಂಧಿ ಭಿಕ್ಷುಕರ ರಾಜ ಅಷ್ಟೇ ಅಲ್ಲ, ಅವರು ಸುಲಿಗೆಕೋರರ ರಾಜಕುಮಾರ ಸಹ ಆಗಿದ್ದರು. ಭಾರತದಲ್ಲಿ ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತಿರುವುದನ್ನು, ಬಡವರು ದಿನೇ ದಿನೇ ಇನ್ನಷ್ಟು ಬಡವರಾಗುತ್ತಿದ್ದುದನ್ನು ಅವರು ಗಮನಿಸಿದರು. ಸಮಾನತೆಯ ಬಗ್ಗೆ ತಮ್ಮದೇ ಆದ ವಿಚಾರವನ್ನು ಅವರು ಪರಿಚಯಿಸಬಯಸಿದರು. ಗ್ರಾಮಜೀವನವನ್ನು ಪುನರ್ ವ್ಯವಸ್ಥೆ ಮಾಡುವುದು ಮತ್ತು ಗ್ರಾಮದ ಜನರಿಗೆ ನೆರವಾಗುವುದು ಅವರ ಗುರಿಯಾಗಿತ್ತು.

ಬಡವರಿಗೆ ಸಹಾಯ ಮಾಡಲು ಗಾಂಧಿ ಶ್ರೀಮಂತರನ್ನು ದೋಚಿದರು. ಅದಕ್ಕಾಗಿ, ಪ್ರಜ್ವಲಿಸುವ ಕೊಳ್ಳಿಗಳು ಮತ್ತು ಮಿರಿಮಿರಿ ಮಿಂಚುವ ಕತ್ತಿಗಳ ಬದಲಿಗೆ ಅವರು ಪ್ರೀತಿ ತುಂಬಿದ ಮನ ಒಲಿಕೆಯ ಮಾತುಗಳು ಮತ್ತು ನೀತಿತತ್ವದ ನಿರ್ಬಂಧಗಳನ್ನು ತಮ್ಮ ಆಯುಧಗಳನ್ನಾಗಿ ಉಪಯೋಗಿಸಿದರು. ತಮ್ಮ ಹಣವನ್ನು ಬಿಟ್ಟುಕೊಡಲು ಅವರು ಶ್ರೀಮಂತರಿಗೆ ಕರೆ ಇತ್ತರು; ಜ್ಞಾನಿ ಪಂಡಿತರಿಗೆ ತಮ್ಮ ಜ್ಞಾನವನ್ನು ಜನರಿಗೆ ಮುಟ್ಟಿಸಲು ಹೇಳಿದರು; ಬಂಡವಾಳಶಾಹಿಗಳು ತಮ್ಮ ಲಾಭಾಂಶಗಳನ್ನು ಕಾರ್ಮಿಕರ ಜೊತೆಗೆ ಸಮಾನವಾಗಿ ಹಂಚಿಕೊಳ್ಳಬೇಕು, ಆಳುವವರು ಪ್ರಜೆಗಳಿಗೆ ಮಾನವ ಹಕ್ಕುಗಳನ್ನು ಒದಗಿಸಬೇಕು ಮತ್ತು ಅಂಜುಕುಳಿ ಹಾಗೂ ಅಲಸಿ ದೇಶವಾಸಿಗಳು ತಮ್ಮ ಆಲಸ್ಯವನ್ನು ತೊರೆಯಬೇಕೆಂದು ಹೇಳಿದರು. ಜನರ ಕ್ಷೇಮಾಭಿವೃದ್ಧಿಯ ಬಗ್ಗೆ ಔದಾಸೀನ್ಯ ತೋರುವ ವಿದೇಶೀ ಪ್ರಭುತ್ವದ ಕೈಗಳಿಂದ ಸರ್ಕಾರದ ಲಗಾಮನ್ನು ಕಸಿದುಕೊಳ್ಳಬೇಕೆಂದು ಅವರು ತಮ್ಮ ದೇಶವಾಸಿಗಳನ್ನು ಪ್ರೋತ್ಸಾಹಿಸಿದರು.

ಈ ನಿಷ್ಠಾವಂತ ಆತ್ಮದ ಕಳಕಳಿಯ ಮನವಿಯು ಚಿಕ್ಕವರು-ದೊಡ್ಡವರು, ಹಳ್ಳಿಗಳ ಸರಳ ಮಂದಿ ಮತ್ತು ಧೂರ್ತ ವ್ಯಾಪಾರೀಜನರೆನ್ನದೆ ಎಲ್ಲರ ಮನಸ್ಸಿನ ಮೇಲೆ ಮಾಂತ್ರಿಕ ಮೋಡಿ ಮಾಡಿತು. ಜನ ತಮ್ಮ ಶ್ರೀಮಂತಿಕೆಯನ್ನು, ಮಕ್ಕಳನ್ನು, ತಮ್ಮದೆಲ್ಲವನ್ನೂ ದೇಶದ ಯಜ್ಞವೇದಿಕೆಗೆ ಸಮರ್ಪಿಸಲು ಪ್ರೋತ್ಸಾಹಿಸುತ್ತಾ, ಸುಂಟರಗಾಳಿಯಂತೆ ಭಾರತದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಅವರು ಸಾಗಿದರು. ಮಂಕು ಕವಿದಂತಿದ್ದ ಮನಸ್ಸುಗಳನ್ನು ಅಲುಗಾಡಿಸಿದರು. ತಂದೆತಾಯಂದಿರು ರಾಷ್ಟ್ರದ ಸೇವೆಗಾಗಿ ತಮ್ಮ ಮಕ್ಕಳನ್ನು ಅವರಿಗೆ ಒಪ್ಪಿಸಿದರು, ಪರದೆಯೊಳಗಿನ ಮಹಿಳೆಯರು ತಮ್ಮ ಆಭರಣಗಳನ್ನು ಇತ್ತರು, ಬಡವರು ತಮ್ಮಲ್ಲಿದ್ದ ಕಾಸುಗಳನ್ನು ಕೊಟ್ಟರು.

ಒಮ್ಮೆ ದೇಶದಲ್ಲಿ ಬೆಳೆಯೇ ಹುಟ್ಟಲಿಲ್ಲ. ರೈತರು ಕಂಗಾಲಾದರು. ಆದರೆ ಸರ್ಕಾರ ತೆರಿಗೆಗಳನ್ನು ಸಂಪೂರ್ಣವಾಗಿಯೇ ಪಾವತಿಸಬೇಕೆಂದು ಒತ್ತಾಯಮಾಡಿತು. ತೆರಿಗೆ ಸಂಗ್ರಹಕಾರರ ಕಾಟದಿಂದ ಕಂಗೆಟ್ಟ ಅಸಹಾಯಕ ರೈತರು ಬಾಕಿಗಳನ್ನು ಪಾವತಿಸಲು ತಮ್ಮ ಹೊಲಗದ್ದೆ ಮತ್ತು ಎತ್ತುಗಳನ್ನು ಮಾರುವ ಆಲೋಚನೆ ಮಾಡಿದರು. ಆದರೆ ಗಾಂಧಿ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸದೇ ಇರುವಂತೆ ರೈತರಿಗೆ ಹೇಳಿದರು. ರೈತರು 'ತೆರಿಗೆ ಇಲ್ಲ' ಚಳುವಳಿಯನ್ನು ಆರಂಭಿಸಿದರು. ಗಾಂಧಿಯವರ ನೇತೃತ್ವದಲ್ಲಿ ಸತ್ಯಾಗ್ರಹೀ ರೈತರ ಒಂದು ತಂಡ ಹೀಗೆ ಪಣ ತೊಟ್ಟಿತು: "ನಾವಾಗಿಯೇ ಸರ್ಕಾರಕ್ಕೆ ಈ ವರ್ಷದ ಸಂಪೂರ್ಣ

ತೆರಿಗೆಯನ್ನಾಗಲೀ, ಬಾಕಿ ಉಳಿದಿರುವ ತೆರಿಗೆಯನ್ನಾಗಲೀ ಕಟ್ಟುವುದಿಲ್ಲ ಎಂದು ವಿಧಿಯುಕ್ತವಾಗಿ ಘೋಷಣೆಯನ್ನು ಮಾಡುತ್ತೇವೆ. ಬೇಕಾದರೆ ಸರ್ಕಾರ ನಮ್ಮ ಭೂಮಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಿ." ಸರ್ಕಾರ ಬೆಳೆದು ನಿಂತಿದ್ದ ಬೆಳೆಗಳಿದ್ದ ರೈತರ ಹೊಲಗಳನ್ನು ವಶಪಡಿಸಿಕೊಂಡಿತು. "ತಮ್ಮ ದುಡಿಮೆಯ ಫಲವನ್ನು ಉಣ್ಣುವ ಹಕ್ಕು ರೈತರಿಗೆ ಇದೆ" ಎಂದು ಹೇಳಿದ ಗಾಂಧಿ, ಸರ್ಕಾರ ವಶಪಡಿಸಿಕೊಂಡಿದ್ದ ಈರುಳ್ಳಿ ಹೊಲವನ್ನು ಲೂಟಿ ಮಾಡಲು ರೈತರಿಗೆ ಸಲಹೆ ನೀಡಿದರು. ಅದೇ ರೀತಿ, ಸ್ವಯಂಸೇವಕರ ಒಂದು ತಂಡ ಬೆಳೆಯನ್ನು ಲೂಟಿ ಮಾಡಿತು. ಈ ಲೂಟಿ ತಂಡದ ಮುಖ್ಯಸ್ಥರಾಗಿದ್ದ ಮೋಹನ್‌ಲಾಲ್ ಪಾಂಡ್ಯಾನನ್ನು ಬಂಧಿಸಲಾಯಿತು. ಆತನ ಬಿಡುಗಡೆಯಾದ ಬಳಿಕ, ಅವನನ್ನು ರಾಜಮರ್ಯಾದೆಯೊಡನೆ ಸ್ವಾಗತಿಸಲಾಯಿತು. ಅವನಿಗೆ 'ಈರುಳ್ಳಿ-ಕಳ್ಳ' ಎಂಬ ಬಿರುದು ಸಹ ದಕ್ಕಿತು. ಈ ಸಭೆಯ ಅಧ್ಯಕ್ಷತೆ ಗಾಂಧಿಯವರದ್ದಾಗಿತ್ತು. ಪಾಂಡ್ಯಾನ ಹಣೆಯ ಮೇಲೆ ವಿಜಯತಿಲಕವಿಟ್ಟಿದ್ದು ಅವರೇ.

ಮತ್ತೊಂದು ಸಂದರ್ಭದಲ್ಲಿ, ಬರಗಾಲದ ಪರಿಸ್ಥಿತಿಯಲ್ಲಿಯೇ, ಇದೇ ತರಹದ ಸಲಹೆಯನ್ನು ಗಾಂಧಿ ರೈತರಿಗೆ ಕೊಟ್ಟರು. ಭೂಕಂದಾಯ ನಷ್ಟವಾದದ್ದಕ್ಕಾಗಿ ರೊಚ್ಚಿಗೆದ್ದ ಸರ್ಕಾರೀ ಅಧಿಕಾರಿಗಳು ರೈತರ ಆಸ್ತಿಯನ್ನು ವಶಪಡಿಸಿಕೊಂಡು, ತಮ್ಮ ಗುಡಿಸಲು ಗಳಿಂದಾಚೆ ಬರಲು ಅವರಿಗೆ ಒತ್ತಾಯ ಮಾಡಿದರು. ಆ ರೈತರು ತಮ್ಮದಾಗಿದ್ದ ಕೆಲವು ವಸ್ತುಗಳನ್ನು ಕಟ್ಟಿಕೊಂಡು, ತಮ್ಮ ಪೂರ್ವಿಕರ ಮನೆಗಳಿಂದ ವಲಸೆ ಹೊರಟರು. ಅಧಿಕಾರಿಗಳು ತಾವು ಮುಟ್ಟುಗೋಲು ಹಾಕಿಕೊಂಡಿದ್ದ ಆಸ್ತಿಗಳನ್ನು ಹರಾಜು ಹಾಕಲು ಪ್ರಯತ್ನಿಸಿದರು, ಆದರೆ ಖರೀದಿ ಮಾಡುವವರೇ ಸಿಗಲಿಲ್ಲ. ಬಹಳ ದಿನಗಳ ಕಾಲ ವಿಚಾರಣೆ ನಡೆದ ನಂತರ, ರೈತರ ಬೇಡಿಕೆಗಳನ್ನು ಭಾಗಶಃ ಅಂಗೀಕರಿಸಲಾಯಿತು; ಅವರಿಗೆ ಆ ವರ್ಷ ತೆರಿಗೆ ವಿನಾಯಿತಿಯೂ ಸಿಕ್ಕಿತು.

ಚಂಪಾರಣ್‌ನಲ್ಲಿ, ತೋಟಗಳ ಬಿಳಿಯ ಮಾಲೀಕರು 'ಇಂಡಿಗೋ' ನೀಲಿ ಬೆಳೆಯನ್ನು ಬೆಳೆಯುವಂತೆ ರೈತರನ್ನು ಒತ್ತಾಯಿಸುತ್ತಿದ್ದರು. ಅಲ್ಲದೆ, ಅವರಿಗೆ ಸರಿಯಾಗಿ ಭತ್ಯೆಗಳನ್ನೂ ಕೊಡುತ್ತಿರಲಿಲ್ಲ. ರೈತರ ಮೇಲೆ ಬಲವಂತದ ದುಡಿಮೆಯನ್ನು ಹೇರಿ, ತಾವು ಒಳ್ಳೆಯ ಲಾಭ ಗಳಿಸುತ್ತಿದ್ದರು. ಹೀಗೆ ಶೋಷಣೆಗೊಳಗಾದ ಒಬ್ಬ ರೈತ ಪರಿಹಾರಕ್ಕಾಗಿ ಗಾಂಧಿಯನ್ನು ಸಂಪರ್ಕಿಸಿದ. ಗಾಂಧಿ ಆ ಸ್ಥಳಕ್ಕೇ ಹೋದರು, ವಿವರವಾಗಿ ತನಿಖೆ ನಡೆಸಿದರು; ರೈತರ ವ್ಯಾಜ್ಯವನ್ನು ಕೈಗೆತ್ತಿಕೊಂಡರು. ರಾಜಿಯ ಮಾತುಕತೆ ಮತ್ತು ಚಳುವಳಿ ದೀರ್ಘಕಾಲದ ವರೆಗೆ ನಡೆಯಿತು. ಕೊನೆಗೂ, ಈ ಕೆಟ್ಟ ವ್ಯವಸ್ಥೆ ನಿಂತಿತು. ನೀಲಿಬೆಳೆಯ ತೋಟಗಳ ಮಾಲೀಕರು ಅಪಾರ ಲಾಭಗಳಿಂದ ವಂಚಿತರಾದರು. ಚಂಪಾರಣ್‌ನಿಂದ ನೂರು ವರ್ಷಗಳಷ್ಟು ಹಳೆಯದಾದ ನೀಲಿಬೆಳೆಯ ಕಲೆ ಮಾಸಿತು.

ಭಾರತದಲ್ಲಿ ಪ್ರತಿಯೊಬ್ಬರ ಆದಾಯ ದಿನಕ್ಕೆ ಒಂದು ಆಣೆಯಷ್ಟು ಇತ್ತು. ಈ ದಯನೀಯ ಆದಾಯಕ್ಕೆ ಹೋಲಿಸಿದರೆ, ಇಲ್ಲಿ ಉಪ್ಪಿನ ಮೇಲಿನ ತೆರಿಗೆ ಬಹಳ ಅಧಿಕವಾಗಿತ್ತು. ಹಸಿವಿನಿಂದ ಕೂಡಿದ್ದು, ಉಪ್ಪು ಮತ್ತು ಧಾನ್ಯಗಳ ಮೇಲೆಯೇ ಬದುಕುತ್ತಿದ್ದ ಲಕ್ಷಾಂತರ ಮಂದಿ ಭಾರಿ ತಲೆಗಂದಾಯ ಕೊಡಬೇಕಾಗಿತ್ತು. ದೇಶದ ಹಲವಾರು ಸ್ಥಳಗಳಲ್ಲಿ ಉಪ್ಪಿನ ಕ್ವಾರಿಗಳಲ್ಲಿ ಮತ್ತು ಬಂಡೆಗಳಲ್ಲಿ ಉಪ್ಪು ಸಿಗುತ್ತಿತ್ತು. ಆದರೆ, ಕಾನೂನಿನ ಪ್ರಕಾರ ಉಪ್ಪು ತಯಾರಿಸುವುದಕ್ಕೆ ನಿಷೇಧವಿತ್ತು. ಆಗ ಪ್ರತಿಭಟನೆಯ ರೂಪದಲ್ಲಿ ಗಾಂಧಿ ಉಪ್ಪಿನ ಚಳುವಳಿಯನ್ನು ಆರಂಭಿಸಿದರು. ಈ ಶೋಷಣೆಗೆ ಕೊನೆ ಹಾಕಬೇಕೆಂದು ಅವರು ತೀರ್ಮಾನಿಸಿದ್ದರು. "ನನಗೇನು ಬೇಕೋ, ಅದರೊಂದಿಗೆಯೇ ನಾನು ಹಿಂತಿರುಗಿ ಬರುತ್ತೇನೆ; ಇಲ್ಲದಿದ್ದರೆ, ನನ್ನ ಮೃತದೇಹ ಸಮುದ್ರದಲ್ಲಿ ತೇಲುತ್ತದೆ... ನಮ್ಮನ್ನು ಸಾಯಿಸಿದರೆ, ನಾವು ಸ್ವರ್ಗಕ್ಕೆ ಹೋಗುತ್ತೇವೆ, ಬಂಧಿಸಿದಲ್ಲಿ – ಸೆರೆಮನೆಗೆ ಹೋಗುತ್ತೇವೆ; ಜಯ ಗಳಿಸಿದಲ್ಲಿ, ಮನೆಗೆ ಹಿಂತಿರುಗುತ್ತೇವೆ..." ಸಬರಮತಿ ಆಶ್ರಮದಿಂದ 25 ದಿನಗಳಲ್ಲಿ ಅವರು 241 ಮೈಲಿ ದೂರ ನಡೆದರು; ದಂಡಿ ಸಮುದ್ರತೀರದಲ್ಲಿ ಒಂದಿಷ್ಟು ಉಪ್ಪನ್ನು ತೆಗೆದುಕೊಳ್ಳುವ ಮೂಲಕ ಉಪ್ಪಿನ ಕಾನೂನನ್ನು ಮುರಿದರು. ಸರೋಜಿನಿ ನಾಯ್ಡು ಈ ಕಾನೂನು ಮುರುಕನಿಗೆ ಹಾರ ಹಾಕಿ, ತಿಲಕವಿಟ್ಟು ಅಭಿನಂದಿಸಿದರು. ಗಾಂಧಿ ಹೇಳಿದರು: "ಒಂದು ಹಿಡಿ ಉಪ್ಪು ಮಣ್ಣನ್ನು ತೆಗೆದುಕೊಳ್ಳುವುದೆಂದರೆ ಮಕ್ಕಳ ಆಟವಿದ್ದಂತೆ. ನಾನು ಎಲ್ಲಾ ಉಪ್ಪನ್ನು ನನ್ನ ವಶಕ್ಕೆ ತೆಗೆದುಕೊಳ್ಳುತ್ತೇನೆ." ಭಾರತದೆಲ್ಲೆಡೆ ಜನ ನಿಷೇಧಿತ ಉಪ್ಪನ್ನು ಸಂಗ್ರಹಿಸಲಾರಂಭಿಸಿದರು. ಕಾನೂನುಬಾಹಿರ ಉಪ್ಪಿಗಾಗಿ ಪೋಲೀಸರು ತೀವ್ರ ಹುಡುಕಾಟ ನಡೆಸಲಾರಂಭಿಸಿದರು. ಪರ್ದಾಧಾರಿ ಮಹಿಳೆಯರನ್ನು ಹೊತ್ತೊಯ್ಯುತ್ತಿದ್ದ ಪಲ್ಲಕ್ಕಿಗಳನ್ನು ಹುಡುಕಿದರು. ಒಮ್ಮೆ ಕಾರಿನಲ್ಲಿ ಹೋಗುತ್ತಿದ್ದ ಗಾಂಧಿ ಕಾವಲು ಪೋಲೀಸನಿಗೆ ಕೂಗಿ ಹೇಳಿದರು: "ನನ್ನ ಬಳಿ ಸ್ವಲ್ಪ ನಿಷೇಧಿತ ಉಪ್ಪಿದೆ. ನನ್ನನ್ನು ತಡೆಯ ಬಯಸುತ್ತೀರಾ ?"

ಗಾಂಧಿ ಧಾರಾಸನದಲ್ಲಿದ್ದ ಉಪ್ಪಿನ ಉಗ್ರಾಣದ ಮೇಲೆ ದಾಳಿ ನಡೆಸಲು ನಿರ್ಧರಿಸಿದರು. ಆದರೆ ಅವರ ಬಂಧನ ಶೀಘ್ರವಾಗಿ ಆಗಿಹೋಯಿತು. ಹೀಗಾಗಿ ಅವರ ಯೋಜನೆ ಬುಡಮೇಲಾಯಿತು. ಆದರೆ, ಉಪ್ಪಿನ ಉಗ್ರಾಣದತ್ತ ಅವರ ಸುಲಿಗೆಕೋರ ಅಹಿಂಸಾಪಡೆ ಹೆಜ್ಜೆ ಹಾಕಿತು. ಉಗ್ರ ಕದನ ಆರಂಭವಾಯಿತು. ಪೋಲೀಸರು ಉಕ್ಕಿನ ಲಾಠಿಗಳಿಂದ ಸ್ವಯಂಸೇವಕರನ್ನು ಥಳಿಸಿದರು. ಮೂಳೆಗಳು ಮುರಿದವು, ತಲೆಬುರುಡೆಗಳು ಸೀಳಿದವು, ಗಾಯಗಳಿಂದ ರಕ್ತ ಉಕ್ಕಿ ಹರಿಯಿತು. ಭಾರತದ ಇತರ ಭಾಗಗಳಲ್ಲೂ ಉಪ್ಪಿನ ಉಗ್ರಾಣಗಳನ್ನು ಲೂಟಿ ಮಾಡಲಾಯಿತು. ಇದಾದ ಒಂದು ವರ್ಷದಲ್ಲಿ, ಉಪ್ಪಿನ ಕಾನೂನನ್ನು ಸಡಿಲಗೊಳಿಸಲಾಯಿತು. ಮನೆಬಳಕೆಗೆ ಉಪ್ಪನ್ನು ಸಂಗ್ರಹಿಸುವುದು ಅಥವಾ ತಯಾರಿಸುವುದು ಅಥವಾ ಉಪ್ಪಿನ ಶೇಖರಣೆಗಳ ಹತ್ತಿರದಲ್ಲೇ ಇದ್ದ ಹಳ್ಳಿಗಳಲ್ಲಿ ಅದರ ಮಾರಾಟ ಮಾಡುವುದು ಕಾನೂನುಸಮ್ಮತವಾಯಿತು.

ಲೂಟಿ ಮಾಡುವುದು ಮೋಸ ಮಾಡುವುದಕ್ಕಿಂತ ವಾಸಿ ಎಂಬುದನ್ನು ನಿರೂಪಿಸಿದ ಗಾಂಧಿಯಲ್ಲಿ ಬ್ರಿಟಿಷ್ ಸರ್ಕಾರ ಒಬ್ಬ ಕಠಿಣ ಎದುರಾಳಿಯನ್ನು ಕಂಡಿತು. ಬ್ರಿಟಿಷರು ಭಾರತಕ್ಕೆ ವರ್ತಕರಂತೆ ಬಂದರು; ಭಾರತದ ಮಾರುಕಟ್ಟೆಯನ್ನು ವಶಪಡಿಸಿಕೊಂಡರು. ಅನ್ಯಾಯ ಮಾರ್ಗಗಳ ಮುಖಾಂತರ ಒಂದು ಕಾಲದಲ್ಲಿ ಜಗತ್ತಿನ ಈರ್ಷ್ಯೆಗೆ ಪಾತ್ರವಾಗಿದ್ದ ಭಾರತದ, ಕೈಯಿಂದ ನೂಲುವ ಮತ್ತು ಕೈಮಗ್ಗ ಉದ್ಯಮವನ್ನು ನಾಶ ಮಾಡಿದರು. ಕದರಣಿಗೆ ಮತ್ತು ಮಗ್ಗಗಳು ಅಲುಗಾಡದೆ ಕುಳಿತವು. ಕೆಲವು ಕಲಾಕಾರರು ವ್ಯವಸಾಯದಲ್ಲಿ ತೊಡಗಿದರು. ಇನ್ನಿತರರು ಅಕೌಶಲ ಕಾರ್ಮಿಕರಾದರು. ತುಂಬಿ ತುಳುಕುತ್ತಿದ್ದ ನಾಡಿಗೆ ದುರ್ಭಿಕ್ಷ ಕಾಲಿಟ್ಟಿತು. ಲಾಂಕಾಷೈರ್ ಮತ್ತು ಮ್ಯಾಂಚೆಸ್ಟರ್‌ಗಳಿಂದ ಆಮದಾದ ಬಟ್ಟೆಗಳು ಭಾರತದಿಂದ ಕೋಟಿಗಟ್ಟಲೆ ರೂಪಾಯಿಗಳನ್ನು ಹೀರಿಹಾಕಿತು. ವ್ಯಾಪಾರಿಗಳ ಗಜಕಡ್ಡಿ ರಾಜದಂಡವಾಗಿ ಮಾರ್ಪಟ್ಟಿತು.

ಗಾಂಧಿ ವಿದೇಶೀ ವಸ್ತ್ರ, ಮದ್ಯ ಮತ್ತು ವಸ್ತುಗಳನ್ನು ಬಹಿಷ್ಕರಿಸುವ ವಿಚಾರಕ್ಕೆ ಬಂದರು. ತಮ್ಮ ದೇಶವಾಸಿಗಳಿಗೆ ಅವರು ನೂಲಲು, ನೇಯಲು ಮತ್ತು ಮನೆಯಲ್ಲಿ ತಯಾರಿಸಿದ ಖಾದಿಯನ್ನು ಬಳಸಲು ಅಯಾಸವಿಲ್ಲದೇ ಮನವಿ ಮಾಡುತ್ತಲೇ ಇರುತ್ತಿದ್ದರು. ಜನರೂ

ಅದ್ಭುತವಾಗಿ ಪ್ರತಿಕ್ರಿಯಿಸಿದರು. ಕೈಯಿಂದ ನೂಲುವುದನ್ನು ಮತ್ತು ನೇಯುವುದನ್ನು ಅವರು ಪುನರ್ಜೀವಿತಗೊಳಿಸಿದರು. ವಿದೇಶೀ ವಸ್ತ್ರಗಳು ಮತ್ತು ಸಾರಾಯಿ ಅಂಗಡಿಗಳನ್ನು ತಡೆಯಲು ಮಹಿಳಾ ಸ್ವಯಂಸೇವಿಕೆ ಕಾವಲು ಪಡೆಗಳನ್ನು ರಚಿಸಿದರು. ನಗರಗಳು ಮತ್ತು ಗ್ರಾಮಗಳಲ್ಲಿ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು; ವಿದೇಶೀಯರ ಆಡಂಬರದ ಉಡುಗೆತೊಡುಗೆಗಳಿಗೆ, ಕಸಕ್ಕೆ ಬೆಂಕಿ ಹಚ್ಚುವ ರೀತಿಯಲ್ಲಿ, ಬೆಂಕಿ ಹಚ್ಚಿದರು. ಆಗ ಆಮದು ವ್ಯಾಪಾರದಲ್ಲಿ ತೀವ್ರ ಇಳಿಮುಖವಾಯಿತು. ಬ್ರಿಟಿಷರ ಮಾಲೀಕತ್ವದ ಅನೇಕ ಬಟ್ಟೆ ಗಿರಣಿಗಳು ಮುಚ್ಚಲ್ಪಟ್ಟವು. ಕೋನಾಕೃತಿಯಲ್ಲಿದ್ದ, ಕೈಯಿಂದ ತೆಗೆದ ನೂಲುಗಳೇ ಗಾಂಧಿಯವರಿಗೆ ಬಂದೂಕಿನ ಗುಂಡುಗಳಿಗೆ ಸಮನಾದವು; ಬ್ರಿಟಿಷರ ಜವಳಿ ಕಾರ್ಮಿಕರನ್ನು ಈ ಗುಂಡುಗಳು ತಾಕಿದವು. ಸಾವಿರಾರು ಮಂದಿ ನಿರುದ್ಯೋಗಿಗಳಾದರು. ಬಹಳ ವರ್ಷಗಳ ನಂತರ, ಲ್ಯಾಂಕಾಶೈರ್‌ಗೆ ಭೇಟಿ ನೀಡಿದ ಗಾಂಧಿ ಅಲ್ಲಿ ನೆರೆದಿದ್ದ ಗಿರಣಿಯ ಕಾರ್ಮಿಕರಿಗೆ ಹೇಳಿದರು: "ಇಲ್ಲಿನ ನಿರುದ್ಯೋಗವನ್ನು ಕಂಡು ನನಗೆ ನೋವಾಗಿದೆ. ನಿಮಗೆ, 30 ಲಕ್ಷ ಮಂದಿಗೆ ಕೆಲಸವಿಲ್ಲದಂತಾಗಿದೆ. ಆದರೆ ನಮ್ಮಲ್ಲಿ 30 ಕೋಟಿ ಮಂದಿಗೆ ವರ್ಷದಲ್ಲಿ ಆರು ತಿಂಗಳು ಕೆಲಸವಿರುವುದಿಲ್ಲ. ಇಲ್ಲಿನ ನಿರುದ್ಯೋಗ ವೇತನ ಸರಾಸರಿ ಎಪ್ಪತ್ತು ಷಿಲ್ಲಿಂಗುಗಳು; ನಮ್ಮ ಸರಾಸರಿ ಆದಾಯ ತಿಂಗಳಿಗೆ ಏಳು ಷಿಲ್ಲಿಂಗುಗಳು ಹಾಗೂ ಪೆನ್ನಿಗಳು. ಭಾರತದ ನೂಲುವವರ ಮತ್ತು ನೇಕಾರರ ಮತ್ತು ಅವರ ಹಸಿದ ಮಕ್ಕಳ ಬಾಯಿಂದ ತುತ್ತು ಅನ್ನವನ್ನು ಕಸಿದುಕೊಂಡು ನೀವು ಉದ್ಧಾರವಾಗಲು ಬಯಸುತ್ತೀರಾ? ಭಾರತ ತನ್ನ ವಸ್ತ್ರವನ್ನು ತಾನೇ ತಯಾರಿಸಬಹುದಾದರೂ, ಲ್ಯಾಂಕಾಶೈರಿನ ಬಟ್ಟೆಯನ್ನು ಖರೀದಿಸುವಂಥ ನೈತಿಕ ಬದ್ಧತೆ ಅದಕ್ಕಿದೆಯೇ? ಭಾರತದ ಲಕ್ಷಗಟ್ಟಲೆ ಬಡವರ ಸಮಾಧಿಗಳ ಮೇಲೆ ಉದ್ಧಾರವಾಗುವ ಯೋಚನೆ ನಿಮಗಿದೆಯೇ?" ಗಾಂಧಿಯವರ ಈ ನೇರ ಮಾತು ಅವರನ್ನು ಬ್ರಿಟಿಷ್ ಕಾರ್ಮಿಕರಿಗೆ ಆತ್ಮೀಯರನ್ನಾಗಿಸಿತು. ಅವರೆಲ್ಲಾ ಹರ್ಷೋದ್ಗಾರಗಳಿಂದ ಗಾಂಧಿಯನ್ನು ಸ್ವಾಗತಿಸಿದರು.

ಆದಾಯ ಮತ್ತು ಸಾಮಾಜಿಕ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಶ್ರೀಮಂತರು ಮತ್ತು ಬಡವರ ನಡುವೆ ಇರುವ ಅಸಮಾನತೆಯನ್ನು ತೊಡೆದುಹಾಕಲು ಗಾಂಧಿ ಸಕಲ ಪ್ರಯತ್ನಗಳನ್ನು ಮಾಡಿದರು. ಒಮ್ಮೆ ಜಾಡಮಾಲಿಗಳ ಒಂದು ಸಭೆಯಲ್ಲಿ, ಒಬ್ಬ ಮಹಿಳೆ ಎರಡು ಚಿನ್ನದ ಬಳೆಗಳನ್ನು ಕೈಗಳಿಂದ ತೆಗೆದು, ಗಾಂಧಿಗೆ ಕೊಟ್ಟು, ಹೇಳಿದಳು: "ಈಚೀಚೆಗೆ ಗಂಡಂದಿರು ತಮ್ಮ ಹೆಂಡತಿಯರಿಗೆ ಏನನ್ನೂ ಉಳಿಸುವುದೇ ಇಲ್ಲ. ಆದ್ದರಿಂದ, ಹರಿಜನರ ಸೇವೆಗಾಗಿ ನಾನು ನನ್ನಲ್ಲಿ ಕೊನೆಯದಾಗಿ ಉಳಿದಿರುವ ಈ ಅಲ್ಪ ಕಾಣಿಕೆಯನ್ನು ಮಾತ್ರ ಕೊಡಬಲ್ಲೆ." ಗಾಂಧಿ ಉತ್ತರಿಸಿದರು: "ವೈದ್ಯರು, ವಕೀಲರು ಮತ್ತು ವರ್ತಕರು – ಎಲ್ಲರನ್ನೂ ನಿರ್ಗತಿಕರನ್ನಾಗಿ ಮಾಡುವುದಕ್ಕೆ ನಾನೇ ಕಾರಣನಾಗಿದ್ದೇನೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಅದಕ್ಕಾಗಿ ನಾನೇನೂ ಪಶ್ಚಾತ್ತಾಪ ಪಡುವುದಿಲ್ಲ."

ದಿನಕ್ಕೆ ಒಂದು ಪೈಸ್‌ನ ಕೂಲಿ ಪಡೆಯಲು ಮೈಲಿಗಟ್ಟಲೆ ನಡೆಯುವ ಭಾರತದಂತಹ ಬಡದೇಶದಲ್ಲಿ, ದುಬಾರಿಯಾದ ಆಭರಣಗಳನ್ನು ಧರಿಸುವುದು ಯಾರಿಗೂ ಯೋಗ್ಯವಲ್ಲ. ತರುಣಿಯರ ಕೈಗಳಿಂದ ಬಳೆಗಳು ಹೊರಬರದಷ್ಟು ಬಿಗಿಯಾಗಿದ್ದಂಥ ಸಂದರ್ಭಗಳಲ್ಲಿ, ಗಾಂಧಿ ಬಳೆಗಳನ್ನು ಕತ್ತರಿಸಿ ತೆಗೆದರು. ಸಾರ್ವಜನಿಕ ಉದ್ದೇಶಕ್ಕಾಗಿ ತಮ್ಮ ಆಭರಣಗಳನ್ನು ದಾನ ಮಾಡುವಂತೆ ಮಹಿಳೆಯರ ಮನ ಒಲಿಸುವ ಗಾಂಧಿಯವರ ಆಚರಣೆಗಳ ಬಗ್ಗೆ ವಿಮರ್ಶಕರು ದುಃಖಿಸಿದರು. ಆದರೆ ಗಾಂಧಿ ಮಾತ್ರ ಜಗ್ಗಲಿಲ್ಲ: "ನನ್ನ ಸಭೆಗಳಿಗೆ ಬರುವ ಸಾವಿರಾರು ಮಂದಿ ಸೋದರಿಯರು ತಾವು ಧರಿಸಿರುವ ಎಲ್ಲಾ ಆಭರಣಗಳನ್ನಲ್ಲದಿದ್ದರೂ, ಸಾಧ್ಯವಾದಷ್ಟನ್ನಾದರೂ ಕೊಡಬೇಕೆಂದು ನಾನು ಬಯಸುತ್ತೇನೆ." ಅವರ ಈ ಮನವಿ ತಮ್ಮ ಆಭರಣಗಳನ್ನು ಕೊಡುಗೆಯಾಗಿ ನೀಡುವಂತೆ ಅನೇಕ ಮಹಿಳೆಯರಿಗೆ ಸ್ಫೂರ್ತಿ ನೀಡಿತು. ಒಬ್ಬ ಎಳೆಯ ವಯಸ್ಸಿನ ವಿಧವೆ ಗಾಂಧಿಯನ್ನು ತನ್ನ ಮನೆಗೆ ಆಹ್ವಾನಿಸಿ, ತನ್ನ ಆಭರಣಗಳನ್ನು ಕೊಡುಗೆಯಾಗಿತ್ತಳು. ಮತ್ತೊಬ್ಬ ವಿವಾಹಿತ ತರುಣಿ ಗಾಂಧಿ ತನ್ನ ಮನೆಗೆ ಬಂದು, ತನ್ನ ಆಭರಣಗಳನ್ನು ಸ್ವೀಕರಿಸುವಂತೆ ಮಾಡಲು ಉಪವಾಸ ಆರಂಭಿಸಿದಳು. ಆಕೆಯ ಗಂಡ ತಿಂಗಳಿಗೆ 40 ರೂಪಾಯಿ ದುಡಿಯುತ್ತಿದ್ದ.

ಒಂದು ಸಾರ್ವಜನಿಕ ಸಭೆಯಲ್ಲಿ, ಕೌಮುದಿ ಎಂಬ ಹದಿಹರೆಯದ ಹುಡುಗಿ, ವೇದಿಕೆಯವರೆಗೂ ನಡೆದು ಹೋದಳು, ತನ್ನ ಚಿನ್ನದ ಸರ, ಬಳೆಗಳು ಮತ್ತು ಕಿವಿಯ ರಿಂಗುಗಳನ್ನು ಕಳಚಿ, ಗಾಂಧಿಗೆ ಸಮರ್ಪಿಸಿದಳು. ದಾನಿಗಳು ತಾವು ದಾನವಾಗಿ ಕೊಟ್ಟ ಆಭರಣಗಳ ಬದಲಿಗೆ ಮತ್ತೆ ಬೇರೆಯವುಗಳನ್ನು ಧರಿಸುವುದಿಲ್ಲವೆಂದು ಮಾತು ಕೊಡುವಂತೆ ಗಾಂಧಿ ಮಾಡಿದರು, ಏಕೆಂದರೆ, 'ಒಬ್ಬ ಮಹಿಳೆಯ ನಿಜವಾದ ಆಭರಣ ಅವಳ ಚಾರಿತ್ರ್ಯ ಮತ್ತು ಪರಿಶುದ್ಧತೆ.' ಎಳೆಯ ಮಕ್ಕಳನ್ನು ಸಹ ಅವರು ಬಿಡುತ್ತಿರಲಿಲ್ಲ. ಅವರಿಗೆ ಹೂಗಳನ್ನು ಕೊಡಲು ಒಂದು ಚಿಕ್ಕ ಹುಡುಗಿ ಬಂದಾಗ, ಅವಳ ಬೆರಳಲ್ಲಿದ್ದ ಪುಟ್ಟ ಉಂಗುರದ ಮೇಲೆ ಅವರ ಕಣ್ಣು ಬಿತ್ತು. ಅದನ್ನು ಕೊಡುವಂತೆ ಅವಳನ್ನು ಪುಸಲಾಯಿಸಿದರು. ಒಬ್ಬ ಹುಡುಗನ ಕಿವಿಯೋಲೆಗಳನ್ನು ಕಳಚಿಕೊಂಡು, ಅವರು ಹೇಳಿದರು: "ಈಗ ನೀನು ಸರಿಯಾಗಿ ಪ್ರಣಾಮಗಳನ್ನು ಮಾಡಿ, ಹೊರಟು ಹೋಗಬೇಕು. ನನಗೆ 195 ಡಿಗ್ರಿಗಳ ರಕ್ತದೊತ್ತಡ ಇದೆ, ಗೊತ್ತಿದೆಯಲ್ಲವೆ?" ಪೋಷಕರ ಅನುಮತಿಯಿಲ್ಲದೆ ಮಕ್ಕಳ ಆಭರಣಗಳನ್ನು ಅವರು ಎಂದಿಗೂ ಸ್ವೀಕರಿಸುತ್ತಿರಲಿಲ್ಲ.

ಗಾಂಧಿ ಒಬ್ಬ ನಿಪುಣ ಸುಲಿಗೆಕೋರ ಎಂಬ ಕುಖ್ಯಾತಿಯನ್ನು ಗಳಿಸಿದರು. ಆದರೂ, ಸುಲಿಗೆ ಮಾಡಿಸಿಕೊಂಡವರಿಂದ ಗಾಂಧಿಯವರಿಗೆ ಯಾವಾಗಲೂ ಸ್ವಾಗತವಿರುತ್ತಿತ್ತು. ಗಾಂಧಿಯವರ ಒಬ್ಬ ಅಭಿಮಾನಿ, ಗಾಂಧಿ ತನ್ನ ಮನೆಯಲ್ಲಿ ತಂಗಿದಲ್ಲಿ, ಆ ಅವಧಿಯ ಪ್ರತಿ ನಿಮಿಷಕ್ಕೆ 16 ರೂಪಾಯಿಗಳನ್ನು ಕೊಡಲು ಒಪ್ಪಿದರು. ಆದರೆ ಗಾಂಧಿ ಅಲ್ಲಿ ಎರಡು

ನಿಮಿಷಗಳಿಗಿಂತ ಹೆಚ್ಚು ಹೊತ್ತು ನಿಲ್ಲದಷ್ಟು ಕಾರ್ಯಮಗ್ನರಾಗಿದ್ದರು.

ಅವರಿಗೆ ದಿಢೀರನೆ ಅನಾರೋಗ್ಯವುಂಟಾದ ಸುದ್ದಿ ಕೇಳಿ, ಒಬ್ಬ ವೈದ್ಯಮಿತ್ರರು ಧಾವಿಸಿ ಬಂದರು. ಗಾಂಧಿ ಅವರನ್ನು ಮೂದಲಿಸಿದರು: "ನೀವು ನನ್ನನ್ನು ಪರೀಕ್ಷಿಸಲು ನಾನು ಅನುವು ಮಾಡಿಕೊಟ್ಟರೆ, ನನಗೆ ನೀವೇನು ಶುಲ್ಕ ಕೊಡುತ್ತೀರಿ?" ಆ ವೈದ್ಯರು ಶುಲ್ಕ ತೆಗೆದುಕೊಳ್ಳುವ ಬದಲಿಗೆ, ತಾವೇ ತಮ್ಮ ಜೇಬು ಬರಿದು ಮಾಡಿಕೊಂಡರು.

ಗಾಂಧಿಯವರ ಕರೆಗೆ ಓಗೊಟ್ಟು ಮೋತಿಲಾಲ್ ನೆಹರೂ ಮತ್ತು ದೇಶಬಂಧು ದಾಸ್ ತಮ್ಮ ಭವ್ಯ ವೃತ್ತಿಗಳನ್ನು ತೊರೆದರು; ತಮ್ಮ ಅರಮನೆಯಂತಹ ಮನೆಗಳನ್ನು ದೇಶಕ್ಕೆ ಕೊಡುಗೆಯಾಗಿ ಕೊಟ್ಟರು. ಗಾಂಧಿ ಸಾವಿರಾರು ಮಂದಿ ಅಮೀರರನ್ನು (ಲಕ್ಷಾಧಿಪತಿಗಳನ್ನು) ಫಕೀರರನ್ನಾಗಿ (ನಿರ್ಗತಿಕರನ್ನಾಗಿ) ಮಾಡಿದರು.

ಸೆರೆಮನೆಯ ಹಕ್ಕಿ

ಗಾಂಧಿ ಬಂಡಾಯವನ್ನು ಬೋಧಿಸಿದರು, ಗುಂಪು ನಾಗರಿಕ ಉಲ್ಲಂಘನೆಯನ್ನು ಆರಂಭಿಸಿದರು, ಪದೇಪದೇ ಸೆರೆಮನೆಗೂ ಹೋದರು. ಬಂಧಿಸಿದಾಗ, ತಪ್ಪೊಪ್ಪಿಕೊಂಡರು, ಕಠೋರವಾದ ಶಿಕ್ಷೆಯನ್ನು ಕೊಡುವಂತೆ ಕೇಳಿಕೊಂಡರು. ದಕ್ಷಿಣ ಆಫ್ರಿಕಾದಲ್ಲಿ, ಅವರ ಮತ್ತು ಅವರ ಸಹ ಕೆಲಸಗಾರರ ವಿರುದ್ಧದ ಆಪಾದನೆಗಳು, ಅವರೇ ಒದಗಿಸಿದ ಸಾಕ್ಷಿಗಳಿಂದ ನಿರೂಪಿಸಲ್ಪಟ್ಟವು. ಮೂಲತಃ ಅಪರಾಧಿಗಳಿಗೆ ಮೀಸಲಾಗಿದ್ದ ಸೆರೆಮನೆಯ ಜೀವನದ ಭೀಕರತೆ, ಅಪಮಾನ ಮತ್ತು ಯಾತನೆಗಳು ಭಾರತೀಯರನ್ನು ಹೆದರಿಸಿದವು. ಗಾಂಧಿ ಈ ಭಯವನ್ನು ಅವರ ಹೃದಯಗಳಿಂದ ನಿರ್ಮೂಲ ಮಾಡಿದರು.

ಗಾಂಧಿಯವರನ್ನು ಒಟ್ಟು ಹನ್ನೊಂದು ಬಾರಿ ಸೆರೆಮನೆಗೆ ಹಾಕಲಾಯಿತು. ಒಮ್ಮೆಯಂತೂ, ನಾಲ್ಕು ದಿನಗಳಲ್ಲಿ ಮೂರು ಬಾರಿ ಅವರನ್ನು ಬಂಧಿಸಲಾಯಿತು. ತಮ್ಮ ಎಲ್ಲಾ ಸೆರೆಮನೆಯ ಅವಧಿಗಳನ್ನು ಪೂರೈಸುವಂತಿದ್ದಲ್ಲಿ, ಅವರು ಸೆರೆಮನೆಯಲ್ಲಿ 11 ವರ್ಷಗಳು ಮತ್ತು 19 ದಿವಸಗಳು ಇರಬೇಕಾಗಿತ್ತು. ಆಗಾಗ್ಗೆ, ಅವರ ಶಿಕ್ಷೆಯನ್ನು ಕಡಿಮೆಯೂ ಮಾಡಲಾಗುತ್ತಿತ್ತು. ಒಟ್ಟಿನಲ್ಲಿ, ಅವರು ಸೆರೆಮನೆಯಲ್ಲಿ 6 ವರ್ಷ–10 ತಿಂಗಳುಗಳನ್ನು ಕಳೆದರು. ತಮ್ಮ 39ನೇ ವಯಸ್ಸಿನಲ್ಲಿ, ಗಾಂಧಿ ಮೊದಲ ಬಾರಿಗೆ ಸೆರೆಮನೆ ಪ್ರವೇಶಿಸಿದರು. ಕೊನೆಯ ಬಾರಿಗೆ ಅವರು ಸೆರೆಮನೆಯ ಬಾಗಿಲಿಂದಾಚೆ ಬಂದದ್ದು 75ನೇ ವಯಸ್ಸಿನವರಾಗಿದ್ದಾಗ.

ಗಾಂಧಿ ಮೊದಲ ಬಾರಿಗೆ ಸೆರೆಮನೆ ಪ್ರವೇಶಿಸಿದ್ದು ದಕ್ಷಿಣ ಆಫ್ರಿಕಾದಲ್ಲಿ, ಐವರು ಸತ್ಯಾಗ್ರಹಿಗಳೊಂದಿಗೆ. ಸೆರೆಮನೆಯ ಜೀವನದ ಬಗ್ಗೆ ಅವರು ದಾರುಣ ಕತೆಗಳನ್ನು ಕೇಳಿದ್ದರು. ಸ್ವಲ್ಪ ಅಳುಕಿಯೂ ಇದ್ದರು. ತನ್ನನ್ನು ರಾಜಕೀಯ ಖೈದಿಯಂತೆ ವಿಶೇಷವಾಗಿ ಪರಿಗಣಿಸುತ್ತಾರೋ ಅಥವಾ ಸಹ ಕಾರ್ಮಿಕರಿಂದ ತನ್ನನ್ನು ಪ್ರತ್ಯೇಕಿಸುತ್ತಾರೋ ಎಂಬುದನ್ನು ತಿಳಿಯುವ ಆತುರವೂ ಇತ್ತು. ತಾನು ವಕೀಲನಾಗಿ ಕಾಣಿಸಿಕೊಳ್ಳುತ್ತಿದ್ದ ನ್ಯಾಯಾಲಯದ ಕಟಕಟೆಯಲ್ಲಿ ನಿಂತಾಗ ಒಂದು ರೀತಿಯ ಮುಜುಗರಭಾವವೂ ಅವರ ಮನಸ್ಸಿನಲ್ಲಿ ಮೂಡಿತ್ತು. ಅವರಿಗೆ ಎರಡು ತಿಂಗಳುಗಳ ಸರಳ ಶಿಕ್ಷೆ ದೊರಕಿತು. ನ್ಯಾಯಾಲಯದಾಚೆ ಕಾಯುತ್ತಿದ್ದ ದೊಡ್ಡ ಗುಂಪನ್ನು ತಪ್ಪಿಸಲು, ನ್ಯಾಯಾಲಯದಿಂದ ಅವರನ್ನು ಕಳ್ಳತನದಲ್ಲಿ ಒಂದು ಟ್ಯಾಕ್ಸಿಯಲ್ಲಿ ಸೆರೆಮನೆಗೆ ಕರೆದೊಯ್ಯಲಾಯಿತು. ಸೆರೆಮನೆಯನ್ನು ತಲುಪಿದ ಮೇಲೆ, ಅವರು ತಮ್ಮ ಕೈ ಬೆರಳುಗಳ ಗುರುತು ಕೊಡಬೇಕಾಯಿತು. ಅವರ ದೇಹತೂಕ ನೋಡಲಾಯಿತು, ಬೆತ್ತಲೆ ಮಾಡಲಾಯಿತು, ಮತ್ತು ಅತ್ಯಂತ ಕೊಳಕಾದ ಸೆರೆಮನೆಯ ಉಡುಪುಗಳನ್ನು ತೊಟ್ಟುಕೊಳ್ಳುವಂತೆ ಮಾಡಲಾಯಿತು. ಪ್ರತಿ ಎರಡು ಅಥವಾ ಮೂರು ದಿನಗಳಿಗೆ, ಹೆಚ್ಚು ಹೆಚ್ಚು ಒಡನಾಡಿಗಳು ಅವರನ್ನು ಸೇರುತ್ತಿದ್ದರು. ಹೀಗೆ ಹದಿನೈದು ದಿನಗಳಲ್ಲಿ ಖೈದಿಗಳ ಸಂಖ್ಯೆ 150ಕ್ಕೆ ಏರಿತು. 50 ಜನರಿಗಾಗಿದ್ದ ಒಂದು ಕೋಣೆಯಲ್ಲಿ ಅವರನ್ನೆಲ್ಲ ಗುದ್ದೆ ಹಾಕಲಾಯಿತು. ಕೆಲವು ಬಂಧಿತರನ್ನು ಇಡಲು ರಾತ್ರೋರಾತ್ರಿ ಟೆಂಟುಗಳನ್ನು ಹಾಕಲಾಯಿತು.

ಸೆರೆಮನೆಯ ಇನ್ಸ್‌ಪೆಕ್ಟರ್, ಗವರ್ನರ್ ಮತ್ತು ಮುಖ್ಯ ವಾರ್ಡನ್ ಪ್ರತೀ ದಿನ ನಾಲ್ಕೈದು

ಬಾರಿ ಸೆರೆಮನೆಗೆ ಭೇಟಿ ಕೊಡುತ್ತಿದ್ದರು. ಗಾಂಧಿ ಮತ್ತು ಇತರರು ಟೋಪಿಯನ್ನು ಕೈಯಲ್ಲಿ ಹಿಡಿದು ಸಾಲಾಗಿ ನಿಲ್ಲಬೇಕಾಗಿತ್ತು. ದೈಹಿಕ ಕೆಲಸವನ್ನು ಮಾಡಲು ಗಾಂಧಿ ಮುಂದೆ ಬಂದರು, ಆದರೆ ಅದಕ್ಕೆ ಅನುಮತಿ ಸಿಗಲಿಲ್ಲ.

ಸೆರೆಮನೆಯ ಆಹಾರ ಭಾರತೀಯರಿಗೆ ಸೂಕ್ತವಾಗಿರಲಿಲ್ಲ. ಬೆಳಗ್ಗೆ ಮತ್ತು ಸಂಜೆ ಅವರಿಗೆ ಮೀಲೀ ಪ್ಯಾಪ್ (ಒಂದು ರೀತಿಯ ಜೋಳದ ಗಂಜಿ) ಕೊಡುತ್ತಿದ್ದರು. ಅದಕ್ಕೆ ಸಕ್ಕರೆ ಇಲ್ಲ, ಹಾಲು ಅಥವಾ ತುಪ್ಪವಿಲ್ಲ. ಅವರಿಗ್ಯಾರಿಗೂ ಇದನ್ನು ತಿನ್ನಲಾಗಲಿಲ್ಲ. ಕೆಲವು ಸಾಯಂಕಾಲಗಳು ಕೇವಲ ಬೇಯಿಸಿದ ಹುರುಳಿ/ಅವರೆಗಳನ್ನು ಕೊಡಲಾಗುತ್ತಿತ್ತು. ಉಪ್ಪಿನ ಹೊರತಾಗಿ ಸಕ್ಕರೆಯಾಗಲೀ, ಮಸಾಲೆಯಾಗಲೀ ಇಲ್ಲ. ಯೂರೋಪಿಯನ್ ಖೈದಿಗಳಿಗೆ ಮಾತ್ರ ಮಾಂಸ, ಬ್ರೆಡ್ ಮತ್ತು ತರಕಾರಿಗಳು ಸಿಗುತ್ತಿದ್ದವು. ಇತರ ತರಕಾರಿಗಳೊಂದಿಗೆ ಬೇಯಿಸಲಾದ ಈ ತರಕಾರಿಗಳ ಸಿಪ್ಪೆಗಳನ್ನು ವರ್ಣೀಯ ಖೈದಿಗಳಿಗೆ ಬಡಿಸುತ್ತಿದ್ದರು. ಸೆರೆಮನೆಯ ಆಡಳಿತಾಧಿಕಾರಿಗಳಿಗೆ ಗಾಂಧಿ ಈ ಬಗ್ಗೆ ಒಂದು ದೂರು ಬರೆದು ಕಳುಹಿಸಿದರು. ಅದರಲ್ಲಿ 100 ಮಂದಿ ಭಾರತೀಯ ಖೈದಿಗಳ ಸಹಿಗಳೂ ಇದ್ದವು. "ಇದು ಭಾರತವಲ್ಲ. ಇದೊಂದು ಸೆರೆಮನೆ. ರುಚಿರುಚಿಯಾದ ತಿಂಡಿತಿನಿಸುಗಳಿಗೆ ಇಲ್ಲಿ ಅವಕಾಶವಿಲ್ಲ" ಎಂದು ಅವರಿಗೆ ಹೇಳಲಾಯಿತು. ಹದಿನೈದು ದಿನಗಳೊಳಗೆ, ಅಕ್ಕಿ, ಬ್ರೆಡ್, ತರಕಾರಿಗಳು ಮತ್ತು ತುಪ್ಪಗಳ ರೇಷನ್ನನ್ನು ಭಾರತೀಯರಿಗೆ ದೊರಕಿಸಿಕೊಡುವಲ್ಲಿ ಗಾಂಧಿ ಯಶಸ್ವಿಯಾದರು. ತಮ್ಮ ಅಡುಗೆ ತಾವೇ ಮಾಡಿಕೊಳ್ಳಲು ಸಹ ಅವರಿಗೆ ಅನುಮತಿ ದೊರಕಿತು. ಗಾಂಧಿ ಅಡುಗೆಯಲ್ಲೂ ಸಹಾಯ ಮಾಡುತ್ತಿದ್ದರು ಹಾಗೂ ದಿನಕ್ಕೆ ಎರಡು ಸಲ ಆಹಾರವನ್ನೂ ಹಂಚುತ್ತಿದ್ದರು. ಇನ್ನೂ ಉತ್ತಮವಾದ ಆಹಾರ ಅಥವಾ ಹೆಚ್ಚು ರೇಷನ್ನಿಗಾಗಿ ಗದ್ದಲ ಮಾಡದೆ, ಗಾಂಧಿಭಾಯಿಯ ಅನುಯಾಯಿಗಳು ಸಕ್ಕರೆಯಿಲ್ಲದ ಅರೆಬೆಂದ ಗಂಜಿಯನ್ನು ತಿಂದರು. ತಮ್ಮ ಮೂರನೆಯ ಬಾರಿಯ ಸೆರೆಮನೆಯ ಅವಧಿಯಲ್ಲಿ, ಗಾಂಧಿಗೆ ಆಹಾರದ ತೊಂದರೆಯೇ ಇರಲಿಲ್ಲ. ಅವರು ಹಣ್ಣುಗಳ ಮೇಲೆಯೇ ಜೀವಿಸಿದರು. ಅಲ್ಲದೆ, ಸಾಕಷ್ಟು ಬಾಳೆಹಣ್ಣುಗಳು, ಟೊಮ್ಯಾಟೋಗಳು ಮತ್ತು ಕಾಯಿ–ಬೀಜಗಳು ದೊರೆಯುತ್ತಿದ್ದವು. ಸೆರೆಮನೆಯ ಕೆಲವು ಶಿಸ್ತಿನ ನಿಯಮಗಳು ಅವರಿಗೆ ಹಿಡಿಸಿದವು; ಬಿಡುಗಡೆಯಾದ ಮೇಲೆ, ಅವರು ಚಹಾ ಕುಡಿಯುವುದನ್ನು ನಿಲ್ಲಿಸಿದರು ಹಾಗೂ ರಾತ್ರಿಯ ಊಟವನ್ನು ಸೂರ್ಯಾಸ್ತದ ಮುನ್ನವೇ ತೆಗೆದುಕೊಳ್ಳುವುದನ್ನು ಮುಂದುವರೆಸಿದರು.

ದಕ್ಷಿಣ ಆಫ್ರಿಕಾದಲ್ಲಿ ನಂತರದ ಎರಡು ಶಿಕ್ಷೆಗಳ ಅವಧಿಯಲ್ಲಿ ಗಾಂಧಿ ಬಹಳ ಕಷ್ಟಗಳನ್ನು ಅನುಭವಿಸಿದರು. ಅವರಿಗೆ ಕಠಿಣ ಶ್ರಮದ ಕೆಲಸವನ್ನು ಕೊಡಲಾಯಿತು. ಹತ್ತು ವರ್ಷಗಳ ಕಾಲ ಅವರು ವಕಾಲತ್ತು ನಡೆಸಿದ್ದ ನ್ಯಾಯಾಲಯದಿಂದ ಅವರ ಕೈಗಳಿಗೆ ಬೇಡಿ ಹಾಕಿ ಕರೆದೊಯ್ಯಲಾಯಿತು. ಸ್ಥಳೀಯ ಅಪರಾಧಿಯಂತೆ ಚಿಕ್ಕ ಮಿಲಿಟರಿ ಟೋಪಿ, ಅಪರಾಧಿಯ ಟಿಕೆಟ್ ಸಂಖ್ಯೆ ಮತ್ತು ದೊಡ್ಡದಾದ ಬಾಣದ ಗುರುತುಗಳಿದ್ದ ಸಡಿಲವಾದ ಒರಟಾವ ಜಾಕೆಟ್, ಅದೇ ರೀತಿಯ ಗುರುತುಗಳಿದ್ದ ಕಿರಿದಾದ ಪ್ಯಾಂಟು, ದಪ್ಪನೆಯ ಬೂದು ಬಣ್ಣದ ಉಲ್ಲನ್ ಕಾಲುಚೀಲಗಳು ಮತ್ತು ಚರ್ಮದ ಚಪ್ಪಲಿಗಳನ್ನು ಅವರು ಧರಿಸಿದ್ದರು. ಸುರಿಯುತ್ತಿದ್ದ ಜಡಿಮಳೆಯಲ್ಲಿ ಅವರು ತಲೆಯ ಮೇಲೆ ತಮ್ಮ ಹಾಸಿಗೆ ಹೊತ್ತು ಆರು ಫರ್ಲಾಂಗುಗಳ ದೂರ ನಡೆಯಬೇಕಾಯಿತು. ಅತ್ಯಂತ ನಿಕೃಷ್ಟ ವಿಧದ ನೀಗ್ರೋ ಮತ್ತು ಚೀನೀ ಖೈದಿಗಳೊಂದಿಗೆ ಅವರನ್ನು ಇರಿಸಲಾಯಿತು. ಕೆಲವು ಹುಲು ಖೈದಿಗಳು ಅವರನ್ನು ದೂಷಿಸಿದರು ಮತ್ತು ಥಳಿಸಿದರು. ಶೌಚ ವ್ಯವಸ್ಥೆಯಲ್ಲಿ ಗೋಪ್ಯತೆ ಎಂಬುದೇ ಇರಲಿಲ್ಲ. ಅವರ ಅಸಭ್ಯ ವರ್ತನೆಗಳು ಹೆದರಿಕೆ ಹುಟ್ಟಿಸಿದವು. ಅವರ ಭಾಷೆ ಬೇರೆ ಅರ್ಥವಾಗುತ್ತಿರಲಿಲ್ಲ. ಬಹಳ ಬೇಗನೆ ಗಾಂಧಿಯನ್ನು 4 x 6 ಅಡಿಯ ಒಂದು ಏಕಾಂತವಾದ ಕತ್ತಲ ಕೋಣೆಗೆ ಹಾಕಿದರು. ಅಲ್ಲಿ ತಾರಸಿಯ ಬಳಿ ಗಾಳಿಯಾಡಲೆಂದು ಒಂದು ಕಿರಿದಾದ ಕಿಟಕಿ ಇತ್ತು. ಬೀಗ ಹಾಕಿದ ಬಾಗಿಲುಗಳ ಹಿಂದೆ ನಿಂತು ಗಾಂಧಿ ತಮ್ಮ ಆಹಾರ ತೆಗೆದುಕೊಳ್ಳಬೇಕಾಗಿತ್ತು. ಪ್ರತೀದಿನಾ ವ್ಯಾಯಾಮಕ್ಕಾಗಿ ಅವರನ್ನು ಎರಡು ಬಾರಿ ಹೊರಗೆ ಕರೆದೊಯ್ಯಲಾಗುತ್ತಿತ್ತು. ಅನ್ನದ ಜೊತೆ ತುಪ್ಪವನ್ನು ಕೊಡಲಿಲ್ಲ ಎಂಬ ಕಾರಣಕ್ಕಾಗಿ ಪ್ರತಿಭಟನೆ ಸಲ್ಲಿಸಲು, ಅವರು ಹದಿನೈದು ದಿನಗಳವರೆಗೆ ಅನ್ನವನ್ನು ತಿನ್ನಲಿಲ್ಲ. ಒಂದು ದಿನಕ್ಕೆ ಒಂದು ಹೊತ್ತು ಮೀಲೀ ಪ್ಯಾಪ್ ತಿಂದು ಅವರು ಜೀವಿಸಿದರು. ಆಮೇಲಷ್ಟೆ ಅವರಿಗೆ ತುಪ್ಪ ಮತ್ತು ಬ್ರೆಡ್ ನೀಡಲಾಯಿತು. ಒಂದು ನಾರಿನ ಚಾಪೆ, ಒಂದು ಚಿಕ್ಕ ಮರದ ದಿಂಬು, ಎರಡು ರಗ್ಗುಗಳು ಮತ್ತು ಕೆಲವು ಪುಸ್ತಕಗಳನ್ನು ಅವರಿಗೆ ಕೊಡಲಾಯಿತು. ದಿನಾ ಒಂದೇ ಒಂದು ಬಕೆಟ್ ನೀರನ್ನು ಒದಗಿಸಲಾಗುತ್ತಿತ್ತು. ಒಂದು ದೊಡ್ಡ ಪರಾತದಲ್ಲಿಟ್ಟಿದ್ದ ಆ ಕೊಳಕು ಬಕೆಟ್‌ಅನ್ನು ಆ ಕೋಣೆಯ ಒಂದು ಮೂಲೆಯಲ್ಲಿಡಲಾಗಿತ್ತು. ಖೈದಿಯ ಮೇಲೆ ಒಂದು ಕಣ್ಣಿಡುವ ಸಲುವಾಗಿ ರಾತ್ರಿಯಾದ ಮೇಲೆ ಒಂದು ವಿದ್ಯುತ್ ದೀಪ ಉರಿಸಲಾಗುತ್ತಿತ್ತು. ಆದರೆ ಪುಸ್ತಕ ಓದಲಿಕ್ಕೆ ಅದು ಬಹಳ ಮಂದಬೆಳಕಿನ ದೀಪವಾಗಿತ್ತು. ಏನೂ ಮಾಡಲಾರದ ಕಾರಣ, ಸುಮ್ಮನೆ ಬದಲಾವಣೆಗೆಂದು ಕೋಣೆಯಲ್ಲೇ ಅತ್ತಿಂದಿತ್ತ ಓಡಾಡಿದರೆ, ವಾರ್ಡನ್ ಕೂಗಿಕೊಳ್ಳುತ್ತಿದ್ದ: "ಹಾಗೆ ನಡೆದಾಡಬೇಡ. ನನ್ನ ನೆಲ ಹಾಳಾಗುತ್ತದೆ." ಆ ಅಮೂಲ್ಯವಾದ ನೆಲವನ್ನು ಡಾಂಬರಿನಿಂದ ಮಾಡಲಾಗಿತ್ತು.

ಗಾಂಧಿ ಸ್ನಾನ ಮಾಡಲಿಕ್ಕಾಗಿ ಅನುಮತಿ ಕೇಳಿದಾಗ, ವಾರ್ಡನ್ ಬಟ್ಟೆಗಳನ್ನು ಕಳಚಿ ಸ್ನಾನಕ್ಕೆ ಹೋಗಲು ಹೇಳಿದ. 125 ಅಡಿಗಳ ದೂರವನ್ನು ಪೂರ್ಣ ಬೆತ್ತಲೆಯಲ್ಲಿ ನಡೆಯಲು ಗಾಂಧಿಗೆ ಆಗಲಿಲ್ಲ. ಬಚ್ಚಲುಮನೆಯ ಕರ್ಟನ್ ಮೇಲೆ ತಮ್ಮ ಬಟ್ಟೆಗಳನ್ನು ನೇತುಹಾಕಿಕೊಳ್ಳಲು ಗಾಂಧಿ ಮುಂದಿಟ್ಟ ಬೇಡಿಕೆಗೆ ಅನುಮತಿ ಸಿಕ್ಕಿತು. ಆದರೆ, ಅವರು ತಮ್ಮ ಮೈಯನ್ನು ಇನ್ನೂ ಸ್ವಚ್ಛ ಮಾಡಿಕೊಳ್ಳುವ ಮುಂಚೆಯೇ ಆದೇಶ ಬಂತು: "ಸ್ಯಾಮ್, ಹೊರಗೆ ಬಾ." ಜಾಗವನ್ನು ಖಾಲಿ ಮಾಡುವಲ್ಲಿ ಸ್ಯಾಮ್ ಚುರುಕಾಗಿಲ್ಲದೇ ಹೋಗಿದ್ದಲ್ಲಿ, ಒಬ್ಬ ನೀಗ್ರೋ ಬಂದು ಅವರನ್ನು ಹೊಡೆದುರುಳಿಸುತ್ತಿದ್ದ.

ದಿನದಲ್ಲಿ ಒಂಭತ್ತು ಗಂಟೆಗಳ ಕಾಲ ಗಾಂಧಿ ಷರಟುಗಳಿಗೆ ಜೇಬುಗಳನ್ನು ಕತ್ತರಿಸಿ ಹೊಲೆಯಲು ತಯಾರಿಸಬೇಕಾಗಿತ್ತು, ಹರಿದ ಕಂಬಳಿಗಳ ಜೂರುಗಳನ್ನು ಸೇರಿಸಿ ಹೊಲಿಯಬೇಕಾಗಿತ್ತು ಅಥವಾ ವಾರ್ನಿಷ್ ಹಾಕಿದ ಕಬ್ಬಿಣದ ಬಾಗಿಲುಗಳಿಗೆ ಹೊಳಪು ನೀಡಲು ಉಜ್ಜಬೇಕಾಗಿತ್ತು. ಮೂರು ಗಂಟೆಗಳ ಕಾಲ ಬಾಗಿಲುಗಳು ಮತ್ತು ನೆಲಗಳನ್ನು ತಿಕ್ಕಿದ ಮೇಲೂ, ಅವು ಮೊದಲಿನಂತೆಯೇ ಇದ್ದುದ್ದನ್ನು ಅವರು ನೋಡಿದರು. ಪಾಯಖಾನೆಗಳನ್ನು ಸ್ವಚ್ಛಗೊಳಿಸಬೇಕೆಂದು ಅವರಿಗೆ ಆದೇಶ ಬರುತ್ತಿತ್ತು. ಈ ಎಲ್ಲಾ ಕಷ್ಟಗಳನ್ನು ಅವರು ಒಂದು ಮುಗುಳ್ನಗುವಿನೊಂದಿಗೆ ಸಹಿಸಿಕೊಂಡರು. ಆದರೆ ತಮ್ಮ ಸಹೋದ್ಯೋಗಿಗಳನ್ನು ಕೂಡಿಕೊಂಡಾಗ, ಅವರ ದುರವಸ್ಥೆಯನ್ನು ನೋಡಿ ಗಾಂಧಿಯ ಮನ ಕರಗಿತು. ಆಯಾಸ ಕೆಲವರನ್ನು ಅಳುವಂತೆ ಮಾಡಿದರೆ, ಕೆಲವರು ಮೂರ್ಛಿತ ರಾದರು. ಅವರನ್ನು ಅವರವರ ಮನೆಗಳಿಂದ ಈ ನರಳಾಟ ಮತ್ತು ನಾಚಿಕೆಯ ಜೀವನಕ್ಕೆ ಎಳೆತಂದಿದ್ದಕ್ಕೆ ಗಾಂಧಿಯೇ ಜವಾಬ್ದಾರರಾಗಿದ್ದರು. ಅವರ ಈ ಗುಲಾಮಗಿರಿಯನ್ನು ಕೊನೆಗಾಣಿಸಲು ತನ್ನನ್ನು ತಾನೇ ತ್ಯಾಗ ಮಾಡಿಕೊಳ್ಳುವುದು ಮತ್ತು ಕಷ್ಟಾನುಭವ

ಪಡುವುದೇ ಏಕೈಕ ಪರಿಹಾರ ಎಂದು ಗಾಂಧಿ ನಂಬಿದರು. ಮನಃಶಾಂತಿಯನ್ನು ಮತ್ತೆ ಪಡೆಯಲು ಗಾಂಧಿಯವರಿಗೆ ಆ ನಂಬಿಕೆಯೇ ಸಹಾಯವಾಯಿತು.

ಬೆಳಿಗ್ಗೆ ಆರು ಗಂಟೆಯ ಹೊತ್ತಿಗೆ ಆಹ್ನಿಕ ಮತ್ತು ಶೌಚ ಕೆಲಸಗಳನ್ನು ಮುಗಿಸ ಬೇಕಾಗಿತ್ತು. ಕೆಲಸ ಏಳು ಗಂಟೆಯಿಂದ ಆರಂಭವಾಗುತ್ತಿತ್ತು. ಎಲ್ಲರೂ ಒಂಭತ್ತು ಗಂಟೆಗಳ ಕಾಲ ದುಡಿಯಬೇಕಾಗುತ್ತಿತ್ತು. ಗಾಂಧಿ ಒಂದು ಮೈಲು ದೂರ ನಡೆದು, ಆಮೇಲೆ ಶುಷ್ಕವಾಗಿದ್ದ ಗಟ್ಟಿ ನೆಲವನ್ನು ಅಗೆಯಬೇಕಾಗಿತ್ತು. ಅವರು ತಮ್ಮ ದೇಹತೂಕವನ್ನು ಕಳೆದುಕೊಂಡರು. ಅವರ ಬೆನ್ನು ನೋಯುತ್ತಿತ್ತು, ಅಂಗೈಗಳ ಮೇಲೆದ್ದ ಬೊಬ್ಬೆಗಳಿಂದ ನೀರು ಒಸರುತ್ತಿತ್ತು, ಬಹಳ ಕಷ್ಟದಿಂದ ಸನಿಕೆಯನ್ನು ಎತ್ತಲು ಸಾಧ್ಯವಾಗುತ್ತಿತ್ತು. ಸ್ವಲ್ಪಕಾಲ ವಿರಮಿಸಿದರೆ, ಕಾವಲುಗಾರ ಕೂಗುತ್ತಿದ್ದ: "ನಡಿ ನಡಿ, ಕೆಲಸಕ್ಕೆ ನಡಿ." "ನಿನ್ನ ನಡವಳಿಕೆಯನ್ನು ಸುಧಾರಿಸಿಕೊಳ್ಳದಿದ್ದರೆ, ನಾನು ಕೆಲಸ ಮಾಡುವುದನ್ನೇ ನಿಲ್ಲಿಸಿಬಿಡುತ್ತೇನೆ" ಎಂದು ಗಾಂಧಿ ಆ ಕಾವಲುಗಾರನಿಗೆ ಎಚ್ಚರಿಕೆ ನೀಡಿದರು. ಇದು ಆ ಕಾವಲುಗಾರನನ್ನು ಸ್ವಲ್ಪ ಮೃದುಗೊಳಿಸಿತು. ಒಪ್ಪಿಸಲಾದ ಕೆಲಸವನ್ನು ಮುಗಿಸಲು ಶಕ್ತಿ ಕೊಡುವ ಮೂಲಕ ತನ್ನ ಮರ್ಯಾದೆ ಕಾಪಾಡಬೇಕೆಂದು ಗಾಂಧಿ ದೇವರನ್ನು ಪ್ರಾರ್ಥಿಸುತ್ತಿದ್ದರು.

ಗಾಂಧಿ ಭಾರತದಲ್ಲಿ "ಹಿಸ್ ಮೆಜೆಸ್ಟೀಸ್ ಹೋಟೆಲ್"ನಲ್ಲಿ ತಂಗಿದಾಗ, ಅವರ ಖರ್ಚುವೆಚ್ಚಗಳನ್ನು ಸರ್ಕಾರ ನೋಡಿಕೊಳ್ಳುತ್ತಿತ್ತು. ಆದರೂ ತಮ್ಮ ನಿರ್ವಹಣೆಗಾಗಿ ಯಾವುದೇ ಹೆಚ್ಚುವರಿ ಖರ್ಚು ಮಾಡುವುದು ಅವರಿಗೆ ಇಷ್ಟವಾಗುತ್ತಿರಲಿಲ್ಲ. ಒಮ್ಮೆ ಅವರು ಸೆರೆಮನೆಯ ಸೂಪರ್‌ವೈಸರ್‌ಗೆ ಅಗತ್ಯಕ್ಕಿಂತ ಹೆಚ್ಚಿರುವ ಎಲ್ಲಾ ಪಾತ್ರೆ--ತಟ್ಟೆ ಇತ್ಯಾದಿಗಳನ್ನು ತೆಗೆದು, ಬೇರೆ ಇಡಲು ಹೇಳಿದರು. ಅವರು ಒಂದು ಕಬ್ಬಿಣದ ಮಂಚ ಮತ್ತು ಹಲವು ಪಾತ್ರೆಗಳನ್ನು ಬಳಸುತ್ತಿದ್ದರು. ಈ ಎಲ್ಲಾ ಖರ್ಚುಗಳು ಭಾರತದ ಲಕ್ಷ ಲಕ್ಷ ಮೂಕ ಮಂದಿ ತೆರುವ ತೆರಿಗೆಗಳಿಂದ ನಡೆಯುತ್ತವೆ ಎಂಬುದನ್ನಂತೂ ಅವರಿಗೆ ಎಂದಿಗೂ ಮರೆಯಲಾಗುತ್ತಿರಲಿಲ್ಲ. ಆಗಾಖಾನ್ ಅರಮನೆಯಲ್ಲಿ ತಮ್ಮನ್ನು ಕೊನೆಯ ಬಾರಿಗೆ ಬಂಧನದಲ್ಲಿರಿಸಿದ್ದನ್ನು ಉಲ್ಲೇಖಿಸುತ್ತಾ ಅವರು ಹೇಳಿದರು: "ಸುತ್ತಲೂ ದೊಡ್ಡ ದೊಡ್ಡ ಕಾಪಲುಗಾರರಿರುವ ಈ ದೊಡ್ಡ ಅರಮನೆಯಲ್ಲಿ ನನ್ನನ್ನು ಇರಿಸಿರುವುದು ಸಾರ್ವಜನಿಕ ನಿಧಿಯನ್ನು ಪೋಲು ಮಾಡಿದಂತೆ ಎಂದು ನಾನು ಪರಿಗಣಿಸುತ್ತೇನೆ. ಜನ ಹಸಿವಿನಿಂದ ಸಾಯುತ್ತಿರುವಾಗ, ಹೀಗೆ ಮಾಡುವುದು ಮಾನವೀಯತೆಗೆ ವಿರುದ್ಧವಾದ ಅಪರಾಧ."

ಭಾರತದಲ್ಲಿ ನಡೆದ ಗಾಂಧಿಯವರ ಮೊದಲ ವಿಚಾರಣೆಯ ದೃಶ್ಯ ಒಂದು ಸ್ಮರಣೀಯ ಘಟನೆಯಾಗಿತ್ತು. ಇಂಗ್ಲಿಷ್ ಸೆಷನ್ಸ್ ನ್ಯಾಯಾಧೀಶ ತಮ್ಮ ಆಸನವನ್ನು ಅಲಂಕರಿಸುವ ಮೊದಲು ಕಟಕಟೆಯಲ್ಲಿ ನಿಂತಿದ್ದ ಈ ಸ್ಥಳೀಯನಿಗೆ ಗೌರವಪೂರ್ವಕ ವಂದನೆಯಾಗಿ ತಲೆದೂಗಿದರು. ಅವರು ಗಾಂಧಿಗೆ ಅವರ ದಂಗೆ ಚಟುವಟಿಕೆಗಳಿಗಾಗಿ ಆರು ವರ್ಷಗಳ ಅವಧಿಯ ಸರಳ ಬಂಧನದ ಶಿಕ್ಷೆಯನ್ನು ವಿಧಿಸಿದರು. "ರಾಜಕೀಯದಲ್ಲಿ ನಿಮಗಿಂತ ಭಿನ್ನ ಧೋರಣೆ ಹೊಂದಿರುವವರು ಸಹ ನೀವು ಉನ್ನತ ಆದರ್ಶಗಳ, ಉದಾತ್ತ ಧ್ಯೇಯಗಳ ಸಂತಜೀವನ ನಡೆಸುವ ವ್ಯಕ್ತಿ ಎಂದೇ ನಿಮ್ಮನ್ನು ಭಾವಿಸುತ್ತಾರೆ" ಎಂದು ಆ ನ್ಯಾಯಾಧೀಶರು ಒಪ್ಪಿಕೊಂಡರು. ಗಾಂಧಿ ಹೇಳಿದರು: "ಅತ್ಯಂತ ಪ್ರೀತಿಸಲ್ಪಡುವ ಭಾರತದ ಬಹುತೇಕ ದೇಶಾಭಿಮಾನಿಗಳು ಅದೇ ಅಭಿಪ್ರಾಯದಡಿ ದೋಷಿಗಳೆನಿಸಿಕೊಂಡಿದ್ದಾರೆ ಎಂಬುದು ನನಗೆ ತಿಳಿದಿದೆ. ಅದೇ ವಿಭಾಗದಲ್ಲಿ ಆಪಾದನೆಗೊಳಗಾಗುವುದು ಸೌಭಾಗ್ಯ ಎಂದು ನಾನು ತಿಳಿಯುತ್ತೇನೆ. ನನಗೆ ಗೊತ್ತು, ನಾನು ಬೆಂಕಿಯೊಂದಿಗೆ ಆಟವಾಡುತ್ತಿದ್ದೆ. ಆದರೂ ನಾನು ಅದನ್ನೇ ಮಾಡುತ್ತೇನೆ." ಗಾಂಧಿ ನ್ಯಾಯಾಲಯವನ್ನು ಪ್ರವೇಶಿಸಿದಾಗ ಹಾಗೂ ಅಲ್ಲಿಂದ ಹೊರಹೋದಾಗ, ಇಡೀ ನ್ಯಾಯಾಲಯ ಎದ್ದುನಿಂತು ಗೌರವ ತೋರಿತು. ಟೆಲಿಗ್ರಾಮ್‌ಗಳಲ್ಲಿ 'ಪೊಲೀಸ್ ರಹಸ್ಯ ಸಂಖ್ಯೆಯಲ್ಲಿ ಅವರ ಬಗ್ಗೆ 'ಬಾಂಬೆ ಪೊಲಿಟಿಕಲ್ ನಂಬರ್ 50' (ಬಾಂಬೆ ರಾಜಕೀಯ ಸಂಖ್ಯೆ 50) ಎಂದು ಉಲ್ಲೇಖಿಸಲಾಗುತ್ತಿತ್ತು. ಬ್ಯಾರಿಸ್ಟರುಗಳ ಪಟ್ಟಿಯಿಂದ ಅವರ ಹೆಸರನ್ನು ಕಾಟು ಹೊಡೆಯಲಾಗಿತ್ತು. ಸೆರೆಮನೆಯಲ್ಲಿ, ಅವರ ಎತ್ತರ ಮತ್ತು ವಿಶೇಷ ಗುರುತಿನ ಚಿಹ್ನೆಗಳನ್ನು ಬರೆದಿಟ್ಟುಕೊಳ್ಳಲಾಗಿತ್ತು. ಒಂದು ಏಕಾಂತ ಕೋಣೆಯಲ್ಲಿ ಅವರನ್ನು ಇರಿಸಲಾಗಿತ್ತು. ಒಂದು ತುಂಡುಪಂಚೆಯನ್ನು ಬಿಟ್ಟು ಅವರೇನೂ ತೊಟ್ಟಿರಲಿಲ್ಲ, ಆದರೂ ಅವರ ತೊಡೆಸಂದುಗಳನ್ನು ಮುಟ್ಟಲಾಯಿತು, ಅವರ ಕಂಬಳಿಗಳನ್ನು ಪರೀಕ್ಷಿಸಲಾಯಿತು. ತಮ್ಮ ನೀರಿನ ಹೂಜಿಯನ್ನು ಬೂಟುಗಾಲಿನಿಂದ ಸ್ಪರ್ಶಿಸುವವರೆಗೂ ಇವು ಯಾವುದನ್ನೂ ಗಾಂಧಿ ಪ್ರತಿಭಟಿಸಲಿಲ್ಲ. ಜಿಗುಪ್ಸೆಯಿಂದ ಅವರು ಕೆಲವೊಮ್ಮೆ ತಮ್ಮನ್ನು ಕಾಣಲು ಸಂದರ್ಶಕರು ಬರುವುದನ್ನು ಅಥವಾ ಪತ್ರ ಬರೆಯುವುದನ್ನು ನಿಲ್ಲಿಸಿದರು.



ಬಂಧನದಲ್ಲಿದ್ದಾಗ ಗಾಂಧಿ ಎಂದಿಗೂ ದ್ವೇಷಪೂರಿತರಾಗಲಿಲ್ಲ ಅಥವಾ ಸಿಡುಕರಾಗಲಿಲ್ಲ. ಸೆರೆಮನೆಯಿಂದಾಚೆ ಅವರು ಪ್ರತಿಬಾರಿ ಬಂದಾಗಲೂ, ಅವರ ಮನಸ್ಸು ಮತ್ತಷ್ಟು ಶ್ರೀಮಂತವಾಗುತ್ತಿತ್ತು, ಹೆಚ್ಚು ಹೆಚ್ಚು ಸಮಚಿತ್ತತೆ ಬರುತ್ತಿತ್ತು. ಅವರ ಪ್ರಕಾರ ಸೆರೆಮನೆ ಎಂದರೆ ಒಂದು ವಿಶ್ರಾಂತಿ ಚಿಕಿತ್ಸೆ. ಯಾರೇ ಆಗಲಿ, ಇಲ್ಲಿ ತಮ್ಮ ಅಭ್ಯಾಸಗಳಲ್ಲಿ ನಿಯಮಿತವಾಗಿರುವುದನ್ನು ಕಲಿಯಬಹುದು; ಇಲ್ಲಿ ಜೊತೆಯಲ್ಲಿ ಒಳ್ಳೆಯ ಸ್ನೇಹಿತರಿಲ್ಲದ ಕೊರತೆಯನ್ನು ಒಳ್ಳೆಯ ಪುಸ್ತಕಗಳು ನೀಗಿಸುತ್ತವೆ. ಸೆರೆಮನೆಯಲ್ಲಿ ಅವರು ಹಕ್ಕಿಯಂತೆ ಹರ್ಷದಿಂದಿದ್ದರು. ಅವರಿಗೆ ಓದುವುದೆಂದರೆ ಬಹಳ ಇಷ್ಟ, ಆದರೆ ಸೆರೆಮನೆಯಿಂದಾಚೆ ಇದ್ದಾಗ ಅವರು ಅಸಂಖ್ಯಾತ ಚಟುವಟಿಕೆಗಳಲ್ಲಿ ಎಷ್ಟರಮಟ್ಟಿಗೆ ಮಗ್ನರಾಗಿರುತ್ತಿದ್ದರೆಂದರೆ, ಅವರಿಗೆ ಓದಲಿಕ್ಕೆ ಸ್ವಲ್ಪವೂ ಸಮಯವೇ ಸಿಗುತ್ತಿರಲಿಲ್ಲ. ಸೆರೆಮನೆಯಲ್ಲಿ ಅವರು

ಅಧ್ಯಯನದ ವಿಷಯದಲ್ಲಿ ಕಟ್ಟುನಿಟ್ಟಿನ ದಿನಚರಿ ಪಾಲಿಸುತ್ತಿದ್ದರು. ಅವರು ಉರ್ದು ಕಲಿತರು; ಸಂಸ್ಕೃತ, ತಮಿಳು, ಹಿಂದಿ, ಗುಜರಾತಿ ಮತ್ತು ಇಂಗ್ಲಿಷ್ ಭಾಷೆಗಳ ಪುಸ್ತಕಗಳನ್ನು ಓದುತ್ತಿದ್ದರು. ಎರಡು ವರ್ಷಗಳಲ್ಲಿ, ಧರ್ಮ, ಸಾಹಿತ್ಯ ಮತ್ತು ಸಮಾಜ ವಿಜ್ಞಾನಗಳಿಗೆ ಸಂಬಂಧಿಸಿದಂತೆ ಪ್ರಖ್ಯಾತ ಲೇಖಕರ 150 ಪುಸ್ತಕಗಳನ್ನು ಓದಿದರು. ಗೀತೆ, ಕುರಾನ್, ಬೈಬಲ್ ಮತ್ತು ಬೌದ್ಧ, ಸಿಖ್ ಮತ್ತು ಜೊರಾಷ್ಟ್ರಿಯನ್ ಮತಗಳ ಬಗ್ಗೆ ಪುಸ್ತಕಗಳನ್ನು ಓದಿದರು. ರಾಮಾಯಣ, ಮಹಾಭಾರತ, ಉಪನಿಷತ್ತುಗಳು, ಮನುಸ್ಮೃತಿ ಮತ್ತು ಪತಂಜಲಿ ಯೋಗದರ್ಶನಗಳನ್ನು ಓದಿದರು. ಗಾಂಧಿ, ತಮ್ಮ 65ನೇ ವಯಸ್ಸಿನಲ್ಲಿ, ಸಹಖೈದಿಯೊಬ್ಬರಿಂದ ಖಗೋಳವಿಜ್ಞಾನದ ಬಗ್ಗೆ ಮೊದಲ ಪಾಠಗಳನ್ನು ಕಲಿತರು. ತಾರೆಗಳ ಅಧ್ಯಯನ ಮಾಡಲು ಸೆರೆಮನೆಯ ಅಧಿಕಾರಿಗಳಿಂದ ಒಂದು ದೂರದರ್ಶಕವನ್ನು ಪಡೆಯುವಲ್ಲಿಯೂ ಅವರು ಯಶಸ್ವಿಯಾದರು.

ಸೆರೆಮನೆಯಲ್ಲಿ ಗಾಂಧಿ ನಿಯಮಿತವಾಗಿ ಪ್ರಾರ್ಥನೆ ಮಾಡುತ್ತಿದ್ದರು, ದಿನಕ್ಕೆ 4ರಿಂದ ಆರು ಗಂಟೆಗಳ ಕಾಲ ನೂಲು ತೆಗೆಯುತ್ತಿದ್ದರು ಹಾಗೂ ಬಿರುನಡಿಗೆಯಲ್ಲಿ ತೊಡಗಿ ಕೊಳ್ಳುತ್ತಿದ್ದರು. ಆಗಾಖಾನ್ ಅರಮನೆಯಲ್ಲಿ, 75ನೇ ವಯಸ್ಸಿನಲ್ಲಿ, ಕಸ್ತೂರ್‌ಬಾ ಮತ್ತು ತಮ್ಮ ಸೋದರ ಸೊಸೆಗೆ ಭೂಗೋಳ, ಜ್ಯಾಮಿತಿ, ಇತಿಹಾಸ, ಗುಜರಾತಿ ವ್ಯಾಕರಣ ಮತ್ತು ಸಾಹಿತ್ಯಗಳ ಬಗ್ಗೆ ಪಾಠ ಹೇಳಿಕೊಡುತ್ತಿದ್ದರು. ಇದಕ್ಕೂ ಮುಂಚೆ ಒಬ್ಬ ಚೀನೀ ಸಹಖೈದಿಗೆ ಅವರು ಇಂಗ್ಲಿಷ್ ಹಾಗೂ ಒಬ್ಬ ಐರಿಷ್ ಜೈಲರನಿಗೆ ಗುಜರಾತಿ ಹೇಳಿಕೊಟ್ಟಿದ್ದರು. ಸೆರೆಮನೆಯಲ್ಲಿ, ಗಾಂಧಿ, ಮಕ್ಕಳಿಗಾಗಿ ಒಂದು ಪಠ್ಯಪುಸ್ತಕವನ್ನು ಬರೆದರು ಹಾಗೂ ದಕ್ಷಿಣ ಆಫ್ರಿಕಾದಲ್ಲಿನ ಸತ್ಯಾಗ್ರಹದ ಹೋರಾಟದ ಚರಿತ್ರೆಯನ್ನೂ ಬರೆದರು. ಅವರು ಉಪನಿಷತ್ತಿನ ಮಂತ್ರಗಳನ್ನು ಹಾಗೂ ಸಂತಕವಿಗಳ ಕವನಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿದರು. ಆ ಸಂಗ್ರಹವು 'ಸಾಂಗ್ಸ್ ಫ್ರಮ್ ದಿ ಪ್ರಿಸನ್' (ಸೆರೆಮನೆಯ ಹಾಡುಗಳು) ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಅವರು ಸೆರೆಮನೆಯಿಂದ ಆಶ್ರಮವಾಸಿಗಳು, ಸಹಕೆಲಸಗಾರರು, ಸೆರೆಮನೆಯ ಅಧಿಕಾರಿಗಳು, ಗವರ್ನರುಗಳು, ವೈಸ್‌ರಾಯ್‌ಗಳು ಮತ್ತು ಬ್ರಿಟಿಷ್ ಪ್ರಧಾನ ಮಂತ್ರಿಗೆ ನೂರಾರು ಪತ್ರಗಳನ್ನು ಬರೆದರು. "ರೆಕ್ಕೆಗಳಿಲ್ಲದೆಯೇ ನೀವು ಹಾರುವುದನ್ನು ಕಲಿತರೆ, ನಿಮ್ಮ ಎಲ್ಲಾ ತೊಂದರೆಗಳೂ ಮಾಯವಾಗುತ್ತವೆ. ನನಗೆ ರೆಕ್ಕೆಗಳಿಲ್ಲ, ಆದರೆ ನಾನು ಪ್ರತೀ ದಿನ ಮಾನಸಿಕವಾಗಿ ನಿಮ್ಮಲ್ಲಿಗೆ ಹಾರಿ ಬರುತ್ತೇನೆ. ಓ..ಆ ಪುಟ್ಟ ವಿಮಲಾ ಇಲ್ಲಿದಾಳೆ. ಮತ್ತೆ, ಅವನು.. ಹರಿ.. ಅಲ್ಲಿದ್ದಾನೆ" ಮುಂತಾದ ಮನಮೋಹಕ ಚೀಟಿಗಳನ್ನು ಅವರು ಪ್ರತೀವಾರ ಆಶ್ರಮದ ಮಕ್ಕಳಿಗೆ ಕಳುಹಿಸುತ್ತಿದ್ದರು.

ಸೆರೆಮನೆಯಲ್ಲಿನ ಶಿಸ್ತಿನ ಜೀವನದ ಪ್ರಯೋಜನಗಳು ಮತ್ತು ಒಬ್ಬ ಮಾದರಿ ಖೈದಿ ಹೇಗೆ ವರ್ತಿಸಬೇಕೆಂಬುದರ ಬಗ್ಗೆ ಗಾಂಧಿ ಟಿಪ್ಪಣಿ ಬರೆದರು. ಖೈದಿಗಳಿಗೆ ಯಾವ ಕೆಲಸ ಕೊಟ್ಟರೂ ಅವರು ಅದನ್ನು ಮಾಡಬೇಕು ಹಾಗೂ ಸೆರೆಮನೆಯ ನಿಯಮಗಳನ್ನು, ಅವು ಅನೈತಿಕವಲ್ಲದಿದ್ದಲ್ಲಿ, ಪಾಲಿಸಬೇಕು ಎಂದು ಅವರು ಬಯಸಿದರು. ಅಲ್ಲದೆ, ಅಗೌರವ ಆಗದಿದ್ದಲ್ಲಿ ಅಥವಾ ಸ್ವಚ್ಛವಾಗಿಲ್ಲದ ಆಹಾರ ಕೊಡದಿದ್ದಲ್ಲಿ ಉಪವಾಸ ಸತ್ಯಾಗ್ರಹ ಮಾಡುವಂತಿರಲಿಲ್ಲ. ಅವರು ಹಾಗೂ ಅವರ ಅನುಯಾಯಿಗಳು ಎಂದಿಗೂ ಬಾಗಿ ಕುಳಿತುಕೊಳ್ಳಲಿಲ್ಲ ಅಥವಾ 'ಸರ್ಕಾರ್ ಸಲಾಮ್' ಎಂದು ಕೂಗಲಿಲ್ಲ.

ಸ್ವರಾಜ್ಯ ದೊರೆತಾಗಲೂ ಸೆರೆಮನೆಗಳ ನಿರ್ವಹಣೆ ಆಗಬೇಕೆಂಬುದನ್ನು ಗಾಂಧಿ ಒಪ್ಪಿಕೊಂಡರು. ಅವನ್ನು ತಾತ್ಕಾಲಿಕವಾಗಿ ಬುದ್ಧಿವಿಕಲ್ಪವಾಗಿರುವವರಿಗೆ ಮತ್ತು ತಪ್ಪು ದಾರಿ ಹಿಡಿದವರಿಗಾಗಿ ಸುಧಾರಣೆಯ ಶಾಲೆಗಳಾಗಿ ಹಾಗೂ ಕಾರ್ಯಾಗಾರಗಳಾಗಿ ಪರಿವರ್ತಿಸಬೇಕೆಂದು ಅವರು ಬಯಸಿದ್ದರು.

ಸೆರೆಮನೆಯಲ್ಲಿದ್ದಾಗ, ಖೈದಿಗಳು ಉತ್ಪಾದನಾ ಕೆಲಸವನ್ನು ಹೇಗೆ ಮಾಡಬಲ್ಲರು ಹಾಗೂ ಸೆರೆಮನೆಗಳನ್ನು ಸ್ವಾಧಾರವಾಗಿಸಬಲ್ಲರು ಎಂಬ ಬಗ್ಗೆ ಸಲಹೆಗಳನ್ನಿತ್ತರು. ಸೆರೆಮನೆಯ ಅಧಿಕಾರಿಗಳು ಒಬ್ಬ ಖೈದಿಯಿಂದ ಬಂದ ಇಂತಹ ಯಾವುದೇ ಯೋಜನಾ ಸಲಹೆಯನ್ನು ಅಂಗೀಕರಿಸಲಿಲ್ಲ.

ಈ ಮಾದರಿ ಖೈದಿ ಕೆಲವೊಮ್ಮೆ ಬಹಳ ಕರಾರುವಾಕ್ ಆಗಿರುತ್ತಿದ್ದರು; ಇದರಿಂದಾಗಿ ಸೆರೆಮನೆಯ ಅಧಿಕಾರಿಗಳೇ ಗೊಂದಲದಲ್ಲಿ ಬೀಳುತ್ತಿದ್ದರು. ಅವರಿಗೆ ಬ್ರೆಡ್ ತಿನ್ನಲು ಅನುಮತಿ ದೊರೆತಾಗ, ಟೋಸ್ಟ್ ಮಾಡದ ಬ್ರೆಡ್‌ಅನ್ನು ಅವರಿಗೆ ತಿನ್ನಲಾಗದ ಕಾರಣ, ಅದನ್ನು ಕತ್ತರಿಸಲು ಒಂದು ಚಾಕು ಬೇಕೆಂದರು. ತಮ್ಮ ದೈನಂದಿನ ನಡಿಗೆಗಳಿಗೆ ಹೆಚ್ಚು ಜಾಗ ಬೇಕೆಂದರು. ತಮ್ಮ ಸಹವಾಸಿಗಳನ್ನು ತಮ್ಮ ವಿಶೇಷ ಆರೈಕೆಯಲ್ಲಿರುವ ಮಕ್ಕಳಂತೆ ಕಂಡರು; ಆಸ್ತಮಾಯಿಂದ ಯಾರಾದರೂ ನರಳುತ್ತಿದ್ದರೆ ಅಥವಾ ಯಾರಿಗಾದರೂ ಪ್ರಕೃತಿ ಚಿಕಿತ್ಸೆ ಅಥವಾ ಆಯುರ್ವೇದ ಚಿಕಿತ್ಸೆಯ ಅಗತ್ಯವಿದ್ದು, ವಿಶೇಷ ಸೌಲಭ್ಯಗಳನ್ನು ಬೇಡಿದರೆ, ಅವರ ಜವಾಬ್ದಾರಿಯನ್ನು ಗಾಂಧಿ ಹೊರಬಯಸಿದ್ದರು. ದೀರ್ಘಕಾಲ ಉಪವಾಸಗಳನ್ನು ಕೈಗೊಳ್ಳುವ ಮೂಲಕ ಅವರು ಪರೋಕ್ಷವಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಜೈಲರುಗಳ ಮೇಲೆ ಒತ್ತಾಯ ಹಾಕಿದರು. ಅವರ ಪರಿಸ್ಥಿತಿ ಬಿಗಡಾಯಿಸಿದಾಗ, ಸೆರೆಮನೆಯ ಅಧಿಕಾರಿಗಳು ಅವರನ್ನು ಬಿಡುಗಡೆಗೊಳಿಸಿದರು. ಮಹಾತ್ಮರಂತಹ ವಿಶ್ವದ ಅತಿಮಾನ್ಯ ನಾಗರಿಕನ ಜೀವಕ್ಕೆ ಅಪಾಯಸಾಧ್ಯತೆ ಆಗುವುದು ಅವರಿಗೆ ಬೇಕಿರಲಿಲ್ಲ. ಅವರಿಗೆ ಅಪೆಂಡಿಸೈಟಿಸ್ ಆದಾಗ, ಅಧಿಕಾರಿಗಳು ಅತೀವ ಕಾಳಜಿ ತೋರಿಸಿ, ತಡಮಾಡದೆ ಶಸ್ತ್ರಕ್ರಿಯೆ ಮಾಡಿಸಿದರು. ಸೆರೆಮನೆಯಲ್ಲಿ ಗಾಂಧಿ ಎರಡು ಬಾರಿ ಅನಾರೋಗ್ಯಕ್ಕೊಳಗಾಗಿದ್ದರು.

ಗಾಂಧಿ ಕಡ್ಡಾಯವೆಂಬಂತೆ ಸೆರೆಮನೆಯನ್ನು ತಮ್ಮ ಬಂಧುಮಿತ್ರರ ತಂಡದೊಂದಿಗೆಯೇ ಪ್ರವೇಶಿಸುತ್ತಿದ್ದರು. ಆಗಾಖಾನ್ ಅರಮನೆಯಲ್ಲಿ ಅವರೊಂದಿಗೆ ಕಸ್ತೂರ್‌ಬಾ ಮತ್ತು ಕಾರ್ಯದರ್ಶಿ ಮಹಾದೇವ್ ದೇಸಾಯಿಯವರನ್ನೂ ಇರಿಸಿದ್ದರು. ಅವರಿಬ್ಬರೂ ಅಲ್ಲಿಯೇ ನಿಧನ ಹೊಂದಿದರು. ಸೆರೆಮನೆಯ ಆವರಣದೊಳಗೇ ಅವರ ಅಂತ್ಯಕ್ರಿಯೆಯಾಯಿತು. ಆಗ ಗಾಂಧಿ ಹೇಳಿದರು: "ಮಾಡು ಇಲ್ಲವೇ ಮಡಿ ಎಂಬ ಮಂತ್ರಕ್ಕೆ ತಕ್ಕಂತೆ ಅವರು ಬಾಳಿದರು ಹಾಗೂ ತಮ್ಮ ಜೀವಗಳನ್ನು ಸ್ವಾತಂತ್ರ್ಯದೇವಿಯ ಬಲಿಪೀಠದಲ್ಲಿ ಅರ್ಪಿಸಿದರು. ಅವರು ಅಮರರಾದರು."

ಕಾರ್ಯನೀತಿಜ್ಞ

ದಕ್ಷಿಣ ಆಫ್ರಿಕಾ ಗಾಂಧಿಯನ್ನು ಒಬ್ಬ ಮನುಷ್ಯರನ್ನಾಗಿಸಿತು. 23ರ ಎಳೆಯ ವಯಸ್ಸಿನಲ್ಲಿ ಗಾಂಧಿ ಡರ್ಬಾನ್ ತಲುಪಿದರು. ಅಲ್ಲಿಯವರೆಗೆ ಅವರು ಒಬ್ಬ ನಾಚಿಕೆ ಹಾಗೂ ಅಂಜುಕುಳಿ ಸ್ವಭಾವದ ತರುಣನಾಗಿದ್ದರು. ದಕ್ಷಿಣ ಆಫ್ರಿಕಾದ ನೆಲದ ಮೇಲೆ ಕಾಲಿಟ್ಟ ತಕ್ಷಣ ಬಿಳಿಯರು ಹೇಗೆ ಭಾರತೀಯರನ್ನು, ವರ್ಣೀಯ ಜನರನ್ನು ಹೇಗೆ ಕೀಳಾಗಿ ನೋಡುತ್ತಾರೆ ಎಂಬುದನ್ನು ಗಮನಿಸಿದರು. ಬಿಳಿಯರು ಭಾರತೀಯರನ್ನು 'ಕೂಲಿಗಳು' ಎಂದೇ ಕರೆಯುತ್ತಿದ್ದರು.

ದಕ್ಷಿಣ ಆಫ್ರಿಕಾ ತಲುಪಿದ ಮೂರನೆಯ ದಿನ, ಅವರು ಡರ್ಬಾನ್ ನ್ಯಾಯಾಲಯಕ್ಕೆ ಭೇಟಿ ನೀಡಿದರು. ಅಲ್ಲಿನ ಮ್ಯಾಜಿಸ್ಟ್ರೇಟರಿಗೆ ಗೌರವ ಸೂಚಿಸಲೋಸುಗ ತಲೆಯ ಮೇಲಿನ ಪೇಟಾವನ್ನು ತೆಗೆಯಬೇಕೆಂದು ಗಾಂಧಿಗೆ ಆದೇಶಿಸಲಾಯಿತು. ಅವರಿಗೆ ಅವಮಾನ ವಾದಂತಾಯಿತು. ಪೇಟಾ ತೆಗೆಯಲು ನಿರಾಕರಿಸಿ, ಅವರು ನ್ಯಾಯಾಲಯದಿಂದಾಚೆ ನಡೆದರು.

ಒಂದು ವಾರದ ಬಳಿಕ, ಅವರಿಗೆ ಮತ್ತೊಂದು ನಗರಕ್ಕೆ ರೈಲಿನಲ್ಲಿ ಹೋಗಬೇಕಾಯಿತು. ಮೊದಲನೆಯ ದರ್ಜೆಯ ಟಿಕೆಟ್ ಖರೀದಿಸಿ, ಮೊದಲನೆಯ ದರ್ಜೆಯ ಬೋಗಿಯಲ್ಲಿ ಅವರು ಕುಳಿತರು. ಮುಂದಿನ ನಿಲ್ದಾಣದಲ್ಲಿ, ಟಿಕೆಟ್ ಪರೀಕ್ಷಕನೊಬ್ಬನಿಂದ ಮೂರನೇ ದರ್ಜೆಯ ಬೋಗಿಯಲ್ಲಿ ಕುಳಿತುಕೊಳ್ಳಬೇಕೆಂಬ ಆದೇಶ ಬಂದಿತು. ಮೊದಲನೆಯ ದರ್ಜೆಯ ಬೋಗಿಯಲ್ಲಿಯೇ ತಮಗೆ ಪ್ರಯಾಣ ಮಾಡುವ ಹಕ್ಕಿದೆ ಎಂದು ಅವರು ನಿರೂಪಿಸಲು ಪ್ರಯತ್ನಿಸುತ್ತಿದ್ದಾಗ, ಅವರನ್ನು ರೈಲಿನಿಂದ ಬಲವಂತವಾಗಿ ಹೊರಗೆಳೆದು ಹಾಕಲಾಯಿತು. ಈ ಅಪಮಾನದಿಂದ ಅವರು ಬಹಳವಾಗಿ ನಡುಗಿಹೋದರು. ಕತ್ತಲು ಮುಸುಕಿದ್ದ ಕಾಯುವ ಕೋಣೆಯಲ್ಲಿ ಒಂಟಿಯಾಗಿ ಕುಳಿತ ಅವರು ಆಲೋಚನೆಗಳಲ್ಲೇ ಕಳೆದುಹೋದರು. ಅವರೀಗ ಏನು ಮಾಡಬೇಕು? ಭಾರತೀಯರನ್ನು ಕೆಟ್ಟರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದ ಈ ದೇಶವನ್ನು ಬಿಟ್ಟು ಹೋಗಬೇಕೆ ಅಥವಾ ತಮ್ಮ ಹಕ್ಕುಗಳಿಗಾಗಿ ಹೋರಾಡಬೇಕೆ? ಅವರ ದೇಶದ ಗೌರವಕ್ಕೆ ಚ್ಯುತಿ ಒದಗಿತ್ತು. ಅಲ್ಲಿಯೇ ಉಳಿಯಲು ಅವರು ತೀರ್ಮಾನಿಸಿದರು. ಅಂದಿನ ರಾತ್ರಿ ಅವರ ಮುಂದಿನ ಮಾರ್ಗವನ್ನು ರೂಪಿಸುವ ಭವಿಷ್ಯಸೂಚಕ ರಾತ್ರಿಯಾಗಿತ್ತು.

ಗಾಂಧಿ ತಮ್ಮ ಮುಂದಿನ ಪ್ರಯಾಣವನ್ನು ಮಜಲು ಗಾಡಿಯಲ್ಲಿ ಮಾಡಬೇಕಾಯಿತು. ಗಾಡಿಯೊಳಗೆ ಕೂರಲು ಅವರಿಗೆ ಅನುಮತಿಯಿರಲಿಲ್ಲ. ಗಾಡಿ ಹೊಡೆಯುವವನ ಪಕ್ಕದಲ್ಲಿಯೇ ಅವರು ಕುಳಿತರು. ಸ್ವಲ್ಪ ಸಮಯದಲ್ಲಿಯೇ ಆ ಆಸನ ಬಿಟ್ಟುಕೊಟ್ಟು ಮೆಟ್ಟುಹಲಗೆಯ (ಫುಟ್‌ಬೋರ್ಡ್) ಮೇಲೆ ಹಾಸಿದ್ದ ಗೋಣಿಚೀಲದ ಮೇಲೆ ಕೂರಬೇಕೆಂದು ಆದೇಶಿಸಲಾಯಿತು. ತಮ್ಮ ಆಸನದಿಂದ ಮೇಲೇಳಲು ಗಾಂಧಿ ಒಪ್ಪದಿದ್ದಾಗ, ಅವರನ್ನು ನಿರ್ದಯತೆಯಿಂದ ಹೊಡೆಯಲಾಯಿತು. ಮುಂದಿನ ಪಟ್ಟಣವನ್ನು ತಲುಪಿದಾಗ, ಹೋಟೆಲೊಂದರಲ್ಲಿ ಉಳಿದುಕೊಳ್ಳಲು ಅವರು ಕೋಣೆ ಕೇಳಿದರು. ಅಲ್ಲಿಯೂ ಸಿಕ್ಕಿದ್ದು ನಿರಾಕರಣೆಯೇ. ತಮ್ಮ ಬಗ್ಗೆ ಅನುಕಂಪ ತೋರಿದ ಒಬ್ಬ ಭಾರತೀಯ ಮಿತ್ರನ ಅಂಗಡಿಯಲ್ಲಿ ಅವರು ಅಂದು ತಂಗಿದರು. ಆದರೆ ಈ ರೀತಿ ಕೆಟ್ಟದಾಗಿ ನಡೆಸಿಕೊಳ್ಳುವುದು ವಿಶೇಷವಾಗಿ ಗಮನಿಸಬೇಕಾದ ಅಂಶ ಎಂದು ಆ ಮಿತ್ರರಿಗೇನೂ ಅನ್ನಿಸಲಿಲ್ಲ. ಏಕೆಂದರೆ, ಆ ದೇಶದಲ್ಲಿ ದಿನನಿತ್ಯ ಅಂತಹ ಒಂದಲ್ಲ ಒಂದು ಘಟನೆ ನಡೆಯುತ್ತಲೇ ಇತ್ತು. ಅಲ್ಲಿನ ಭಾರತೀಯರಿಗೆ ಅದೆಲ್ಲಾ ಅಭ್ಯಾಸವಾಗಿಬಿಟ್ಟಿತ್ತು. ಅವರೆಲ್ಲ ದಕ್ಷಿಣ ಆಫ್ರಿಕಾಕ್ಕೆ ಹಣ ಗಳಿಸಲು ಬಂದಿದ್ದರು; ತಮ್ಮ ಆತ್ಮಗೌರವವನ್ನು ಬಲಿಗೊಟ್ಟು ಅವರು ಅದನ್ನು ಗಳಿಸುತ್ತಲೂ ಇದ್ದರು. ಅವರ ಗುಲಾಮೀ ಮನೋಭಾವವನ್ನು ಕಂಡು ಗಾಂಧಿ ದಂಗಾದರು. ಅವರು ಸಮಾಚಾರಪತ್ರಿಕೆ, ರೈಲು ಇಲಾಖೆ, ಮತ್ತು ಗಾಡಿ ಸೇವೆಗಳ ಅಧಿಕಾರಿಗಳಿಗೆ ದೂರು ಬರೆದು ಕಳುಹಿಸಿದರು.

ಸ್ವಲ್ಪ ಕಾಲದಲ್ಲಿಯೇ, ಭಾರತೀಯರಿಗೆ ಫುಟ್‌ಪಾತ್ ಮೇಲೆ ನಡೆಯುವ ಅವಕಾಶವಿಲ್ಲ, ರಾತ್ರಿ 9 ಗಂಟೆಯ ನಂತರ ಅವರು ಹೊರಗೆ ಓಡಾಡುವ ಹಾಗಿಲ್ಲ ಅಥವಾ ಟ್ರಾಮ್ ಕಾರುಗಳಲ್ಲಿ ಮುಂದಿನ ಆಸನಗಳಲ್ಲಿ ಕೂರುವಂತಿಲ್ಲ ಎಂಬುದನ್ನು ಸಹ ಅವರು ಅರಿತುಕೊಂಡರು. ಭಾರತೀಯರ ವಸತಿಗಾಗಿಯೇ ನಿರ್ದಿಷ್ಟ 'ಕೂಲಿ' ಪ್ರದೇಶಗಳಿದ್ದವು. ಗಾಂಧಿಯವರನ್ನೇ ಒಮ್ಮೆ ಒಬ್ಬ ಸೆಂಟ್ರಿ ಫುಟ್‌ಪಾತ್‌ನಿಂದ ಒದ್ದು ತಳ್ಳಿದ. ಅವರನ್ನು 'ಕೂಲಿ ಬ್ಯಾರಿಸ್ಟರ್' ಎಂದು ಕರೆದ. ಗಾಂಧಿಯ ಕೆಲವು ಬಿಳಿಯ ಸ್ನೇಹಿತರು ಅವರಿಗೆ ಕೆಲವು ವಿಶೇಷ ಸೌಲಭ್ಯಗಳನ್ನು ದೊರಕಿಸಿಕೊಡಬೇಕೆಂದಿದ್ದರು, ಆದರೆ ಗಾಂಧಿ ಅಂತಹ ಪ್ರಯೋಜನ ಪಡೆಯಲು ನಯವಾಗಿ ನಿರಾಕರಿಸಿದರು. ಹಲವು ವೈಯಕ್ತಿಕ ಪ್ರಯೋಜನಗಳನ್ನು ಪಡೆಯುವ ಇಚ್ಛೆ ಅವರಿಗಿರಲಿಲ್ಲ; ವರ್ಣೀಯ ನಿರ್ಬಂಧಗಳನ್ನು ತೊಲಗಿಸಬೇಕೆಂಬುದೇ ಅವರಿಗಿದ್ದ ಇಚ್ಛೆ. ಅವರು ನಾಚಿಕೆಯಿಂದ ಚಡಪಡಿಸಲಿಲ್ಲ ಅಥವಾ ಕೋಪದಲ್ಲಿ ತಪ್ಪಿತಸ್ಥರನ್ನು ಶಿಕ್ಷಿಸಬೇಕೆಂದೂ ಪ್ರಯತ್ನಿಸಲಿಲ್ಲ. ಅಲ್ಲಿ ವಾಸಿಸುತ್ತಿದ್ದ ಪ್ರತಿಯೊಬ್ಬ ಭಾರತೀಯನೂ ಸಹಿಸಿಕೊಳ್ಳಬೇಕಾಗಿದ್ದ ಅನಾನುಕೂಲಗಳ ಬಗ್ಗೆ ಮಾಹಿತಿಯನ್ನು ಅವರು ಸಂಗ್ರಹಿಸಿದರು. ಒಂದು ವಾರದಲ್ಲಿ, ಅವರು ಒಂದು ಸಾರ್ವಜನಿಕ ಸಭೆಯನ್ನು ಕರೆದು, ತಮ್ಮ ಜೀವನಶೈಲಿಯನ್ನು ಬದಲಿಸಿಕೊಳ್ಳಬೇಕೆಂದು ಅಲ್ಲಿನ ಭಾರತೀಯರಿಗೆ ಹೇಳಿದರು. ಅವರು ಪ್ರಾಮಾಣಿಕವಾಗಿರಬೇಕು, ಸ್ವಚ್ಛತೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು ಮತ್ತು ಜಾತಿ, ಜನಾಂಗ, ಪ್ರಾಂತ್ಯಗಳ ಭಿನ್ನತೆಗಳನ್ನು ಮರೆಯಬೇಕೆಂದು ಹೇಳಿದರು. ಬಿಳಿಯರನ್ನು ನಿಂದಿಸುವಂತಹ ಒಂದೇ ಒಂದು ಪದವೂ ಅವರಿಂದ ಬರಲಿಲ್ಲ. ತಮ್ಮ ನಡವಳಿಕೆ ಸರಿಯಾಗಿದ್ದಲ್ಲಿ ಮಾತ್ರ, ಮಾನವೀಯ ಹಕ್ಕುಗಳಿಗಾಗಿ ಒತ್ತಾಯ ಮಾಡಬಹುದು ಎಂಬುದನ್ನು ತಮ್ಮ ದೇಶವಾಸಿಗಳು ಅರ್ಥ ಮಾಡಿಕೊಳ್ಳಬೇಕೆಂದು ಅವರು ಬಯಸಿದ್ದರು. ಅವರೆಲ್ಲರೊಂದಿಗೆ ಗಾಂಧಿ ಸದಾ ಸಂಪರ್ಕವಿರಿಸಿಕೊಂಡಿದ್ದರು. ಅವರ ಕಥೆ-ವ್ಯಥೆಗಳಿಗೆ ತಾಳ್ಮೆಯಿಂದ ಕಿವಿಗೊಡುತ್ತಿದ್ದರು.

ಒಂದು ವರ್ಷದ ನಂತರ, ಮತದಾನ ಮಾಡಲು ಭಾರತೀಯರಿಗಿದ್ದ ಒಂದೇ ಒಂದು ಸಣ್ಣ ಹಕ್ಕನ್ನು ಕೂಡ ರದ್ದುಗೊಳಿಸಬೇಕೆಂಬ ಒಂದು ಮಸೂದೆಯನ್ನು ಮಂಡಿಸಲಾಯಿತು. ಅದನ್ನು ಪ್ರತಿಭಟಿಸುವಂತೆ ಗಾಂಧಿ ಸಲಹೆ ನೀಡಿದರು. ಸ್ವಯಂಸೇವಕರನ್ನು ಸೇರಿಸಿಕೊಂಡರು. ಕ್ರಿಶ್ಚಿಯನ್ ಯುವಕರು, ಮುಸಲ್ಮಾನ ಮತ್ತು ಪಾರ್ಸಿ ವರ್ತಕರು ಮತ್ತು ಹಿಂದು ಗುಮಾಸ್ತರನ್ನು ಎಲ್ಲರ ಸಾಮಾನ್ಯ ಕ್ಷೇಮಾಭಿವೃದ್ಧಿಗಾಗಿ ಕೆಲಸ ಮಾಡುವಂತೆ ಮಾಡಿದರು. ಅವರ ನೇತೃತ್ವದಲ್ಲಿ, ಹಲವರು ಗಾಂಧಿ ಬರೆದ ಪ್ರತಿಭಟನಾ ಪತ್ರದ ನಕಲುಪ್ರತಿಗಳನ್ನು ತಯಾರಿಸಿದರು, ಕೆಲವರು ದೇಣಿಗೆಹಣ ಕೊಟ್ಟರು. ಇನ್ನೂ ಕೆಲವರು ಪಟ್ಟಣದಿಂದ ದೂರ ವಾಸಿಸುತ್ತಿದ್ದ ನೂರಾರು ಮಂದಿಗೆ ಜಾಗೃತಿ ಮೂಡಿಸುವಂಥ ಈ ಸಂದೇಶವನ್ನು ತಲುಪಿಸಿದರು. ಒಂದು ತಿಂಗಳೊಳಗೆ, ನಿಧಿಗಳನ್ನು ಕೂಡಿಸಲಾಯಿತು.

ಪ್ರತಿಭಟನಾ ಪತ್ರದಲ್ಲಿ 10,000 ಸಹಿಗಳನ್ನು ಸಂಗ್ರಹಿಸಲಾಯಿತು. ಪ್ರತಿಭಟನಾ ಪತ್ರದ ಮುದ್ರಿತ ಪ್ರತಿಗಳನ್ನು ಗವರ್ನರ್, ನೇಟಾಲ್‌ನ ಪ್ರಧಾನ ಸಚಿವರು, ಭಾರತದ ವೈಸ್‌ರಾಯ್, ರಾಣಿ ವಿಕ್ಟೋರಿಯಾ ಮತ್ತು ನೇಟಾಲ್, ಭಾರತ ಹಾಗೂ ಇಂಗ್ಲೆಂಡಿನ ಸಮಾಚಾರಪತ್ರಿಕೆಗಳಿಗೆ ಕಳುಹಿಸಲಾದವು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಮೇಲಾಗುತ್ತಿದ್ದ ಅನ್ಯಾಯಗಳಿಗೆ ವ್ಯಾಪಕವಾಗಿ ಪ್ರಚಾರ ಕೊಡಲಾಯಿತು. ಆದರೆ ಕೊನೆಗೂ ಮಸೂದೆಯನ್ನು ಅನುಮೋದಿಸಲಾಯಿತು. ಭಾರತೀಯರಿಗೆ ಯಾವ ಹಕ್ಕುಗಳೂ ಸಿಗಲಿಲ್ಲ. ಆದರೆ ಅವರು ತಮ್ಮ ಜಡತೆ ಹಾಗೂ ಹೇಡಿತನವನ್ನು ತೊರೆಯುವುದನ್ನು ಕಲಿತರು. ತರವಲ್ಲದ ಈ ಕಾನೂನನ್ನು ಅನುಮೋದಿಸಿದ ಸರ್ಕಾರದ ಅಧಿಕಾರಕ್ಕೆ ಸವಾಲು ಹಾಕುವುದನ್ನು ಕಲಿತರು. ಗಾಂಧಿ ಶೀಘ್ರದಲ್ಲೇ ನೇಟಾಲ್ ಇಂಡಿಯನ್ ಕಾಂಗ್ರೆಸ್‌ಅನ್ನು ಸ್ಥಾಪಿಸಿದರು; ಅದರ ಕಾರ್ಯ ನಿರ್ವಹಣಾ ನಿಯಮಗಳನ್ನು ರೂಪಿಸಿದರು ಮತ್ತು ಸದಸ್ಯರಿಂದ ತಾವೇ ಸ್ವತಃ ದೇಣಿಗೆಗಳನ್ನು ಸಂಗ್ರಹಿಸಿದರು.

ದಕ್ಷಿಣ ಆಫ್ರಿಕಾದಲ್ಲಿ ವಾಸವಿದ್ದ 20 ವರ್ಷಗಳ ಅವಧಿಯಲ್ಲಿ, ಇಂತಹ ಅನೇಕ ನಿಯಮಬಾಹಿರ ಕಾಯಿದೆಗಳನ್ನು ಪ್ರತಿಭಟಿಸುವಲ್ಲಿ ಗಾಂಧಿ ತಮ್ಮ ಜನರನ್ನು ಮುನ್ನಡೆಸಿದರು. ಒಂದು ಕಾಯಿದೆಯು ಪ್ರತಿಯೊಬ್ಬ ವಯಸ್ಕ ಭಾರತೀಯನಿಂದ 40 ರೂಪಾಯಿಗಳ ವಾರ್ಷಿಕ ತೆರಿಗೆಯನ್ನು ವಸೂಲು ಮಾಡುತ್ತಿತ್ತು; ಮತ್ತೊಂದು ಕಾಯಿದೆಯು ಭಾರತದಲ್ಲಿ ನಡೆದ ಮದುವೆಗಳನ್ನು ಕಾನೂನುಸಮ್ಮತ ಎಂದು ಪರಿಗಣಿಸಲು ನಿರಾಕರಿಸಿತು. ಮೂರನೆಯದು, ಪ್ರತಿಯೊಬ್ಬ ಭಾರತೀಯನೂ 10 ಕೈಬೆರಳ ಗುರುತುಗಳಿರುವ ಪ್ರಮಾಣಪತ್ರವನ್ನು ಸದಾ ತನ್ನೊಂದಿಗೆ ಇಟ್ಟುಕೊಂಡಿರಬೇಕೆಂದು ಒತ್ತಾಯಿಸಿತು. ಆದರೆ, ಕೈಬೆರಳ ಗುರುತುಗಳನ್ನು ತೆಗೆದುಕೊಳ್ಳುವುದು ಸಾಮಾನ್ಯವಾಗಿ ಅಪರಾಧಿಗಳದ್ದು. ಇದಕ್ಕೆ ಪ್ರತಿಭಟನೆಯಾಗಿ, ಗಾಂಧಿ, ಯಾರ ಅಧಿಕಾರಕ್ಕೆ ಮಾನ್ಯತೆಯಿತ್ತೋ, ಅಂತಹ ಬಹಳಷ್ಟು ಮಂದಿಗೆ ನೂರಾರು ಪತ್ರಗಳು, ಮನವಿಗಳು ಮತ್ತು ಅರ್ಜಿಗಳನ್ನು ಬರೆದು ಕಳುಹಿಸಿದರು. ಹಾಗೇ, ಸರ್ಕಾರದ ಪ್ರಮುಖ ಅಧಿಕಾರಿಗಳನ್ನು ಭೇಟಿ ಮಾಡಿದರು. ಸುದ್ದಿಪತ್ರಿಕೆಗಳು ಮತ್ತು ವೇದಿಕೆಗಳ ಮೂಲಕ ನಡೆದ ಚಳುವಳಿ ಯಾವಾಗ ವಿಫಲವಾಯಿತೋ, ಗಾಂಧಿ ದುಷ್ಟನಿಗ್ರಹಕ್ಕೆ ಹೊಸ ಅಸ್ತ್ರವಾಗಿ ಅಹಿಂಸಾ ಸತ್ಯಾಗ್ರಹವನ್ನು ರೂಪಿಸಿದರು.

ಈಗ ಗಾಂಧಿ ಕೈಬೆರಳುಗಳ ನೋಂದಣಿಯನ್ನು ನಿಷೇಧಿಸುವಂತೆ ಭಾರತೀಯರಿಗೆ ಹೇಳಿದರು. ಸೆರೆಮನೆಗೆ ಹೋಗಲು ಒಂದು ದೀರ್ಘವಾದ ಅಹಿಂಸಾತ್ಮಕ ಹೋರಾಟಕ್ಕೆ ಸಿದ್ಧರಾಗಬೇಕು; ಅಗತ್ಯ ಬಂದಲ್ಲಿ, ಸಾಯಲು ಸಹ ಸಿದ್ಧರಿರಬೇಕು, ಆದರೆ ತರವಲ್ಲದ ಕಾನೂನನ್ನು ಒಪ್ಪಿಕೊಳ್ಳಬಾರದು ಎಂದು ಅವರು ಹೇಳಿದರು. "ಸಾವಿನ ಬಗ್ಗೆ ನಿಮಗಿರುವ ಭಯವನ್ನು ನೀವು ತ್ಯಜಿಸಬೇಕೆಂದು ನಾನು ಬಯಸುತ್ತೇನೆ. ಸ್ವಇಚ್ಛೆಯಿಂದ ಸಹಿಸುವುದೇ ಅನ್ಯಾಯಗಳನ್ನು ನಿರ್ಮೂಲಗೊಳಿಸಲು ಇರುವ ಅತಿಶೀಘ್ರ ಹಾಗೂ ಅತ್ಯುತ್ತಮ ಪರಿಹಾರ" ಎಂಬುದೇ ಅವರ ಘೋಷಣೆಯಾಗಿತ್ತು. ಗಾಂಧಿಯ ಸಲಹೆಗಳಂತೆ ಅವರ ಯೋಜನೆಗಳನ್ನು ಅರ್ಥಮಾಡಿಕೊಂಡು, ಅವನ್ನು ಅನುಸರಿಸುವುದರಿಂದ ಜನ ತಮ್ಮ ಗುರಿಗಳನ್ನು ತಲುಪುವುದು ಸಾಧ್ಯವೇ ಹೊರತು ಸುಮ್ಮನೆ ಗಾಂಧಿಯನ್ನು ಅವಲಂಬಿಸಿದರೆ ಆಗದು ಎಂಬ ಎಚ್ಚರಿಕೆಯನ್ನೂ ಅವರು ನೀಡಿದರು. ಅವರ ಸೂಚನೆಗಳನ್ನು ಜನಕ್ಕೆ ಹಿಂದಿ, ಗುಜರಾತಿ, ತಮಿಳು ಮತ್ತು ತೆಲುಗುಗಳಲ್ಲಿ ವಿವರಿಸಲಾಯಿತು. ಈ ಹೋರಾಟವನ್ನು ಪರಿಪೂರ್ಣವಾಗಿ ಅಹಿಂಸೆಯಿಂದಲೇ ನಡೆಸುವುದಾಗಿ ಅವರ ಸೇನೆ ಶಪಥ ತೊಟ್ಟಿತು. ಬೀದಿಗಳಲ್ಲಿನ ಅನಕ್ಷರಸ್ಥ ಜನ, ಕಲಾಕಾರರು, ಬೀದಿವ್ಯಾಪಾರದವರು, ಗಣಿಕಾರ್ಮಿಕರು, ವರ್ತಕರು ಮತ್ತು ಮಹಿಳೆಯರು ಅವರ ಸೈನ್ಯವನ್ನು ಸೇರಿಕೊಂಡರು. ಶಸ್ತ್ರರಹಿತ, ಶಾಂತಿಯುತ ಮತ್ತು ಶಿಸ್ತುಬದ್ಧವಾದ 5000 ಮಂದಿಯ ಸೇನೆಯನ್ನು ಗಾಂಧಿ ನಡೆಯುತ್ತಾ ಮುನ್ನಡೆಸಿದರು. ತಮ್ಮ ತಂಡದ ಜೊತೆಜೊತೆಯೇ ಅವರು ನಡೆದರು, ಆಕಾಶದ ಕೆಳಗೆ ಅವರೊಟ್ಟಿಗೇ ಮಲಗಿದರು. ಎಲ್ಲರೊಂದಿಗೂ ನೀರುನೀರಾಗಿದ್ದ ದಾಲ್ ಅಥವಾ ಅರೆಬೆಂದ ಅನ್ನವನ್ನು ಹಂಚಿಕೊಂಡರು. ಕಾಯಿಲೆ ಬಿದ್ದವರ ಆರೈಕೆ ಮಾಡಿದರು, ನಡೆಯಲಾಗದೆ ಹಿಂದೆಬಿದ್ದವರನ್ನು ಹುರಿದುಂಬಿಸಿದರು, ಅವರೆಲ್ಲರಿಗೂ ಅಡುಗೆ ಮಾಡಿ ಬಡಿಸಿದರು. ಅವರ ದೈಹಿಕ ಶಕ್ತಿಗೂ, ಮಾನಸಿಕ ಸ್ಥೈರ್ಯಕ್ಕೂ ಹೊಂದಾಣಿಕೆಯಿತ್ತು. ಸುಮಾರು 2,500 ಮಂದಿಗೆ ಕಠಿಣ ಶ್ರಮದ ಶಿಕ್ಷೆ ದೊರಕಿತು, 1000 ಮಂದಿ ನಿಜಕ್ಕೂ ನಾಶವಾಗಿಹೋದರು, ಕೆಲವರು ಸತ್ತೂ ಹೋದರು. ವೈಭವದ ಜೀವನಕ್ಕೆ ಹೊಂದಿಕೊಂಡಿದ್ದ ವರ್ತಕರು ತಮ್ಮ ಮುಖಂಡನೊಂದಿಗೆ ಸೆರೆಮನೆಯಲ್ಲಿ ಕಲ್ಲು ಒಡೆದರು ಅಥವಾ ಜಾಡಮಾಲಿಯ ಕೆಲಸ ಮಾಡಿದರು. ಕಸ್ತೂರ್‌ಬಾ ಸಹ ಸತ್ಯಾಗ್ರಹವನ್ನು ಸೇರಿಕೊಂಡರು. ಅವರನ್ನೂ ಸೆರೆಮನೆಗೆ ಹಾಕಲಾಯಿತು. ಇಂಗ್ಲೆಂಡಿನಲ್ಲಿ, ಗಾಂಧಿಯ ಚಳುವಳಿಗೆ ಅನುಕಂಪ ದಕ್ಕಿತು. ಭಾರತದಲ್ಲಿ, ಕಾಂಗ್ರೆಸ್ ಅಧಿವೇಶನಗಳಲ್ಲಿ, ದಕ್ಷಿಣ ಆಫ್ರಿಕಾದ ಸಮಸ್ಯೆಗಳನ್ನು ಚರ್ಚಿಸಲಾಯಿತು. "ಹಿಂದುಗಳು ಮತ್ತು ಮುಸಲ್ಮಾನರು ಭಾರತದ ಸೇವೆಗಾಗಿ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುವುದರಿಂದ ಏನನ್ನು ಸಾಧಿಸಬಹುದೆಂಬ ಉದಾಹರಣೆಯನ್ನು ದಕ್ಷಿಣ ಆಫ್ರಿಕಾದ ಇತ್ತೀಚಿನ ಸುದ್ದಿಯ ಮೂಲಕ ಒದಗಿಸಲಾಗಿದೆ. ಮಿಸ್ಟರ್ ಗಾಂಧಿಯವರ ಅದ್ಭುತ ನಿರ್ವಹಣಾ ಚಾತುರ್ಯದಲ್ಲಿ ಭಾರತೀಯರು ತೆಗೆದುಕೊಂಡ ದೃಢನಿರ್ಧಾರಕ್ಕೆ ಧನ್ಯವಾದಗಳು" ಎಂದು ಮುಂದೆ ಕಾಂಗ್ರೆಸ್‌ನ ಅಧ್ಯಕ್ಷರಾದ ಸರ್ ವೆಡ್ಡರ್‌ಬರ್ನ್ ಹೇಳಿದರು. ತಮ್ಮ ದಂಡಿನ ನಡಿಗೆಯನ್ನು ಮುನ್ನಡೆಸಿದಾಗ, ಗಾಂಧಿಗೆ 3,200 ರೂಪಾಯಿಗಳ ದಿನನಿತ್ಯದ ಖರ್ಚನ್ನು ಹೊಂದಿಸಲು ಹಣದ ಅವಶ್ಯಕತೆಯಿತ್ತು. ಭಾರತದಲ್ಲಿ ನಿಧಿಗಳಿಗಾಗಿ ಮನವಿಯನ್ನು ಮಾಡಲಾಯಿತು. ಮಹಿಳೆಯರು ತಮ್ಮ ಮೈಮೇಲಿಂದ ಚಿನ್ನದ ಬಳೆಗಳು ಮತ್ತು ರಿಂಗುಗಳನ್ನು ತೆಗೆದು ಕೊಟ್ಟರು; ರಾಜಕುಮಾರರು ಮತ್ತು ವರ್ತಕರು ಸಾವಿರಾರು ರೂಪಾಯಿಗಳನ್ನು ಕೊಟ್ಟರು. ಠಾಕೂರರು ತಾವು ಸಂಗ್ರಹಿಸಿದ ದೇಣಿಗೆಗಳನ್ನು ಕಳುಹಿಸಿದರು. ದೀರ್ಘಕಾಲ ನಡೆದ ಈ ಹೋರಾಟ ಕೊನೆಗೂ ಭಾರತೀಯರ ಪರವಾಗಿಯೇ, ಒಂದು ಸಂಧಾನದಲ್ಲಿ ಮುಕ್ತಾಯವಾಯಿತು. ಆತ್ಮಗೌರವಕ್ಕೆ ಚ್ಯುತಿ ಇಲ್ಲದಿದ್ದ ಪಕ್ಷದಲ್ಲಿ, ಗಾಂಧಿ ಸಂಧಾನಕ್ಕೆ ಯಾವತ್ತೂ ಸಿದ್ಧವಾಗಿಯೇ ಇದ್ದರು.

ಭಾರತದಲ್ಲಿ ಮುಖಂಡರು ಬಹಳಷ್ಟು ಮಂದಿಯೇ ಇದ್ದರು. ಆದರೂ ಗಾಂಧಿ ಭಾರತಕ್ಕೆ ಹಿಂತಿರುಗಿದ ಮೇಲೆ ಪೀಡಿತ ಜನ, ದುರ್ಗತಿಗೀಡಾಗಿದ್ದ ರೈತರು ಮತ್ತು ಶ್ರಮಜೀವಿಗಳು ಗಾಂಧಿಯ ಸಹಾಯವನ್ನು ಬಯಸಿಬಂದರು. ಗಾಂಧಿಯ ಪ್ರಯತ್ನ ಗಳಿಂದಾಗಿಯೇ ಚಂಪಾರಣ್‌ನಲ್ಲಿಯ ಶತಮಾನದಷ್ಟು ಹಳೆಯದಾದ ಬಲವಂತದ ನೀಲಿಬೆಳೆಯ ಕೃಷಿ ರದ್ದಾಯಿತು; ಕರಾರುಬದ್ಧ ದುಡಿಮೆಯ ವ್ಯವಸ್ಥೆ ರದ್ದಾಯಿತು. ಜನ, ಸ್ಥಳೀಯವಾದ ನಿರ್ದಿಷ್ಟ ಕುಂದುಕೊರತೆಗಳನ್ನು ತಾವೇ ಬಗೆಹರಿಸಿಕೊಳ್ಳಲು ಗಾಂಧಿ ಯಾವಾಗಲೂ ಪ್ರೋತ್ಸಾಹಿಸುತ್ತಿದ್ದರು. ಇಂತಹ ಎಲ್ಲಾ ಚಳುವಳಿಗಳು ಪ್ರಚಾರ ಪಡೆದವು ಹಾಗೂ ಇಡೀ ಭಾರತದ ಗಮನವನ್ನು ಸೆಳೆದವು.

ಒಂದು ಜನಾಂದೋಳನವನ್ನು ಆರಂಭಿಸಿದಾಗಲೆಲ್ಲಾ, ಗಾಂಧಿ ಅದೇ ತಂತ್ರಗಳನ್ನು ಬಳಸುತ್ತಿದ್ದರು. ಚಂಪಾರಣ್, ಖೇಡಾ ಮತ್ತು ಬರ್ದೋಲಿಗಳ ಕೃಷಿಕರಿಗೆ ಮಾರ್ಗದರ್ಶನ ನೀಡಿದ್ದಲ್ಲದೆ, ಭಾರತದಲ್ಲಿನ ತಮ್ಮ 30 ವರ್ಷಗಳ ಸಮರಕೌಶಲದಲ್ಲಿ, ಅವರು ಇನ್ನೂ ನಾಲ್ಕು ಜನಾಂದೋಳನಗಳ ನೇತೃತ್ವ ವಹಿಸಿದರು. ಅವರು ಭಾರತವನ್ನೆಲ್ಲಾ ಸುತ್ತಿ ಬಂದರು. ಪ್ರಸ್ತುತ ಸಮಸ್ಯೆಯ ಬಗ್ಗೆ ಪ್ರತಿಯೊಂದು ವಿವರದ ಅಧ್ಯಯನ ಮಾಡುತ್ತಿದ್ದರು.

ಗಾಂಧಿ ಸಾವಿರಾರು ಜನರ ಸಂದರ್ಶನಗಳನ್ನು ಮಾಡಿದರು. ಸರ್ಕಾರದ ವಿರುದ್ಧದ ಹೋರಾಟದಲ್ಲಿ ಭಾಗಿಯಾದ ಜನರಿಂದ ಮಾಹಿತಿಯನ್ನು ಸಂಗ್ರಹಿಸಲು ದಿನಕ್ಕೆ 18ರಿಂದ 20 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದರು. ಅವರು ಸಾವಿರಾರು ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿದರು ಹಾಗೂ ಶಿಸ್ತಿನ ಬಗ್ಗೆ ನಿಯಮಗಳನ್ನು ರೂಪಿಸಿದರು. "ದೇಶದ ಎದುರು ಮತ್ತೊಂದು ಪರಿಹಾರವಿದೆ – ಅದೇ ಕತ್ತಿಯನ್ನು ಸೆಳೆಯುವುದು. ಅದು ಸಾಧ್ಯವಿದ್ದ ಪಕ್ಷದಲ್ಲಿ, ಭಾರತ ಅಹಿಂಸೆ ಎಂಬ ಪರಮಸತ್ಯಕ್ಕೆ ಕಿವಿಗೊಡುತ್ತಿರಲಿಲ್ಲ. ಭಾಷಣಗಳು ಮತ್ತು ಮೆರವಣಿಗೆಗಳಿಂದ ನಿಮಗೆ ಸ್ವರಾಜ್ಯ ಸಿಗುವುದಿಲ್ಲ. ಮಾಡಬೇಕೆಂಬ ಇಚ್ಛಾಶಕ್ತಿಯ ಕೊರತೆ ಎಂದಿಗೂ ಇರಬಾರದು. ಓಡಿಹೋಗದಂಥ ಧೈರ್ಯಶಾಲಿ ಸೈನಿಕರು ನಾವಾಗಬೇಕೆಂದು ನಾವು ಬಯಸುತ್ತೇವೆ. ನಿಮ್ಮ ಜೀವಗಳ ತ್ಯಾಗ ಮಾಡಲು ನೀವು ಸಿದ್ಧರಿರಬೇಕು. ಇದನ್ನು ಸಾಧಿಸಲು ಪುರುಷಶಕ್ತಿಯ ಅವಶ್ಯಕತೆ ಇದೆ. ಪ್ರಾಣ ತೆಗೆಯುವ ಬದಲಿಗೆ, ಅಗತ್ಯ ಬಂದಲ್ಲಿ, ನೀವೇ ಪ್ರಾಣ ತೆರಬೇಕು. ಕೊಲ್ಲುವ ಕ್ರಿಯೆಯಲ್ಲಿ ಸಾವನ್ನು ಎದುರಿಸುವುದು ಏಕೆ ಸುಲಭವಾಗಿ ಕಾಣಬೇಕು; ಅದೇ ಪ್ರಾಣ ಉಳಿಸುವ ಕ್ರಿಯೆಯಲ್ಲಿ ಪ್ರಾಣವನ್ನು ಅಪಾಯಕ್ಕೆ ಸಿಲುಕಿಸುವುದು ಅತಿಮಾನವ ಪ್ರಯತ್ನವಾಗಿ ಏಕೆ ಎಣಿಸಬೇಕು ? ಇತರರನ್ನು ಕೊಲ್ಲುವುದು ಧೈರ್ಯಶಾಲಿ ಕೆಲಸವಲ್ಲ. ನಿಮ್ಮ ಗೌರವ ಮತ್ತು ಸ್ವಾತಂತ್ರ್ಯಕ್ಕಾಗಿ ಮಡಿಯಿರಿ" ಎಂದು ಹೇಳುತ್ತಾ ಗಾಂಧಿ ತಮ್ಮ ಅಹಿಂಸಾಮಾರ್ಗದ ಆಯ್ಕೆಯನ್ನು ಸಮರ್ಥಿಸಿಕೊಂಡರು.

ಮಹಿಳೆಯರು, ಮಕ್ಕಳು ಮತ್ತು ವೃದ್ಧರು ಅವರ ಅಹಿಂಸಾ ಸೇನೆಯನ್ನು ಸೇರಬಲ್ಲವರಾಗಿದ್ದರು. ಮಕ್ಕಳ ತಂಡವನ್ನು 'ವಾನರ ಸೇನೆ' ಎಂದು ಕರೆಯಲಾಗುತ್ತಿತ್ತು. ಎಲ್ಲಾದರೂ ಹಿಂಸೆ ಕಾಣಿಸಿಕೊಂಡಾಗ, ಗಾಂಧಿ ಸತ್ಯಾಗ್ರಹವನ್ನು ನಿಲ್ಲಿಸುತ್ತಿದ್ದರು. ಅವರಿಗೆ ಗುಟ್ಟು-ಗೋಪ್ಯತೆ ಎಂದರೆ ಜಿಗುಪ್ಸೆ. ತಮ್ಮ ಮುಂದಿನ ಹೆಜ್ಜೆಗಳೇನೆಂಬುದನ್ನು ಅವರು ಮುಕ್ತವಾಗಿ ಘೋಷಿಸುತ್ತಿದ್ದರು. ಜನ ತಮ್ಮ ಎದೆಗಳಿಂದ ಕೋಪ, ದ್ವೇಷ ಮತ್ತು ಸೇಡುಗಳನ್ನು ಕಿತ್ತೊಗೆಯಬೇಕೆಂದು ಅವರು ಬಯಸುತ್ತಿದ್ದರು.

ಜನರಿಂದ ಕೆಲಸ ಚೆನ್ನಾಗಿ ತೆಗೆಯುತ್ತಿದ್ದ ಈ ನಾಯಕ ತನ್ನ ಜನರಲ್ಲಿ ಸುಳ್ಳು ಭರವಸೆಗಳನ್ನು ಹುಟ್ಟುಹಾಕಲಿಲ್ಲ. ಪ್ರತಿಭಟನಾಪೂರ್ವಕವಾಗಿ ತಮ್ಮ ಕೈಗಳನ್ನು ಎತ್ತದೆ, ಹೇಗೆ ಲಾಟಿ ಏಟುಗಳು ಮತ್ತು ಬಂದೂಕು ಗುಂಡುಗಳನ್ನು ಎದುರಿಸಬೇಕು, ಸೆರೆಮನೆಗೆ ಹೋಗಬೇಕು ಹಾಗೂ ಗಲ್ಲಿಗೂ ಏರಬೇಕು ಎಂಬುದನ್ನು ಅವರು ತಮ್ಮ ಸೈನಿಕರಿಗೆ ಹೇಳಿದರು. ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು. ಮಾಡು ಇಲ್ಲವೇ ಮಡಿ ಎಂಬ ಅವರ ಮಂತ್ರದ ಅರ್ಥ ವೇದನೆಯೇ ಆಗಿತ್ತು. ಹಾಗೂ, ವೇದನೆಯು ಎದುರಾಳಿಯ ಹೃದಯವನ್ನು ಕರಗಿಸುತ್ತದೆ ಎಂಬುದು ಅವರಿಗೆ ಗೊತ್ತಿತ್ತು.

ವಿದೇಶೀ ವಸ್ತ್ರಗಳ ದಹನ ಮಾಡಲು, ಭೂಕಂದಾಯ ಕೊಡದಿರಲು, ಉಪ್ಪು ತಯಾರಿಸಲು ಮತ್ತು ಸರ್ಕಾರೀ ಶಾಲೆಗಳು, ಕಾಲೇಜುಗಳು ಹಾಗೂ ನ್ಯಾಯಾಲಯಗಳನ್ನು ನಿಷೇಧಿಸಲು ಕರೆ ನೀಡುವುದರೊಂದಿಗೆ ರಚನಾತ್ಮಕ ಕೆಲಸಗಳನ್ನು ಮಾಡಬೇಕೆಂದು ಅವರು ಜನರಿಗೆ ಹೇಳಿದರು. ಜನ ಕೈಯಿಂದ ನೂಲು ತೆಗೆಯಬೇಕು ಮತ್ತು ಬಟ್ಟೆ ನೇಯಬೇಕು, ಗ್ರಾಮ ಪಂಚಾಯತಿಗಳ ಪುನರ್ವ್ಯವಸ್ಥೆ ಮಾಡಬೇಕು ಮತ್ತು ರಾಷ್ಟ್ರೀಯ ಶಾಲೆ–ಕಾಲೇಜುಗಳನ್ನು ಸ್ಥಾಪಿಸಬೇಕು ಎಂದು ಅವರು ಬಯಸಿದರು. ಒಂದು ವರ್ಷದಲ್ಲಿ ಸ್ವರಾಜ್ಯ ಸ್ಥಾಪಿಸುತ್ತೇನೆಂಬ ಅವರ ಪ್ರಯತ್ನ ವಿಫಲವಾಯಿತು, ಆದರೆ ಕಟ್ಟಿ ಹಾಕಲ್ಪಟ್ಟಿದ್ದ ಮನಸ್ಸುಗಳು ಬಿಚ್ಚಿಕೊಂಡವು. ಜನಸಮೂಹ ಜಾಗೃತಗೊಂಡಿದ್ದು ಒಂದು ದೊಡ್ಡ ಲಾಭವಾಯಿತು. ಅವರ ದಂಡಿಯಾತ್ರೆ ಒಂದು ಮಾಂತ್ರಿಕ ಮೋಡಿ ಹಾಕಿತ್ತು. ನೂರಾರು ಮಂದಿ ಮಹಿಳೆಯರು ಸ್ವಾಭಾವಿಕವಾದ ಉಪ್ಪನ್ನು ಸಂಗ್ರಹಿಸಲು ತಮ್ಮ ಮುಸುಕುಗಳಿಂದಾಚೆ ಬಂದರು; ತಾವೂ ಪುರುಷರೊಂದಿಗೆ ಸಮಸಮನಾಗಿ ನಿಂತು ದೇಶಸೇವೆ ಮಾಡಬಲ್ಲೆವು ಎಂಬುದನ್ನು ನಿರೂಪಿಸಿದರು. ವಿದೇಶೀ ವಸ್ತ್ರಗಳ ಮತ್ತು ಸಾರಾಯಿ ಅಂಗಡಿಗಳನ್ನು ತಡೆಯುವಲ್ಲಿ ಅವರೂ ಭಾಗವಹಿಸಿದರು. ಭಾರತದ ರಾಜಕೀಯ ಇತಿಹಾಸದಲ್ಲಿ ಮೊದಲ ಬಾರಿಗೆ ಗಾಂಧಿ ಅಹಿಂಸೆಯನ್ನೂ, ಅಸಹಕಾರವನ್ನೂ ಅಪಾರ ಪ್ರಮಾಣದಲ್ಲಿ ಪ್ರಯೋಗಿಸಿದರು.

ಗಾಂಧಿ ತಮ್ಮ ಅಹಿಂಸಾತ್ಮಕ ಹೋರಾಟಗಳನ್ನು ವಿವರಿಸಲು ಆಗಾಗ್ಗೆ ಯುದ್ಧದ ಪರಿಭಾಷೆಯನ್ನು ಉದ್ಧರಿಸುತ್ತಿದ್ದರು. "ನಾನು ಒಂದು ಯುದ್ಧಕ್ಕೆ ಹೊರಟಿದ್ದೇನೆ. ಹೇಗೆ ಒಬ್ಬ ಅಫ್ರೀದೀ ತನ್ನ ಬಂದೂಕಿಲ್ಲದೆ ಇರಲಾರನೋ, ಹಾಗೆಯೇ ನೀವುಗಳು – ಒಬ್ಬೊಬ್ಬ ಅಹಿಂಸೆಯ ಸೈನಿಕನೂ ನೂಲು ತೆಗೆಯದೇ ಇರಬಾರದು. ನೂಲಿನ ಚೆಂಡುಗಳೇ ನಿಮ್ಮ ಸೀಸ; ಚರಕವೇ ನಿಮ್ಮ ಬಂದೂಕು. ಸ್ವಾತಂತ್ರ್ಯವನ್ನು ಬಂದೂಕುಗಳು ರಕ್ಷಿಸುವುದಿಲ್ಲ. ಬದಲಿಗೆ, ಕೈಯಿಂದ ತೆಗೆದ ಕೋನಾಕೃತಿಯ ನೂಲುಗಳೆಂಬ ಗುಂಡುಗಳು ರಕ್ಷಿಸುತ್ತವೆ. ಧಾರಾಸನ ಸಾಲ್ಟ್ ವರ್ಕ್ಸ್ ಮೇಲೆ ನೀವು ದಾಳಿ ಮಾಡಿ. ಅದು ಧಾರಾಸನ ಯುದ್ಧವೆಂದೇ ಪ್ರಸಿದ್ಧಿ ಹೊಂದುತ್ತದೆ. ಹಿಂಸಾತ್ಮಕ ಯುದ್ಧದ ವಿನಾಶಕಾರೀ ಅಸ್ತ್ರಗಳೆಲ್ಲವನ್ನೂ ವರ್ಜಿಸಲಾಗಿತ್ತು. ಆದರೆ ಸೈನಿಕ ಗುಣಗಳಾದ ಧೈರ್ಯ, ಶೌರ್ಯ, ಔದಾರ್ಯ, ದೇಶಭಕ್ತಿ, ಸಹಿಷ್ಣುತೆ ಮತ್ತು ಸ್ವಾರ್ಥತ್ಯಾಗ – ಎಲ್ಲವೂ ಅಲ್ಲಿದ್ದವು."

ಗಾಂಧಿ ಹೇಡಿತನಕ್ಕಿಂತ ಹಿಂಸೆಯೇ ಮೇಲೆಂದರು. ಆದರೆ, ಪಾಶವೀಯ ಶಕ್ತಿಗಿಂತ ಆತ್ಮಶಕ್ತಿಗೆ ಹೆಚ್ಚು ಮಹತ್ವ ಕೊಟ್ಟರು. "ಅಹಿಂಸೆಯಲ್ಲಿರುವ ನಿಮ್ಮ ನಂಬಿಕೆಯನ್ನು ಅಣುಬಾಂಬ್ ಅಲುಗಾಡಿಸಿಲ್ಲವೆ?" ಎಂದು ಯಾರೋ ಅವರನ್ನು ಕೇಳಿದಾಗ, "ಅದು ಅಲುಗಾಡಿಸಿಲ್ಲ ಎಂಬ ಅಂಶವನ್ನಷ್ಟೇ ಅಲ್ಲ, ಸತ್ಯ ಮತ್ತು ಅಹಿಂಸೆಗಳೆರಡೂ ವಿಶ್ವದ ಅತಿ ಪ್ರಬಲ ಶಕ್ತಿಯಾಗಿದೆ ಎಂಬುದನ್ನೂ ನನಗೆ ಸ್ಪಷ್ಟವಾಗಿ ಅದು ತೋರಿಸಿದೆ. ಈ ಶಕ್ತಿಯ ಮುಂದೆ ಅಣುಬಾಂಬ್ ಪ್ರಭಾವ ಏನೇನೂ ಇಲ್ಲ" ಎಂದು ಉತ್ತರಿಸಿದರು ಗಾಂಧಿ. ಅಹಿಂಸಾತ್ಮಕವಾಗಿ ಭಾರತ ಗಳಿಸುವ ಸ್ವಾತಂತ್ರ್ಯ – ಭೂಮಿಯ ಮೇಲಿನ ಎಲ್ಲಾ ಶೋಷಿತ ಜನಾಂಗಗಳಿಗೆ – ತಮ್ಮ ಸ್ವಾತಂತ್ರ್ಯವೂ ಅತಿ ಸನಿಹದಲ್ಲಿಯೇ ಇದೆ ಎಂಬುದನ್ನು ತೋರಿಸುತ್ತದೆ ಎಂದು ಸಮರ್ಥಿಸಿಕೊಂಡರು.

ಲೇಖಕ

ಬಹಳಷ್ಟು ಪುಸ್ತಕಗಳಲ್ಲಿ ಲೇಖಕರ ಹೆಸರು ಎಂ. ಕೆ. ಗಾಂಧಿ ಎಂದಿರುತ್ತದೆ. ವಾಸ್ತವದಲ್ಲಿ, ಆ ಪೈಕಿ ಅನೇಕವುಗಳನ್ನು ಪುಸ್ತಕರೂಪದಲ್ಲಿ ಬರೆಯಲಾಗಿಲ್ಲ. ಅವೆಲ್ಲಾ ಸತ್ಯ ಮತ್ತು ಅಹಿಂಸೆ, ಸ್ವದೇಶಿ ಮತ್ತು ಚರಕಾ ಬಗ್ಗೆ ಗಾಂಧಿ ಬರೆದ ಲೇಖನ ಮತ್ತು ಉಪನ್ಯಾಸಗಳು. ಮಹಿಳೆಯರು, ವಿದ್ಯಾರ್ಥಿಗಳು ಮತ್ತು ರಾಜಕುಮಾರರನ್ನು ಉದ್ದೇಶಿಸಿ ಅವರು ಮಾಡಿದ ಭಾಷಣಗಳ ಸಂಗ್ರಹಗಳು. ಗಾಂಧಿಯನ್ನು ಒಬ್ಬ ಒಳ್ಳೆಯ ಬರಹಗಾರ ಎಂದು ಅಂಗೀಕರಿಸಲಾಗಿತ್ತು. ಬರವಣಿಗೆಯ ಶೈಲಿಯತ್ತ ಅವರ ಗುರಿ ಇರಲಿಲ್ಲ; ಅಥವಾ ಕೇವಲ ಕಿವಿಗಳಿಗೆ ಇಂಪಾಗಿ ಕೇಳಿಸಲು ಬಣ್ಣನೆಯ ಪದಗಳನ್ನು ಉಪಯೋಗಿಸುತ್ತಿರಲಿಲ್ಲ. ತಮ್ಮ ಆಶಯಗಳು ಮತ್ತು ನಂಬಿಕೆಗಳು, ತಮ್ಮ ದುಃಖಗಳು ಮತ್ತು ಹತಾಶೆಗಳನ್ನು ಬಿಂಬಿಸುವ ಒಂದು ಆವೇಶಪೂರ್ಣ ಶೈಲಿಯ ಬರವಣಿಗೆ ಅವರದಾಗಿತ್ತು. ಅವರ ಬರವಣಿಗೆಯ ಶೈಲಿ ಸರಳ, ಸ್ಪಷ್ಟ ಹಾಗೂ ನಿಖರವಾಗಿತ್ತು. ಅಲ್ಲದೆ, ಅವರ ಜೀವನದಲ್ಲಿ ಹೇಗೆ ಕೃತಕತೆ ಎನ್ನುವುದು ಇರಲಿಲ್ಲವೋ, ಹಾಗೆಯೇ ಅವರ ಬರವಣಿಗೆಗಳಲ್ಲೂ ಕೃತಕತೆ ಎನ್ನುವುದಿರಲಿಲ್ಲ. ಗಾಂಧಿಯದು ನೇರವಾದ ಬರವಣಿಗೆ ಹಾಗೂ ಅವರು ತಾವು ಉಪಯೋಗಿಸುವ ಪದಗಳ ಮೌಲ್ಯವನ್ನು ಗ್ರಹಿಸಿ, ಅತ್ಯುತ್ತಮವಾದ ಇಂಗ್ಲಿಷಿನಲ್ಲಿ ವ್ಯಕ್ತಪಡಿಸುತ್ತಾರೆ ಎಂದು ಹಲವು ಇಂಗ್ಲಿಷ್ ವೈಸ್‌ರಾಯ್‌ಗಳು ಒಪ್ಪಿಕೊಂಡಿದ್ದರು. ತಮ್ಮ ಬಾಯಿಂದ ಅಥವಾ ಲೇಖನಿಯಿಂದ ವಿವೇಚನಾರಹಿತವಾಗಿ ಒಂದು ಪದವೂ ಹೊರಹೊಮ್ಮಲಾರದು ಎಂದು ಗಾಂಧಿ ಅಧಿಕಾರಯುತವಾಗಿ ಹೇಳುತ್ತಿದ್ದರು. ದುಂಡುಮೇಜಿನ ಪರಿಷತ್ತಿನಲ್ಲಿ ಗಾಂಧಿ ನೀಡಿದ ಹೇಳಿಕೆಗಳ ಕರಡುಪ್ರತಿಗಳನ್ನು ತಯಾರಿಸುವಾಗ ಸಹಾಯ ಮಾಡಿದ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪ್ರೊಫೆಸರ್ ಒಬ್ಬರು "ಉಪಸರ್ಗಾವ್ಯಯಗಳನ್ನು ಗಾಂಧಿ ಕರಗತ ಮಾಡಿಕೊಂಡ ಹಾಗೆ ಮಾಡಿಕೊಂಡಿರುವ ಯಾವುದೇ ಭಾರತೀಯನನ್ನು ನಾನು ಭೇಟಿ ಆಗಿಯೇ ಇಲ್ಲ. ಈ ಕರಡುಪ್ರತಿ ತಯಾರಿಸಲು ನಾನು ಬಹಳ ಶ್ರಮ ವಹಿಸಿದೆ. ಗಾಂಧಿ ನಾನು ಬರೆದದ್ದರ ಮೇಲೆ ಒಂದು ನೋಟ ಹರಿಸುತ್ತಿದ್ದರು; ಅಮೇಲೆ ಸುಮ್ಮನೆ ಒಂದು ಉಪಸರ್ಗವನ್ನು ಬದಲಾಯಿಸುತ್ತಿದ್ದರು. ಅಷ್ಟೆ. ಕೆಲಸ ಆಗುತ್ತಿತ್ತು. ಅಂದರೆ, ಆ ವಾಕ್ಯ ನನ್ನ ಅರ್ಥದಿಂದ ಗಾಂಧಿಯ ಅರ್ಥಕ್ಕೆ ಬದಲಾಗುತ್ತಿತ್ತು" ಎಂದು ಹೇಳಿದರು.

ಪ್ರಾಯಶಃ ಆಯ್ದ ಇಂಗ್ಲಿಷ್ ಲೇಖಕರ ಕೃತಿಗಳು ಮತ್ತು ಬೈಬಲ್ ಬಗ್ಗೆ ಗಾಂಧಿಗಿದ್ದ ಪ್ರೀತಿ ಮತ್ತು ಅವನ್ನು ಅವರು ಗಮನವಿಟ್ಟು ಓದುತ್ತಿದ್ದುದರಿಂದ ತಮ್ಮ ಲೇಖನಗಳಲ್ಲಿ ಸರಿಯಾದ ಪದಗಳನ್ನು ಉಪಯೋಗಿಸಲಾಗುವಂತೆ ಅವರ ಕಿವಿಗಳು ತರಪೇತಾದವೋ ಏನೋ ! ಅವರು ವ್ಯಾಪಕವಾಗಿ ಓದುತ್ತಿದ್ದರು. ಓದಿದ್ದೆಲ್ಲವನ್ನೂ ಅರ್ಥ ಮಾಡಿಕೊಳ್ಳುತ್ತಿದ್ದರು.

ಗಾಂಧಿ ತಮ್ಮ ಹದಿಹರಯದಲ್ಲಿ ಒಬ್ಬ ಬರಹಗಾರನಾಗಿ ಒಂದು ಪುಟ್ಟ ಪುಸ್ತಿಕೆ ಬರೆಯುವ ಸರಳ ಪ್ರಯತ್ನ ಮಾಡಿದ್ದರು. ಅದು ಭಾರತೀಯ ವಿದ್ಯಾರ್ಥಿಗಳಿಗಾಗಿ ಬರೆದ 'ಲಂಡನ್ ಗೈಡ್' ಎಂಬ ಪುಸ್ತಿಕೆಯಾಗಿತ್ತು. ಅದರಲ್ಲಿ ಲಂಡನ್ ಬಗ್ಗೆ ಸಹಾಯಕಾರಿಯಾದ ವಿವರಗಳಿದ್ದವು. ಅಮೇಲೆ ಬರೆದದ್ದು ಎರಡು ಕರಪತ್ರಗಳನ್ನು, ಒಂದು, 'ಅ್ಯನ್ ಅಪೀಲ್ ಟು ಎವ್ವೆರಿ ಬ್ರಿಟನ್' (An Appeal to Every Briton); ಇನ್ನೊಂದು, 'ದಿ ಇಂಡಿಯನ್ ಫ್ರಾಂಚೈಸ್' (The Indian Franchise). ಮೊದಲನೆಯದು ನೇಟಾಲ್ ಭಾರತೀಯರ ಸಾಮಾನ್ಯ ಸ್ಥಿತಿಗತಿಗಳನ್ನು ವಿವರಿಸಿತ್ತು ಹಾಗೂ ಎರಡನೆಯದರಲ್ಲಿ, ನೇಟಾಲ್‌ನಲ್ಲಿ ಭಾರತೀಯರ ಪೌರತ್ವದ ಇತಿಹಾಸವಿತ್ತು. ಆಮೇಲೆ ಬಂದ ಗ್ರೀನ್ ಪಾಂಫ್ಲೆಟ್‌ನ (Green Pamphlet) ವಿಷಯ ಸತ್ಯಸಂಗತಿಗಳದಾಗಿತ್ತು. ಒಂದು ತಿಂಗಳೊಳಗೆ, ಅದರ ಪರಿಷ್ಕೃತ ಆವೃತ್ತಿ ಪ್ರಕಟವಾಯಿತು. ದಕ್ಷಿಣ ಆಫ್ರಿಕಾದ ಸುದ್ದಿಪತ್ರಿಕೆಗಳಲ್ಲಿ ಪ್ರಕಟವಾದ ಅದರ ಸಾರಾಂಶವು ಯೂರೋಪಿಯನ್ನರನ್ನು ಸಿಟ್ಟಿಗೆಬ್ಬಿಸಿತು. ಗಾಂಧಿ ನಂತರ ದಕ್ಷಿಣ ಆಫ್ರಿಕಾದಲ್ಲಿ ಬಂದಿಳಿದಾಗ, ಜನ ಅವರ ಮೇಲೆ ಏರಿಹೋದರು, ವಿಚಾರ ಮಾಡದೆ ತದಕಿಹಾಕಿದರು. ತಮ್ಮ ಲೇಖನಗಳ ಸಾರಾಂಶ ಸಂಕ್ಷಿಪ್ತರೂಪದಲ್ಲಿ ಸರಿಯಾಗಿ ಬರಲಿಲ್ಲ ಎನ್ನುವುದನ್ನು ಅವರು ತಮ್ಮ ಈ ಕಹಿ ಅನುಭವದಲ್ಲಿ ಕಂಡುಕೊಂಡರು. ಸ್ವತಃ ಅವರಿಗೇ ತಮ್ಮ ವಿಚಾರಗಳನ್ನು ಸಂಕ್ಷಿಪ್ತರೂಪದಲ್ಲಿ ವ್ಯಕ್ತಪಡಿಸುವ ಚಾತುರ್ಯವಿತ್ತು. ಕಾಂಗ್ರೆಸ್‌ನ ರಾಜ್ಯಶಾಸನ ಮತ್ತು ಅನೇಕ ಠರಾವುಗಳನ್ನು ಅವರೇ ರಚಿಸಿದರು.

'ಎ ಗೈಡ್ ಟು ಹೆಲ್ತ್' (A Guide to Health)ನಲ್ಲಿ ಪಥ್ಯಾಹಾರದ ಕುರಿತಾಗಿ ಗಾಂಧಿಯ ಅನುಭವಗಳನ್ನು ದಾಖಲಿಸಲಾಗಿತ್ತು. ಅದು ಗುಜರಾತಿ ಭಾಷೆಯಲ್ಲಿ ಹೊರಬಂದ 'ಇಂಡಿಯನ್ ಒಪೀನಿಯನ್'ನಲ್ಲಿ ಪ್ರಕಟವಾದ ಅವರ ಲೇಖನಗಳ ಇಂಗ್ಲಿಷ್ ಅನುವಾದವಾಗಿತ್ತು. ಈ ಪತ್ರಿಕೆಯನ್ನು ಭಾರತ ಮತ್ತು ವಿದೇಶಗಳಲ್ಲಿ ವ್ಯಾಪಕವಾಗಿ ಓದಲಾಗುತ್ತಿತ್ತು ಹಾಗೂ ಆ ಲೇಖನಗಳನ್ನು ಇಂಗ್ಲಿಷ್, ಯೂರೋಪಿಯನ್ ಮತ್ತು ಭಾರತೀಯ ಭಾಷೆಗಳಿಗೆ ಅನುವಾದಿಸಲಾಗುತ್ತಿತ್ತು. ತಮ್ಮ ಮನಸ್ಸಿಗೆ ಯಾವುದೇ ವಿಚಾರ ಹೊಡಿಸಿದಾಗ, ತಾವು ಅಪಹಾಸ್ಯಕ್ಕೀಡಾಗಬಹುದೆಂಬ ಯಾವುದೇ ಭಯವಿಲ್ಲದೆ, ಒಂದು ನಿಷ್ಠೆಯಿಂದ ಅದನ್ನು ಬರೆಯುತ್ತಿದ್ದರು. ಬರೆಯಬೇಕೆಂಬ ಈ ತುಡಿತ ಚಲಿಸುವ ರೈಲಿನಲ್ಲೂ ಗೀಚುವಂತೆ ಮಾಡಿತು; ಹೊಯ್ದಾಡುವ ಹಡಗಿನಲ್ಲೂ ಗೀಚುವಂತೆ ಮಾಡಿತು. 1896ರಲ್ಲಿ ಮನೆಗೆ ಪ್ರಯಾಣ ಬೆಳೆಸುತ್ತಿದ್ದಾಗ, ಇಡೀ 'ಗ್ರೀನ್ ಪ್ಯಾಂಫ್ಲೆಟ್' ಅನ್ನು ಪ್ರಯಾಣದ ವೇಳೆಯಲ್ಲಿಯೇ ತಯಾರು ಮಾಡಿದರು. 1909ರಲ್ಲಿ ಇಂಗ್ಲೆಂಡಿನಿಂದ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ ಮಾಡುತ್ತಿದ್ದಾಗ, ಆಧುನಿಕ ನಾಗರಿಕತೆಯ ಬಗ್ಗೆ 'ಹಿಂದ್ ಸ್ವರಾಜ್' ಎಂಬ ಒಂದು ಗಂಭೀರವಾದ ವಿಮರ್ಶೆಯನ್ನು ಒಂದೇ ಬಾರಿಗೆ ಬರೆದರು. ಆಗ ಅವರು ಸ್ಟೀಮರ್‌ನಲ್ಲಿನ ಲೇಖನಸಾಮಗ್ರಿಗಳನ್ನು ಬಳಸಿದರು. ಬಲಗೈಯಲ್ಲಿ ಬರೆದು ಬರೆದು ಸುಸ್ತಾದಾಗ, ಎಡಗೈಯನ್ನು ಬಳಸಿ, ಹತ್ತು ದಿನಗಳಲ್ಲಿ ಪುಸ್ತಕವನ್ನು ಮುಗಿಸಿದರು. ಅದನ್ನು ಓದಿದ ಟಾಲ್‌ಸ್ಟಾಯ್ 'ನಿಶ್ಶಸ್ತ್ರ ಪ್ರತಿಭಟನೆಯ ಪ್ರಶ್ನೆ' ಭಾರತಕ್ಕೆ ಮಾತ್ರವಲ್ಲ, ಇಡೀ ವಿಶ್ವಕ್ಕೇ 'ಸಾತ್ವಿಕ ಪ್ರತಿಭಟನೆ' ಬಹಳ ಮಹತ್ವದ್ದು ಎಂದರು. ದೇಶ ಕಟ್ಟುವ ಕೆಲಸದ ಬಗ್ಗೆ 'ಕನ್‌ಸ್ಟ್ರಕ್ಟಿವ್ ಪ್ರೋಗ್ರಾಮ್' ಪುಸ್ತಿಕೆಯನ್ನು ಗಾಂಧಿ ರೈಲಿನಲ್ಲಿ ಬರೆದರು. ಅವರ ಹಸ್ತಪ್ರತಿಗಳಲ್ಲಿ ಕೆಲವೇ ಕೆಲವು ತಿದ್ದುಪಾಟುಗಳಿರುತ್ತಿದ್ದವು ಹಾಗೂ ಅಪರೂಪಕ್ಕೊಮ್ಮೆ ಬದಲಾವಣೆಗಳ ಅವಶ್ಯಕತೆ ಇರುತ್ತಿತ್ತು. ಇದಕ್ಕೆ ಕಾರಣ 'ಸತ್ಯದ ಉಪಾಸಕನ ಆಧ್ಯಾತ್ಮಿಕ ಶಿಸ್ತು' ಎಂದು ಅವರು ಹೇಳುತ್ತಿದ್ದರು. ಒಂದು ವಿಚಾರವನ್ನು ಮತ್ತೊಂದು ಭಾಷೆಗೆ ಅನುವಾದಿಸಲು ತಕ್ಕ ಪದಗಳನ್ನು ಆಯ್ಕೆ ಮಾಡುವ ಅವರ ಬುದ್ಧಿಸಾಮರ್ಥ್ಯ ಪ್ರಶಂಸನೀಯವಾಗಿತ್ತು. ಅನುವಾದಿಸುವಾಗ ಒಂದು ಪದ ಅಥವಾ ವಿಚಾರದ ವಾಚ್ಯಾರ್ಥವನ್ನಷ್ಟೇ ನೋಡುತ್ತಿರಲಿಲ್ಲ. 'ಡೆತ್ ಡ್ಯಾನ್ಸ್' ಎಂಬುದನ್ನು ಅವರು 'ಪತಂಗ ನೃತ್ಯ' ಎಂದು ಕರೆದರು.

ಗಾಂಧಿಯಲ್ಲಿ ಆಳವಾಗಿ ಬೇರೂರಿದ್ದ ನಂಬಿಕೆಗಳನ್ನೇ ಹೊಂದಿದ್ದ ರಸ್ಕಿನ್‌ನವರ 'ಅನ್‌ಟು ದಿಸ್ ಲಾಸ್ಟ್' (Unto This Last) ಪುಸ್ತಕ ಅವರ ಮನಸ್ಸಿಗೆ ಬಹಳ ಹಿಡಿಸಿತು. ಅದನ್ನು ಅವರು ಗುಜರಾತಿ ಭಾಷೆಗೆ ಅನುವಾದಿಸಿದರು. ಅದನ್ನು 'ಸರ್ವೋದಯ' ಎಂದು ಕರೆದರು. ಅವರ 'ಸ್ಟೋರಿ ಆಫ್ ಎ ಸತ್ಯಾಗ್ರಹಿ' (Story of a Satyagrahi) ಎಂಬ ಪುಸ್ತಕವು ಪ್ಲೇಟೋನ 'ಡಿಫೆನ್ಸ್ ಅಂಡ್ ಡೆತ್ ಆಫ್ ಸಾಕ್ರೆಟಿಸ್' (Defence and Death of Socrates) ಪುಸ್ತಕದ ಸರಳಾನುವಾದವಾಗಿತ್ತು. ಗಾಂಧಿ ಸೆರೆಮನೆಯಲ್ಲಿದ್ದಾಗ ಆಶ್ರಮದ ಭಜನಾವಳಿ ಮತ್ತು ಸಂತ–ಕವಿಗಳ ಹಲವು ಕವನಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿದ್ದರು. ಸಂತ–ಕವಿಗಳ ಕವನಗಳು 'ಸಾಂಗ್ಸ್ ಫ್ರಮ್ ದಿ ಪ್ರಿಸನ್' (Songs from the Prison) ಎಂಬ ಹೆಸರಿನಲ್ಲಿ ಪ್ರಕಟವಾಗಿದ್ದವು.



ಗಾಂಧಿ ತಮ್ಮ ಆತ್ಮಕಥೆಯನ್ನು ಗುಜರಾತಿ ಭಾಷೆಯಲ್ಲಿ ಬರೆದರು. ಒಂದು ಸರಳವಾದ, ಆವೇಶಪೂರ್ಣವಾದ ಶೈಲಿಯನ್ನು ಅವರು ಪರಿಚಯಿಸಿದರು. ಇದು ಗುಜರಾತಿ ಭಾಷೆಯನ್ನು ಜನರ ಭಾಷೆಯನ್ನಾಗಿ ಪರಿವರ್ತಿಸಿತು. ಈ ಪುಸ್ತಕವು ಇಂಗ್ಲಿಷಿಗೆ 'ದಿ ಸ್ಟೋರಿ ಆಫ್ ಮೈ ಎಕ್ಸ್‌ಪೆರಿಮೆಂಟ್ಸ್ ವಿತ್ ಟ್ರೂತ್' (The Story of My Experiments with Truth) ಎಂಬ ಹೆಸರಿನಲ್ಲಿ ಅನುವಾದಗೊಂಡಿತು. ಇದೊಂದು ಒಳ್ಳೆಯ ಸಾಹಿತ್ಯಕೃತಿ ಎಂದು ಪ್ರಸಿದ್ಧವ್ಯಕ್ತಿಗಳು ತೀರ್ಮಾನಿಸಿದ್ದಾರೆ. ಈ ಆತ್ಮಕಥೆ ವಿಶ್ವದ ಪ್ರಸಿದ್ಧ ವ್ಯಕ್ತಿಯೊಬ್ಬರ ವ್ಯಕ್ತಿತ್ವವನ್ನು ತೆರೆದಿಡುತ್ತದೆ. ಹಾಗೆಯೇ, ಅವರ ತಂದೆತಾಯಿ, ಹೆಂಡತಿ ಮತ್ತು ಮಕ್ಕಳು, ಮನ ಮುಟ್ಟುವ ಘಟನೆಗಳ ಸಚಿತ್ರ ವಿವರಗಳು ಮತ್ತು ಅನಿಶ್ಚಿತಸ್ಥಿತಿಯ ಹಾಗೂ ಅಲ್ಲಲ್ಲಿ ಹೆಣೆದ ವಿರಳವಾದ ಸಂಭಾಷಣೆಗಳ ಪ್ರಯೋಗ – ಎಲ್ಲವೂ ಓದುಗರ ಆಸಕ್ತಿಯನ್ನು ಕಾಪಾಡಿಕೊಂಡು ಬರುತ್ತದೆ. ಅದು ಹೆಚ್ಚುಕಡಿಮೆ ಭಾರತದ ಎಲ್ಲಾ ಭಾಷೆಗಳಿಗೆ ಅನುವಾದಗೊಂಡಿತು. ಹಾಗೆಯೇ, ಇಂಗ್ಲಿಷ್, ಫ್ರೆಂಚ್, ರಷ್ಯನ್, ಜರ್ಮನ್, ಚೀನೀ ಮತ್ತು ಜಪಾನೀ ಭಾಷೆಗಳಿಗೂ ಅನುವಾದವಾಯಿತು.

ಅವರ ಎಲ್ಲಾ ಬರವಣಿಗೆಗಳು ಸತ್ಯ ಮತ್ತು ಉನ್ನತ ನೈತಿಕ ಮೌಲ್ಯಗಳನ್ನು ಹೊಂದಿವೆ. ಅದೇ ವೇಳೆಗೆ, ಅವು ಶುಷ್ಕವಾದ ನಡವಳಿಕಾ ನಿಯಮಗಳ ದಾಖಲೆಗಳೇನಲ್ಲ. ಅವರು ಮಕ್ಕಳಿಗಾಗಿ 'ಬಾಲ್‌ಪೋಥಿ' ಮತ್ತು 'ನೀತಿಧರ್ಮ' ಎಂಬ ನೀತಿತತ್ವದ ಪ್ರಾಥಮಿಕ ಪುಸ್ತಕಗಳನ್ನು ಬರೆದರು. ಮಕ್ಕಳು ಅಭ್ಯಾಸ ಮಾಡಲಾಗದಂತಹ ಉಪದೇಶವನ್ನು ಮಾಡಲು ಅವರೆಂದೂ ಇಚ್ಛಿಸಲಿಲ್ಲ. ಆಶ್ರಮದ ಮಕ್ಕಳಿಗೆ ಅವರು ಬರೆಯುತ್ತಿದ್ದ ಪತ್ರಗಳು ವಿನೋದದಿಂದ ಕೂಡಿರುತ್ತಿದ್ದವು; ಬೋಧಪ್ರದವೂ ಆಗಿರುತ್ತಿದ್ದವು. ಪತ್ರಗಳನ್ನು ಬರೆಯುವುದರಲ್ಲಿ ಅವರು ಮಹಾಪ್ರಚಂಡರಾಗಿದ್ದರು. ಒಂದು ದಿನದಲ್ಲಿ 50 ಪತ್ರಗಳನ್ನು ಜೇಕಾದರೂ ಬರೆಯುತ್ತಿದ್ದರು; ಅದೂ ಶೀಘ್ರಲಿಪಿಯಲ್ಲಲ್ಲ, ಎಂದಿನ ಸಾಮಾನ್ಯ ಲಿಪಿಯಲ್ಲಿಯೇ. ಸುಮಾರು 100,000 ಪತ್ರಗಳಿರುವ ಅವರ ಪತ್ರಸಂಗ್ರಹ ಅವರ ಬರವಣಿಗೆಗಳ ಮುಖ್ಯ ಭಾಗವಾಗಿದೆ.

'ಕಲೆಗಾಗಿ ಕಲೆ' ಎಂಬುದಕ್ಕೆ ಗಾಂಧಿ ವಿರೋಧವಾಗಿದ್ದರು. ಅವರ ಪ್ರಕಾರ, ಎಲ್ಲಾ ಕಲೆಗಳಿಗೂ ಸತ್ಯವೇ ಆಧಾರ ಹಾಗೂ ಎಲ್ಲಿಯವರೆಗೆ ಮಾನವ ಮೇಲ್ಮಟ್ಟಕ್ಕೆ ಏರಲು ಸಾಹಿತ್ಯ ಸಹಾಯಕವಾಗಬಲ್ಲದೋ, ಅಲ್ಲಿಯವರೆಗೆ ಅದಕ್ಕೆ ಒಂದು ಮೌಲ್ಯವಿರುತ್ತದೆ. ಅರೆಹೊಟ್ಟೆಯ ಜನರಿಗೆ ಸರಳವಾದ ಒಳ್ಳೆಯ ಕತೆಗಳ ಹಾಗೂ ತನ್ನ ಎತ್ತುಗಳನ್ನು ಹೊಡೆದುಕೊಂಡು ಹೋಗುವ ರೈತನಿಗೆ ಕೊಳಕು ಬೈಗಳನ್ನು ಮರೆತು ಖುಷಿಯಿಂದ ಹಾಡುತ್ತಾ ಹೋಗಬಹುದಾದ ಎರಡೆರಡು ಸಾಲುಗಳ ಪದ್ಯಗಳ ಅಗತ್ಯವಿದೆ ಎಂಬುದು ಅವರ ಭಾವನೆಯಾಗಿತ್ತು. ಒಂದು ಸಾಹಿತ್ಯ ಸಮ್ಮೇಳನದಲ್ಲಿ ಅವರು ಒಬ್ಬ ಲೇಖಕರನ್ನು ಕೇಳಿದರು: "ಈ ಲಕ್ಷ ಲಕ್ಷ ಜನರ ಹಸಿವು ಹಾಗೂ ಹಿರಿಯಾಸೆಗಳ ಬಗ್ಗೆ ನೀವೆಂದಾದರೂ ಯೋಚಿಸಿದ್ದೀರಾ ? ಈ ನಮ್ಮ ಸಾಹಿತ್ಯ ಯಾರಿಗಾಗಿ ಇದೆ ? ನಾನು ಈ ಜನರಿಗೆ ಏನನ್ನು ತಾನೆ ಓದಿ ಹೇಳಬೇಕು ?" ಉದಾಹರಣೆಯಾಗಿ ಅವರು ಇಂಗ್ಲೆಂಡಿನ ಜನತೆ ಅರ್ಥ ಮಾಡಿಕೊಳ್ಳಬಹುದಾದ ಭಾಷೆಯಲ್ಲಿರುವ ಡೀನ್ ಫರ್ರಾರ್ ಬರೆದಿರುವ 'ಲೈಫ್ ಆಫ್ ಕ್ರೈಸ್ಟ್' ಅನ್ನು ಉದ್ಧರಿಸಿದರು. ಗುಜರಾತಿ ಭಾಷೆಯ 'ಇಂಡಿಯನ್ ಒಪಿನಿಯನ್'ನಲ್ಲಿ ಅವರು ಪ್ರಮುಖ ಪುರುಷ ಹಾಗೂ ಮಹಿಳೆಯರ ಸಂಕ್ಷಿಪ್ತ ಚಿತ್ರಣಗಳನ್ನು ಬರೆದರು. ಅವರ ಅಚ್ಚುಮೆಚ್ಚಿನ ಕವಿ–ತತ್ವಜ್ಞಾನಿಯಾದ ರಾಯ್‌ಚಂದಾನಿಯ ಜೀವನಚರಿತ್ರೆಯನ್ನು ಬರೆಯಬೇಕೆಂದು ಅವರನ್ನು ಕೇಳಿಕೊಂಡಾಗ, ಅವರು ಹೇಳಿದರು: "ರಾಯ್ ಚಂದಾನಿಯವರ ಜೀವನಚರಿತ್ರೆಯನ್ನು ನಾನು ಬರೆಯಬೇಕೆಂದರೆ, ಅವರ ಮನೆ, ಅವರ ಆಟದ ಬಯಲನ್ನು ನಾನು ಎಚ್ಚರಿಕೆಯಿಂದ ಅಭ್ಯಾಸ ಮಾಡಬೇಕು. ಅವರ ಗೆಳೆಯರು, ಸಹಪಾಠಿಗಳು, ಬಂಧುಬಳಗ ಮತ್ತು ಅನುಯಾಯಿಗಳ ಜೊತೆ ಬೆರೆಯಬೇಕು." ಇಲ್ಲಿಯೂ ಸಹ, ಅವರ ಮಾರ್ಗದರ್ಶಕ ತಾರೆ ಸತ್ಯವೇ ಆಗಿತ್ತು, ಕಲ್ಪನೆಯಲ್ಲ.

ಗಾಂಧಿ ಆಗಾಗ್ಗೆ ಭಾರತದ ಪುರಾಣಗಳಲ್ಲಿ, ರಾಮ, ಕೃಷ್ಣ ಮತ್ತು ಮಹಮ್ಮದರ ಜೀವನಗಳಲ್ಲಿ ಕಂಡುಬರುತ್ತಿದ್ದ ಘಟನೆಗಳನ್ನು, ಉದಾಹರಣೆಗಳನ್ನು ಮತ್ತು ನೀತಿಗಳನ್ನು ಉಲ್ಲೇಖಿಸುತ್ತಿದ್ದರು. ಇದರಿಂದ ಜನರಿಗೆ ಅವರ ವಿಚಾರಗಳು ಸ್ಪಷ್ಟವಾಗಿ ತಿಳಿಯುತ್ತಿದ್ದವು ಇದು ಆ ಜನರ ಹೃದಯಗಳನ್ನು ಮುಟ್ಟುವಂಥ ಅದ್ಭುತ ಶಕ್ತಿಯನ್ನು ಅವರಿಗೆ ಕೊಡುತ್ತಿತ್ತು.

ಅನ್ಯಾಯವಾಗಿ ಹೊಡೆಯುವುದು, ಬಿಳಿಯರ ಗೂಂಡಾಗಿರಿ, ಅಸ್ಪೃಶ್ಯತೆ, ಸ್ವಾರ್ಥಸಾಧಕ ಕಾಂಗ್ರೆಸ್ಸಿಗರು, ಶ್ವೇತವಸ್ತ್ರಧಾರಿ ಗೂಂಡಾಗಳಾಗಿ ಭ್ರಷ್ಟರಾಗುವುದನ್ನು ದೂಷಿಸುವಾಗ ಅವರ ನೇರನುಡಿಗಳು ಹರಿತವಾಗಿಯೂ, ಭವಿಷ್ಯಸೂಚಕವಾಗಿಯೂ ಇರುತ್ತಿದ್ದವು. ಲಾರ್ಡ್ ಕರ್ಜನ್‌ನ "ಸತ್ಯದ ಆದರ್ಶವು ಬಹುಮಟ್ಟಿಗೆ ಒಂದು ಪಾಶ್ಚಾತ್ಯ ಪರಿಕಲ್ಪನೆ" ಎಂಬ ಹೇಳಿಕೆಯನ್ನು ಗಾಂಧಿ ಪ್ರತಿಭಟಿಸುತ್ತಾ, ಭಾರತದಲ್ಲಿ ಸತ್ಯದ ಆರಾಧನೆಯನ್ನು ಬೆಂಬಲಿಸುವಂತಹ ರಾಮಾಯಣ, ಮಹಾಭಾರತ, ವೇದ ಮುಂತಾದವುಗಳಲ್ಲಿರುವ ಸಾಕ್ಷ್ಯಾಧಾರಗಳ ಸಮೂಹವನ್ನೇ ಉಲ್ಲೇಖಿಸಿದರು. ಒಬ್ಬ ಇಂಗ್ಲಿಷ್ ಸಭ್ಯಪುರುಷನಾಗಿ ಲಾರ್ಡ್ ಕರ್ಜನ್ ತನ್ನ ಆಧಾರರಹಿತ ಹಾಗೂ ಹೊಲಸು ಆರೋಪಗಳನ್ನು ಹಿಂತೆಗೆದುಕೊಳ್ಳಬೇಕೆಂದು ಅವರು ಹೇಳಿದರು. ಒಮ್ಮೆ ಗಾಂಧಿ ಕೇಳಿದರು: "ಮಹಮ್ಮದ್ ಎಲ್ಲಿದ್ದಾರೆ? ಅವರ ಶಾಂತಿಸಂದೇಶ ಎಲ್ಲಿದೆ? ಇಂದು ಮಹಮ್ಮದ್ ಏನಾದರೂ ಭಾರತಕ್ಕೆ ಬಂದಲ್ಲಿ, ಅವರ ಅನುಯಾಯಿಗಳೆಂದು ಹೇಳಿಕೊಳ್ಳುವ ಅನೇಕರನ್ನು ಅವರು ತ್ಯಜಿಸುತ್ತಾರೆ. ಜೀಸಸ್ ಹೇಗೆ ನನ್ನನ್ನು ಒಬ್ಬ ನಿಜವಾದ ಕ್ರೈಸ್ತ ಎಂದು ಸ್ವೀಕರಿಸುತ್ತಾರೋ ಹಾಗೆಯೇ ಮಹಮ್ಮದ್ ಸಹ ನನ್ನನ್ನು ಒಬ್ಬ ನಿಜವಾದ ಮುಸಲ್ಮಾನ ಎಂದು ಸ್ವೀಕರಿಸುತ್ತಾರೆ. ಪಶ್ಚಿಮ ದೇಶಗಳಲ್ಲಿ ನಿಜವಾದ ಕ್ರೈಸ್ತಮತ ಎಂಬುದಿಲ್ಲ, ಇದ್ದಿದ್ದರೆ, ಅಲ್ಲಿ ಯುದ್ಧವಾಗುತ್ತಿರಲಿಲ್ಲ."

"ಒಬ್ಬ ಕವಿ ತನ್ನದೇ ಸೃಷ್ಟಿಯಾದ ಮಾಂತ್ರಿಕ ಜಗತ್ತಿನಲ್ಲಿ ವಾಸಿಸುತ್ತಾನೆ, ಆದರೆ ತಾನು ಬೇರೆ ಯಾರದೋ ಸೃಷ್ಟಿಯಾದ ಚರಕಾಕ್ಕೆ ಗುಲಾಮನಾಗಿಬಿಟ್ಟಿದ್ದೇನೆ" ಎಂದು ಗಾಂಧಿ ಒಮ್ಮೆ ಹೇಳಿದರು. ಆದರೆ ಅವರ ವಿಚಾರಧಾರೆಯ ಹಾಗೂ ಭಾಷೆಯ ಸೌಂದರ್ಯ ನಮ್ಮ ಕಾಲದ ಹಲವಾರು ಶ್ರೇಷ್ಠ ವ್ಯಕ್ತಿಗಳ ಮೇಲೆ ಆಳವಾದ ಪರಿಣಾಮ ಬೀರಿದವು. ಅವರ ಬರವಣಿಗೆಗಳಲ್ಲಿನ ಅನೇಕ ವಾಕ್ಯಗಳು, ಅವರು ತಮ್ಮ ಲೇಖನಿಯ ಕೆಲವು ರೇಖೆಗಳಿಂದ ಎದ್ದು ಕಾಣುವಂಥ ಜೀವಂತ ಚಿತ್ರಗಳನ್ನು ಬರೆಯಬಲ್ಲವರಾಗಿದ್ದರು ಎಂಬುದಕ್ಕೆ ಸಾಕ್ಷಿಯಾಗಿವೆ: "ಮೈಸೂರಿನಲ್ಲಿ ನಾನು ಒಂದು ಪ್ರಾಚೀನ ದೇವಾಲಯದಲ್ಲಿ ಒಂದು ಪುಟ್ಟ ವಿಗ್ರಹದಿಂದ ಮಾಡಲಾದ ಕಲ್ಲಿನ ಗೋಡೆಯಿಂದ ಮುಂದಕ್ಕೆ ಚಾಚಿಕೊಂಡಿದ್ದಂತಹ ಒಂದು ಪೀಠವನ್ನು ನೋಡಿದೆ. ಆ ವಿಗ್ರಹ ನನ್ನೊಂದಿಗೆ ಮಾತನಾಡಿತು. ಅದು ಮದನನ ಬಾಣಗಳಿಂದ ತನ್ನನ್ನು ಬಿಡಿಸಿಕೊಳ್ಳಲು ತನ್ನ ಉಡುಪಿನ ಮಡಿಕೆಗಳೊಂದಿಗೆ ಸೆಣಗುತ್ತಿರುವ ಒಂದು ಸ್ತ್ರೀಯ ಅರೆಬೆತ್ತಲೆಯ ವಿಗ್ರಹ. ಮದನ ಆಕೆಯ ಪಾದಗಳಲ್ಲಿ ಒಂದು ಚೇಳಿನ ರೂಪದಲ್ಲಿ ಸೋತು ಬಿದ್ದಿದ್ದಾನೆ. ಆ ವಿಗ್ರಹರೂಪದ ಪ್ರಾಣಸಂಕಟವನ್ನು, ಆ ಚೇಳು ಕುಟುಕಿದ್ದರಿಂದಾದ ಮರಣಯಾತನೆಯನ್ನು ನಾನು ನೋಡಬಲ್ಲವನಾಗಿದ್ದೆ."

"ನಿಮಗೆ ಒರಿಸ್ಸಾ ಮತ್ತು ಅದರ ಅಸ್ಥಿಪಂಜರಗಳು ಗೊತ್ತೆ? ಸರಿ, ಹಸಿವಿನಿಂದ ಬಾಧಿತವಾದ, ಶಕ್ತಿಗುಂದಿದ ಅಸ್ಥಿಪಂಜರಗಳ ಆ ನೆಲದಿಂದ ಮೂಳೆ, ಕೊಂಬು ಮತ್ತು ಬೆಳ್ಳಿಯಿಂದ ಪವಾಡಗಳನ್ನು ಮಾಡಿದ ಪುರುಷರು ಬಂದಿದ್ದಾರೆ. ಶಕ್ತಿಗುಂದಿರುವಂಥ ದೇಹದಲ್ಲೂ ಇರುವ ಒಬ್ಬ ಮನುಷ್ಯನ ಆತ್ಮ, ಜೀವರಹಿತ ಕೊಂಬುಗಳು ಮತ್ತು ಲೋಹಗಳಲ್ಲಿ ಹೇಗೆ ಜೀವ ತುಂಬಬಲ್ಲದು ಎಂಬುದನ್ನು ಹೋಗಿ ನೋಡಿ. ಒಬ್ಬ ಬಡ ಕುಂಬಾರ ಮಣ್ಣಿನಿಂದ ಪವಾಡಗಳನ್ನು ಸೃಷ್ಟಿಸಿದ್ದಾನೆ."

"ಆ ಸ್ಥಳ ನದಿಯ ದಂಡೆಯ ಮೇಲಿತ್ತು. ನದಿಯು ಮರ-ಪೊದೆಗಳ ನೆರಳುಗಳಿದ್ದ ಪರಿಚಿತ ಬೆಟ್ಟಸಾಲುಗಳ ಮಧ್ಯೆ ಹರಿಯುತ್ತಿತ್ತು. ನದಿಯ ದಂಡೆಯಲ್ಲಿ ಮರಳಿತ್ತು, ಮಣ್ಣು-ಕೊಚ್ಚೆಯಲ್ಲ. ನದಿಯ ನೀರಿನಲ್ಲಿ ಒಂದು ವೇದಿಕೆಯನ್ನು ಕಟ್ಟಲಾಗಿತ್ತು. ಈ ವೇದಿಕೆಯ ಮುಂದಿದ್ದ ರಸ್ತೆಯ ಎರಡೂ ಬದಿಗಳಲ್ಲಿ ಹನ್ನೆರಡು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಪುರುಷರು ಹಾಗೂ ಮಹಿಳೆಯರ ದೊಡ್ಡ ದೊಡ್ಡ ಗುಂಪುಗಳು ಪರಿಪೂರ್ಣ ಮೌನದಲ್ಲಿ ಕುಳಿತಿದ್ದವು."

"ಬೆಳ್ಳಂಬೆಳಗ್ಗೆ ನಾನು ಮಲಬಾರನ್ನು ಪ್ರವೇಶಿಸಿದೆ. ಆ ಪರಿಚಿತ ಸ್ಥಳಗಳಲ್ಲಿ ನಾನು ಹೋಗುತ್ತಿದ್ದಂತೆ, ಹಿಂದಿನ ಭೇಟಿಯಲ್ಲಿ ನಾನು ಕಂಡಿದ್ದ ಒಬ್ಬ ನಾಯರಿಯ ಮುಖ ನನ್ನ ಕಣ್ಣುಗಳೆದುರು ಬಂದಿತು. ಅಸ್ಪೃಶ್ಯತೆಯ ಬಗೆಗಿನ ಒಂದು ಚರ್ಚೆಯ ಮಧ್ಯದಲ್ಲಿ ಒಂದು ಕರ್ಕಶ ಧ್ವನಿ ಕೇಳಿಬಂದಿತು. ನನ್ನೊಂದಿಗೆ ಮಾತನಾಡುತ್ತಿದ್ದವರು 'ನಿಮಗೆ ನಾವು ಒಂದು ಜೀವಂತ ನಾಯರಿಯನ್ನು ತೋರಿಸಬಲ್ಲೆವು' ಎಂದರು. ಸಾರ್ವಜನಿಕ ರಸ್ತೆ ಅವನಿಗೆ ಬೇಕಾಗಿರಲಿಲ್ಲ. ಪಾದರಕ್ಷೆಗಳಿಲ್ಲದೆ, ಅವನು ಹೊಲಗದ್ದೆಗಳ ಮಧ್ಯೆ, ಹೆಜ್ಜೆಸಪ್ಪಳ ಮಾಡದೆ ನಡೆದುಬರುತ್ತಿದ್ದ. ಹತ್ತಿರ ಬಂದು ನನ್ನೊಂದಿಗೆ ಮಾತನಾಡುವಂತೆ ನಾನು ಅವನಿಗೆ ಹೇಳಿದೆ. ಕಂಪಿಸುತ್ತಾ ಅವನು ನನ್ನೊಂದಿಗೆ ಮಾತನಾಡಿದ. ಸಾರ್ವಜನಿಕ ರಸ್ತೆ ಎಷ್ಟರ ಮಟ್ಟಿಗೆ ನನ್ನದೋ, ಅಷ್ಟರ ಮಟ್ಟಿಗೆ ಅವನದೂ ಕೂಡ ಎಂದು ನಾನು ಹೇಳಿದೆ. 'ಹಾಗಲ್ಲ ಅದು. ನಾನು ಸಾರ್ವಜನಿಕ ರಸ್ತೆಯ ಮೇಲೆ ನಡೆಯದೇ ಇರಬಹುದು' ಎಂದು ಅವನು ಹೇಳಿದ. ನಿಮ್ಮೊಂದಿಗೆ ನಾನು ನಗುತ್ತಾ, ನಗೆಚಟಾಕಿ ಹಾರಿಸುತ್ತಾ ಇರುವುದನ್ನು ನೀವು ನೋಡಬಹುದು. ಆದರೆ ಈ ಎಲ್ಲಾ ತಮಾಷೆ, ಮುಗುಳ್ನಗು ಮತ್ತು ನಗುವಿನ ಹಿಂದೆ ನಾಯರಿಯ ಮುಖವಿದೆ ಹಾಗೂ ಆ ದೃಶ್ಯ ನನ್ನ ಮಲಬಾರಿನ ಇಡೀ ಪ್ರವಾಸದಲ್ಲಿ ನನ್ನನ್ನು ಕಾಡುತ್ತಿರುತ್ತದೆ ಎಂಬುದನ್ನು ಸಹ ನಿಮಗೆ ತಿಳಿಯಬೇಕು."

ಪತ್ರಕರ್ತ

ತಮ್ಮ 19ನೇ ವಯಸ್ಸಿನಲ್ಲಿ ಇಂಗ್ಲೆಂಡನ್ನು ತಲುಪಿದ ಗಾಂಧಿ ಸುದ್ದಿಪತ್ರಿಕೆಗಳನ್ನು ನಿಯಮಿತವಾಗಿ ಓದುವ ಓದುಗರಾಗಿಬಿಟ್ಟರು. ಶಾಲಾ ವಿದ್ಯಾರ್ಥಿಯಾಗಿದ್ದಾಗ, ಭಾರತದಲ್ಲಿ ಅವರು ಪತ್ರಿಕೆಗಳನ್ನು ಓದುತ್ತಿರಲಿಲ್ಲ. ಅವರು 'ದಿ ವೆಜಿಟೇರಿಯನ್' ಎಂಬ ಇಂಗ್ಲಿಷ್ ವಾರಪತ್ರಿಕೆಯಲ್ಲಿ ಸಸ್ಯಾಹಾರ, ಭಾರತೀಯ ಆಹಾರ ಪದ್ಧತಿಗಳು, ಸಂಪ್ರದಾಯಗಳು ಮತ್ತು ಧಾರ್ಮಿಕ ಹಬ್ಬಗಳ ಬಗ್ಗೆ ಮೊದಲು ಒಂದು ಸರಣಿಲೇಖನವನ್ನು ಬರೆದರು. ಅವರ ಆರಂಭದ ಬರವಣಿಗೆಗಳು ಯಾವುದೇ ವಿಚಾರವನ್ನು ಸರಳವಾದ ನೇರ ಭಾಷೆಯಲ್ಲಿ ಹೇಳುವಂಥ ಅವರ ಸಾಮರ್ಥ್ಯವನ್ನು ತೋರಿಸಿದವು.

ಎರಡು ವರ್ಷಗಳ ನಂತರ, ಗಾಂಧಿ ಮತ್ತೆ ಪತ್ರಿಕೋದ್ಯಮಕ್ಕೆ ಬಂದರು. ಅಂದಿನಿಂದ ಅವರ ಜೀವನದ ಅಂತ್ಯದವರೆಗೂ ಅವರ ಲೇಖನಿಗೆ ವಿಶ್ರಾಂತಿ ಎಂಬುದೇ ಇರಲಿಲ್ಲ. ಅವರು ಯಾವುದನ್ನೂ ಒಂದು ಪ್ರಭಾವ ಬೀರುವುದಕ್ಕಷ್ಟೆ ಬರೆಯಲಿಲ್ಲ; ಅಲ್ಲದೆ, ಬಹಳ ಎಚ್ಚರಿಕೆಯಿಂದ ಉತ್ಪ್ರೇಕ್ಷೆಗಳನ್ನು ದೂರವಿರಿಸಿದ್ದರು. ಸತ್ಯಕ್ಕೆ ಸೇವೆ ಸಲ್ಲಿಸುವುದು, ಜನರನ್ನು ಶಿಕ್ಷಿತರನ್ನಾಗಿಸುವುದು ಮತ್ತು ತಮ್ಮ ದೇಶಕ್ಕೆ ನೆರವಾಗುವುದಷ್ಟೇ ಅವರ ಗುರಿಯಾಗಿತ್ತು.

ದಕ್ಷಿಣ ಆಫ್ರಿಕಾಕ್ಕೆ ಬಂದ ಮೂರನೆಯ ದಿವಸ, ನ್ಯಾಯಾಲಯದಲ್ಲಿ ಗಾಂಧಿಗೆ ಅವಮಾನವಾಯಿತು. ಕೂಡಲೆ ಅವರು ಈ ಘಟನೆಯ ಬಗ್ಗೆ ಬರೆದು, ಸ್ಥಳೀಯ ಸುದ್ದಿಪತ್ರಿಕೆಯಲ್ಲಿ ಪ್ರಕಟಿಸಿದರು; ಒಂದು ರಾತ್ರಿಯಲ್ಲಿ ಪ್ರಚಾರವನ್ನು ಪಡೆದುಕೊಂಡರು.

35ನೇ ವಯಸ್ಸಿನಲ್ಲಿ, 'ಇಂಡಿಯನ್ ಒಪಿನಿಯನ್'ನ ಜವಾಬ್ದಾರಿ ವಹಿಸಿಕೊಂಡರು. ಅದರ ಮೂಲಕ ದಕ್ಷಿಣ ಆಫ್ರಿಕಾದ ಭಾರತೀಯರಿಗೆ ಮಾರ್ಗದರ್ಶನ ಮಾಡಿದರು, ಅವರನ್ನು ಒಂದುಗೂಡಿಸಿದರು. ಫೀನಿಕ್ಸ್‌ನಲ್ಲಿ ಈ ವಾರಪತ್ರಿಕೆಯ ಗುಜರಾತಿ ಆವೃತ್ತಿ ಏಕಕಾಲಿಕವಾಗಿ ಪ್ರಕಟವಾಗುತ್ತಿತ್ತು. ಗುಜರಾತಿ ಭಾಷೆಯ 'ಇಂಡಿಯನ್ ಒಪಿನಿಯನ್'ನಲ್ಲಿ ಪಥ್ಯದ ನಿಯಮಗಳ ಬಗ್ಗೆ ಒಂದು ಸರಣಿಲೇಖನ ಬಂದಿತು. ಹಾಗೆಯೇ, ಶ್ರೇಷ್ಠ ಪುರುಷ ಹಾಗೂ ಮಹಿಳೆಯರ ಜೀವನದ ಬಗ್ಗೆಯೂ ಲೇಖನಗಳು ಪ್ರಕಟವಾದವು. ಈ ಎರಡೂ ವಾರಪತ್ರಿಕೆಗಳ ಪ್ರತಿ ಸಂಚಿಕೆಯಲ್ಲಿಯೂ ಗಾಂಧಿಯ ಲೇಖನಗಳಿರುತ್ತಿದ್ದವು. ಈ ಪತ್ರಿಕೆಗಳಿಗೆ ಸಂಪಾದಕರಿದ್ದರಾದರೂ, ಗಾಂಧಿಯೇ ಇಡೀ ಜವಾಬ್ದಾರಿಯನ್ನು ಹೊತ್ತಿದ್ದರು. ಅವರಿಗೆ ಸಾರ್ವಜನಿಕ ಅಭಿಪ್ರಾಯವನ್ನು ತಿದ್ದಬೇಕಾಗಿತ್ತು, ಬಿಳಿಯರು ಮತ್ತು ಭಾರತೀಯರ ನಡುವಿನ ಅಪಾರ್ಥವನ್ನು ನಿವಾರಿಸಬೇಕಾಗಿತ್ತು ಮತ್ತು ತಮ್ಮ ದೇಶವಾಸಿಗಳ ನ್ಯೂನತೆಗಳನ್ನು ಎತ್ತಿ ತೋರಿಸಬೇಕಾಗಿತ್ತು. ಅವರು 'ಇಂಡಿಯನ್ ಒಪಿನಿಯನ್'ನ ಅಂಕಣಗಳಲ್ಲಿ ತಮ್ಮ ಚೈತನ್ಯವನ್ನೆಲ್ಲಾ ಸುರಿದರು. ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿದ್ದ ಸತ್ಯಾಗ್ರಹ ಹೋರಾಟದ ವಿವರಗಳನ್ನು ಸವಿಸ್ತಾರವಾಗಿ ಪ್ರಕಟಿಸಿದರು. ಅವರ ಲೇಖನಗಳಿಂದ ದಕ್ಷಿಣ ಆಫ್ರಿಕಾದಲ್ಲಿ ಏನಾಗುತ್ತಿದೆ ಎಂಬುದರ ನೈಜಚಿತ್ರಣವನ್ನು ಹೊರನಾಡುಗಳ ಓದುಗರು ಕಂಡುಕೊಳ್ಳಬಲ್ಲವರಾಗಿದ್ದರು. ಭಾರತದಲ್ಲಿ ಗೋಖಲೆ, ಇಂಗ್ಲೆಂಡಿನಲ್ಲಿ ದಾದಾಭಾಯ್ ನವರೋಜಿ ಹಾಗೂ ರಷ್ಯಾದಲ್ಲಿ ಟಾಲ್‌ಸ್ಟಾಯ್ ಈ ಲೇಖನಿಗಳನ್ನು ಓದುತ್ತಿದ್ದ ಪ್ರಮುಖ ಓದುಗರಾಗಿದ್ದರು. ಈ ವಾರಪತ್ರಿಕೆಗಾಗಿ ಗಾಂಧಿ ಹತ್ತು ವರ್ಷಗಳ ಕಾಲ ಶ್ರಮವಹಿಸಿ ದುಡಿದರು. ಅವರು 'ಇಂಡಿಯನ್ ಒಪಿನಿಯನ್'ನ ಬದಲಿಗೆ ವಾರಕ್ಕೆ ಇನ್ನೂರು ನಿಯತಕಾಲಿಕಗಳನ್ನು ಪಡೆಯುತ್ತಿದ್ದರು. ಒಂದೊಂದನ್ನೂ ಜಾಗರೂಕತೆಯಿಂದ ಓದುತ್ತಿದ್ದರು; 'ಇಂಡಿಯನ್ ಒಪಿನಿಯನ್'ನ ಓದುಗರಿಗೆ ಪ್ರಯೋಜನವಾಗಬಹುದಾದ ಸುದ್ದಿಯನ್ನು ಪುನಃ ರೂಪಿಸಿ ಬರೆಯುತ್ತಿದ್ದರು.

ವಿಚಾರಗಳನ್ನು ಹರಡುವಲ್ಲಿ ಸುದ್ದಿಪತ್ರಿಕೆಗಳು ಒಂದು ಶಕ್ತಿಯುತ ಮಾಧ್ಯಮವಾಗಬಲ್ಲವು ಎಂಬುದನ್ನು ಗಾಂಧಿ ಅರಿತಿದ್ದರು. ಅವರೊಬ್ಬ ಯಶಸ್ವೀ ಪತ್ರಕರ್ತರಾಗಿದ್ದರು, ಆದರೆ ಪತ್ರಿಕೋದ್ಯಮದಿಂದಲೇ ಬದುಕಬೇಕೆಂಬ ಇಚ್ಛೆ ಇರಲಿಲ್ಲ. ಪತ್ರಿಕೋದ್ಯಮದ ಗುರಿ ಸೇವೆಯಷ್ಟೆ ಎಂದು ಅವರು ನಂಬಿದ್ದರು: "ಸ್ವಾರ್ಥ ಗುರಿಗಳಿಗಾಗಿ ಅಥವಾ ಜೀವನೋಪಾಯಕ್ಕೆ ಏನನ್ನಾದರೂ ಗಳಿಸುವ ಸಲುವಾಗಿ ಪತ್ರಿಕೋದ್ಯಮವನ್ನು ದುರುಪಯೋಗ ಮಾಡಿಕೊಳ್ಳಬಾರದು. ಮತ್ತು, ಸಂಪಾದಕರಿಗಾಗಲೀ ಅಥವಾ ಸಂಚಿಕೆಗಳಿಗಾಗಲೀ ಏನೇ ಆದರೂ, ಅದು ದೇಶದ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು, ಅದರ ಪರಿಣಾಮಗಳು ಏನೇ ಇರಲಿ. ಅವು ಜನರ ಹೃದಯಗಳಲ್ಲಿ ಇಳಿಯಬೇಕಾದರೆ, ಬೇರೆಯೇ ರೀತಿಯ ಕಾರ್ಯಕೌಶಲ್ಯವನ್ನು ತಮ್ಮದಾಗಿಸಿಕೊಳ್ಳಬೇಕು."

ಆದರೂ, ಗಾಂಧಿ ಕಟ್ಟುನಿಟ್ಟಿನ ವಾಸ್ತವಾಂಶಗಳಿಂದ ದೂರ ಸರಿಯುತ್ತಿರಲಿಲ್ಲ. ಅವರು ಆಲಂಕಾರಿಕಗಳ ಬಳಕೆಯನ್ನು ಮಾಡುತ್ತಿರಲಿಲ್ಲ, ವಿವೇಚನಾರಹಿತ ಹೇಳಿಕೆಗಳನ್ನು ನೀಡುತ್ತಿರಲಿಲ್ಲ ಅಥವಾ ಅನವಶ್ಯಕವಾಗಿ ಗುಣವಾಚಕಗಳನ್ನು ಉಪಯೋಗಿಸುತ್ತಿರಲಿಲ್ಲ. ಅನುವಾದ ತಪ್ಪಿಲ್ಲದಂತಿರುವ ಬಗ್ಗೆ ಹಾಗೂ ಪದಗಳ ಆಯ್ಕೆಯಲ್ಲಿ ಬಹಳ ಜಾಗರೂಕರಾಗಿರುತ್ತಿದ್ದರು. ಅವರಿಗೆ ಅನಾಮಧೇಯ ಪತ್ರಗಳೆಂದರೆ ಹಿಡಿಸುತ್ತಿರಲಿಲ್ಲ, ಆದರೆ ನಿಯಮದ ಪ್ರಕಾರ, ಸಂಪಾದಕರಿಗೆ ಬರೆದಂಥ, ಪ್ರತಿಕೂಲವಾದ ಟೀಕೆಗಳನ್ನು ಹೊಂದಿರುತ್ತಿದ್ದ ಎಲ್ಲಾ ಪತ್ರಗಳನ್ನು ಪ್ರಕಟಿಸುತ್ತಿದ್ದರು.

'ಇಂಡಿಯನ್ ಒಪಿನಿಯನ್'ನ ಜವಾಬ್ದಾರಿಯನ್ನು ಅವರು ವಹಿಸಿಕೊಂಡಾಗ, ಅದು ನಷ್ಟದಲ್ಲಿದ್ದ ಸಂಸ್ಥೆಯಾಗಿತ್ತು. ಅದರ ಪ್ರಸರಣಾ ಸಂಖ್ಯೆ ಕೇವಲ ನಾನ್ನೂರು ಆಗಿತ್ತು. ಅದರಿಂದ ಲಾಭ ಮಾಡಬೇಕೆಂದೇನೂ ಅವರು ಬಯಸಿರಲಿಲ್ಲ, ಆದರೆ ತನಗಾಗಿ ಏನೂ ಹುಟ್ಟಿಸದ ಸುದ್ದಿಪತ್ರಿಕೆಯ ಸಂಪಾದನೆ ಮಾಡುವುದರಲ್ಲಿ ಭಾಗಿಯಾಗುವುದು ಸಹ ಅವರಿಗಿಷ್ಟವಿರಲಿಲ್ಲ. ಕೆಲವು ತಿಂಗಳುಗಳ ಕಾಲ 'ಇಂಡಿಯನ್ ಒಪಿನಿಯನ್' ಅನ್ನು ನಡೆಸುವುದಕ್ಕೆ ಅವರು ತಿಂಗಳಿಗೆ 1,200 ರೂಪಾಯಿಗಳನ್ನು ದೇಣಿಗೆಯಾಗಿ ಕೊಡುತ್ತಿದ್ದರು. ಎಲ್ಲಾ ಸೇರಿ, ಅವರಿಗೆ 26,000 ರೂ.ಗಳ ವೈಯಕ್ತಿಕ ನಷ್ಟವಾಯಿತು. ಈ ಭಾರೀ ನಷ್ಟ ಇದ್ದಾಗ್ಯೂ, ತಮ್ಮ ವಿಚಾರಗಳನ್ನು ಪತ್ರಿಕೆಗಳ ಮೂಲಕ ಹರಡಲು, ಅವುಗಳಲ್ಲಿ ಹೆಚ್ಚು ಸ್ಥಳಾವಕಾಶ ಒದಗಿಸುವ ಸಲುವಾಗಿ ಜಾಹೀರಾತುಗಳ ಕೈಬಿಡಲು ಆಮೇಲೆ ಅವರು ನಿರ್ಧರಿಸಿದರು. ಜಾಹೀರಾತುಗಳನ್ನು ಒಪ್ಪಿಕೊಂಡ ಪಕ್ಷದಲ್ಲಿ, ಸತ್ಯದ ಸೇವೆ ಮಾಡುವುದು ಮತ್ತು ಸ್ವತಂತ್ರವಾಗಿರುವುದು ಅಸಾಧ್ಯವಾಗುತ್ತದೆ ಎಂಬುದು ಅವರಿಗೆ ತಿಳಿದಿತ್ತು. "ಆದಾಯಕ್ಕಾಗಿ ಚಂದಾಗಳಿಗೆ ಬದಲು ಮುಖ್ಯವಾಗಿ ಜಾಹೀರಾತುಗಳನ್ನು ಅವಲಂಬಿಸುವುದೆಂದರೆ, ಅದು ಖಂಡನೀಯ. ಯಾವ ಸುದ್ದಿಪತ್ರಿಕೆ ಕುಡಿತದ ಕೆಡುಕಿನ ಬಗ್ಗೆ ಬರೆಯುತ್ತದೋ, ಅದೇ ಪತ್ರಿಕೆ ಕುಡಿತವನ್ನು ಹೊಗಳುವ ಜಾಹೀರಾತುಗಳನ್ನು ಪ್ರಕಟಿಸುತ್ತದೆ. ಶೇಕಡ 99ರಷ್ಟು ಜಾಹೀರಾತುಗಳು ಅಪ್ರಯೋಜಕ. ದೇಶಕ್ಕೆ ಹಾನಿಕಾರಿ. ಅನೇಕವು ಕಪಟಯುಕ್ತ ಹಾಗೂ ಅಶ್ಲೀಲ." ಗಾಂಧಿ ತಪ್ಪು ಮಾರ್ಗಗಳ ಮೂಲಕ ತಮ್ಮ

ಪತ್ರಿಕೆಗಳ ಮಾರಾಟ ಹೆಚ್ಚಿಸಲು ಅಥವಾ ಇತರ ಪತ್ರಿಕೆಗಳೊಂದಿಗೆ ಪೈಪೋಟಿ ಮಾಡಲು ಎಂದೂ ಲಕ್ಷ್ಯ ಕೊಡಲಿಲ್ಲ. ಪದಬಂಧ ಸಮಸ್ಯೆ ಇತ್ಯಾದಿಗಳಿಗೆ ಬಹುಮಾನದ ಮೊತ್ತವನ್ನು ಕೊಡುವುದಾಗಿಯೂ ಹೇಳಲಿಲ್ಲ. ಏಕೆಂದರೆ, ಚಂದಾದಾರರನ್ನು ಸೆಳೆಯಲು ಇತರ ಆಮಿಷಗಳನ್ನು ಒಡ್ಡಲು ಅವರು ಬಯಸಲಿಲ್ಲ: "ನನ್ನ ಆತ್ಮಕಥೆಯ ಅಧ್ಯಾಯಗಳನ್ನು ನಕಲುಮಾಡಿ ಪ್ರಕಟಿಸದಂತೆ ಇತರ ಸುದ್ದಿಪತ್ರಿಕೆಗಳ ಮೇಲೆ ನಿಷೇಧ ಹೇರಿ, 'ಯಂಗ್ ಇಂಡಿಯಾ' ಅಥವಾ 'ನವಜೀವನ್'ಗಳ ಪ್ರಸರಣಾ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ಬಯಕೆಯೇನೂ ನನಗಿಲ್ಲ."

ಭಾರತದಲ್ಲಿಯೂ 30 ವರ್ಷಗಳ ಕಾಲ ಅವರು ತಮ್ಮ ವಾರಪತ್ರಿಕೆಗಳನ್ನು ಜಾಹೀರಾತುಗಳಿಂದ ಹೊಲಸುಗೊಳಿಸದೆ, ಸಂಚಿಕೆಗಳನ್ನು ಪ್ರಕಟಿಸಿದರು. ಪ್ರತಿಯೊಂದು ಪ್ರಾಂತ್ಯದಲ್ಲೂ, ಒಂದೇ ಒಂದು ಜಾಹೀರಾತು ಮಾಧ್ಯಮವಿರಬೇಕು ಹಾಗೂ ಅದು ಜನರಿಗೆ ಪ್ರಯೋಜನಕಾರಿಯಾದ ಯೋಗ್ಯ ವಿವರಗಳನ್ನು ಪ್ರಕಟಿಸಬೇಕು ಎಂದು ಅವರು ಸಲಹೆ ನೀಡಿದರು. 'ಯಂಗ್ ಇಂಡಿಯಾ'ದ ಸಂಪಾದಕತ್ವವನ್ನು ಒಪ್ಪಿಕೊಂಡ ಮೇಲೆ, ಒಂದು ಗುಜರಾತಿ ಭಾಷೆಯ ಪತ್ರಿಕೆಯನ್ನು ನಡೆಸುವುದಕ್ಕೂ ಆಸಕ್ತಿಯಿತ್ತು, ಏಕೆಂದರೆ ಒಂದು ಭಾಷಾಪತ್ರಿಕೆಯ ಅಗತ್ಯ ಇದೆ ಎಂದು ಅವರಿಗೆ ಅನ್ನಿಸುತ್ತಿತ್ತು. ಹೀಗೆ, ಅವರು 'ನವಜೀವನ್' ಹೊರತಂದರು; 'ಯಂಗ್ ಇಂಡಿಯಾ'ದ ಹಿಂದಿ ಮತ್ತು ಗುಜರಾತಿ ಆವೃತ್ತಿಗಳನ್ನೂ ಹೊರತಂದರು. ಅವುಗಳಲ್ಲಿ ಅನೇಕ ಲೇಖನಗಳನ್ನು ನಿಯಮಿತವಾಗಿ ಬರೆದರು. 'ಯಂಗ್ ಇಂಡಿಯಾ' 1,200ಕ್ಕಿಂತ ಸ್ವಲ್ಪ ಹೆಚ್ಚು ಚಂದಾದಾರರನ್ನು ಹೊಂದಿದ್ದಾಗ, 'ನವಜೀವನ್' 12,000 ಚಂದಾದಾರರನ್ನು ಹೊಂದಿತ್ತು. ಆಗ 'ನವಜೀವನ್'ನ ವಾರ್ಷಿಕ ಚಂದಾಶುಲ್ಕವನ್ನು 8ರಿಂದ 4 ರೂಪಾಯಿಗಳಿಗೆ ಇಳಿಸಿದರು. ತಮ್ಮ ವಾರಪತ್ರಿಕೆಗಳ ಪುಟಸಂಖ್ಯೆಯನ್ನು ಕಡಿಮೆ ಮಾಡಿದಾಗ ಅಥವಾ ಆ 'ನವಜೀವನ್'ನಿಂದ ಬಂದ ಲಾಭದಲ್ಲಿ ಖಾದಿ ಕೆಲಸಕ್ಕಾಗಿ 50,000 ರೂಪಾಯಿಗಳ ದೇಣಿಗೆ ಕೊಟ್ಟಾಗ, ಅವರು ತಮ್ಮ ಓದುಗರಲ್ಲಿ ಕ್ಷಮಾ ಪ್ರಾರ್ಥನೆಯನ್ನೇನೂ ಮಾಡಲಿಲ್ಲ.

"ಜನತೆಯನ್ನು ತಲುಪುವುದೇ ನನ್ನ ಮಹತ್ವಾಕಾಂಕ್ಷೆ. ಇದನ್ನು ತಾಯಿನುಡಿಯ ಮೂಲಕವೇ ಮಾಡಬಹುದು. ನನ್ನ ಭಾಷೆ ಸ್ಪಷ್ಟವಾಗಿ ಗ್ರಾಮ್ಯದ್ದು. 'ನವಜೀವನ್' ಅನ್ನು ಕುದುರೆಗಾಡಿ ಓಡಿಸುವವರು ಮತ್ತು ಕಾರ್ಮಿಕರು ಓದುತ್ತಾರೆ. ಅದು ರೈತರನ್ನು ಹಾಗೂ ನೇಕಾರರನ್ನು ಅವರವರ ಗುಡಿಸಲುಗಳಲ್ಲೇ ತಲುಪಬೇಕು ಎಂದು ನಾನು ಬಯಸುತ್ತೇನೆ. ಅದು ಅವರ ಭಾಷೆಗಳಲ್ಲೇ ಇರಬೇಕೆಂದು ನನ್ನ ಆಸೆ. ಭಾರತವನ್ನು ರೂಪಿಸುವವರು ಅವರೇ" ಎಂದು ಹೇಳಲು ಅವರಿಗೆ ಹೆಮ್ಮೆ ಎನಿಸುತ್ತಿತ್ತು. ಇಂಗ್ಲಿಷಿನಲ್ಲಿ ಒಂದು ಪತ್ರಿಕೆಯ ಸಂಪಾದನೆ ಮಾಡುವುದು ಅವರಿಗೆ ಆನಂದದ ವಿಷಯವಾಗಿರಲಿಲ್ಲ, ಏಕೆಂದರೆ ಇಂಗ್ಲಿಷ್ ಸೂಕ್ಷ್ಮದರ್ಶಕವಿಲ್ಲದೆಯೇ ಎದ್ದು ಕಾಣುವಷ್ಟು ಸೂಕ್ಷ್ಮವಾದ ಅಲ್ಪಸಂಖ್ಯಾತರನ್ನು ತಲುಪುವ ಒಂದು ಮಾಧ್ಯಮವಾಗಿತ್ತಷ್ಟೆ.

ತಮ್ಮ ಪತ್ರಿಕೆಗಳ ಓದುಗರು ಆ ಪತ್ರಿಕೆಗಳ ಮಾಲೀಕರು ತಾವೇ ಎಂದು ತಿಳಿದುಕೊಳ್ಳಬೇಕೆಂದು ಗಾಂಧಿ ಬಯಸಿದ್ದರು. ಎಲ್ಲಾ ಭಾರತೀಯರು ತಮ್ಮ ಪತ್ರಿಕೆಯನ್ನು ಅವರಿಗೇ ಸೇರಿದ ಪತ್ರಿಕೆಯಾಗಿ ನೋಡಬೇಕು, ಗಾಂಧಿಗೆ ಸೇರಿದ್ದು ಎಂಬಂತಲ್ಲ ಎಂದು ಅವರು ಆಶಿಸಿದ್ದರು. 'ನವಜೀವನ್'ನಲ್ಲಿ ಪರ್ವತದಂತಹ ತಪ್ಪುಗಳು ಕಂಡುಬಂದಲ್ಲಿ, ಓದುಗರು ಅದನ್ನು ಕೊಳ್ಳುವುದೇ ನಿಲ್ಲಿಸಬೇಕು ಹಾಗೂ 'ನವಜೀವನ್ ಬಹಿಷ್ಕಾರ ಸಂಘ'ವನ್ನು ಸ್ಥಾಪಿಸಬೇಕೆಂದೂ ಸಹ ಹೇಳಿದರು. ತನ್ನ ಸಹಾಯಕನ ತಪ್ಪುಗಳಿಗೆ, ವರದಿಗಾರರು ಮತ್ತು ಇತರ ಲೇಖನದಾತರು ಮಾಡುವ ತಪ್ಪುಗಳಿಗೆ, ಅಕ್ಷರ ಜೋಡಿಸುವವನಿಂದ ನುಸುಳುವ ತಪ್ಪುಗಳು ಅಥವಾ ಕರಡು ಪ್ರತಿ ತಿದ್ದುವವನ ದೋಷಗಳಿಗೆ ಅಥವಾ ಮುದ್ರಣಯಂತ್ರದ ವಿಫಲತೆಯ ಕಾರಣದಿಂದ ಸಕಾಲದಲ್ಲಿ ಪ್ರತಿಗಳನ್ನು ಅಂಚೆಗೆ ಕಳುಹಿಸುವಲ್ಲಿ ಆಗುವ ವಿಫಲತೆ – ಇವೆಲ್ಲವಕ್ಕೂ ಸಂಪಾದಕನೇ ಜವಾಬ್ದಾರನಾಗುತ್ತಾನೆ ಎಂಬುದು ಅವರಿಗೆ ತಿಳಿದಿತ್ತು. ಅವರ ಸಂಪಾದಕತ್ವದಡಿಯಲ್ಲಿ, ಅವರ ವಾರಪತ್ರಿಕೆಗಳ ಪ್ರಕಟಣೆ ಒಂದೇ ಒಂದು ಬಾರಿಯೂ ನಿಲ್ಲಲಿಲ್ಲ. ಅವರು ಒಮ್ಮೆ ಬರ್ಮಾ, ಸಿಲೋನ್ ಮತ್ತು ಇಂಗ್ಲೆಂಡಿಗೆ ಭೇಟಿ ನೀಡಿದ್ದ ಸಮಯದಲ್ಲಿಯೂ, ಅವರಿಂದ ಬರಹಗಳು ತಡವಾಗಿ ಬಂತೆಂಬ ಕಾರಣದಿಂದ ಪತ್ರಿಕೆಗಳ ಪ್ರಕಟಣೆಯಲ್ಲಿ ತಡ ಇರುತ್ತಿರಲಿಲ್ಲ. ಅತ್ಯಂತ ಕಾರ್ಯಬಾಹುಳ್ಯವಿದ್ದ ಗಾಂಧಿಗೆ ಒಂದು ಸಂಚಿಕೆಯ ಸಂಪಾದನೆ ಮಾಡುವುದು ಹಗುರವಾದ ಕೆಲಸವೇನಾಗಿರಲಿಲ್ಲ. 70ರ ವಯಸ್ಸಿನಲ್ಲಿಯೂ, 'ಹರಿಜನ್' ಪತ್ರಿಕೆಯ ಕೆಲಸ ಮಾಡಲು ಅವರು ಒಮ್ಮೊಮ್ಮೆ ರಾತ್ರಿ 1.30ಕ್ಕೆ ಏಳಬೇಕಾಗಿತ್ತು. ಅತೀವ ಕೆಲಸದ ಒತ್ತಡದಲ್ಲಿ ಅವರು ಬಹಳಷ್ಟು ಬರೆಯಬೇಕಾಗಿತ್ತು. ಆಗಾಗ್ಗೆ ಅವರು ಚಲಿಸುವ ರೈಲಿನಲ್ಲಿಯೇ ಬರೆಯುತ್ತಿದ್ದರು. ಅವರು ಕೆಲವು ಪ್ರಸಿದ್ಧ ಹೇಳಿಕೆಗಳು ಅಥವಾ ಸಂಪಾದಕೀಯಗಳು 'ರೈಲಿನಲ್ಲಿ...' ಎಂಬ ಪದಚಿಹ್ನೆಯನ್ನೂ ಹೊಂದಿರುತ್ತಿದ್ದವು. ಬಲಗೈ ಆಯಾಸವಾದಾಗ, ಅವರು ಎಡಗೈಯಿಂದಲೇ ಬರೆಯುತ್ತಿದ್ದರು. ಅವರ ಎಡಗೈ ಬರಹ ಹೆಚ್ಚು ಸ್ಪಷ್ಟವಾಗಿತ್ತು. ಅನಾರೋಗ್ಯದಿಂದ ಚೇತರಿಸಿಕೊಳ್ಳುತ್ತಿರುವಾಗಲೂ ಅವರು ಪ್ರತೀ ವಾರ 3 ಅಥವಾ 4 ಲೇಖನಗಳನ್ನು ಬರೆಯುತ್ತಿದ್ದರು.

ಭಾರತದಲ್ಲಿ ಅವರು ಯಾವ ಪತ್ರಿಕೆಯನ್ನೂ ನಷ್ಟದಲ್ಲಿ ನಡೆಸಲಿಲ್ಲ. ಅವರ ಇಂಗ್ಲಿಷ್ ಹಾಗೂ ಭಾರತೀಯ ಭಾಷೆಗಳ ಪತ್ರಿಕೆಗಳ ಪ್ರಸಾರಣಾ ಸಂಖ್ಯೆ 40,000ವನ್ನು ಮುಟ್ಟಿತ್ತು. ಅವರನ್ನು ಸೆರೆಮನೆಗೆ ಹಾಕಿದಾಗ, ಈ ಸಂಖ್ಯೆ 3,000ಕ್ಕೆ ಕುಸಿಯಿತು. ಭಾರತದಲ್ಲಿ ಮೊದಲ ಬಾರಿಗೆ ಅವರ ಬಂಧನವಾಗಿ ಬಿಡುಗಡೆಯಾದ ನಂತರ, ಅವರ ವಾರಪತ್ರಿಕೆಗಳಲ್ಲಿ ಕಾಣಿಸಿಕೊಂಡ ಒಂದು ಹೊಸ ವೈಶಿಷ್ಟ್ಯವೆಂದರೆ ಸರಣಿರೂಪದಲ್ಲಿ ಬಂದ ಅವರ ಆತ್ಮಕಥೆ. ಅದು ಮೂರು ವರ್ಷಗಳವರೆಗೆ ಮುಂದುವರೆಯಿತು. ವಿಶ್ವದ ಎಲ್ಲೆಲ್ಲೂ ಅದು ಆಸಕ್ತಿಯನ್ನು ಉಂಟುಮಾಡಿತು. ತಮ್ಮ ಜೀವನಚರಿತ್ರೆಯನ್ನು ಯಥಾವತ್ ಪ್ರಕಟಿಸಲು ಬಹುತೇಕ ಎಲ್ಲಾ ಭಾರತೀಯ ಪತ್ರಿಕೆಗಳಿಗೆ ಅನುಮತಿಕೊಟ್ಟರು. ಸೆರೆಮನೆಯಲ್ಲಿದ್ದಾಗ, ಅವರು 'ಹರಿಜನ್' ಎಂಬ ಮತ್ತೊಂದು ವಾರಪತ್ರಿಕೆಯನ್ನು ಆರಂಭಿಸಿದರು. 'ಯಂಗ್ ಇಂಡಿಯಾ'ದಂತೆ ಇದರ ಬೆಲೆ ಸಹ ಒಂದು ಆಣೆಯಾಗಿತ್ತು. ಅದು ಮುಖ್ಯವಾಗಿ ಅಸ್ಪೃಶ್ಯರಿಗಾಗಿತ್ತು. ಬಹಳ ವರ್ಷಗಳವರೆಗೆ, ಅದರಲ್ಲಿ ರಾಜಕೀಯದ ಬಗ್ಗೆ ಯಾವುದೇ ಲೇಖನಗಳಿರುತ್ತಿರಲಿಲ್ಲ. ಅದನ್ನು ಮೊದಲು ಹಿಂದಿಯಲ್ಲಿ ಹೊರತರಲಾಯಿತು. ಸೆರೆಮನೆಯಿಂದ ವಾರಕ್ಕೆ ಮೂರು ಬಾರಿ ಬರೆಯಲು ಗಾಂಧಿಗೆ ಅನುಮತಿ ಸಿಕ್ಕಿತ್ತು. ಅದರ ಇಂಗ್ಲಿಷ್ ಆವೃತ್ತಿಯ ಪ್ರಸ್ತಾಪದ ಬಗ್ಗೆ, ಅವರು ತಮ್ಮೊಬ್ಬ ಗೆಳೆಯರಿಗೆ ಹೀಗೆ ಬರೆದರು: "ಇಂಗ್ಲಿಷ್ ಆವೃತ್ತಿಯಲ್ಲಿ ಓದುವ ಸಾಮಗ್ರಿಗಳಿದ್ದು ಅನುವಾದಗಳು ನಿಖರವಾಗಿದ್ದು, ಎಲ್ಲವೂ ಸರಿಯಾಗಿ ಆಗುವವರೆಗೂ, ಅದನ್ನು ಹೊರತರುವ ವಿಷಯದಲ್ಲಿ ಜಾಗರೂಕತೆ ಇರಬೇಕೆಂದು ಎಚ್ಚರಿಸುತ್ತಿದ್ದೇನೆ. ಇಂಗ್ಲಿಷ್ ವಾರಪತ್ರಿಕೆಯನ್ನು ಬೇಕಾಬಿಟ್ಟಿಯಾಗಿ ಪ್ರಕಟನೆಗೆ ಸಿದ್ಧಪಡಿಸುವ ಬದಲು, ಹಿಂದಿ ಆವೃತ್ತಿಯಿಂದಲೇ ತೃಪ್ತರಾಗಿರುವುದು ಪಾಸಿ. ಅದನ್ನು ತನ್ನ ಕಾಲ ಮೇಲೆ ತಾನು ನಿಲ್ಲುವಂತೆ ಮಾಡುವುದರ ಹೊರತಾಗಿ ಬೇರಾವ ರೀತಿಯ ನಿರ್ವಹಣೆಯನ್ನು ನಾನು ಮಾಡುವುದಿಲ್ಲ."



ಗಾಂಧಿಯವರ ಬಲಗೈ ಹಸ್ತಾಕ್ಷರ



ಗಾಂಧಿಯವರ ಎಡಗೈ ಹಸ್ತಾಕ್ಷರ

ಕೃಪೆ : ಜವಾಹರಲಾಲ ನೆಹರೂ

ಮುದ್ರಕ – ಪ್ರಕಾಶಕ

'ಇಂಡಿಯನ್ ಒಪಿನಿಯನ್', 'ಯಂಗ್ ಇಂಡಿಯಾ', 'ನವಜೀವನ್' ಮತ್ತು 'ಹರಿಜನ್' ಪತ್ರಿಕೆಗಳನ್ನು ಗಾಂಧಿ ಸಂಪಾದಿಸುತ್ತಿದ್ದರು. ಅವರು ಅವನ್ನು ತಮ್ಮ ಸ್ವಂತದ ಮುದ್ರಣಾಲಯದಲ್ಲಿಯೇ ಮುದ್ರಿಸುತ್ತಿದ್ದರು – ಪ್ರಕಟಿಸುತ್ತಿದ್ದರು. ತಮ್ಮ ಸಂಚಿಕೆಗಳನ್ನು ಇತರರ ಮಾಲೀಕತ್ವದ ಮುದ್ರಣಾಲಯದಲ್ಲಿ ಮುದ್ರಿಸಿದ ಪಕ್ಷದಲ್ಲಿ, ತಾವು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುವುದು ಸಾಧ್ಯವಿಲ್ಲ ಎಂಬುದು ಅವರಿಗೆ ತಿಳಿದಿತ್ತು. 'ಇಂಡಿಯನ್ ಒಪಿನಿಯನ್' ವಾರಪತ್ರಿಕೆಯ ಜವಾಬ್ದಾರಿಯನ್ನು ಅವರು ವಹಿಸಿಕೊಂಡಾಗ, ಅದು ನಷ್ಟದಲ್ಲಿ ನಡೆಯುತ್ತಿತ್ತು. ಊರಿನೊಳಕ್ಕೆ ಇದ್ದ ಮುದ್ರಣಾಲಯವನ್ನು ಊರಾಚೆಯ ಫೀನಿಕ್ಸ್ ವಸಾಹತಿಗೆ ಸ್ಥಳಾಂತರ ಮಾಡಬೇಕೆಂದು ಅವರು ಬಯಸಿದರು. ಇದು ವಿಫಲವಾಗುತ್ತದೆ ಎಂದು ಅವರ ಮಿತ್ರರು ಅಂದುಕೊಂಡರು. ಗಾಂಧಿ ತಮ್ಮ ಮುದ್ರಣದ ಯಂತ್ರೋಪಕರಣಗಳು, ಸಲಕರಣೆಗಳು ಮತ್ತು ಪೀಠೋಪಕರಣಗಳನ್ನು ಷೆಡ್ಡಿನಲ್ಲಿ ಅಚ್ಚುಕಟ್ಟಾಗಿ ಜೋಡಿಸಿಟ್ಟರು. ಮುದ್ರಣಯಂತ್ರವನ್ನು ನಡೆಸಲು ಒಂದು ಹಳೆಯ ಎಣ್ಣೆ–ಎಂಜಿನ್‌ಅನ್ನು ಉಪಯೋಗಿಸಲಾಯಿತು. ಅವರ ಕಚೇರಿ ಒಂದು ಪ್ರತ್ಯೇಕವಾದ ಕೋಣೆಯಲ್ಲಿತ್ತು. ಅಲ್ಲಿ ಯಾವ ಆಳನ್ನೂ ಸಂಬಳಕ್ಕೆಂದು ನೇಮಿಸಿಕೊಂಡಿರಲಿಲ್ಲ. 'ಇಂಡಿಯನ್ ಒಪಿನಿಯನ್' ಅನ್ನು ಶನಿವಾರಗಳಂದು ರವಾನಿಸಲಾಗುತ್ತಿತ್ತು. ಶುಕ್ರವಾರ ಮಧ್ಯಾಹ್ನದ ಹೊತ್ತಿಗೆ ಲೇಖನಗಳ ಅಕ್ಷರ ಜೋಡಣೆ ಆಗುತ್ತಿತ್ತು. ದೊಡ್ಡವರು–ಚಿಕ್ಕವರೆನ್ನದೆ ವಸಾಹತಿನ ಎಲ್ಲಾ ನಿವಾಸಿಗಳು ಅಕ್ಷರಗಳನ್ನು ಜೋಡಿಸುವುದು, ಮುದ್ರಿಸುವುದು, ಹಾಳೆಗಳನ್ನು ಮಡಿಸಿ ಕತ್ತರಿಸುವುದು, ವಿಳಾಸಗಳನ್ನು ಅಂಟಿಸುವುದು ಹಾಗೂ ಕಂತೆ ಕಟ್ಟುವುದರಲ್ಲಿ ಸಹಾಯ ಮಾಡುತ್ತಿದ್ದರು. ಅವನ್ನು ಅವರು ರೈಲುನಿಲ್ದಾಣಕ್ಕೆ ಸಕಾಲದಲ್ಲಿ ತಲುಪಿಸಬೇಕಾಗಿತ್ತು. ಸಾಮಾನ್ಯವಾಗಿ ಅವರು ಮಧ್ಯರಾತ್ರಿಯವರೆಗೂ ಕೆಲಸ ಮಾಡುತ್ತಿದ್ದರು. ಕೆಲಸದ ಒತ್ತಡ ಜಾಸ್ತಿಯಿದ್ದಾಗ, ಇತರರೊಡನೆ ಗಾಂಧಿ ಇಡೀ ಶುಕ್ರವಾರ ರಾತ್ರಿ ಎಚ್ಚರವಾಗಿರುತ್ತಿದ್ದರು. ಕೆಲವು ಬಾರಿ ಕಸ್ತೂರ್‌ಬಾ ಮತ್ತು ಇತರ ಮಹಿಳೆಯರೂ ಸಹಾಯ ಮಾಡುತ್ತಿದ್ದರು. ಒಮ್ಮೆ ಇಂಗ್ಲೆಂಡಿನಿಂದ ಗಾಂಧಿ ಬರೆದರು: "ಎಲ್ಲ ಮಹಿಳೆಯರೂ ಫೀನಿಕ್ಸ್ ಪ್ರೆಸ್‌ಗೆ ಹೋಗುತ್ತಾರೆಂದು ನಾನು ಆಶಿಸುತ್ತೇನೆ, ಅದೂ ಶನಿವಾರಗಳಂದು." 'ಇಂಡಿಯನ್ ಒಪಿನಿಯನ್' ಭಾನುವಾರದಂದು ಮಾರುಕಟ್ಟೆಗೆ ಬರುತ್ತಿತ್ತು. 'ಇಂಡಿಯನ್ ಒಪಿನಿಯನ್'ನ ಪ್ರಕಟಣೆ ಫೀನಿಕ್ಸ್ ವಸಾಹತಿನಲ್ಲಿ ಆರಂಭವಾದಾಗ, ಮೊದಲನೆಯ ರಾತ್ರಿಯೇ ಎಣ್ಣೆ–ಎಂಜಿನ್ ವಿಫಲವಾಯಿತು. ಒಂದು ಕೈಚಕ್ರದ ಸಹಾಯದಿಂದ ಗಾಂಧಿ ಮತ್ತು ದೇಹಸಾಮರ್ಥ್ಯವಿದ್ದ ವಸಾಹತುವಾಸಿಗಳು ಯಂತ್ರವನ್ನು ಓಡಿಸಿದರು. ಸರಿಯಾದ ವೇಳೆಗೆ ಪತ್ರಿಕೆ ಹೊರಡಿಸಿದರು. ಮುದ್ರಣದ ಕೆಲಸಗಳ ವಿವರಗಳನ್ನು ಕಲಿಯುವಲ್ಲಿ ಈ ವ್ಯವಸ್ಥೆಯು ಗಾಂಧಿಗೆ ಸಹಾಯಕವಾಯಿತು. ಅವರು ಲೇಖನಗಳನ್ನು ಬರೆದರು, ಅಚ್ಚುಮೊಳೆ ಜೋಡಿಸಿದರು, ಮುದ್ರಿಸುವುದಕ್ಕೂ ಕೈಹಾಕಿದರು ಹಾಗೂ ಕರಡಚ್ಚುಗಳನ್ನು ನೋಡಿದರು. ಅನೇಕ ಹುಡುಗರು ಅವರಲ್ಲಿ ಉಮೇದುವಾರರಾಗಿ ಸೇರಿ ಕೆಲಸ ಕಲಿತರು. ಒಮ್ಮೆ 'ಇಂಡಿಯನ್ ಒಪಿನಿಯನ್'ನ ಒಂದು ಸಂಚಿಕೆಯ ಮುದ್ರಣ ಮತ್ತು ಪ್ರಕಾಶನ ಸಂಪೂರ್ಣವಾಗಿ ಕಿರಿಯ ಹುಡುಗರೇ ಮಾಡಿದ್ದರು. ಆರಂಭದಲ್ಲಿ 'ಇಂಡಿಯನ್ ಒಪಿನಿಯನ್' ನಾಲ್ಕು ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು – ಇಂಗ್ಲಿಷ್, ಹಿಂದಿ, ಗುಜರಾತಿ ಮತ್ತು ತಮಿಳು. ಆಮೇಲೆ ಸಂಪಾದಕರು ಮತ್ತು ಅಚ್ಚುಮೊಳೆ ಜೋಡಿಸುವವರ ಅಲಭ್ಯತೆಯ ಕಾರಣದಿಂದ, ಕೇವಲ ಇಂಗ್ಲಿಷ್ ಮತ್ತು ಗುಜರಾತಿ ಭಾಷೆಗಳಲ್ಲಿ ಪ್ರಕಟಿಸತೊಡಗಿದರು. ಗಾಂಧಿ ಭಾರತಕ್ಕೆ ಬಂದಾಗ, ಅಡ್ಯಾರ್‌ಗೆ ಭೇಟಿ ಇತ್ತ ಸಮಯದಲ್ಲಿ, ಅಲ್ಲಿನ ಮುದ್ರಣದ ಪ್ರಕ್ರಿಯೆಯನ್ನು ಅವರು ಹೇಗೆ ಒಬ್ಬ ಪರಿಣತನ ಕಣ್ಣುಗಳಿಂದ ಲಕ್ಷ್ಯವಿಟ್ಟು ನೋಡುತ್ತಿದ್ದರು ಎಂಬುದನ್ನು ಆ್ಯನಿ ಬೆಸೆಂಟ್ ಗಮನಿಸಿದರು.

ಫೀನಿಕ್ಸ್ ಪ್ರೆಸ್ ಮತ್ತು 'ನವಜೀವನ್' ಪ್ರೆಸ್‌ಗಳಲ್ಲಿ, ವಾರಪತ್ರಿಕೆಗಳನ್ನು ಮುದ್ರಿಸುವುದಲ್ಲದೆ, ಹಿಂದಿ, ಇಂಗ್ಲಿಷ್ ಮತ್ತು ಇತರ ಭಾಷೆಗಳಲ್ಲಿಯೂ ಅನೇಕ ಪುಸ್ತಕಗಳನ್ನು ಮುದ್ರಿಸಲಾಗುತ್ತಿತ್ತು. ಗಾಂಧಿ ಸರ್ಕಾರದಲ್ಲಿ ಯಾವುದೇ ಭದ್ರತಾ ಠೇವಣಿಯನ್ನು ಇಡುತ್ತಿರಲಿಲ್ಲ. ಅವರ ಬರವಣಿಗೆಗಳಿಂದ ಬಂದ ಲಾಭದ ಹಣವೆಲ್ಲ ಖಾದಿಯ ಕೆಲಸಕ್ಕೆ ವ್ಯಯವಾಗುತ್ತಿತ್ತು. ಅವರು ನವಜೀವನ್ ಪ್ರೆಸ್‌ನ ಒಂದು ಲಕ್ಷ ರೂ. ಮೌಲ್ಯದ ಒಂದು ನ್ಯಾಸಪತ್ರವನ್ನು ಮಾಡಿದ್ದರು.

ಕೆಟ್ಟದಾಗಿ ಮುದ್ರಿಸುವುದು ಒಂದು ಹಿಂಸಾಕೃತ್ಯ ಎಂದು ಗಾಂಧಿ ಪರಿಗಣಿಸಿದ್ದರು. ಸ್ಪಷ್ಟವಾದ ಅಕ್ಷರಮೊಳೆಗಳು, ಬಾಳಿಕೆ ಬರುವ ಕಾಗದ ಮತ್ತು ಅಂದ ಹಾಗೂ ಸರಳವಾದ ಹೊದಿಕೆಗಳಿರಬೇಕೆಂದು ಅವರು ಆಗ್ರಹಿಸುತ್ತಿದ್ದರು. ಭಾರತದಂತಹ ಬಡದೇಶದ ಸಾಮಾನ್ಯ ಓದುಗರ ಕೈಗೆ ಆಕರ್ಷಕ ಹೊದಿಕೆಗಳಿರುವ ದುಬಾರಿ ಪುಸ್ತಕಗಳು ಕೈಗೆಟುಕವು ಎಂಬುದು ಅವರಿಗೆ ತಿಳಿದಿತ್ತು. ಅವರ ಜೀವನಾವಧಿಯಲ್ಲಿ, ನವಜೀವನ್ ಪ್ರೆಸ್ ಬಹಳಷ್ಟು ಪುಸ್ತಕಗಳನ್ನು ಕಡಿಮೆ ಬೆಲೆಯಲ್ಲೇ ಮುದ್ರಿಸಿತು. ಅವರ ಗುಜರಾತಿ ಭಾಷೆಯಲ್ಲಿನ ಆತ್ಮಕಥೆಯ ಬೆಲೆ ಕೇವಲ 12 ಆಣೆಗಳಾಗಿದ್ದವು. ಇದೇ ಪುಸ್ತಕದ ಅಗ್ಗದ ಆವೃತ್ತಿಯೊಂದು ಸಂಸ್ಕೃತದಲ್ಲೂ ಮುದ್ರಣ ಕಂಡಿತು.

ಇಡೀ ಭಾರತದಲ್ಲಿ ಒಂದೇ ಲಿಪಿಯನ್ನು ಉಪಯೋಗಿಸುವುದಾದರೆ ಓದುಗರ ಮತ್ತು ಮುದ್ರಣಾಲಯದ ಕೆಲಸಗಾರರ ಸಮಯ ಮತ್ತು ಶ್ರಮ ಉಳಿಯುವುದೆಂದು, ಅದರ ಅಗತ್ಯ ಮತ್ತು ಪ್ರಯೋಜನಗಳ ಬಗ್ಗೆ ಗಾಂಧಿ ಒತ್ತು ಕೊಡುತ್ತಿದ್ದರು. ಭಾರತದ ಬಹುತೇಕ ಭಾಷೆಗಳು ಸಂಸ್ಕೃತದಿಂದ ಜನ್ಯವಾಗಿರುವುದರಿಂದ, ಅವರು ದೇವನಾಗರಿಯ ಬಳಕೆಯನ್ನೇ ಇಷ್ಟಪಡುತ್ತಿದ್ದರು. 'ಇಂಡಿಯನ್ ಒಪಿನಿಯನ್'ನ ಗುಜರಾತಿ ಆವೃತ್ತಿಯಲ್ಲಿ ಒಂದು ಇಡೀ ಪುಟದ ತುಂಬ ಹಿಂದಿ ಲಿಪಿಯಲ್ಲಿ ತುಳಸೀ ರಾಮಾಯಣದ ವಿವರಗಳಿವೆ. ಗಾಂಧಿಯೇ ಸ್ವತಃ 'ಹರಿಜನ್'ನಲ್ಲಿಯ ಅಚ್ಚುಮೊಳೆಗಳನ್ನು ಆಯ್ಕೆ ಮಾಡಿದರು. ಒಮ್ಮೆ ಒಂದು ಮುದ್ರಣಾಲಯವನ್ನು ಏರೀದಿಸುವ ಸಂದರ್ಭದಲ್ಲಿ, ಒಬ್ಬ ಸಹಕೆಲಸಗಾರನಿಗೆ ಚೌಕಾಶಿ ಮಾಡಿ ವ್ಯಾಪಾರವನ್ನು ಮುಕ್ತಾಯ ಮಾಡುವ ಹೊಣೆ ವಹಿಸಲಾಗಿತ್ತು. ಅವರಿಗೆ ಗಾಂಧಿ ನೀಡಿದ ಸಲಹೆ ಹೀಗಿತ್ತು: "ಯಂತ್ರೋಪಕರಣ ಇತ್ಯಾದಿಗಳನ್ನು ಗಮನವಿಟ್ಟು ನೋಡು. ಎಲ್ಲಾ ಯಂತ್ರಗಳು, ಒಂದು ಡಬಲ್ ರಾಯಲ್ ಯಂತ್ರ ಮತ್ತು ಎರಡು ಟ್ರೆಡಲ್ ಯಂತ್ರಗಳು (ಕಾಲಿನಿಂದ ಮೀಟುವ ಯಂತ್ರ) ಎಲ್ಲಾ ಕೆಲಸ ಮಾಡುತ್ತವೆಯೇ ಎಂಬುದನ್ನು ಖಚಿತಪಡಿಸಿಕೋ. ಅಚ್ಚುಮೊಳೆಗಳು ಸವೆದಿಲ್ಲ ತಾನೆ, ಅದನ್ನೂ ನೋಡು."

ಗಾಂಧಿ ಕೃತಿಹಕ್ಕಿನ ಪರವಾಗಿರಲಿಲ್ಲ. ಅವರ ಸಂಪಾದಕತ್ವದ ಸಂಚಿಕೆಗಳಲ್ಲಿ ಪ್ರಕಟವಾದ

ಲೇಖನಗಳು ಎಲ್ಲರ ಆಸ್ತಿಯಾಗಿದ್ದವು. ಅವರ ಲೇಖನಗಳನ್ನು ತಿರುಚುವಂತಹ ಅವಕಾಶ ಬಂದಾಗ ಮಾತ್ರ, ಅವರು ಕೃತಿಹಕ್ಕಿನ ನಿಯಮಗಳ ಪ್ರಯೋಗಕ್ಕೆ ಒಪ್ಪಿಕೊಂಡರು.

ಮಕ್ಕಳ ಪುಸ್ತಕಗಳನ್ನು ದಪ್ಪ ಅಕ್ಷರಗಳಲ್ಲಿ ಒಳ್ಳೆಯ ಕಾಗದದ ಮೇಲೆ ಮುದ್ರಿಸಬೇಕು ಹಾಗೂ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದಂತೆ ಒಂದು ಚೆನ್ನಾಗಿರುವ ರೇಖಾಚಿತ್ರ ವಿರಬೇಕು ಎನ್ನುವುದು ಅವರ ವಿಚಾರವಾಗಿತ್ತು. ಅವರು ತೆಳುವಾದ ಪುಸ್ತಿಕೆಗಳನ್ನು ಇಷ್ಟಪಡುತ್ತಿದ್ದರು. ಮಕ್ಕಳಿಗೆ ಅವು ಹೊರೆಯಾಗುವುದಿಲ್ಲ. ಅಲ್ಲದೆ, ಹಿಡಿದುಕೊಳ್ಳಲಿಕ್ಕೂ ಸುಲಭ. ಒಮ್ಮೆ ರಾಷ್ಟ್ರೀಯ ಶಿಕ್ಷಣದ ಜವಾಬ್ದಾರಿ ಹೊತ್ತಿದ್ದ ಒಬ್ಬ ಆಶ್ರಮವಾಸಿ ಒಂದು ಬಾಲಬೋಧೆಯನ್ನು ಹೊರತಂದರು. ಅದರ ಪ್ರತಿಯೊಂದು ಪುಟದಲ್ಲೂ ಚಿತ್ರಗಳಿದ್ದವು. ಅದನ್ನು ವರ್ಣಮಯ ಆರ್ಟ್‌ಕಾಗದದ ಮೇಲೆ ಮುದ್ರಿಸಲಾಗಿತ್ತು. ಸ್ವಲ್ಪ ಜಂಬದಿಂದಲೇ ಅವರು ಗಾಂಧಿಯನ್ನು ಕೇಳಿದರು: "ಬಾಪೂಜೀ, ಬಾಲಬೋಧೆಯನ್ನು ನೋಡಿದಿರಾ? ಅದರ ಇಡೀ ಪರಿಕಲ್ಪನೆ ನನ್ನದೇ." ಗಾಂಧಿ ಹೇಳಿದರು: "ಓ, ಬಹಳ ಸುಂದರವಾಗಿದೆ. ಆದರೆ, ಅದನ್ನು ಮುದ್ರಿಸಿದ್ದು ಯಾರಿಗಾಗಿ? ಐದು ಆಣೆಯ ಪುಸ್ತಕವನ್ನು ಎಷ್ಟು ಜನ ಓದುಗರು ತಾನೆ ಕೊಳ್ಳಬಲ್ಲರು? ಭಾರತದಲ್ಲಿನ ಹಸಿದುಕೊಂಡಿರುವ ಲಕ್ಷ ಲಕ್ಷ ಜನರ ಮಕ್ಕಳ ಶಿಕ್ಷಣದ ಜವಾಬ್ದಾರಿ ನಿನ್ನ ಮೇಲಿದೆ. ಇತರ ಪುಸ್ತಕಗಳನ್ನು ಒಂದು ಆಣೆಗೆ ಮಾರಿದರೆ, ನಿನ್ನದನ್ನು ಅರ್ಧ ಆಣೆಗೆ ಮಾರಬೇಕು." ಗಾಂಧಿ ಒಮ್ಮೆ ಎರಡು ಆಣೆಗಳ ಬೆಲೆಯಿದ್ದ ಒಂದು ವಾರಪತ್ರಿಕೆಯ ಜವಾಬ್ದಾರಿಯನ್ನು ತೆಗೆದುಕೊಂಡರು. ಆಮೇಲೆ ಅದನ್ನು ಪ್ರತಿಗೆ ಒಂದು ಆಣೆಯಂತೆ ಹೊರತಂದರು.

ಪ್ರಕಟಣೆಯ ವಿಷಯಕ್ಕೆ ಬಂದಾಗ, ಗಾಂಧಿಗೆ ಹಣ ಉಳಿಸುವುದೇ ಮಹತ್ವದ್ದಾಗಿರಲಿಲ್ಲ. ಒಮ್ಮೆ ನವಜೀವನ್ ಪ್ರೆಸ್ ಗೋಖಲೆಯವರ ಬರಹ ಹಾಗೂ ಭಾಷಣಗಳನ್ನು ಗುಜರಾತಿಗೆ ಅನುವಾದಿಸಿ, ಪ್ರಕಟಿಸುವ ನಿರ್ಧಾರವನ್ನು ಮಾಡಿತ್ತು. ಒಬ್ಬ ಶಿಕ್ಷಣತಜ್ಞರು ಅನುವಾದವನ್ನು ಮಾಡಿದ್ದರು. ಈ ಪುಸ್ತಕವನ್ನು ಮುದ್ರಿಸಿ, ಅದಕ್ಕೆ ಮುನ್ನುಡಿಯನ್ನು ಬರೆಯಬೇಕೆಂದು ಗಾಂಧಿಯನ್ನು ವಿನಂತಿಸಲಾಯಿತು. ಅನುವಾದದಲ್ಲಿ ಸಹಜತೆಯಿಲ್ಲ ಹಾಗೂ ಅದು ಕಳಪೆಯಾಗಿದೆ ಎಂದು ಗಾಂಧಿಗೆ ಕಂಡುಬಂದಿತು. ಅದನ್ನು ನಾಶ ಮಾಡುವಂತೆ ಅವರು ಹೇಳಿದರು. ಆದರೆ ಅನುವಾದಕ್ಕಾಗಿ 700 ರೂಪಾಯಿಗಳನ್ನು ಕೊಡಲಾಗಿದೆ ಎಂದು ಅವರಿಗೆ ಹೇಳಿದಾಗ, ಅವರು ಉತ್ತರಿಸಿದರು:

"ಪುಸ್ತಕದ ರಟ್ಟು ಕಟ್ಟಲಿಕ್ಕೆ ಮತ್ತು ಮುಖಪುಟಕ್ಕೆ ಇಷ್ಟೊಂದು ಖರ್ಚು ಮಾಡಿದ ಮೇಲೆ ಈ ಅಸಂಬದ್ಧವನ್ನು ಜನರ ಮುಂದಿಡುವುದು ಅಪೇಕ್ಷಣೀಯವೆ? ಕೆಟ್ಟ ಸಾಹಿತ್ಯವನ್ನು ಹಂಚುವ ಮೂಲಕ ಜನರ ಅಭಿರುಚಿಯನ್ನು ಕೆಡಿಸುವುದು ನನಗೆ ಇಷ್ಟವಿಲ್ಲ." ಆ ಇಡೀ ಮಾಲನ್ನು ಸುಟ್ಟು ಹಾಕಲಾಯಿತು. ಅದನ್ನು ರದ್ದಿ ಕಾಗದದಂತೆ ಮಾರುವುದಕ್ಕೂ ಬಿಡಲಿಲ್ಲ.

ಮುದ್ರಣ ವೃತ್ತಿಯ ಸ್ವಾತಂತ್ರ್ಯವನ್ನು ಗಾಂಧಿ ಯಾವಾಗಲೂ ಎತ್ತಿಹಿಡಿಯುತ್ತಿದ್ದರು. ಮುಖ್ಯ ವಿಚಾರಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಪ್ರಕಟಿಸಬಾರದೆಂದು ಯಾವುದೇ ಸರ್ಕಾರದ ಆದೇಶವು ನಿರ್ಬಂಧ ಹೇರಿದಾಗ, ಅವರು ತಮ್ಮ ಸಂಚಿಕೆಗಳ ಮುದ್ರಣವನ್ನು ನಿಲ್ಲಿಸುತ್ತಿದ್ದರು. ಲೇಖನಿಯ ಸ್ವಾತಂತ್ರ್ಯದ ಬಗ್ಗೆ ಅವರಿಗಿದ್ದ ಪ್ರೀತಿಯಿಂದಲೇ, ಅವರ ಮುದ್ರಣಾಲಯ ಜಪ್ತಿಯಾಯಿತು. ಅವರ ಕಡತಗಳನ್ನೆಲ್ಲಾ ನಾಶಗೊಳಿಸಲಾಯಿತು. ಅವರನ್ನು, ಅವರ ಸಹ-ಕೆಲಸಗಾರರನ್ನು ಸೆರೆಮನೆಗೆ ಹಾಕಲಾಯಿತು. ಆದರೆ ಅವಕ್ಕೆಲ್ಲ ಧೈರ್ಯಗುಂದದೆ ಅವರು ಹೇಳುತ್ತಿದ್ದರು: "ಯಂತ್ರೋಪಕರಣ ಹಾಗೂ ಸೀಸದ ಅಚ್ಚುಮೊಳೆಗಳ ಈ ಪ್ರತಿಮೆಗಳನ್ನು ಮುರಿದುಹಾಕೋಣ. ಲೇಖನಿಯೇ ನಮ್ಮ ಏರಕಾಗಾರ. ಪ್ರತಿಗಳನ್ನು ನಕಲಿಸುವ ಕೈಗಳೇ ನಮ್ಮ ಮುದ್ರಣಯಂತ್ರ. ಪ್ರತಿಯೊಬ್ಬರೂ ನಡೆದಾಡುವ ಪತ್ರಿಕೆಗಳಾಗಲಿ ಹಾಗೂ ಬಾಯಿಯಿಂದ ಬಾಯಿಗೆ ಸುದ್ದಿಯನ್ನು ಹರಡಲಿ. ಇದನ್ನು ಯಾವ ಸರ್ಕಾರವೂ ದಮನ ಮಾಡುವಂತಿಲ್ಲ."

ಫ್ಯಾಷನ್ ರೂಪಿಸುವವ

ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ ಪ್ಯಾಂಟಿನ ಜೊತೆ ಚಪ್ಪಲಿಗಳನ್ನು ಧರಿಸತೊಡಗಿದರು. ಆ ಸಮಯದಲ್ಲಿ, ಅದು ರೂಢಿಯಲ್ಲಿರಲಿಲ್ಲ. ಪ್ಯಾಂಟಿನೊಂದಿಗೆ ಚೆನ್ನಾಗಿ ಕಾಣುವ ಬೂಟುಗಳಿಗಿಂತ ಚಪ್ಪಲಿ ಧರಿಸುವುದನ್ನೇ ಗಾಂಧಿ ಇಷ್ಟಪಟ್ಟರು, ಏಕೆಂದರೆ ಬೇಸಗೆಯಲ್ಲಿ ಚಪ್ಪಲಿ ಪಾದಗಳನ್ನು ತಂಪಾಗಿಡುತ್ತಿದ್ದವು. ಚಳಿಗಾಲದಲ್ಲಿ ಚಪ್ಪಲಿಯನ್ನು ಕಾಲುಚೀಲದೊಂದಿಗೂ ಧರಿಸಬಹುದಿತ್ತು. ಗಾಂಧಿಯೇ ಖುದ್ದಾಗಿ ಚಪ್ಪಲಿ ತಯಾರಿಸುತ್ತಿದ್ದರು. ದಕ್ಷಿಣ ಆಫ್ರಿಕಾದ ಪ್ರಧಾನ ಮಂತ್ರಿಯಾದ ಜನರಲ್ ಸ್ಮಟ್ಸ್‌ಗೆ ಕೈಯಲ್ಲಿ ತಯಾರಿಸಿದ ಚಪ್ಪಲಿಗಳು ದೃಢವಾಗಿ ಇರುತ್ತವೆ ಹಾಗೂ ಆರಾಮದಾಯಕವಾಗಿರುತ್ತವೆ ಎಂಬುದು ತಿಳಿದುಬಂದಿತು. ಹೀಗಾಗಿ ಅವರೂ ಒಂದು ಜೊತೆಯನ್ನು ಉಪಯೋಗಿಸಲು ಬಯಸಿದರು. ಗಾಂಧಿ ವಿಶೇಷ ಕಾಳಜಿಯಿಂದ ಒಂದು ಜೊತೆ ಚಪ್ಪಲಿ ತಯಾರಿಸಿ ಅವರಿಗೆ ಉಡುಗೊರೆಯಾಗಿತ್ತರು.

ಗಾಂಧಿ ಕೆಲಸ ಮಾಡುತ್ತಿದ್ದ ರೀತಿಯೇ ಬೇರೆ. ಅದು ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಂಡಂತಹ ಹಾಗೂ ರೂಢಿಯಲ್ಲಿ ಬಂದಂತಹ ವಿಧಾನಕ್ಕಿಂತ ಭಿನ್ನವಾಗಿಯೇ ಇರುತ್ತಿತ್ತು. ಅವರು ರೂಪಿಸಿದ ಹಲವು ಫ್ಯಾಷನ್ನುಗಳನ್ನು ಇತರರೂ ಅನುಸರಿಸುತ್ತಿದ್ದರು, ಅಂಗೀಕೃತವಾಗದವು ಬಳಕೆಗೆ ಬರುತ್ತಿರಲಿಲ್ಲ.

ಗಾಂಧಿ ಮೊದಲಬಾರಿಗೆ ಕಾಂಗ್ರೆಸ್ ಅಧಿವೇಶನವೊಂದರಲ್ಲಿ ಪಾಲ್ಗೊಂಡಾಗ, ಪ್ರತ್ಯೇಕ ಅಡುಗೆಮನೆಗಳನ್ನು ಕಂಡು ಆಶ್ಚರ್ಯಚಕಿತರಾದರು. ಅದೂ, ಆ ಅಡುಗೆಮನೆಗಳು ಬೇರೆ ಬೇರೆ ಜಾತಿಗಾಗಿ ಮಾತ್ರವಲ್ಲ, ಆಗಮಿಸಿದ್ದ ಪ್ರತಿನಿಧಿಗಳ ಹಾಗೂ ಸ್ವಯಂಸೇವಕರ ವಿವಿಧ ರುಚಿಗಳನ್ನು ತಣಿಸುವುದಕ್ಕಾಗಿಯೂ ಹೂಡಲಾಗಿದ್ದವು. ಜೀವನದ ಸಣ್ಣ ಸಣ್ಣ ಅಂಶಗಳಿಗೂ ಅವರು ಮಹತ್ವವನ್ನು ಕೊಡುತ್ತಿದ್ದರು. ಇಂತಹ ಪ್ರತ್ಯೇಕತಾ ಮನೋಭಾವವನ್ನು ಬಿಟ್ಟು, ಒಂದು ಐಕ್ಯತಾ ಭಾವವನ್ನು ಅಳವಡಿಸಿಕೊಳ್ಳುವವರೆಗೂ ಸ್ವರಾಜ್ಯ ಸಿಗುವುದಿಲ್ಲ ಅಂದು ಅವರಿಗೆ ಅನ್ನಿಸಿತು. ಆಹಾರ ಪದ್ಧತಿಗಳನ್ನು ಸರಳಗೊಳಿಸುವ ಮೂಲಕ ಈ ರೀತಿಯಲ್ಲಿ ಹಣ, ಸಮಯ ಮತ್ತು ಶ್ರಮಗಳು ಪೋಲಾಗುವುದನ್ನು ನಿಲ್ಲಿಸಬೇಕೆಂದು ಅವರು ಬಯಸಿದರು. ಪಥ್ಯಾಹಾರಗಳ ಬಗ್ಗೆಯೇ ಅವರು ಪ್ರಯೋಗಗಳನ್ನು ಮಾಡಿದರು. ಅವರ ಆಶ್ರಮಗಳಲ್ಲಿ, ಸಾಮುದಾಯಿಕ ಅಡುಗೆಮನೆಯಲ್ಲಿ ಸರಳವಾದ, ಮಸಾಲೆರಹಿತ ಸಸ್ಯಾಹಾರದ ಅಡುಗೆಯನ್ನು ತಯಾರು ಮಾಡಲಾಗುತ್ತಿತ್ತು. ಮುಸಲ್ಮಾನರು, ಹಿಂದುಗಳು, ಪಾರ್ಸಿಗಳು ಮತ್ತು ಕ್ರಿಶ್ಚಿಯನ್ನರೆನ್ನದೆ ಎಲ್ಲರೂ ಒಂದು ಸಾಮುದಾಯಿಕ ಊಟದ ಮನೆಯಲ್ಲಿ ಒಟ್ಟಾಗಿ ಕುಳಿತು ಅದೇ ಸಸ್ಯಾಹಾರವನ್ನು ಉಣ್ಣುತ್ತಿದ್ದರು.

ಹಸಿ ಕೋಸಂಬರಿಗಳು, ಹಣ್ಣುಗಳು, ಕಾಯಿ–ಬೀಜಗಳು, ಬೇಯಿಸಿದ ತರಕಾರಿಗಳು, ಕೈಯಲ್ಲಿ ಕುಟ್ಟಿದ ಅಕ್ಕಿ ಮತ್ತು ಕೈಯಲ್ಲಿ ಬೀಸಿದ ಗೋಧಿಹಿಟ್ಟು – ಇವೆಲ್ಲವುಗಳ ಆಹಾರಮೌಲ್ಯಕ್ಕೆ ಗಾಂಧಿ ಒತ್ತುಕೊಡುತ್ತಿದ್ದರು. ಸಂಸ್ಕರಿಸಲ್ಪಟ್ಟ ಬಿಳಿಯ ಸಕ್ಕರೆಗಿಂತ ತಾಜಾ ಬೆಲ್ಲ ಅಥವಾ ಜೇನುತುಪ್ಪ ಹೆಚ್ಚು ಜೀವಸತ್ವಗಳನ್ನು ಹೊಂದಿರುತ್ತವೆ ಎಂದು ಅವರು ವಿವರಿಸುತ್ತಿದ್ದರು. ಹೀಗೆ, ಜನರು ಒಂದು ವಸ್ತುವಿನ ನೋಟಕ್ಕಿಂತ ಅದರೊಳಗಿರುವ ಸತ್ವವನ್ನು ಅರಿಯುವಂತೆ–ಆನಂದಿಸುವಂತೆ ಮಾಡಲು, ಅವರಿಗೆ ತರಬೇತಿ ನೀಡುವ ಪ್ರಯತ್ನವನ್ನು ಗಾಂಧಿ ಮಾಡಿದರು.

ಫೈಜ್‌ಪುರ್ ಕಾಂಗ್ರೆಸ್ ಅಧಿವೇಶನದಲ್ಲಿ, ಪ್ರತಿನಿಧಿಗಳು ಮತ್ತು ಸಂದರ್ಶಕರಿಗೆ ಮೊದಲ ಬಾರಿಗೆ ಪಾಲಿಷ್ ಮಾಡಿರದ ಅನ್ನ ಮತ್ತು ತೌಡು ತೆಗೆಯದ ಹಿಟ್ಟಿನಿಂದ ಮಾಡಿದ್ದ ರೊಟ್ಟಿಗಳನ್ನು ಬಡಿಸಲಾಯಿತು. ಕಾಂಗ್ರೆಸ್‌ನ ವಾರ್ಷಿಕ ಸಭೆಯನ್ನು ಹಳ್ಳಿಯಲ್ಲಿ ಮಾಡುವ ವಿಚಾರ ಗಾಂಧಿಯದಾಗಿತ್ತು. ಈ ಹಿಂದೆ, ಅಂದರೆ – 50 ವರ್ಷಗಳ ಕಾಲ, ಸಭಿಕರ ಪೈಕಿ ಉನ್ನತ ಶಿಕ್ಷಣ ಪಡೆದ ಮುಖಂಡರು ಹಾಗೂ ಬುದ್ಧಿಜೀವಿಗಳ ತಂಡವೇ ಹೆಚ್ಚಾಗಿರುತ್ತಿತ್ತು. ಕಾಂಗ್ರೆಸ್ ಅಧಿವೇಶನಗಳನ್ನು ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸಿನಂತಹ ದೊಡ್ಡ ದೊಡ್ಡ ನಗರಗಳಲ್ಲೇ ನಡೆಸಲಾಗುತ್ತಿತ್ತು. ಗಾಂಧಿ ಅದನ್ನು ಜನರ ಕಾಂಗ್ರೆಸ್ ಆಗಿ ಮಾರ್ಪಡಿಸಿದರು. ಅದಕ್ಕೊಂದು ಸಮೂಹ ವ್ಯಕ್ತಿತ್ವವನ್ನು ಕೊಟ್ಟರು. ಸರಳವಾದ ಭಾರತೀಯ ಮಾದರಿಯ ಉಡುಪು ತೊಟ್ಟ ಅವರು ಸಭಿಕರನ್ನುದ್ದೇಶಿಸಿ ಹಿಂದಿಯಲ್ಲಿ ಮಾತನಾಡಿದರು.

ಫೈಜ್‌ಪುರ್‌ನಲ್ಲಿ ತಿಲಕ್‌ನಗರದ ವಿವರಗಳ ಯೋಜನೆ ಹೂಡಿದ್ದು ಗಾಂಧಿಯೇ. ಅದನ್ನು ಹಳ್ಳಿಗಳಲ್ಲೇ ಸುಲಭವಾಗಿ ದೊರೆಯುತ್ತಿದ್ದ ಸಾಮಗ್ರಿಗಳಿಂದ ಹಳ್ಳಿಗಳ ಕಲಾಕಾರರೇ ಕಟ್ಟಿದರು. ಗಾಂಧಿಯ ಕನಸಿಗೆ ಕಲಾಕಾರ ನಂದಲಾಲ್ ಬೋಸ್ ಸಾಕಾರ ರೂಪವಿತ್ತರು. ಅಲ್ಲಿನ ಕುಟೀರಗಳ ಗೋಡೆ ಮತ್ತು ಛಾವಣಿಗಳನ್ನು ಬೊಂಬಿನಿಂದ ಮಾಡಲಾಯಿತು. ಬಣ್ಣ ಹಚ್ಚಿದ್ದ ಬೊಂಬುಗಳು ಕಮಾನುಗಳಾದವು. ಇವು ತಲೆಕೆಳಗೆ ಮಾಡಿದ ಚಾಪೆಕಡ್ಡಿಯ ಬುಟ್ಟಿಗಳಿಂದ ಅಲಂಕೃತಗೊಂಡವು. ಗೇಟಿನ ಮೇಲುಗಡೆ ಹಾರಾಡುತ್ತಿದ್ದ ರಾಷ್ಟ್ರಧ್ವಜ ಸಹ ಸ್ವತಃ ಗಾಂಧಿಯ ಸೃಷ್ಟಿ. ಕೆಲವು ವರ್ಷಗಳ ಹಿಂದೆ ಧ್ವಜಕ್ಕೆ ಒಂದು ಅಂತಿಮ ರೂಪವನ್ನು ಅವರು ಕೊಟ್ಟಿದ್ದರು. ಅದು ಮೂರು ಬಣ್ಣಗಳದ್ದಾಗಬೇಕಿತ್ತು – ಕೇಸರಿ, ಬಿಳಿ ಮತ್ತು ಹಸಿರು. ಎಲ್ಲವೂ ಅಡ್ಡಡ್ಡಕ್ಕೆ ಬರಬೇಕಿತ್ತು. ಬಿಳಿಯ ಪಟ್ಟಿಯಲ್ಲಿ ಮಧ್ಯಕ್ಕೆ ಅಹಿಂಸೆ ಮತ್ತು ಸಾಮಾನ್ಯ ಮನುಷ್ಯನನ್ನು ಸೂಚಿಸುವ ಚರಕಾದ ಚಿತ್ರ ಕಡುನೀಲಿ ಬಣ್ಣದಲ್ಲಿ ಇರಬೇಕಿತ್ತು.

ಸರಳವಾದರೂ ಘನತೆಯಿಂದ ಕೂಡಿರುವ ನಮ್ಮ ರಾಷ್ಟ್ರೀಯ ಉಡುಪನ್ನು ರೂಪಿಸಿದ ಕೀರ್ತಿ ಗಾಂಧಿಗೇ ಸಲ್ಲುತ್ತದೆ. ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಾರ್ಹ ಪಡೆಯನ್ನು ಮುನ್ನಡೆಸಿದಾಗ, ನೂರಾರು ಮಂದಿ ಗಣಿ ಕೆಲಸಗಾರರು ಮತ್ತು ಕರಾರುಬದ್ಧ ಕೂಲಿಗಳು ಈ ಹೋರಾಟವನ್ನು ಸೇರಿಕೊಂಡರು. ಅವರಲ್ಲಿ ಹೆಚ್ಚಿನವರು ದಕ್ಷಿಣ ಆಫ್ರಿಕಾದವರೇ ಆಗಿದ್ದರು. ಅವರನ್ನೆಲ್ಲಾ ಚಿತ್ರಹಿಂಸೆಗೆ ಒಳಪಡಿಸಲಾಯಿತು. ಕೆಲವರನ್ನು ಸೆರೆಮನೆಗೆ ಹಾಕಲಾಯಿತು. ಇನ್ನೂ ಕೆಲವರು ಸತ್ತರು. ಅವರಿಗೆ ಅನುಕಂಪ ಸೂಚಿಸುವ ಸಲುವಾಗಿ ಹಾಗೂ ಅವರೊಂದಿಗೆ ತಾವೂ ಒಬ್ಬರು ಎಂದು ಗುರುತಿಸಿಕೊಳ್ಳುವುದಕ್ಕಾಗಿ ಗಾಂಧಿ ಒಂದು ಕುರ್ತಾ ಹಾಗೂ ಲುಂಗಿಯ ರೀತಿ ಸುತ್ತಿಕೊಳ್ಳುವ ಒಂದು ಧೋತಿಯನ್ನು ಧರಿಸುವ ನಿರ್ಧಾರವನ್ನು ಹಠಾತ್ತಾಗಿ ತೆಗೆದುಕೊಂಡರು. ಕೈಕೋಲಿಗೆ (ವಾಕಿಂಗ್ ಸ್ಟಿಕ್) ಬದಲಾಗಿ ಒಂದು ಲಾಠಿ ಕೈಗೆ ಬಂದಿತು. ಹಾಗೆಯೇ ಒಂದು ಸಣ್ಣ ಚೀಲವೂ ಬಂದಿತು. ಒಂದು ಮಹಾನ್ ಅಧಿಕಾರದ ವ್ಯವಸ್ಥಿತವಾದ ಹಿಂಸೆಯನ್ನು ಹತ್ತಿಕ್ಕಲು ಅಹಿಂಸೆ, ಅಸಹಕಾರ ಮತ್ತು ಸಾಮೂಹಿಕ ನಾಗರಿಕ ಉಲ್ಲಂಘನೆಗಳನ್ನೊಳಗೊಂಡ ಸತ್ಯಾಗ್ರಹ ಎಂಬ ಒಂದು ಶಕ್ತಿಶಾಲಿ ಅಸ್ತ್ರವನ್ನು ಅವರು ಅಭಿವೃದ್ಧಿಪಡಿಸಿದರು. ದುಷ್ಟ ಹಾಗೂ ರಾಕ್ಷಸೀಪ್ರವೃತ್ತಿಗಳೊಂದಿಗೆ ತೀವ್ರ ಅಸಹಕಾರ ತೋರಿದ ಪ್ರಹ್ಲಾದ ಮತ್ತು ವಿಭೀಷಣರ ಪ್ರಾಚೀನ ಉದಾಹರಣೆಗಳನ್ನು ಉಲ್ಲೇಖಿಸಿದರು. ಈ ವಿಚಾರದಲ್ಲಿ ತಮ್ಮ ಸ್ವಂತಿಕೆಯೇನೂ ಇಲ್ಲವೆಂದರು. ಆದರೆ, ಒಂದು ದೊಡ್ಡ ಪ್ರಮಾಣದಲ್ಲಿ ದುಷ್ಟಪ್ರತಿರೋಧದ ಈ ತಂತ್ರವನ್ನು ಅಳವಡಿಸುವ ಮತ್ತು ಅದರ ಪ್ರಭಾವವನ್ನು ರಾಜಕೀಯ ವಲಯದ ಮೇಲೆ ಬೀರುವ ದಿಟ್ಟ ಪ್ರಯತ್ನ ಮಾತ್ರ ಅವರ

ಸ್ವಂತದ್ದೇ ಆಗಿತ್ತು. ಅದರ ಯಶಸ್ಸು ಸಹ ಗಮನಾರ್ಹವಾಗಿತ್ತು. ಒಮ್ಮೆ ಒಬ್ಬ ವಿದೇಶೀ ಪತ್ರಕರ್ತ ಗಾಂಧಿಯನ್ನು ಕೇಳಿದ: "ಸತ್ಯ ಮತ್ತು ಅಹಿಂಸೆಯಲ್ಲಿನ ನಿಮ್ಮ ನಂಬಿಕೆಯನ್ನು ಅಣುಬಾಂಬ್ ಸ್ಫೋಟಿಸಿಲ್ಲವೆ ?" ಗಾಂಧಿ ಉತ್ತರಿಸಿದರು: "ಇಲ್ಲವಲ್ಲಾ. ಇದನ್ನು ಅತ್ಯುನ್ನತ ಮಟ್ಟದ ಧೈರ್ಯಕ್ಕೋಸ್ಕರ ಇರುವ ಸತ್ಯ ಮತ್ತು ಅಹಿಂಸೆಗಳ ಪ್ರಮಾಣ ಮಾಡಿ ಹೇಳುತ್ತೇನೆ. ಇವುಗಳ ಮುಂದೆ ಅಣುಬಾಂಬಿನ ಪ್ರಭಾವ ಏನೂ ಇಲ್ಲ. ಅಣುಬಾಂಬ್ ನಾಶ ಮಾಡಲಾಗದ ಒಂದೇ ಒಂದು ವಸ್ತು ಎಂದರೆ ಅಹಿಂಸೆ." ಭಾರತದಲ್ಲಿ ಮಾನವೀಯತೆಯ ಮಹಾಸಾಗರದ ಶಕ್ತಿಯನ್ನು ಸಂಚಯಿಸಲು ಯಾರೂ ಮಾಡದಷ್ಟು ಕೆಲಸವನ್ನು ಗಾಂಧಿ ಮಾಡಿದರು.

ಗಾಂಧಿಯ ನಾಯಕತ್ವದಲ್ಲಿ, ಅಹಿಂಸಾ ಮಾರ್ಗದ ಮೂಲಕ ಭಾರತ ಸ್ವಾತಂತ್ರ್ಯವನ್ನು ಪಡೆದುಕೊಂಡಿತು. ಭಾರತವು ಭೂಮಿಯ ಮೇಲಿನ, ಅದು ಏಷ್ಯಾ ಆಗಿರಲಿ, ಅಮೆರಿಕಾ ಆಗಿರಲಿ ಅಥವಾ ಆಫ್ರಿಕಾ ಆಗಿರಲಿ, ಎಲ್ಲಾ ಶೋಷಿತ ಜನಾಂಗಗಳ ಆಶಾಕಿರಣವಾಗಿರ ಬೇಕೆಂದು ಗಾಂಧಿ ಬಯಸಿದರು: "ಭಾರತದ ಹೋರಾಟ ಎಲ್ಲಿಯವರೆಗೆ ಅಹಿಂಸಾತ್ಮಕವಾಗಿ ರುತ್ತದೋ, ಅದು ಎಲ್ಲಾ ಶೋಷಿತ ಜನಾಂಗಗಳ ವಿಮೋಚನೆಗಾಗಿ ದೊಡ್ಡ ಶಕ್ತಿಗಳ ವಿರುದ್ಧ ನಡೆಸುವ ಹೋರಾಟವಾಗಿರುತ್ತದೆ. ಭಾರತದ ಸ್ವಾತಂತ್ರ್ಯದ ಹಿಂದೆಯೇ, ಬಹಳ ಮಸಾಹತುಗಳು ರಕ್ತಪಾತವಿಲ್ಲದೆಯೇ ಸ್ವಾತಂತ್ರ್ಯವನ್ನು ಗಳಿಸಿದವು. ಅಮೆರಿಕಾದ ನೀಗ್ರೋಗಳಲ್ಲಿ ಮಾನವೀಯ ಹಕ್ಕುಗಳನ್ನು ಪಡೆಯುವ ಚಳುವಳಿ ಯಶಸ್ವಿಯಾಗಿ ಹಬ್ಬುತ್ತಿದೆ.

ತಮ್ಮ ಎದುರಾಳಿಯಲ್ಲಿ ಹೃದಯ ಪರಿವರ್ತನೆ ಉಂಟುಮಾಡುವಂಥ ತಮ್ಮ ಪ್ರಯೋಗದೊಂದಿಗೆ ಗಾಂಧಿಯ ಉಡುಪು ಸಹ ವಿಶಿಷ್ಟವಾದ ಬದಲಾವಣೆ ಹೊಂದಿತು. ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಕೊನೆಯ ಬಾರಿಗೆ ಹಿಂತಿರುಗಿದ ಮೇಲೆ, ಗಾಂಧಿ ಧೋತಿ, ಕುರ್ತಾ, ಉದ್ದನೆಯ ಕೋಟು ಮತ್ತು ದೊಡ್ಡದಾದ ಕತಿಯಾವಾಡಿ ಪೇಟಾ ಧರಿಸ ತೊಡಗಿದರು. ಆದರೆ ಆ ದಿರುಸು ಉಷ್ಣ ಹವಾಮಾನಕ್ಕೆ ಹೊಂದುವುದಿಲ್ಲ ಎಂಬುದನ್ನು ಬೇಗನೆ ಕಂಡುಕೊಂಡರು. ಅಲ್ಲದೆ, ಗಜಗಟ್ಟಲೆ ಬಟ್ಟೆ ಬೇರೆ ವ್ಯರ್ಥವಾಗುತ್ತಿತ್ತು. ಸರಿ, ಆಮೇಲೆ ಅವರು ತಮ್ಮ ಉಡುಪನ್ನು ಧೋತಿ, ಕುರ್ತಾ ಮತ್ತು ಟೋಪಿಗೆ ಬದಲಾಯಿಸಿದರು. ಸಭ್ಯರೆನಿಸಿಕೊಂಡ ಜನ, ಗಾಂಧಿ ಈ ಉಡುಪಿನಲ್ಲಿ ಮಹತ್ವದ ಸಭೆಗಳು ಮತ್ತು ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸುವುದನ್ನು ಕಂಡು ದಿಗ್ಭ್ರಾಂತರಾದರು. ಗಾಂಧಿ ನೂಲುವುದು ಮತ್ತು ನೇಯುವುದನ್ನು ಕಲಿತ ಮೇಲೆ, ಅವರ ಇಡೀ ಉಡುಪು ಖಾದಿಯಿಂದಲೇ ಮಾಡಿದ್ದಾಗಿರುತ್ತಿತ್ತು. ಗಾಂಧಿ ಟೋಪಿ ಒಂದು ರೀತಿಯಲ್ಲಿ ಕಾಶ್ಮೀರಿ ಟೋಪಿಯಂತೆಯೇ ಇತ್ತು. ಆದರೆ, ಅದರ ಮೇಲೆ ಕಸೂತಿಯೊಂದಿರಲಿಲ್ಲ, ಅಷ್ಟೆ. ಟೋಪಿ ಬಿಳಿಯದೇ ಆಗಿರಬೇಕೆಂದು ಗಾಂಧಿ ಆಗ್ರಹಿಸಿದರು. ಬಿಳಿಯ ಟೋಪಿ ಬಹಳ ಬೇಗನೆ ಹೊಲಸಾಗಿಬಿಡುತ್ತದೆ ಎಂದು ಜನ ದೂರಿದಾಗ, ಅವರು ಹೀಗೆ ವಾದಿಸಿದರು: "ಸ್ವಚ್ಛತೆಯ ಅತ್ಯುತ್ತಮ ಮಟ್ಟವನ್ನು ಕಾಯ್ದುಕೊಂಡು ಬರಲಿಕ್ಕಾಗಿ ನಾನು ಬಿಳಿಯ ಟೋಪಿಯನ್ನು ಆಯ್ಕೆ ಮಾಡಿದೆ. ಈ ತೆಳುವಾದ ಟೋಪಿಯನ್ನು ಒಗೆಯುವುದೂ ಸುಲಭ. ಒಣಗಲು ಹೆಚ್ಚು ಸಮಯವನ್ನು ತೆಗೆದುಕೊಳ್ಳದು. ಕಡುಬಣ್ಣದ ಟೋಪಿಗಳು ಸಹ ಅಷ್ಟೇ ಕೊಳೆಯಾಗುತ್ತವೆ, ಆದರೆ ಅವು ಕೊಳೆಯನ್ನು ಮುಚ್ಚಿಹಾಕುತ್ತವೆ." ಖಾದಿ ಧೋತಿ ಅಥವಾ ಪೈಜಾಮ, ಕುರ್ತಾ ಮತ್ತು ಗಾಂಧಿ ಟೋಪಿ ಜನಪ್ರಿಯವಾದವು. ಅದನ್ನು ರಾಷ್ಟ್ರೀಯ ಉಡುಪು ಎಂದು ಅಂಗೀಕರಿಸಲಾಯಿತು.

ಬಹಳಷ್ಟು ಮಂದಿ ಬಿಹಾರಿಗಳು, ಮಾರ್ವಾಡಿಗಳು ಮತ್ತು ಗುಜರಾತಿಗಳು ಗಾಂಧಿಟೋಪಿಗಾಗಿ ತಮ್ಮ ಉದ್ದಬಟ್ಟೆಯ ದೊಡ್ಡದಾದ ಪೇಟಾಗಳನ್ನು ತ್ಯಜಿಸಿದರು. ಮುಸಲ್ಮಾನರು ತಮ್ಮ ತುರ್ಕಿಟೋಪಿಯನ್ನು ಬಿಟ್ಟರು. ಸಾಮಾನ್ಯವಾಗಿ ರುಮಾಲು-ಟೋಪಿಗಳನ್ನು ಬಳಸದಿದ್ದ ಬಂಗಾಳಿಗಳು ಮತ್ತು ದಕ್ಷಿಣ ಭಾರತೀಯರು ಗಾಂಧಿಟೋಪಿ ಧರಿಸಲಾರಂಭಿಸಿದರು. ಸ್ವದೇಶೀ ದಿನಗಳಲ್ಲಿ ಗಾಂಧಿ ಟೋಪಿಯು ಜೋಹರಿ ಗೂಳಿ ಕಾಳಗದಲ್ಲಿ ಗೂಳಿಯ ಮುಂದೆ ಬೀಸುವ ಕೆಂಪುಬಟ್ಟೆಯ ರೀತಿ ಕೆಲಸ ಮಾಡಿತು. ಬಿಳಿಯ ಖಾದಿ ಟೋಪಿಯನ್ನು ಧರಿಸುತ್ತಿದ್ದ ಸ್ವಯಂಸೇವಕರೊಂದಿಗೆ ಪೋಲೀಸರು ಬಹಳ ಕ್ರೂರವಾಗಿ ನಡೆದುಕೊಂಡರು; ಅವರ ಟೋಪಿಗಳನ್ನು ಬಲವಂತವಾಗಿ ಕಿತ್ತು ಹಾಕುತ್ತಿದ್ದರು. ಅದನ್ನು ಹಾಕಿಕೊಂಡ ಶಾಲಾಬಾಲಕರನ್ನು ಶಿಕ್ಷಿಸಲಾಗುತ್ತಿತ್ತು. ಕೆಲವೊಮ್ಮೆ ಖಾದಿಯ ಗಾಂಧಿ ಟೋಪಿಯನ್ನು ಧರಿಸುವ ಸ್ವಯಂಸೇವಕರಿಗೆ ಹತ್ತು ರೂಪಾಯಿಗಳ ದಂಡ ವಿಧಿಸ ಲಾಗುತ್ತಿತ್ತು. ದಂಡ ತೆರಲು ನಿರಾಕರಿಸಿದಲ್ಲಿ ಹತ್ತು ದಿನಗಳವರೆಗೆ ಸೆರೆಮನೆಗೆ ಹಾಕಲಾಗುತ್ತಿತ್ತು. ಗಾಂಧಿಯೂ ಸ್ವತಃ ಸ್ವಲ್ಪ ಸಮಯದವರೆಗೆ ಅದನ್ನು ಧರಿಸಿದರು. ಅವರ ಉಡುಪು ಬದಲಾವಣೆ ಖಾದಿಯ ಅಡ್ಡಪಂಚೆ, ಮೇಲುಹೊದಿಕೆ ಮತ್ತು ಚಪ್ಪಲಿಯಲ್ಲಿ ಕೊನೆಗೊಂಡಿತು. ಒಬ್ಬ ನಾಯಕ ತನ್ನ ಜನರ ನಿಜ ಪ್ರತಿನಿಧಿ ಆಗಿರಬೇಕು ಎಂದು ಅವರು ನಂಬಿದ್ದರು. ಅದೇ ಉಡುಪಿನಲ್ಲೇ ಅವರು ಯೂರೋಪು ಮತ್ತು ಇಂಗ್ಲೆಂಡಿನಲ್ಲಿ ಓಡಾಡಿದರು; ಭಾರತದ ಸಾರ್ವಭೌಮನನ್ನು ಭೇಟಿ ಮಾಡಿದರು. ಒಮ್ಮೆ ಇಂಗ್ಲೆಂಡಿನ ಒಬ್ಬ ಗಣ್ಯಸಂದರ್ಶಕರನ್ನು ರೈಲುನಿಲ್ದಾಣದಿಂದ ಅವರ ಆಶ್ರಮಕ್ಕೆ ಎತ್ತಿನಗಾಡಿಯಲ್ಲಿ ಕರೆತರಲಾಯಿತು. ಅಂತಹ ಎಲ್ಲಾ ಸಂದರ್ಶಕರು ಗಾಂಧಿಯ ಮಣ್ಣಿನ ಗುಡಿಸಲಿನಲ್ಲಿ ನೆಲದ ಮೇಲೆ ಕುಳಿತು ಜನಸಮೂಹದ ಮನುಷ್ಯ – ಗಾಂಧಿಯ ಜೊತೆ ಅನೇಕ ಗಂಭೀರ ಚರ್ಚೆಗಳಲ್ಲಿ ತೊಡಗುತ್ತಿದ್ದರು. ಅವರು ಆಶ್ರಮದ ಆಹಾರವನ್ನೇ ಸೇವಿಸುತ್ತಿದ್ದರು. ಸೇವಾಗ್ರಾಮದ ಸಂತ ಒಬ್ಬ ಒಳ್ಳೆಯ ಆತಿಥೇಯರೂ ಆಗಿದ್ದರು. ತಮ್ಮ ಅತಿಥಿಗಳ ಅವಶ್ಯಕತೆಗಳನ್ನು ಪರಿಗಣಿಸುತ್ತಿದ್ದರು. ಆದರೆ ಎಂದೂ, ಸುಸಂಸ್ಕೃತರಾದ ಪಾಶ್ಚಾತ್ಯರಿಗೆ ತಮ್ಮ ಗ್ರಾಮೀಣ ರೀತಿಯ ಆದರಾತಿಥ್ಯಗಳನ್ನು ತೋರುವಲ್ಲಿ ಸ್ವಲ್ಪವೂ ನಾಚಿಕೆ ಪಡುತ್ತಿರಲಿಲ್ಲ. ಒಂದು ರಾಷ್ಟ್ರ ಅಥವಾ ರಾಜ್ಯದ ಘನತೆಯನ್ನು, ಅದೂ

ಒಂದು ಬಡದೇಶದ ಘನತೆಯನ್ನು, ಆಡಂಬರದ ಪ್ರದರ್ಶನಗಳಿಂದ ಕಾಯ್ದುಕೊಳ್ಳ ಬಹುದು ಎಂದು ಅವರು ಭಾವಿಸಲಿಲ್ಲ. ಇದಕ್ಕೆ ವಿರುದ್ಧವಾಗಿ, ಒಣಪ್ರತಿಷ್ಠೆಯ ಪ್ರದರ್ಶನಗಳು, ಸೋಗಿನ ತೋರಿಕೆಗಳು ಮತ್ತು ಬಡತನವನ್ನು ಮುಚ್ಚಿಡುವುದು – ಇವೆಲ್ಲವೂ ಅವರಿಗೆ ನೋವುಂಟುಮಾಡುತ್ತಿದ್ದವು. ತಮ್ಮ ಹಳ್ಳಿಯ ವಾಸಸ್ಥಾನದಿಂದ ಗಾಂಧಿ ಆಗಾಗ್ಗೆ ದೆಹಲಿ ಮತ್ತು ಶಿಮ್ಲಾ, ಬಾಂಬೆ ಮತ್ತು ಕಲ್ಕತ್ತಾಗಳಿಗೆ, ವೈಸ್‌ರಾಯ್, ಗವರ್ನರುಗಳು, ಬ್ರಿಟಿಷ್ ರಾಯಭಾರಿಗಳು ಮತ್ತು ಗೌರವಾನ್ವಿತ ವಿದೇಶೀ ಅತಿಥಿ ಗಳೊಂದಿಗೆ ಮಹತ್ವಪೂರ್ಣ ಚರ್ಚೆಗಳನ್ನು ನಡೆಸಲು ಧಾವಿಸಬೇಕಾಗುತ್ತಿತ್ತು. ತಮ್ಮ ವಿಚಾರಗಳನ್ನು ಹರಡಲು ಮತ್ತು ತಮ್ಮ ದೇಶವಾಸಿಗಳೊಂದಿಗೆ ಸಂಪರ್ಕವಿಟ್ಟುಕೊಳ್ಳಲು, ಒಂದಕ್ಕಿಂತ ಹೆಚ್ಚು ಬಾರಿ ಅವರು ಇಡೀ ಭಾರತವನ್ನು ಸುತ್ತಿಬಂದರು. ಆದರೆ ಒಮ್ಮೆಯೂ ಅವರು ವಿಮಾನವನ್ನು ಹತ್ತಲಿಲ್ಲ. ರೈಲಿನಲ್ಲಿ ಮೂರನೆಯ ದರ್ಜೆಯಲ್ಲಿ ಪ್ರಯಾಣಿಸಿದರು. ಸ್ವಾತಂತ್ರ್ಯ ಬರುವ ಮೊದಲು, ಇತರ ಮುಖಂಡರು ಅವರ ಉದಾಹರಣೆಯನ್ನೇ ಅನುಸರಿಸಿದರು. ಗಾಂಧಿ ಆಡಳಿತದ ಸಂಪೂರ್ಣವ್ಯವಸ್ಥೆಯನ್ನು ಬದಲಾಯಿಸಲು ಇಚ್ಛಿಸಿದ್ದರು: "ಪ್ರಜಾಪ್ರಭುತ್ವದಲ್ಲಿ ರೈತನೇ ಆಳುವವನಾಗಬೇಕು. ಒಬ್ಬ ಕೃಷಿಕ ಪ್ರಧಾನ ಮಂತ್ರಿ ತಾನು ವಾಸಿಸಲು ಅರಮನೆ ಬೇಕೆಂದು ಕೇಳುವುದಿಲ್ಲ. ಆತ ಒಂದು ಮಣ್ಣಿನ ಗುಡಿಸಲಲ್ಲೂ ಇರಬಲ್ಲ, ಆಕಾಶದ ಕೆಳಗೂ ಮಲಗಬಲ್ಲ ಹಾಗೂ ಸಮಯವಿದ್ದಾಗಲೆಲ್ಲಾ ಹೊಲದಲ್ಲಿ ಕೆಲಸ ಮಾಡಬಲ್ಲ."

ಸುಸಂಸ್ಕೃತ ಪರಿಸರದಲ್ಲಿ ಹುಟ್ಟಿ-ಬೆಳೆದ ಜನ ಇಂತಹ ದಿಟ್ಟ ವಿಚಾರಗಳಿಗೆ ಹೊಂದಿಕೊಳ್ಳಲು ಹೇಗೆ ಧೈರ್ಯ ವಹಿಸಲಾರರು ಎಂಬುದು ಗಾಂಧಿಗೆ ತಿಳಿದಿತ್ತು. ಮಕ್ಕಳಿಗೆ ಭಿನ್ನವಾದ ರೀತಿಯಲ್ಲಿ ಶಿಕ್ಷಣ ಒದಗಿಸುವ ಮೂಲಕ ಆರಂಭದಿಂದಲೇ ಅದನ್ನು ಶುರು ಮಾಡಬೇಕು ಎಂದು ಅವರು ಬಯಸಿದ್ದರು. ಕೆಲವು ಪ್ರಸಿದ್ಧ ಶಿಕ್ಷಣತಜ್ಞರು ಪ್ರಯತ್ನಿಸಿದ ಪ್ರಯೋಗಾತ್ಮಕ ಶಿಕ್ಷಣದ ವಿಧಾನಗಳ ಬಗ್ಗೆ ಅವರು ಸಾಕಷ್ಟು ವಿಚಾರ ಮಾಡಿದರು. ಎಳೆಯ ಮಕ್ಕಳ ಮನಸ್ಸುಗಳನ್ನು ತರಪೇತುಗೊಳಿಸಲು ಒಂದು ಪ್ರಾಥಮಿಕ ವಿಧಾನದ ಸಲಹೆ ನೀಡಿದರು. ಅದನ್ನು ಅವರು 'ನಯೀ ತಾಲೀಮ್' ಎಂದು ಕರೆದರು. ಅದರಲ್ಲಿ ಸಾಹಿತ್ಯದ ತರಬೇತಿಗೆ ಮಹತ್ವ ಕಡಿಮೆ ಇತ್ತು. ಅನಕ್ಷರತೆ ಮಾತ್ರವಲ್ಲ, ಅಜ್ಞಾನದ ನಿರ್ಮೂಲನೆ ಸಹ ಅವರ ಗುರಿಯಾಗಿತ್ತು. ಕುಶಲಕಲೆಗಳ ಮೂಲಕ ಕಲಿಸುವುದರಿಂದ, ಎಳೆಯ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಅಭಿವೃದ್ಧಿ ಪಡಿಸಲು ಹಾಗೂ ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಲು ಅವರು ಆಶಿಸಿದರು. ಅವರಲ್ಲಿ ಎಲ್ಲಾ ಮತಧರ್ಮಗಳ ಬಗ್ಗೆ ಸಹಿಷ್ಣುತೆ, ಎಲ್ಲಾ ಜನಾಂಗಗಳ ಬಗ್ಗೆ ಪ್ರೀತಿ ಮತ್ತು ಎಲ್ಲಾ ದುಡಿಮೆಗಳ ಬಗ್ಗೆ ಗೌರವವನ್ನು ತುಂಬಲು ಅವರು ಅಪೇಕ್ಷಿಸಿದ್ದರು.

ಸಮೂಹ ಪ್ರಾರ್ಥನಾಸಭೆಗಳಲ್ಲಿ ಪ್ರಪಂಚದ ಎಲ್ಲಾ ಮತಗಳಿಂದ ಆಯ್ದ ಒಂದು ಪ್ರಾರ್ಥನೆಯನ್ನು ಪರಿಚಯಿಸಲು ಪ್ರಯತ್ನಿಸಿದರು.

ಗಾಂಧಿ ನೂರಾರು ಸಾರ್ವಜನಿಕ ಸಭೆಗಳಲ್ಲಿ ತಮ್ಮ ವಿಚಾರಗಳ ಬಗ್ಗೆ ದಣಿವಿಲ್ಲದೇ ಮಾತನಾಡಿದರು ಮತ್ತು ತಮ್ಮ ಸಂಚಿಕೆಗಳಲ್ಲಿ ಅಸಂಖ್ಯಾತ ಲೇಖನಗಳನ್ನು ಬರೆದರು. ಅವರು ಯಶಸ್ವಿಯಾಗಿ ಸಂಪಾದನೆ ಮಾಡಿದ ಅನೇಕ ವಾರಪತ್ರಿಕೆಗಳಲ್ಲಿ ಒಳ್ಳೆಯ ಆದಾಯವನ್ನು ತರುತ್ತಿದ್ದ ಎಲ್ಲಾ ಜಾಹೀರಾತುಗಳ ಕೈಬಿಟ್ಟರು. ಅವರು ಹಣವನ್ನು ತಿರಸ್ಕಾರದಿಂದ ನೋಡಿದರು, ಆದರೆ ಅದನ್ನು ಯಾವುದೇ ರೀತಿಯಲ್ಲಿ ಪೋಲುಮಾಡುವುದನ್ನು ಸಹಿಸುತ್ತಿರಲಿಲ್ಲ. ಒಮ್ಮೆ ಸಭೆಗಳ ವ್ಯವಸ್ಥಾಪಕರಿಗೆ ಅಲಂಕಾರಗಳಿಗಾಗಿ ಅನಗತ್ಯ ಖರ್ಚು ಮಾಡುವುದನ್ನು ತಪ್ಪಿಸಬೇಕು ಎಂದು ಸಲಹೆ ನೀಡಿದರು: "ಹೂಗಳ ಬಳಕೆಯನ್ನು ಪೂರ್ತಿಯಾಗಿ ತಪ್ಪಿಸಬಹುದು. ನೂಲಿನ ಹಾರ ಕೊಡಬಹುದು. ಗಂಟುಗಳನ್ನು ಹಾಕಿ ನೂಲಿಗೆ ಹಾನಿ ಮಾಡಬಾರದು. ಪ್ರಯೋಜನಕ್ಕೆ ಬಾರದ ಖಿದ್ದರಿನಿಂದ ಮಾಡಿದ ಬಾವುಟ ಮತ್ತು ತೋರಣಗಳನ್ನು ಉಪಯೋಗಿಸಬಹುದು. ವಿಳಾಸಗಳನ್ನು ಮುದ್ರಿಸುವುದನ್ನು ತಪ್ಪಿಸುವ ಮೂಲಕ ಹಣ ಉಳಿತಾಯ ಮಾಡಬಹುದು. ಸರಳವಾದ ಕೈಯಲ್ಲಿ ಮಾಡಿದ ಕಾಗದದ ಮೇಲೆ ಸುಂದರವಾಗಿ ಬರೆಯಬಲ್ಲವರು ವಿಳಾಸಗಳನ್ನು ಬರೆಯಬಹುದು. ಈ ಕಾಗದವನ್ನು ಖಿದ್ದರಿನ ಒಂದು ಚೂರಿನ ಮೇಲೆ ಚೆನ್ನಾಗಿ ಹೊಲಿಯಬಹುದು ಅಥವಾ ಹುಡುಗರು-ಹುಡುಗಿಯರು ಖಿದ್ದರಿನ ಚೂರಿನ ಮೇಲೆ ಅಕ್ಷರಗಳ ಕಸೂತಿ ಮಾಡಬಹುದು."

ಒಳಾಂಗಣದ ಅಲಂಕಾರದ ಬಗ್ಗೆ ಗಾಂಧಿಯ ವಿಚಾರಗಳು ಅದ್ವಿತೀಯವಾಗಿದ್ದವು. ರತ್ನಗಂಬಳಿಗಳಿಂದ ಅಥವಾ ಪೀಠೋಪಕರಣಗಳು ಮತ್ತು ಅಪೂರ್ವ ಕಲಾವಸ್ತುಗಳಿಂದ ತುರುಕಲ್ಪಟ್ಟ ಕೋಣೆಯನ್ನು ಅವರು ಇಷ್ಟ ಪಡಲಿಲ್ಲ. ಕಿಟಕಿ ಪರದೆಗಳು ಅವರಿಗೆ ಆಕರ್ಷಕ ವೆನಿಸಲಿಲ್ಲ. ಒಮ್ಮೆ ಅವರು ಒಬ್ಬ ಶ್ರೀಮಂತ ದಕ್ಷಿಣ ಭಾರತದ ವರ್ತಕರೊಬ್ಬರ ಅತಿಥಿ ಯಾಗಿದ್ದರು. ಅಲ್ಲಿನ ಅಲಂಕಾರಿಕ ವಸ್ತುಗಳ ಕಲಸುಮೇಲೋಗರ ಅವರಿಗೆ ಹಿಡಿಸಲಿಲ್ಲ. ಅವರು ಹೇಳಿದರು: "ಅತಿಯಾದ ಪೀಠೋಪಕರಣಗಳಿಂದ ನನಗೆ ಹಿಂಸೆಯಾಗಿದೆ. ಅವುಗಳ ಮಧ್ಯೆ ಉಸಿರಾಡುವುದಕ್ಕೂ ಸ್ಥಳವಿಲ್ಲ. ನಿಮ್ಮ ಕೆಲವು ಚಿತ್ರಗಳು ಭಯಂಕರವಾಗಿವೆ. ಚೆಟ್ಟಿನಾಡಿನಲ್ಲಿರುವ ಎಲ್ಲಾ ಅರಮನೆಗಳನ್ನು ಸುಸಜ್ಜಿತಗೊಳಿಸುವ ಕೆಲಸವನ್ನು ನನಗೆ ಗುತ್ತಿಗೆಗೆ ಕೊಡುವಿರಾದರೆ, ಅದೇ ವಸ್ತುಗಳನ್ನು ಈಗ ತಗುಲಿರುವ ಮೊತ್ತದ ಹತ್ತನೇ ಒಂದು ಭಾಗದಲ್ಲಿ ಒದಗಿಸುತ್ತೇನೆ. ಅದರೆ ಇದಕ್ಕಿಂತ ಹೆಚ್ಚು ಆರಾಮದಾಯಕವಾಗಿರುತ್ತದೆ, ತಾಜಾ ಗಾಳಿ ಹೆಚ್ಚಾಗಿರುತ್ತದೆ. ಅಲ್ಲದೆ, ನಿಮ್ಮ ಮನೆಗಳನ್ನು ಹೆಚ್ಚು ಕಲಾತ್ಮಕವಾಗಿ ಸಜ್ಜುಗೊಳಿಸಿದ್ದೇನೆ ಎಂದು ಭಾರತದ ಅತ್ಯುತ್ತಮ ಕಲಾಕಾರರಿಂದ ಪ್ರಮಾಣಪತ್ರವನ್ನೂ ಪಡೆಯುತ್ತೇನೆ." ಗಾಂಧಿಯ ಈ ಹೆಮ್ಮೆಯ ಮಾತನ್ನು ಸೇವಾಗ್ರಾಮದಲ್ಲಿಯ ಗಾಂಧಿಯ ಕುಟೀರದ ಬಗ್ಗೆ ನಂದಲಾಲ್ ಬೋಸ್‌ರವರು ವ್ಯಕ್ತಪಡಿಸಿದ ಮೆಚ್ಚುಗೆ ಸಮರ್ಥಿಸುವಂತಿತ್ತು: "ನೆಲ ಮತ್ತು ಗೋಡೆಗಳಿಗೆ ಸಗಣಿಯ ಪಟ್ಟು ಹಾಕಲಾಗಿತ್ತು. ಆ ಕೋಣೆಯಲ್ಲಿ ಒಂದು ಚಿತ್ರ, ಛಾಯಾಚಿತ್ರ ವಾಗಲೀ, ಒಂದು ಮೂರ್ತಿ ಅಥವಾ ಪ್ರತಿಮೆಯಾಗಲೀ ಇರಲಿಲ್ಲ. ಕೋಣೆಯ ಒಂದು ಮೂಲೆಯಲ್ಲಿ ಒಂದು ಚಾಪೆ. ಅದರ ಮೇಲೆ ಮಡಿಸಿಟ್ಟಿದ್ದ ಒಂದು ಖಿದ್ದರಿನ ಹೊದಿಕೆ ಮತ್ತು ಒರಗಿ ಕುಳಿತುಕೊಳ್ಳಲು ಒಂದು ಮೆತ್ತೆದಿಂಬು. ಕೋಣೆಯಲ್ಲಿ ಒಂದು ಪ್ಯಾಕಿಂಗ್ ಕೇಸ್ ಸಹ ಇತ್ತು. ಅದರ ಮೇಲೆ ಒಂದು ಖಿದ್ದರಿನ ಹಾಸು. ಇದನ್ನು ಬರೆಯುವಾಗ ಮೇಜಿನಂತೆ ಉಪಯೋಗಿಸಲಾಗುತ್ತಿತ್ತು. ಇದರ ಒಂದು ಪಕ್ಕದಲ್ಲಿ ಕಂಚಿನ, ಮೆರುಗು ಹಾಕಲಾಗಿದ್ದ ಒಂದು ಲೋಟ. ಅದರ ಮೇಲೆ ಅರಳಿ ಎಲೆಯ ಆಕೃತಿಯಲ್ಲಿದ್ದ ಒಂದು ಕಬ್ಬಿಣದ ಹಾಳೆ. ಆ ಕೋಣೆಯಲ್ಲಿ ಸ್ವಚ್ಛತೆಯ ವಾತಾವರಣವಿತ್ತು. ಒಂದು ಅಚ್ಚುಕಟ್ಟು ಮತ್ತು ನಿಶ್ಚಲ ಸೌಂದರ್ಯವಿತ್ತು. ಅವರು ಸೊಂಟದ ಸುತ್ತ ಖಿದ್ದರಿನ ಒಂದು ತುಂಡನ್ನು ಬಿಗಿಯಾಗಿ ಸುತ್ತಿಕೊಂಡು, ಅತಿ ಕಡಿಮೆ ಬಟ್ಟೆಯಲ್ಲಿ, ಕೋಣೆಯಲ್ಲಿ ಕುಳಿತಿದ್ದರು. ಅವರ ತುಟಿಗಳ ಮೇಲೆ ಯಾವಾಗಲೂ ಒಂದು ಆಹ್ಲಾದಕರವಾದ ನಗು ಸುಳಿದಾಡುತ್ತಿತ್ತು. ಅವರು ನನಗೆ ಅಪ್ಪಟ ಶುದ್ಧ ಸ್ವಭಾವದ. ಒರೆಯಿಂದ ಹೊರತೆಗೆದ ಒಂದು ಕತ್ತಿಯಂತೆ ಕಂಡುಬಂದರು. ಅವರಲ್ಲಿ ಕತ್ತಿಯ ಎಲ್ಲಾ ಗುಣಲಕ್ಷಣಗಳಿದ್ದವು. ಹಿಂಸೆಯದೊಂದನ್ನು ಬಿಟ್ಟು."

ಹಾವಾಡಿಗ

ಹುಡುಗನಾಗಿದ್ದಾಗ, ಗಾಂಧಿಗೆ ಹಾವೆಂದರೆ ಬಹಳ ಭಯವಿತ್ತು. ಕತ್ತಲಲ್ಲಿ ಅವರು ಒಬ್ಬರೇ ಹೊರಗೆ ಎಲ್ಲೂ ಹೋಗುತ್ತಿರಲಿಲ್ಲ. ಕಳ್ಳರು, ಭೂತಗಳು ಮತ್ತು ಹಾವುಗಳು ಅವರ ಮೇಲೆ ನೆಗೆಯಲೆಂದು ಕಾದು ಕುಳಿತಿರುತ್ತವೆ ಎಂದು ಅವರು ಕಲ್ಪಿಸಿಕೊಳ್ಳುತ್ತಿದ್ದರು.

ಗಾಂಧಿ ತಮ್ಮ 35ನೇ ವಯಸ್ಸಿನಲ್ಲಿ ಒಬ್ಬ ಅರೆ-ತಿರುಕನ ಜೀವನ ನಡೆಸಿದರು ಹಾಗೂ ಆಶ್ರಮಗಳಲ್ಲಿ ವಾಸಿಸಿದರು. ಅವರ ಆಶ್ರಮವೆಂದರೆ, ವಾಸಿಸುವ ಸಲುವಾಗಿ ಇದ್ದ ಒಂದು ಗುಡಿಸಲು ಮಾತ್ರವಾಗಿರಲಿಲ್ಲ. ಅದಕ್ಕೊಂದು ದೊಡ್ಡ ಕಾಂಪೌಂಡ್ ಇತ್ತು. ಅದರೊಳಗೆ ಒಂದು ಬಾವಿ, ವ್ಯವಸಾಯ ಮಾಡಲು ಸಾಕಷ್ಟು ಭೂಮಿ ಮತ್ತು ಅದಕ್ಕೆ ಅಂಟಿಕೊಂಡಂತೆಯೇ ಹಣ್ಣಿನ ತೋಟ. ಅದು ಪ್ರಶಾಂತವಾಗಿದ್ದ ಸ್ಥಳವಾಗಿತ್ತು. ನಗರದ ಧೂಳು ಮತ್ತು ಗದ್ದಲದಿಂದ ದೂರವಾಗಿತ್ತು. ಗಾಂಧಿ ಶ್ರೀಮಂತರೇನಾಗಿರಲಿಲ್ಲ. ಆದ್ದರಿಂದಲೇ ಅವರು ಅಗ್ಗದ ಬೀಳುಭೂಮಿಯನ್ನು ಪಡೆದುಕೊಂಡರು. ಅವರ ಎಲ್ಲಾ ಆಶ್ರಮಗಳಲ್ಲಿ – ಫೀನಿಕ್ಸ್ ವಸಾಹತು, ಟಾಲ್‌ಸ್ಟಾಯ್ ಫಾರಂ, ಸಬರಮತಿ ಆಶ್ರಮ, ವಾರ್ಧಾ ಆಶ್ರಮ ಮತ್ತು ಸೇವಾಗ್ರಾಮಗಳಲ್ಲಿ ಹಾವುಗಳೇ ತುಂಬಿಕೊಂಡಿದ್ದವು. ಕುಟೀರಗಳನ್ನು ಕಟ್ಟುವ ಮೊದಲು, ಆಶ್ರಮವಾಸಿಗಳು ಕ್ಯಾನ್‌ವಾಸ್ ಡೇರೆಗಳ ಕೆಳಗೆ ವಾಸಿಸಬೇಕಾಗಿತ್ತು. ಮಕ್ಕಳೊಂದಿಗೆ ಆ ರೀತಿ ವಾಸಿಸುವುದರಲ್ಲಿ ಅಪಾಯ ಉಂಟಾಗುವ ಸಾಧ್ಯತೆ ಇತ್ತು. ಹೊಲಮನೆ ಅಂಗಳದ ಛಾವಣಿಗೆ ವಿಷದ ಹಾವು ಅಂಟಿಕೊಂಡಿರುವುದನ್ನು ಒಂದು ದಿನ ಕಂಡರೆ, ಮತ್ತೊಂದು ದಿನ ಒಂದೆರಡು ಸರ್ಪಗಳು ಬೈಸಿಕಲ್‌ನ ಸಮೀಪ ಸುತ್ತಿಕೊಂಡು ಮಲಗಿರುವುದನ್ನು ಕಾಣಬಹುದಿತ್ತು. ಕೆಲವೊಮ್ಮೆ ಅವು ಮಲಗುವ ಕೋಣೆಗಳನ್ನು ಪ್ರವೇಶಿಸುತ್ತಿದ್ದವು. ಅವುಗಳೊಂದಿಗೆ ಏನು ಮಾಡುವುದು ಎಂಬುದೇ ಒಂದು ಸಮಸ್ಯೆಯಾಗಿತ್ತು. ಗಾಂಧಿಗೆ ಅಹಿಂಸೆಯಲ್ಲಿ ನಂಬಿಕೆಯಿತ್ತು. ಅವರು ಒಬ್ಬ ನಿಷ್ಠಾವಂತ ವೈಷ್ಣವರಾಗಿದ್ದರು. ತಮ್ಮ ಮಗ, ಹೆಂಡತಿ ಅಥವಾ ತಮ್ಮದೇ ಪ್ರಾಣವನ್ನು ಕಾಪಾಡಿಕೊಳ್ಳುವ ಸಲುವಾಗಿಯೂ ಅವರು ಮೀನು, ಮಾಂಸ ಅಥವಾ ಯಾವುದೇ ಪಕ್ಷಿಯಿಂದ ತಯಾರಿಸಲಾದ ಔಷಧ ಅಥವಾ ಪಥ್ಯಾಹಾರವನ್ನು ಉಪಯೋಗಿಸಲಿಲ್ಲ. ಎಮ್ಮೆ–ಹಸುಗಳಿಂದ ಹಾಲಿನ ಕೊನೆಯ ಹನಿಯನ್ನು ಕರೆಯುವವರೆಗೂ ಅವುಗಳಿಗೆ ಚಿತ್ರಹಿಂಸೆ ನೀಡುತ್ತಿದ್ದರಾದ್ದರಿಂದ ಎಮ್ಮೆ-ಹಸುಗಳ ಹಾಲುಗಳನ್ನು ಉಪಯೋಗಿಸುವುದನ್ನು ಅವರು ಬಿಟ್ಟರು. ಅಂತಹುದರಲ್ಲಿ, ಹಾವನ್ನು ಹೇಗೆ ತಾನೆ ಕೊಲ್ಲಲಾದೀತು ? ಹಾವುಗಳು ವಿಷಪೂರಿತವಾಗಿದ್ದರೂ, ಅವುಗಳನ್ನು ಕೊಲ್ಲಬಾರದು ಎಂಬುದು ಸಾಮಾನ್ಯ ನಿಯಮವಾಗಿತ್ತು. ಹಾವುಗಳನ್ನು ಹಿಡಿದು, ಆಶ್ರಮದಿಂದ ಕ್ಷೇಮಕರವಾದ ದೂರದ ಸ್ಥಳದಲ್ಲಿ ಒಯ್ದು ಬಿಡಲು ಹಗ್ಗಗಳಿಂದ ಒಂದು ಸಾಧನವನ್ನು ರೂಪಿಸಲಾಯಿತು. ಆದರೆ ಅವನ್ನು ಹಿಡಿಯಲಿಕ್ಕಾಗದ ಸ್ಥಿತಿಯಲ್ಲಿ ಅವುಗಳಿದ್ದಾಗ ಅಥವಾ ಅವುಗಳ ಬಳಿಗೆ ಹೋಗಿ–ಹಿಡಿಯಲು ಒಬ್ಬ ವ್ಯಕ್ತಿಗೆ ಧೈರ್ಯವಿಲ್ಲದಿದ್ದಲ್ಲಿ, ಆಗ ಏನು ಮಾಡಬೇಕು ? ಹಿಂಸೆಯನ್ನು ಸಂಪೂರ್ಣವಾಗಿ ತಪ್ಪಿಸುವುದು ಅಸಾಧ್ಯ ಎಂಬುದು ಗಾಂಧಿಗೆ ತಿಳಿದಿತ್ತು. ತರಕಾರಿಗಳನ್ನು ತಿನ್ನುವುದು ಸಹ ಗಿಡಗಳಿಗೆ ಎಸಗುವ ಹಿಂಸೆಯೇ. "ಹಾವನ್ನು ಕೊಂದರೆ ಆಗುವ ದುಃಖಕ್ಕಿಂತ ಹಾವು ಕಡಿತದಿಂದ ಒಂದು ಮಗುವು ಸತ್ತರೆ ನನಗೆ ಹೆಚ್ಚು ದುಃಖವಾಗುತ್ತದೆ. ನನಗೆ ಹಾವುಗಳೆಂದರೆ ಇನ್ನೂ ಹೆದರಿಕೆ ಇರುವಾಗ, ಭಯ ಪಡಬೇಡಿ ಎಂದು ಇತರರಿಗೆ ನಾನು ಹೇಗೆ ಹೇಳಲಿ ?" ಎಂದು ಅವರು ದುಃಖದಿಂದ ಒಪ್ಪಿಕೊಂಡರು. ಹಾವುಗಳನ್ನು ಓಡಿಸಲು ಎಲ್ಲಾ ವಿಧಾನಗಳು ವಿಫಲವಾದ ಮೇಲೆ, ಅವನ್ನು ಕೊಂದುಹಾಕಲು ಅವರು ಅನುಮತಿ ಇತ್ತರು.

ಗಾಂಧಿಗೆ ಸರ್ಪಜ್ಞಾನದ ವಿವರಗಳನ್ನು ತಿಳಿದುಕೊಳ್ಳಲು ಉತ್ಕಟವಾದ ಆಸೆಯಿತ್ತು. ಕಲ್ಲೇನ್‌ಬ್ಯಾಕ್‌ರವರ ಸಹಾಯದೊಂದಿಗೆ ವಿಷಪೂರಿತ ಹಾವು ಮತ್ತು ವಿಷಪೂರಿತವಲ್ಲದ ಹಾವುಗಳನ್ನು ಗುರುತಿಸಲು ಆರಂಭಿಸಿದರು. ಇದರ ಪ್ರಾಯೋಗಿಕ ಅಧ್ಯಯನಕ್ಕಾಗಿ, ಕಲ್ಲೇನ್‌ಬ್ಯಾಕ್ ಒಂದು ನಾಗರಹಾವನ್ನು ಹಿಡಿದು ತಂದು, ಒಂದು ಪಂಜರದೊಳಿಟ್ಟು , ತಮ್ಮ ಕೈಯಾರೆ ಅದಕ್ಕೆ ಉಣಿಸತೊಡಗಿದರು. ಆಶ್ರಮದ ಮಕ್ಕಳಿಗೆ ಅದನ್ನು ನೋಡುವುದೆಂದರೆ ಬಲು ಆಸಕ್ತಿ. ಈ ಹೊಸ ಮಿತ್ರನನ್ನು ಯಾರೂ ಹಿಂಸಿಸಲಿಲ್ಲ. ಆದರೆ, ಗಾಂಧಿಗೆ ಸಂತೋಷವಾಗಲಿಲ್ಲ. ಅವರು ಕಲ್ಲೇನ್‌ಬ್ಯಾಕ್‌ಗೆ ಹೇಳಿದರು: "ಅದರ ರೀತಿನೀತಿ ಮತ್ತು ಅಭ್ಯಾಸಗಳನ್ನು ಅಧ್ಯಯನ ಮಾಡಲು ನಾವು ಅದನ್ನು ಬಂಧಿಸಿಟ್ಟಿದ್ದೇವೆ. ಈ ನಾಗರಹಾವಿಗೆ ನಮ್ಮ ಸ್ನೇಹದ ಸ್ಪಷ್ಟತೆ ಇದ್ದಂತಿಲ್ಲ. ನಿಮಗಾಗಲೀ, ನನಗಾಗಲೀ, ಅದರೊಂದಿಗೆ ಆಡುವಷ್ಟು ಧೈರ್ಯವಿಲ್ಲ. ನಿಮ್ಮ ಸ್ನೇಹಪರತೆಯೂ ಭಯದಿಂದ ಮುಕ್ತವಾಗಿಲ್ಲ. ನಾಗರಹಾವನ್ನು ಪಳಗಿಸುವ ಈ ಕ್ರಿಯೆಯಲ್ಲಿ ಪ್ರೀತಿ ಎಂಬುದಿಲ್ಲ." ಈ ಜನ ತನ್ನೊಂದಿಗೆ ಅಷ್ಟಾಗಿ ಸ್ನೇಹದಿಂದಿಲ್ಲ ಎಂದು ಪ್ರಾಯಶಃ ಆ ನಾಗರಹಾವಿಗೂ ಅನ್ನಿಸಿತೇನೋ – ಒಂದು ದಿನ ಅದೂ ಪಂಜರದಿಂದ ತಪ್ಪಿಸಿಕೊಂಡು ಹೋಯಿತು.

ಮತ್ತೊಬ್ಬ ಆಶ್ರಮವಾಸಿ – ಆತ ಜರ್ಮನಿ ದೇಶದವ – ಹಾವುಗಳನ್ನು ಭಯವಿಲ್ಲದೆ ಹಿಡಿಯಬಲ್ಲವನಾಗಿದ್ದ. ಹಾವಿನ ಮರಿಗಳನ್ನು ಹಿಡಿದು, ತನ್ನ ಅಂಗೈಯ ಮೇಲೆ ಅವುಗಳು ಆಡುವಂತೆ ಮಾಡುತ್ತಿದ್ದ. ಅಂತಹ ಧೈರ್ಯ ಬೆಳೆಸಿಕೊಳ್ಳಲು ಗಾಂಧಿಗೂ ಇಷ್ಟವಿತ್ತು. ಗಾಂಧಿ ಹಾವನ್ನು ಮುಟ್ಟಿದಾಗ, ಅವರ ಸ್ಪರ್ಶಮಾತ್ರದಿಂದಲೇ ಹಾವು 'ಇವರು ತನ್ನನ್ನು ಘಾಸಿಗೊಳಿಸಲಾರರು' ಎಂಬುದನ್ನು ಅರಿತುಕೊಳ್ಳುವಂತಹ ಹಂತವನ್ನು ತಾವು ತಲುಪಬೇಕೆಂದು ಅವರು ಬಯಸಿದರು. ಅವರಿಗೆ, ರಾಮನಾಮ ಜಪಿಸುತ್ತಾ ಹಾವಿನ ಬಾಯಿಗೆ ಕೈ ಹಾಕುವುದು ಒಂದು ದೊಡ್ಡ ಸಾಧನೆ ಎನಿಸಿತ್ತು. ಆದರೆ ತಮ್ಮ ಜೀವನದ ಕೊನೆಯವರೆಗೂ ತಮ್ಮ ಕೈಯಿಂದ ಒಂದು ಹಾವು ಅಥವಾ ಚೇಳನ್ನು ಅವರು ಹಿಡಿದುಕೊಳ್ಳಲು ಆಗಲಿಲ್ಲ. ಆ ಬಗ್ಗೆ ಗಾಂಧಿಗೆ ನಾಚಿಕೆ ಎನಿಸಿತ್ತು.

ಪ್ರಮುಖ ಕೆಲಸಗಳಲ್ಲಿ ಮಗ್ನರಾಗಿದ್ದಾಗಲೂ ಅವರು ಹಾವುಗಳ ಅಧ್ಯಯನದಲ್ಲಿ ತಮ್ಮ ಆಸಕ್ತಿಯನ್ನು ಬಿಡಲಿಲ್ಲ. ಒಂದು ಬಾರಿ ಕೆಲವು ನಾಯಕರು ಕೆಲವು ಸಲಹೆಗಳಿಗಾಗಿ ಗಾಂಧಿಯ ಬಳಿ ಹೋದರು. ಗಾಂಧಿಯ ಕೊರಳ ಸುತ್ತಲೂ ಒಂದು ಹಾವು ಸುತ್ತಿಕೊಂಡು ಜೋತಾಡುತ್ತಿದ್ದುದನ್ನು ಕಂಡು ಅವರಿಗೆ ಗಾಬರಿಯಾಯಿತು. ಆಗ ಗಾಂಧಿ ಒಬ್ಬ ಹಾವಾಡಿಗನ ಜೊತೆ ಮಾತುಕತೆಯಲ್ಲಿ ಮಗ್ನರಾಗಿದ್ದರು. ಹಾವುಗಳನ್ನು ಹಿಡಿದುಕೊಳ್ಳುವ ಕಲೆಯ ಬಗ್ಗೆ ಮತ್ತು ಹಾವುಕಡಿತಕ್ಕೆ ಔಷಧೋಪಚಾರಗಳ ಬಗ್ಗೆ ಅವನಿಂದ ತಿಳಿದುಕೊಳ್ಳಲು ಅವರು ಕಾತುರರಾಗಿದ್ದರು. ಈ ಪ್ರಯೋಗಕ್ಕಾಗಿ ಒಬ್ಬ ಮನುಷ್ಯ ಹಾವಿನ ಕಡಿತಕ್ಕೆ ಒಳಗಾಗಬೇಕಾಗಿತ್ತು. ಹಾವಿನಿಂದ ಕಚ್ಚಿಸಿಕೊಳ್ಳಲು ಗಾಂಧಿ ತಯಾರಾಗಿದ್ದರು. ಆದರೆ ಆ ಅಮೂಲ್ಯ ಜೀವದ ಮೇಲೆ ಇಂತಹ ದಿಟ್ಟಿದೆಯ ಪ್ರಯೋಗ ನಡೆಸಲು ಅವರ ಸಹೋದ್ಯೋಗಿಗಳು ಅನುಮತಿ ಕೊಡಲಿಲ್ಲ. ಹೀಗೆ ಒಬ್ಬ ಹಾವಾಡಿಗನ ಶಿಷ್ಯನಾಗುವ

ಅವಕಾಶವನ್ನು ಗಾಂಧಿ ತಮ್ಮ 70ನೇ ವಯಸ್ಸಿನಲ್ಲಿ ಕಳೆದುಕೊಂಡರು.

ಕೆಲ ವರ್ಷಗಳ ಹಿಂದೆ, ಗಾಂಧಿ ಸೆರೆಮನೆಯಲ್ಲಿದ್ದಾಗ, ಅವರ ವಸಡುಗಳಲ್ಲಿ ರಕ್ತ ಒಸರುತ್ತಿತ್ತು. ಒಬ್ಬ ನೀಗ್ರೋ ಖೈದಿ ಅದಕ್ಕಾಗಿ ಅವರ ಔಷಧೋಪಚಾರ ಮಾಡಿದ. ಇಬ್ಬರಿಗೂ ಪರಸ್ಪರರ ಭಾಷೆ ಗೊತ್ತಿಲ್ಲ. ಇಬ್ಬರೂ ಸಂಜ್ಞೆಗಳಿಂದಲೇ ಮಾತನಾಡಿದರು. ಒಂದು ದಿನ ಆ ನೀಗ್ರೋ ತನ್ನ ನೋಯುತ್ತಿದ್ದ ಬೆರಳನ್ನು ಹಿಡಿದುಕೊಂಡು, ಅರಚುತ್ತಾ ಗಾಂಧಿಯ ಬಳಿ ಬಂದ. ಏನೆಂದು ವಿಚಾರಿಸಿದಾಗ, ಅವನಿಗೆ ಏನೋ ಕಚ್ಚಿದೆ ಎಂಬುದು ತಿಳಿದುಬಂದಿತು. ಒಡನೆಯೇ ಗಾಂಧಿ ಸೆರೆಮನೆಯ ಸೂಪರಿಂಟೆಂಡೆಂಟರಿಗೆ ಒಂದು ಪತ್ರ ಬರೆದು ಕಳುಹಿಸಿದರು. ವಿಷ ಸೇರಿರುವ ರಕ್ತವನ್ನು ಹೊರಹೋಗಲು ಬಿಟ್ಟಲ್ಲಿ, ಪರಿಹಾರವಂತೂ ಖಂಡಿತ ಎಂಬುದು ಅವರಿಗೆ ಗೊತ್ತಿತ್ತು. ಅಲ್ಲೆಲ್ಲೂ ಸ್ವಚ್ಛವಾದ ಚಾಕು ಒಡನೆಯೇ ಲಭ್ಯವಾಗದಿದ್ದ ಕಾರಣ, ಅವರು ಗಾಯದಿಂದ ವಿಷವನ್ನು ಹೀರಲು ಆರಂಭಿಸಿದರು. ರಕ್ತ ಒಸರುತ್ತಿದ್ದ ವಸಡುಗಳನ್ನು ಇಟ್ಟುಕೊಂಡು ವಿಷವನ್ನು ಹೀರುವುದು ಅಪಾಯಕಾರಿಯಾಗಿತ್ತು, ಆದರೆ ಅವರು ಆ ನೀಗ್ರೋ ಮನುಷ್ಯ ನೋವಿನಿಂದ ನರಳುವುದನ್ನು ನೋಡಲಾರದವರಾಗಿದ್ದರು.

ಎಲ್ಲಾ ಹಾವುಗಳು ವಿಷಪೂರಿತವಲ್ಲ ಹಾಗೂ ಎಲ್ಲಾ ಹಾವುಕಡಿತಗಳು ಮಾರಕವಲ್ಲ ಎಂಬುದು ಗಾಂಧಿಗೆ ತಿಳಿದಿತ್ತು. ಕೇವಲ ಶೇಕಡ 12ರಷ್ಟು ಹಾವುಗಳು ವಿಷಕಾರಿ. ತಮ್ಮ ದೇಶವಾಸಿಗಳಿಗೆ, ವಿಶೇಷವಾಗಿ ಗ್ರಾಮಸ್ಥರಿಗೆ ಸರ್ಪಗಳ ಬಗ್ಗೆ ತಿಳುವಳಿಕೆ ನೀಡಲು ಅವರು ಬಯಸಿದ್ದರು. ಸೂಕ್ತವಾದ ಚಿತ್ರಗಳು ಮತ್ತು ರೇಖಾಚಿತ್ರಗಳೊಂದಿಗೆ ಅವರು ಹಾವುಗಳ ಬಗ್ಗೆ ಕೆಲವು ಲೇಖನಗಳನ್ನು ಪ್ರಕಟಿಸಿದರು. ಒಮ್ಮೆ ಅವರು 'ಹರಿಜನ್'ನಲ್ಲಿ ಹೀಗೆ ಬರೆದರು: "ನಮಗೆ ವಿಷದ ಹಾವಿಗೂ, ಸಾಧಾರಣ ಹಾವಿಗೂ ವ್ಯತ್ಯಾಸ ತಿಳಿಯುವುದಿಲ್ಲ. ಆದ್ದರಿಂದಲೇ, ನಾವು ಎಲ್ಲ ಹಾವುಗಳನ್ನು ಹಿಂದೆಮುಂದೆ ನೋಡದೆ ಕೊಂದುಬಿಡುತ್ತೇವೆ. ಬಹಳಷ್ಟು ಸಂದರ್ಭಗಳಲ್ಲಿ, ಹಾವು ಕಡಿತಕ್ಕೆ ಒಳಗಾದ ವ್ಯಕ್ತಿ ಸಾಯುವುದು ಕೇವಲ ಭಯದಿಂದಲೇ. ವಿಷದ ಹಾವುಗಳು ಸಹ ಅವನ್ನು ತುಳಿದ ಅಥವಾ ಅವುಗಳೊಂದಿಗೆ ಒರಟಾಗಿ ನಡೆದುಕೊಂಡ ಹೊರತು, ಸುಮ್ಮಸುಮ್ಮನೆ ಕಚ್ಚುವುದಿಲ್ಲ. ಹಾವುಗಳು ಹೊಲಗದ್ದೆಗಳನ್ನು ಇಲಿ-ಹೆಗ್ಗಣಗಳು, ಕ್ರಿಮಿಕೀಟಗಳು ಮತ್ತು ಉಪದ್ರವಕಾರಿ ಜೀವಿಗಳಿಂದ ಮುಕ್ತವಾಗಿಡುತ್ತವೆ. ಅದರಿಂದಲೇ ಅವನ್ನು ಕ್ಷೇತ್ರಪಾಲ, ಎಂದರೆ ಸುಗ್ಗಿಯ ನೆಲದ ಕಾವಲುಗಾರರು, ಎಂದು ಕರೆಯುತ್ತಾರೆ. ನಾಗಪಂಚಮಿಯ ದಿನದಂದು ಹಳ್ಳಿಗಳಲ್ಲಿನ ತಾಯಂದಿರು ಒಂದು ಪುಟ್ಟ ತಟ್ಟೆಯಲ್ಲಿ ಹಾವುಗಳಿಗಾಗಿ ಹಾಲನ್ನಿಡುತ್ತಾರೆ. ಅದು ಹಾವುಗಳೊಂದಿಗಿನ ಸ್ನೇಹದ ದ್ಯೋತಕ. ಏಳು ತಲೆಗಳಿರುವ ಶೇಷನಾಗನ ಮೇಲೆ ಮಲಗಿರುವ ವಿಷ್ಣುವಿನ ಚಿತ್ರ ನನಗೆ ಬಹಳ ಹಿಡಿಸುತ್ತದೆ. ತನ್ನ ಹೆಡೆಯನ್ನು ದೇವರ ತಲೆಯ ಮೇಲೆ ಹರಡಿರುವ ಸರ್ಪದ ತೊಡೆಯ ಮೇಲೆ ನಿರ್ಭಯವಾಗಿ ದೇವರು ಹೇಗೆ ಮಲಗಿದ್ದಾನೆ ಎಂಬುದನ್ನು ಅದು ತೋರಿಸುತ್ತದೆ ಎಂದು ನನಗನ್ನಿಸುತ್ತದೆ. ದೇವರ ಕಂಗಳಲ್ಲಿ ಹಾವು ಅಪಾಯದ ಮೂಲವಲ್ಲ." ಒಮ್ಮೆ ಗಾಂಧಿಯ ಕುಟೀರದ ಬಳಿ ಒಂದಷ್ಟು ಅರೆಬೆತ್ತಲೆ ತುಂಟರು ಗುಂಪು ಕಟ್ಟಿಕೊಂಡಿದ್ದುದು ಕಂಡುಬಂದಿತು. ಒಂದು ಗಾಜಿನ ದುಂಡನೆಯ ಪಾತ್ರೆಯೊಳಗಿಟ್ಟಿದ್ದ ಹಾವಿನ ಮೇಲೆ ಅವರ ಕಣ್ಣುಗಳು ನೆಟ್ಟಿದ್ದವು. ವಾಸ್ತವದಲ್ಲಿ, ಅದನ್ನು ಈ ಮೊದಲೇ, ಒಬ್ಬ ಶಸ್ತ್ರವೈದ್ಯರ ಬಳಿಗೆ ಕಳುಹಿಸಲಾಗಿತ್ತು. ಅದು ಅತ್ಯಂತ ವಿಷಕಾರಿಯಾದ ಹಾವುಗಳ ಪೈಕಿ ಒಂದಾದ ಕಟ್ಟುಹಾವು ಎಂದು ಆ ವೈದ್ಯರಿಗೆ ಗೊತ್ತಾಯಿತು. ಅದರ ತಲೆಯನ್ನು ಜಜ್ಜಿ, ಅದನ್ನು ಗಾಂಧಿಗೆ ವಾಪಸು ಕಳುಹಿಸಿದ್ದರು. ಅದರ ಬೆನ್ನುಹುರಿ ಸರಿಯಾಗಿಯೇ ಇತ್ತು; ಮೂರು ದಿನಗಳವರೆಗೆ ಅದು ಬದುಕಿತ್ತು. ನೋವಿನಿಂದ ಪಾರುಮಾಡಲು ಅದನ್ನು ಕೊಂದು, ಸಂಸ್ಕರಿಸಿದ ಅರ್ಕವನ್ನು ತುಂಬಿಸಿದ್ದ ಪಾತ್ರೆಯಲ್ಲಿಡಲಾಗಿತ್ತು. ಸಜೀವ ಅಥವಾ ನಿರ್ಜೀವ ಹಾವುಗಳನ್ನು ಹಳ್ಳಿಗರಿಗೆ ತೋರಿಸಲು ಗಾಂಧಿ ಬಯಸಿದ್ದರು. ಜೀವಂತ ಮಾದರಿಗಳಿಗಾಗಿ ಅವರು ಒಂದು ಪಂಜರವನ್ನು ಮಾಡಿಸಿದ್ದರು.

ತಮ್ಮ ವೇದಾಂತಿ ಮಿತ್ರರೊಬ್ಬರನ್ನು ಗಾಂಧಿ ಒಮ್ಮೆ ಹೀಗೆ ಕೇಳಿದರು: "ಒಬ್ಬ ಅನ್ವೇಷಕನನ್ನು ಹಾವೊಂದು ಕಡಿದಾಗ, ಅವರು ಏನು ಮಾಡಬೇಕು?" ಮಿತ್ರರು ಉತ್ತರಿಸಿದರು: "ಅವರು ಹಾವನ್ನು ಕೊಲ್ಲಬಾರದು. ಹಾವೇನಾದರೂ ಅವರನ್ನು ಕಚ್ಚಿದಲ್ಲಿ, ಅದನ್ನು ಕಚ್ಚಲು ಬಿಡಬೇಕು, ಅಷ್ಟೆ." ಗಾಂಧಿ ಸ್ವತಃ ಹಾವುಗಳನ್ನು ನೋಯಿಸುತ್ತಿರಲಿಲ್ಲ. ಅವುಗಳು ಸಹ ಅವರಿಗೆ ಅಥವಾ ಆಶ್ರಮವಾಸಿಗಳಿಗೆ ಯಾವುದೇ ಹಾನಿ ಮಾಡುತ್ತಿರಲಿಲ್ಲ. ಅವರ ಯಾವುದೇ ಆಶ್ರಮದಲ್ಲಿ ಯಾರೊಬ್ಬರೂ ಹಾವುಕಡಿತದಿಂದ ಸಾಯಲಿಲ್ಲ. ಗಾಂಧಿ ಆಗಾಗ್ಗೆ ಹಾವುಗಳ ತಣ್ಣನೆಯ ಸ್ಪರ್ಶವನ್ನು ಅನುಭವಿಸುತ್ತಿದ್ದರು. ಆದರೆ ಅವು ತಮ್ಮ ವಿಷದ ಹಲ್ಲುಗಳ ರುಚಿಯ ಅನುಭವವನ್ನು ಅವರಿಗೆ ಮಾಡಿಸಲಿಲ್ಲ.

ತಣ್ಣನೆಯ ಒಂದು ಸಂಜೆಯಂದು ಗಾಂಧಿ ತಮ್ಮ ಮಿತ್ರರೊಂದಿಗೆ ಮಾತನಾಡುತ್ತಿದ್ದರು. ಒಮ್ಮಿಂದೊಮ್ಮೆ ಗಾಂಧಿಯ ಚಾದರದ ಅಂಚಿನಿಂದ ಒಂದು ಹಾವು ಕಾಣಿಸಿಕೊಂಡು, ತನ್ನ ಹೆಡೆಯನ್ನೆತ್ತಿತು. ಆ ಮಿತ್ರರು ಗಾಂಧಿಗೆ ಶಾಂತವಾಗಿರುವಂತೆ ಹೇಳಿದರು. ಗಾಂಧಿ ಸ್ವಲ್ಪವೂ ಗಾಬರಿಗೊಳ್ಳಲಿಲ್ಲ. ಗಾಬರಿಗೊಳ್ಳದಿರುವಂತೆ ಅವರು ತಮ್ಮ ಗೆಳೆಯರಿಗೆ ಸಲಹೆ ನೀಡಿದರು. ಆ ಮಿತ್ರರು ಚಾದರವನ್ನು ಹಿಡಿದುಕೊಂಡು, ಥಟ್ಟನೆ ದೂರ ಎಸೆದರು. ಮತ್ತೊಂದು ಬಾರಿ,

ಗಾಂಧಿ ಊಟ ಮುಗಿಸಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ, ಹಾವೊಂದು ಅವರ ಎದೆಯ ಮೇಲೆ ಹರಿದುಬಂದಿತು. ಅವರು ಕಿಂಚಿತ್ತೂ ಗಾಬರಿಗೊಳ್ಳಲಿಲ್ಲ. ಮತ್ತೊಂದು ಬಾರಿ, ಗಾಂಧಿ ಆಸ್ಪತ್ರೆಯಲ್ಲಿ ಮಲಗಿದ್ದಾಗ ಅವರನ್ನು ಕಾಣಲೆಂದು ಒಬ್ಬ ವಿದ್ಯಾವಂತ ಹಾಗೂ ಆಧುನಿಕ ಹಾವಾಡಿಗ ಬಂದ. ಅವನಿಗೆ, ಹಾವನ್ನು ಪಳಗಿಸುವ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಬೇಕಾಗಿತ್ತು. ಹೀಗಾಗಿ ಗಾಂಧಿಯ ಹಾಸಿಗೆಯ ಮೇಲೆ ಕೆಲವು ವಿಷದ ಹಾವುಗಳನ್ನು ಹರಿಯಬಿಟ್ಟ. ಅವು ಗಾಂಧಿಯ ಹೊದಿಕೆಯ ಮೇಲೆ ಬೆಡಗಿನಿಂದ ನರ್ತಿಸಲು ಆರಂಭಿಸಿದವು. ಅವರು ಅವುಗಳನ್ನು ಆಸಕ್ತಿಯಿಂದ ವೀಕ್ಷಿಸತೊಡಗಿದರು, ಆದರೆ ತಮ್ಮ ಕಾಲುಗಳನ್ನು ಮಾತ್ರ ಅಲುಗಾಡದಂತೆ ಇಟ್ಟುಕೊಂಡಿದ್ದರು.

ಮತ್ತೊಂದು ಸಂಜೆ, ಪ್ರಾರ್ಥನಾ ಸಮಯದಲ್ಲಿ ಗಾಂಧಿ ಮೌನ ಆಚರಿಸುತ್ತಿದ್ದಾಗ, ಒಂದು ಹಾವು ಹಾದಿ ತಪ್ಪಿ ಅವರೆಡೆಗೆ ಚಲಿಸಿತು. ಅವರ ಸಂಗಾತಿಗಳು ಗಲಿಬಿಲಿಗೊಂಡರು. ಈ ಗದ್ದಲದಲ್ಲಿ ಹಾವು ಅಧೀರಗೊಂಡಿತು ಹಾಗೂ ಕ್ಷೇಮಕರ ಆಶ್ರಯವೆಂದು ಭಾವಿಸಿ ಗಾಂಧಿಯ ತೊಡೆಯನ್ನೇರಿತು. ಅವರು ಎಲ್ಲರಿಗೂ ಶಾಂತವಾಗಿರುವಂತೆ ಸನ್ನೆ ಮಾಡಿದರು; ತಮ್ಮ ಪ್ರಾರ್ಥನೆ ಮುಂದುವರೆಸಿದರು. ಆ ಹಾವು ಮೆಲ್ಲನೆ ತೊಡೆಯಿಂದಾಚೆ ನುಸುಳಿಹೋಯಿತು. ಈ ಬಗ್ಗೆ ಗಾಂಧಿಯ ಪ್ರತಿಕ್ರಿಯೆಯನ್ನು ಕೇಳಿದಾಗ, ಅವರು ಹೇಳಿದರು: "ಒಂದು ಕ್ಷಣ ನನಗೂ ಚಡಪಡಿಕೆಯಾಯಿತು. ಆಮೇಲೆ ಸಮಾಧಾನ ಪಟ್ಟುಕೊಂಡೆ. ಆ ಹಾವು ನನ್ನನ್ನು ಕಚ್ಚಿದ್ದರೂ, ನಾನು ಹೇಳುತ್ತಿದ್ದೆ – ಅದನ್ನು ಕೊಲ್ಲಬೇಡಿ, ಅದಕ್ಕೆ ಯಾವ ಹಿಂಸೆಯನ್ನೂ ಮಾಡಬೇಡಿ. ಅದಕ್ಕೆ ಭಯಪಡುವಂತಹದ್ದೇನೂ ಆಗಬಾರದು. ಅದು ಮುಕ್ತವಾಗಿ ಹೋಗಲು ಬಿಡಬೇಕು."

ಪುರೋಹಿತ

ಗಾಂಧಿ ಯಾವಾಗ ಬ್ರಹ್ಮಚರ್ಯ ಜೀವನ ಹಾಗೂ ಸ್ವಸಂತೋಷದಿಂದ ಬಡತನವನ್ನು ಸ್ವೀಕರಿಸಿದಾಗ, ಪರೋಪಕಾರ ಸೇವೆಯನ್ನು ಮಾಡಬಯಸುವವರು ಮದುವೆಯಾಗದೆ ಉಳಿಯಬೇಕೆಂದು ಖಂಡಿತವಾಗಿ ನುಡಿದರು.

ಈ ವಿಚಾರಕ್ಕೆ ಪಟ್ಟು ಬೀಳುವ ಮುನ್ನ, ತಮ್ಮ ಬ್ರಹ್ಮಚಾರಿ ಗೆಳೆಯರಿಗೆಲ್ಲ ಮದುವೆ ಮಾಡಿಸುವುದರಲ್ಲಿ ಅವರು ಆಸಕ್ತಿ ಹೊಂದಿದ್ದರು. ಅವರೆಲ್ಲ ಒಂದೇ ದೊಡ್ಡ ಕುಟುಂಬದ ಸದಸ್ಯರಂತೆ ಒಟ್ಟಾಗಿ ಬಾಳಬೇಕೆಂಬುದು ಅವರ ಅಪೇಕ್ಷೆಯಾಗಿತ್ತು. ತಮ್ಮ ಭಾರತೀಯ ಸಹಕೆಲಸಗಾರರಿಗೆಲ್ಲಾ ಅವರು ದಕ್ಷಿಣ ಆಫ್ರಿಕಾಕ್ಕೆ ತಮ್ಮ ಪತ್ನಿಯರೊಂದಿಗೆ ಬರುವಂತೆ ಸಲಹೆ ನೀಡಿದರು. ತಮ್ಮ ಇಂಗ್ಲಿಷ್ ಮಿತ್ರರಾದ ಮಿಸ್ಟರ್ ವೆಸ್ಟ್ ಮತ್ತು ಮಿಸ್ಟರ್ ಪೋಲಾಕ್‌ರನ್ನು ಬೇಗನೆ ಮದುವೆ ಮಾಡಿಕೊಳ್ಳುವಂತೆ ಪ್ರೋತ್ಸಾಹಿಸಿದರು. ತಮ್ಮ ಆರ್ಥಿಕ ತೊಂದರೆಗಳ ಕಾರಣದಿಂದ ಪೋಲಾಕ್‌ಗೆ ಮದುವೆ ಮಾಡಿಕೊಳ್ಳಲು ಸ್ವಲ್ಪ ಹಿಂಜರಿಕೆಯಿತ್ತು. ಹೃದಯಗಳು ಒಂದುಗೂಡಿರುವಾಗ, ಬಹಳ ಹಿಂದೆಯೇ ಗೊತ್ತಾಗಿರುವ ಸಂಬಂಧವನ್ನು ಮುಂದೂಡುವುದು ಸರಿಯಲ್ಲ ಎಂದು ಗಾಂಧಿ ಹೇಳಿದರು. ಇಂಗ್ಲೆಂಡಿನಿಂದ ದಕ್ಷಿಣ ಆಫ್ರಿಕಾಕ್ಕೆ ವಧು ಬಂದಿಳಿದ ಮರುದಿನವೇ ಪೋಲಾಕ್ ಆಕೆಯನ್ನು ಮದುವೆಯಾದರು. ಮದುವೆಗೆ ಎಲ್ಲಾ ವ್ಯವಸ್ಥೆಗಳನ್ನು ಮಾಡಿದ್ದು ಗಾಂಧಿಯೇ. ಮದುವೆಯಲ್ಲಿ ಅವರೇ ಬೆಸ್ಟ್ ಮ್ಯಾನ್ (ವರನ ಸ್ನೇಹಿತ) ಸಹ ಆಗಿದ್ದರು.

ಭಾರತದ ಅವರ ಆಶ್ರಮಗಳಲ್ಲಿ ಗಾಂಧಿ ಕೆಲವೊಮ್ಮೆ ಪುರೋಹಿತರ ಪಾತ್ರವನ್ನೂ ವಹಿಸುತ್ತಿದ್ದರು. ವಧು-ವರರನ್ನು ಹೊಂದಿಸುವ ಮತ್ತು ಪುರೋಹಿತರ ಕರ್ತವ್ಯವನ್ನು ನಿಭಾಯಿಸುವ ಅವರ ವಿಧಾನ ಸಂಪ್ರದಾಯಬದ್ಧವಾಗಿರಲಿಲ್ಲ. ಅವರು ಹಿಂದು ವಿವಾಹ ಪದ್ಧತಿಯಲ್ಲಿ ಸುಧಾರಣೆ ತರಲು ಪ್ರಯತ್ನಿಸಿದರು; ಅನೇಕ ಪದ್ಧತಿಗಳನ್ನು ಅನುಸರಿಸುವುದನ್ನು ಪ್ರತಿಭಟಿಸಿದರು. ವರದಕ್ಷಿಣೆ, ಸಂಪತ್ತು, ಪದವಿ ಪತ್ರಗಳು ಮತ್ತು ಮೇಲ್ಜಾತಿ, ಇವೆಲ್ಲವೂ ವಧು ಅಥವಾ ವರನನ್ನು ಹೆಚ್ಚು ಅರ್ಹಗೊಳಿಸುವ ಯೋಗ್ಯತೆಗಳು ಎಂದು ಅವರು ಎಂದಿಗೂ ಪರಿಗಣಿಸಲಿಲ್ಲ. ಆರೋಗ್ಯ ಮತ್ತು ಚಾರಿತ್ರ್ಯ ಹಾಗೂ ದೇಹಶ್ರಮಕ್ಕಾಗಿ ದೇಹದಾರ್ಢ್ಯತೆಯೇ ಅಗತ್ಯ ಯೋಗ್ಯತೆಗಳಾಗಿದ್ದವು. ಅವರು ಆಶೀರ್ವದಿಸಿದ ಮದುವೆಯಲ್ಲಿ, ವಧು-ವರರು ಕೈಯಿಂದ ನೂತ, ಕೈಯಿಂದ ನೇಯ್ದ ಖಾದಿಯನ್ನು ಧರಿಸುತ್ತಿದ್ದರು. ಪವಿತ್ರ ಅಗ್ನಿಯ ಮುಂದೆ ವಿನಿಮಯ ಮಾಡಿಕೊಳ್ಳುತ್ತಿದ್ದ ಕೈಯಿಂದ ನೂತ ನೂಲಿನ ಹಾರಗಳನ್ನಲ್ಲದೆ ಮತ್ಯಾವ ಆಭರಣಗಳನ್ನೂ ಉಪಯೋಗಿಸುತ್ತಿರಲಿಲ್ಲ. ಅವರು ವೇದಮಂತ್ರಗಳನ್ನು ಪಠಿಸುತ್ತಿದ್ದರು. ವರನಿಗೆ ದುಬಾರಿ ಉಡುಗೊರೆಗಳನ್ನಾಗಲೀ, ವರದಕ್ಷಿಣೆಯನ್ನಾಗಲೀ ಕೊಡಲಾಗುತ್ತಿರಲಿಲ್ಲ.

ಗಾಂಧಿ ಕೊಡು–ಕೊಳ್ಳುವ (ವರದಕ್ಷಿಣೆ) ಕೆಟ್ಟ ಪದ್ಧತಿಯನ್ನು ನಿಂದಿಸುತ್ತಿದ್ದರು; ಮಹಿಳೆಯರನ್ನು ಗುಲಾಮರನ್ನಾಗಿಸಿದ್ದಕ್ಕೆ ಕಾಲೇಜು ವಿದ್ಯಾರ್ಥಿಗಳನ್ನು ದಂಡಿಸುತ್ತಿದ್ದರು. "ತಮ್ಮ ಪತ್ನಿಯರನ್ನು ತಮ್ಮ ಮನ–ಮನೆಗಳ ರಾಣಿಯರನ್ನಾಗಿಸುವ ಬದಲು ಖರೀದಿಸಿ-ಮಾರುವ ಚರಾಸ್ತಿಗಳಾಗಿ ಪರಿವರ್ತಿಸಿದ್ದಾರೆ. ಮಹಿಳೆಯರನ್ನು ಅರ್ಧಾಂಗಿ, ಅಂದರೆ

ಪುರುಷರ ಅರ್ಧಭಾಗ, ಎಂದು ವಿವರಿಸುವುದಿಲ್ಲವೆ?" ಅವರು ಹೇಳುತ್ತಿದ್ದರು: "ನನ್ನ ಜವಾಬ್ದಾರಿಯಲ್ಲಿ ಒಬ್ಬಳು ಹುಡುಗಿ ಇದ್ದ ಪಕ್ಷದಲ್ಲಿ, ಅವಳನ್ನು ಪತ್ನಿಯಾಗಿ ಸ್ವೀಕರಿಸಲು ಒಂದೇ ಒಂದು ತಾಮ್ರದ ನಾಣ್ಯವನ್ನು ನಿರೀಕ್ಷಿಸಿದರೂ, ಅಂತಹ ಹುಡುಗನಿಗೆ ಅವಳನ್ನು ಕೊಡುವ ಬದಲು, ಅವಳನ್ನು ಜೀವನವಿಡೀ ಕನ್ಯೆಯಾಗಿಯೇ ನಾನು ಇರಿಸುತ್ತಿದ್ದೆ."

ಮದುವೆಯ ಔತಣಗಳಿಗೆ ಯಾವುದೇ ಆಡಂಬರದ ಪ್ರದರ್ಶನ ಹಾಗೂ ವಿಸ್ತಾರವಾದ ವ್ಯವಸ್ಥೆಯನ್ನು ಅವರು ಇಷ್ಟ ಪಡುತ್ತಿರಲಿಲ್ಲ. ಪ್ರಜಾಪ್ರಭುತ್ವದ ಈ ಯುಗದಲ್ಲಿ, ಧಾರ್ಮಿಕ ಆಚರಣೆಗಳಿಗೆ ಹತ್ತು ರೂಪಾಯಿಗಿಂತ ಹೆಚ್ಚು ಮೊತ್ತ ವ್ಯಯಿಸಬಾರದೆಂದು ಅವರು ಭಾವಿಸಿದ್ದರು. ಧಾರ್ಮಿಕ ಆಚರಣೆಯಾಚೆ ಯಾವುದನ್ನೂ ವಿವಾಹ ವಿಧಿಗಳ ಒಂದು ಭಾಗ ಎಂದು ಪರಿಗಣಿಸಬಾರದು. ಈ ನೆಲದ ಬಡವರಲ್ಲಿನ ಬಡವರಿಗೂ ಇದು ಅತ್ಯಂತ ಕಷ್ಟದ ಆಚರಣೆ. ಮದುವೆ ಅಥವಾ ಶ್ರಾದ್ಧ ಆಚರಣೆಗಳ ಕಾರಣದಿಂದ ಅಪಾರ ಸಾಲಗಳಿಗೆ ಒಳಗಾಗುವ ರೈತರಿಗೆ ಅವರು ಹೇಳಿದರು: "ನಾನು ನಿಮ್ಮ ಪುರೋಹಿತನಾಗುತ್ತೇನೆ. ಒಂದು ಮದುವೆ ಅಥವಾ ಶ್ರಾದ್ಧಕರ್ಮ ಮಾಡಲು ಹೆಚ್ಚು ಹಣವೇನೂ ಬೇಕಾಗುವುದಿಲ್ಲ." ಜನ ಸಾಮಾನ್ಯವಾಗಿ ತಿಳಿದುಕೊಂಡಿರುವ ರೀತಿಯ ಶ್ರಾದ್ಧಕರ್ಮದಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ಅವರ ಪ್ರಕಾರ, ಒಳ್ಳೆಯ ಗುಣಗಳನ್ನು ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಪೂರ್ವಿಕರ ಶ್ರಾದ್ಧ ಕರ್ಮಗಳನ್ನು ಆಚರಿಸಲು ಇರುವ ನಿಜವಾದ ಮಾರ್ಗ. ಹಾಗೆಯೇ, ಯಜ್ಞೋಪವೀತ -- ಪವಿತ್ರ ದಾರಕ್ಕೆ ಇದೆಯೆಂದು ಹೇಳಲಾಗುವ ರಹಸ್ಯಮಯ ಅರ್ಥವನ್ನು ಅವರು ಒಪ್ಪಿಕೊಳ್ಳಲಿಲ್ಲ: "ಜನ ಅದನ್ನು ತೊಡುವುದರಲ್ಲಿ ನನಗೆ ಯಾವ ಅರ್ಥವೂ ಕಾಣುತ್ತಿಲ್ಲ. ಆರ್ಯರು ತಾವು ಅನಾರ್ಯರಿಗಿಂದ ಭಿನ್ನ ಎಂದು ತೋರಿಸಲು ಅದನ್ನು ಧರಿಸಿದರು. ಮೇಲು-ಕೆಳಗೆ ಎಂದು ಗುರುತಿಸಲಷ್ಟೆ ಅದು ಸೂಕ್ತವೆಂದಾದರೆ, ಅದನ್ನು ತ್ಯಜಿಸುವುದೇ ಸೂಕ್ತ. ಪರಿಶುದ್ಧತೆಯನ್ನು ಕಾಪಾಡಿಕೊಂಡು ಬರುವುದೇ ದಾರಗಳಲ್ಲಿ ಅತ್ಯುತ್ತಮವಾದುದು."

ಈ ಪುರೋಹಿತ ಯಾವುದೇ ಶುಲ್ಕವನ್ನು ವಿಧಿಸುತ್ತಿರಲಿಲ್ಲ, ಆದರೆ ಕೆಲಬಾರಿ ಹರಿಜನ್ ನಿಧಿಗಾಗಿ ದೇಣಿಗೆಗಳನ್ನು ಕೇಳುತ್ತಿದ್ದರು. ಒಮ್ಮೆ ಅವರು ಅಂತರಜಾತಿ ಜೋಡಿಯ ಮದುವೆಯನ್ನು ನೆರವೇರಿಸಿದರು. ಆಗ ಹರಿಜನರಿಗಾಗಿ ಬಾವಿಗಳನ್ನು ನಿರ್ಮಿಸಲು ಐದು ಸಾವಿರ ರೂಪಾಯಿಗಳನ್ನು ಸ್ವೀಕರಿಸಿದರು. ಒಂದು ಬಾರಿ ಆಶ್ರಮದಲ್ಲಿ ಹಿಂದು ಬ್ರಾಹ್ಮಣ ಜೋಡಿಗೆ ಮದುವೆ ಮಾಡಿಸಲು ಒಬ್ಬ ಹರಿಜನ ಕ್ರಿಶ್ಚಿಯನ್ ಪೌರೋಹಿತ್ಯ ವಹಿಸಿದ.

ಒಂದು ವಿವಾಹ ಸಮಾರಂಭದ ಬಳಿಕ, ಗಾಂಧಿ ಅತಿಥಿಗಳಿಗೆ ತಾಜಾ ಬೆಲ್ಲವನ್ನು ಕೊಟ್ಟರು. ಇದಕ್ಕೆ ಅವರಿಗೆ ತಗುಲಿದ ಖರ್ಚು ಆರು ಆಣೆಗಳು. ಒಬ್ಬ ವರನಿಗೆ ಅವರು ಒಂದು ಸರ್ತಿ ಹೀಗೆ ಬರೆದರು: "ನೀವು ಇಲ್ಲಿಗೆ ಒಬ್ಬರೇ ಬನ್ನಿ. ನಿಮಗೆ ಮದುವೆ ಮಾಡಿಸಿ, ಜೋಡಿಯಾಗಿ ಕಳಿಸಿಕೊಡುತ್ತೇನೆ." ವರನೊಂದಿಗೆ ಯಾರಾದರೂ ಬಂಧು–ಮಿತ್ರರಿರಬೇಕಾದ ಅಗತ್ಯ ಬೀಳುತ್ತದೆ ಎಂದು ಅವರು ಯೋಚಿಸಲೇ ಇಲ್ಲ. ಏಳು ಮಂದಿಯ ತಂಡವನ್ನು ನೋಡಿದಾಗ, "ಓಹೋ, ಸಪ್ತರ್ಷಿಗಳು – ಏಳು ಮುನಿಗಳು – ಬಂದಿದ್ದಾರೆ." ಎಂದು ನುಡಿದರು. ಬಂದವರು ಮತ್ತೊಂದು ಮಾತು ಸೇರಿಸಿದರು: "ಹೌದು, ಅರುಂಧತಿಯೂ (ವಧುವಿನ ತಾಯಿ) ಬಂದಿದ್ದಾಳೆ."

ಗಾಂಧಿ, ತಮ್ಮ ಮೂರನೆಯ ಮಗನ ಮದುವೆಯಲ್ಲಿ ದಂಪತಿಗಳಿಗೆ ಗೀತೆಯ ಒಂದು ಪ್ರತಿ, ಆಶ್ರಮದ ಭಜನಾವಳಿ, ಮಂಗಳಸೂತ್ರ ಮತ್ತು ಒಂದು ತಕಲಿಯನ್ನು ಉಡುಗೊರೆಯಾಗಿ ಕೊಟ್ಟರು. "ನಿನ್ನ ಹೆಂಡತಿಯ ಗೌರವವನ್ನು ನೀನು ಕಾಪಾಡಬೇಕು. ನೀನು ಅವಳ ಯಜಮಾನನಾಗಬೇಡ, ಅವಳ ನಿಜವಾದ ಗೆಳೆಯನಾಗು. ತಾಯ್ನಾಡಿನ ಸೇವೆಯಲ್ಲಿ ನಿಮ್ಮ ಜೀವನಗಳು ಪವಿತ್ರವಾಗಲಿ. ನೀವಿಬ್ಬರೂ ನಿಮ್ಮ ಹಣೆಗಳ ಮೇಲೆ ಬೆವರುಹನಿಗಳನ್ನು ಮೂಡಿಸಿದ ಶ್ರಮದ ಕೆಲಸದಿಂದ ನಿಮ್ಮ ಅನ್ನವನ್ನು ಗಳಿಸಿರಿ" ಎಂದು ಅವರು ತಮ್ಮ ಮಗನಿಗೆ ಹೇಳಿದರು. ವಧುವಿನ ತಾಯಿ ವರನಿಗೆ ಒಂದು ಚರಕಾವನ್ನು ಉಡುಗೊರೆಯಾಗಿ ಕೊಟ್ಟಳು. ವಿವಾಹವಿಧಿಗೆ ಮುನ್ನ, ದಂಪತಿಗಳು ಉಪವಾಸದಿಂದಿದ್ದರು, ಬಾವಿಕಟ್ಟೆ ಸುತ್ತ ಹಾಗೂ ಹಸುಗಳ ಕೊಟ್ಟಿಗೆಯನ್ನು ಸ್ವಚ್ಛ ಮಾಡಿದರು ಹಾಗೂ ಇಡೀ ಪ್ರಕೃತಿಯೊಂದಿಗಿನ ಏಕತೆಯನ್ನು ಸೂಚಿಸಲು ಸಾಂಕೇತಿಕವಾಗಿ ಮರಗಳಿಗೆ ನೀರೆರೆದರು. ಅವರು ನೂಲನ್ನೂ ತೆಗೆದರು, ಗೀತೆಯನ್ನೂ ಓದಿದರು. ಇವೆಲ್ಲಾ ಕ್ರಿಯೆಗಳು ಗಾಂಧಿಯ ವಿಚಾರದ ಪ್ರಕಾರ ದಂಪತಿಗಳು ಕೂಡಿ ಏಳು ಹೆಜ್ಜೆಗಳನ್ನಿಡುತ್ತಾ ಮುನ್ನಡೆಯುವ ಸಪ್ತಪದಿ ವಿಧಿಯ ಭಾಗಗಳಾಗಿದ್ದವು. ವರನ ಮದುವೆಯ ನಿಶ್ಚಿತಾರ್ಥವನ್ನು ಎರಡು ವರ್ಷಗಳವರೆಗೆ, ಅಂದರೆ, ವಧು ಹದಿನೆಂಟು ವಯಸ್ಸಿನವಳಾಗುವವರೆಗೂ ತಡೆಹಿಡಿಯಲಾಗಿತ್ತು. ಬಾಲವಿವಾಹಗಳನ್ನು ಗಾಂಧಿ ಪ್ರೋತ್ಸಾಹಿಸಲಿಲ್ಲ. "13 ವರ್ಷದ ಎಳೆಯರನ್ನು ನೋಡಿದಾಗ, ನಾನು ನನ್ನ ಮದುವೆಯ ಬಗ್ಗೆಯೇ ಯೋಚಿಸುತ್ತೇನೆ. ನನ್ನ ಬಗ್ಗೆ ನನಗೇ ಅಯ್ಯೋ ಪಾಪ ಅನ್ನಿಸುತ್ತದೆ. ತೊಡೆಯ ಮೇಲೆ ಕೂರಲು ತಕ್ಕಂತಹ ಹುಡುಗಿಯನ್ನು ಹೆಂಡತಿಯಾಗಿ ಮಾಡಿಕೊಳ್ಳುವುದರಲ್ಲಿ ನನಗೆ ಯಾವ ಧರ್ಮವೂ ಕಾಣುವುದಿಲ್ಲ. ಹುಡುಗಿಯ ಒಪ್ಪಿಗೆಯಿಲ್ಲದೇ ಅವಳ ತಂದೆತಾಯಂದಿರು ಅವಳನ್ನು ಮದುವೆ ಮಾಡಿಕೊಟ್ಟಲ್ಲಿ, ಆ ಹುಡುಗಿ ವಿವಾಹಿತಳು ಎಂದು ನಾನು ಪರಿಗಣಿಸುವುದಿಲ್ಲ. 15 ವಯಸ್ಸಿನ ಹುಡುಗಿ ವಿಧವೆಯಾಗುವುದನ್ನು ನಾನು ಊಹಿಸಿಕೊಳ್ಳಲಾರೆ. ಮರುಮದುವೆಯಾಗಲು ವಿಧುರರಿಗೆ ಇರುವಷ್ಟೇ ಹಕ್ಕು ವಿಧವೆಯರಿಗೂ ಇದೆ." ಕೆಲವು ಪರಿಸ್ಥಿತಿಗಳಲ್ಲಿ ಗಾಂಧಿ ವಿಚ್ಛೇದನವನ್ನು ಬೆಂಬಲಿಸಿದರು. ಓರ್ವ ಹಿಂದು ಮಹಿಳೆಯು, ತನ್ನ ಮೊದಲ ಪತಿ ಬದುಕಿದ್ದಾಗ್ಯೂ ಎರಡನೆಯ ಬಾರಿಗೆ ಮದುವೆಯಾಗ ಹೊರಟಿದ್ದಾಗ, ಗಾಂಧಿ ಸೆರೆಮನೆಯಿಂದಲೇ ತಮ್ಮ ಆಶೀರ್ವಾದಗಳನ್ನು ಕಳುಹಿಸಿದ್ದರು.

ತಾನು ಸನಾತನಿ ಹಿಂದೂ ಎಂದು ಹೇಳಿಕೊಂಡರೂ ಗಾಂಧಿ ಅಂತರಜಾತೀಯ, ಅಂತರಮತೀಯ ಹಾಗೂ ಅಂತರಪ್ರಾಂತೀಯ ಮದುವೆಗಳನ್ನು ಪ್ರತಿಪಾದಿಸಿದರು. ಪ್ರತಿಯೊಂದು ಮಿಶ್ರ ಮದುವೆ ಜನರನ್ನು ಒಂದುಗೂಡಿಸುತ್ತದೆ ಎಂದು ಅವರು ಯೋಚಿಸಿದರು. ತಮ್ಮ ಚಿಕ್ಕ ಮಗ, ಒಬ್ಬ ಗುಜರಾತೀ ವ್ಯಾಪಾರಿ, ದಕ್ಷಿಣ ಭಾರತದ ಬ್ರಾಹ್ಮಣ ಕನ್ಯೆಯನ್ನು ಮದುವೆ ಮಾಡಿಕೊಂಡಾಗ, ಅವರು ಸಂತೋಷಪಟ್ಟಿದ್ದರು.

ಗಾಂಧಿ, ತಮ್ಮ ನಿಷ್ಠಾವಂತ ವೈಷ್ಣವ ತಂದೆ ತಾಯಂದಿರಿಂದ ಬಹಳ ಪ್ರಭಾವಿತರಾಗಿದ್ದರು. 12 ವರ್ಷದವರಿದ್ದಾಗಲೇ ಅವರು ಅಸ್ಪೃಶ್ಯತೆಯನ್ನು ಒಂದು ಪಾಪಕೃತ್ಯವೆಂದು ಪರಿಗಣಿಸಿದ್ದರು; 17ನೇ ವಯಸ್ಸಿಗೆ ಜಾತಿ–ಮತಗಳೆನ್ನದೆ, ಎಲ್ಲರೂ ಒಂದೇ ಎಂದು ನೋಡಬೇಕೆಂಬುದನ್ನು ಕಲಿತರು; 21ನೇ ವಯಸ್ಸಿನಲ್ಲಿ, ಗೀತೆ, ಬೈಬಲ್ ಮತ್ತು ಇತರ ಧರ್ಮಗಳ ಪುಸ್ತಕಗಳನ್ನು ಅಧ್ಯಯನ ಮಾಡಿದರು. ಯಾವುದೇ ಒಂದು ಧರ್ಮದ ಅನುಯಾಯಿಗಳು "ನಮ್ಮದೇ ನಿಜವಾದ ಧರ್ಮ, ಮಿಕ್ಕಿದ್ದೆಲ್ಲಾ ಸುಳ್ಳು" ಎಂದು ಹೇಳುವುದು ಮೂರ್ಖತನ ಎಂದು ಅವರು ನಂಬಿದ್ದರು. ಗೀತೆ ಮತ್ತು ಉಪನಿಷತ್ತುಗಳಲ್ಲಿ ಅವರಿಗೆ ಪ್ರಾವೀಣ್ಯತೆ ಇತ್ತು. ವೇದಗಳ ಕೆಲವು ಭಾಗಗಳನ್ನು ಓದುತ್ತಿದ್ದರು.

ಧರ್ಮಗ್ರಂಥಗಳನ್ನು ಅವರು ಸುಮ್ಮಸುಮ್ಮನೆ ಉಲ್ಲೇಖಿಸುತ್ತಿರಲಿಲ್ಲ. ದಿನನಿತ್ಯದ ಜೀವನದಲ್ಲಿ ಅವುಗಳ ಬೋಧನೆಗಳನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದ್ದರು. ಅನೇಕ ಧರ್ಮಗಳ ಅಧ್ಯಯನ ಅವರಿಗೆ ಸಹಿಷ್ಣುತೆಯನ್ನು ಕಲಿಸಿತು; ದುಃಖವನ್ನು ಧೈರ್ಯದಿಂದ ಸಹಿಸುವ ಕೆಚ್ಚೆದೆಯನ್ನೂ ಕೊಟ್ಟಿತು. ದೈಹಿಕ ಶಕ್ತಿಯ ಮೇಲೆ ಅವಲಂಬಿತನಾದ ಮನುಷ್ಯ ಅಧರ್ಮವನ್ನು ಹರಡುತ್ತಾನೆ ಹಾಗೂ ಆತ್ಮಶಕ್ತಿಯನ್ನು ಅವಲಂಬಿಸಿದಾತ ನಿಜವಾದ ಧರ್ಮವನ್ನು ಅರ್ಥಮಾಡಿಕೊಳ್ಳುತ್ತಾನೆ ಎಂಬುದನ್ನು ಸಹ ಅವರು ಕಲಿತರು. ಮತಾಂತರ ಅವರಿಗೆ ಅರ್ಥಹೀನವಾಗಿತ್ತು. ಹಿಂದು, ಸಿಖ್, ಬೌದ್ಧ, ಇಸ್ಲಾಂ ಮತ್ತು ಕ್ರೈಸ್ತಮತಗಳ ತತ್ವಗಳೆಲ್ಲವನ್ನೂ ಸುಲಲಿತವಾಗಿ ವಿವರಿಸಬಲ್ಲವರಾಗಿದ್ದರು. ಆಗಾಗ್ಗೆ ಅವರು ಚರ್ಚಿನ ವಿಧಿಗಳಲ್ಲಿ ಭಾಗವಹಿಸುತ್ತಿದ್ದರು. ಒಮ್ಮೆ ಅವರು ಹಿಂದೂಧರ್ಮದ ಬಗ್ಗೆ ನಾಲ್ಕು ಉಪನ್ಯಾಸಗಳ ಒಂದು ಸರಣಿಯನ್ನು ಬೋಧಿಸಿದರು. ಅದರಲ್ಲಿ ಪ್ರತಿಯೊಂದು ಧರ್ಮದ ವಿಶೇಷ ಯೋಗ್ಯತೆಗಳನ್ನು ಎತ್ತಿ ಹಿಡಿದರು.

ಅವರು ಎಷ್ಟು ಸೂಕ್ತವಾಗಿ ಏಸುವಿನ ಉಪದೇಶಗಳನ್ನು ಹೇಳಬಲ್ಲವರಾಗಿದ್ದರೆಂದರೆ, ಹಲವು ಯೂರೋಪಿಯನ್ನರು ಗಾಂಧಿ ಹುಟ್ಟಾ ಕ್ರಿಶ್ಚಿಯನ್ ಎಂದೇ ಭಾವಿಸಿದ್ದರು. ಒಮ್ಮೆ ಕ್ರಿಸ್‌ಮಸ್ ಹಬ್ಬದ ಹಿಂದಿನ ಸಂಜೆ ಅವರ ಸಹಪ್ರಯಾಣಿಕರು ಏಸುವಿನ ಬೋಧನೆಗಳ ಬಗ್ಗೆ ಆವಿ ಹಡಗಿನ (ಸ್ಟೀಮರ್) ಅಟ್ಟದ ಮೇಲೆ ಮಾತನಾಡಬೇಕೆಂದು ಕೇಳಿಕೊಂಡರು. ಪ್ರಾರ್ಥನಾ ಸಮಯದಲ್ಲಿ, ಸಮೂಹ ಪ್ರಾರ್ಥನಾ ಸಭೆಗಳಲ್ಲಿ ಅವರು ಕುರಾನ್‌ನಿಂದ ಆಯಾತ್‌ಗಳನ್ನು (ಜಾಬ್ಜುಡಿ) ಉದ್ದರಿಸಿದರು. ಕೆಲವು ಹಿಂದೂಗಳು ಮತ್ತು ಮುಸಲ್ಮಾನರು ಅದಕ್ಕೆ ಆಕ್ಷೇಪಣೆ ಎತ್ತಿದರು. ಅವರು ಹಿಂದೂ ಧರ್ಮದ ಬಗ್ಗೆ ಅತಿ ದಿಟ್ಟ ನಿಲುವುಗಳನ್ನು ಹೊಂದಿದ್ದರು ಹಾಗೂ ಜಾತಿಗಳಲ್ಲಿನ ಅಸಮಾನತೆಗಳನ್ನು ಒಪ್ಪಿಕೊಳ್ಳಲಿಲ್ಲ. ಇದು ಕಟ್ಟಾಸಂಪ್ರದಾಯವಾದೀ ಹಿಂದುಗಳಿಗೆ ಸಿಟ್ಟು ತರಿಸಿತು. ಅವರೆಲ್ಲಾ ಕಪ್ಪುಬಾವುಟದ ಪ್ರದರ್ಶನ ಹಾಗೂ ಪಾದರಕ್ಷೆಗಳ ಹಾರದ ಮೂಲಕ ಗಾಂಧಿಯನ್ನು ಅವಮಾನಿಸಿದರು ಮತ್ತು ಅವರನ್ನು ಕೊಲ್ಲಲೂ ಪ್ರಯತ್ನಿಸಿದರು. ಆದರೂ ಗಾಂಧಿ ಹೇಳಿದರು: "ಅಸ್ಪೃಶ್ಯತೆ ಹಿಂದೂಧರ್ಮದ ಭಾಗವಾದಲ್ಲಿ, ನಾನು ಹಿಂದೂವಾಗಿರಲು ನಿರಾಕರಿಸುತ್ತೇನೆ. ಮಾನವೀಯತೆಯ ಮೇಲಿನ ಈ ಕಲೆಯನ್ನು ನಿರ್ಮೂಲ ಮಾಡದಿದ್ದಲ್ಲಿ, ಹಿಂದೂಧರ್ಮ ನಾಶವಾಗಬೇಕು. ನಮ್ಮ ಧರ್ಮ ಅಹಿಂಸೆಯನ್ನು ಅವಲಂಬಿಸಿದೆ. ಅಹಿಂಸೆ ಎನ್ನುವುದು ಮತ್ತೇನೂ ಅಲ್ಲ - ಕೇವಲ ಪ್ರೀತಿ. ನಮ್ಮ ನೆರೆಹೊರೆಯವರ ಮೇಲಿನ ಪ್ರೀತಿ, ನಮ್ಮ ಮಿತ್ರರ ಬಗ್ಗೆ ಮಾತ್ರವಲ್ಲ, ನಮ್ಮ ವೈರಿಗಳೂ ಆಗಿರಬಹುದಾದವರ ಬಗ್ಗೆಯೂ ಪ್ರೀತಿ." ಎಲ್ಲರಿಗೂ ಪ್ರವೇಶವಿರದಿದ್ದ ದೇವಸ್ಥಾನಗಳಿಗೆ ಅವರು ಭೇಟಿ ನೀಡಲಿಲ್ಲ. ಬಹಳ ವರ್ಷಗಳ ಕಾಲ ವಾದಿಸಿದ ಬಳಿಕ ಬಹಳಷ್ಟು ದೇವಸ್ಥಾನಗಳಲ್ಲಿ ಹರಿಜನರಿಗೂ ಪ್ರವೇಶ ಸಿಗುವಂತೆ ಮಾಡುವುದರಲ್ಲಿ ಅವರು ಯಶಸ್ವಿಯಾದರು.

ಅವರಿಗೆ ದೇವರೇ ಸತ್ಯವಾಗಿತ್ತು, ಧರ್ಮವೇ ಜೀವನವಾಗಿತ್ತು. ದೇವರು ಒಂದು ಹನಿ ನೀರಿನಲ್ಲೂ ಇದ್ದ ಅಥವಾ ಧೂಳಿನ ಸೂಕ್ಷ್ಮಕಣಗಳಲ್ಲೂ ಇದ್ದ. ಗಾಂಧಿ ನಿರಾಕಾರ ರೂಪವನ್ನು ಆರಾಧಿಸಲು ಅಪೇಕ್ಷಿಸಿದರು, ಆದರೆ ಮೂರ್ತಿಪೂಜೆಯನ್ನು ತ್ಯಜಿಸಲಿಲ್ಲ. ಏಕೆಂದರೆ, "ಮೂರ್ತಿಗಳನ್ನು ಪೂಜಿಸುವವರು, ಕಲ್ಲನ್ನು ಪೂಜಿಸುವುದಿಲ್ಲ, ಅದರೊಳಗಿನ ದೇವರನ್ನು ಪೂಜಿಸುತ್ತಾರೆ." ಒಮ್ಮೆ ಮೂರ್ತಿಪೂಜೆಯ ಬಗ್ಗೆ ವಾದಿಸುತ್ತಾ, ಅವರು ಠಾಕೂರರಿಗೆ ಹೇಳಿದರು: "ಮರದ ಕೆಳಗಿರುವ ಪೀಠಕ್ಕಾಗಿ ಉಪಯೋಗಿಸುವ, ಬಹಿಷ್ಕೃತ ನಾದವನ ಕಿಂಪು ಬಣ್ಣ ಬಳಿದ ಕಲ್ಲಿನ ಚಿಕ್ಕದೊಂದು ತುಣುಕು ಬಹಳ ಮುಖ್ಯವಾದುದು. ಅವನಿಗೂ, ದೇವರಿಗೂ ನಡುವಿನ ಏಕಮಾತ್ರ ಕೊಂಡಿ ಅದು. ಒಬ್ಬ ಕುಂಟನಿಗೆ ನಡೆಯುವುದು ಹೇಗೆಂದು ಹೇಳಿಕೊಡದ ಹೊರತು ಅವನ ತೋಳುಗಳಿಂದ ಊರುಗೋಲನ್ನು ನೀವು ಕಸಿದುಕೊಳ್ಳಲಾರಿರಿ." ವೃಕ್ಷಪೂಜೆಯಲ್ಲೂ ಗಾಂಧಿ ಯಾವುದೇ ಹಾನಿ ಅಥವಾ ಕೆಟ್ಟದನ್ನು ಕಾಣಲಿಲ್ಲ: "ಅದರಲ್ಲಿ ಸಹಜವಾಗಿಯೇ ಆಳವಾದ ಕರುಣೆ ಹಾಗೂ ಕಾವ್ಯಾತ್ಮಕ ಸೌಂದರ್ಯಗಳಿರುವಂಥದ್ದು ಏನೋ ಇದೆ. ಅದು ದೇವರ ಶ್ರೇಷ್ಠತೆ ಮತ್ತು ಭವ್ಯತೆಯನ್ನು ಘೋಷಿಸುವ ಇಡೀ ಸಸ್ಯಾಹಾರ ಸಾಮ್ರಾಜ್ಯದ ಬಗ್ಗೆ ಇರುವ ಪೂಜ್ಯಭಾವನೆಯ ಸಂಕೇತಸೂಚಕವಾಗಿದೆ."

"ಗಾಂಧೀಜಿಯವರಿಗೊಂದು ದೇವಸ್ಥಾನ"ವನ್ನು ಕಟ್ಟುವುದನ್ನು ಅವರು ತೀವ್ರವಾಗಿ ವಿರೋಧಿಸಿದರು. ಅಲ್ಲದೆ, ಆಶ್ರಮದಲ್ಲಿ ಅವರ ಪಾದ ಮುಟ್ಟುವುದು ಒಂದು ಅಪರಾಧ ಎಂದು ಘೋಷಿಸಲಾಯಿತು. ಈ ಪುಣ್ಯಾತ್ಮ ತಮ್ಮ ದೇಶವಾಸಿಗಳಿಗೆ ಹೊಸ ಮಂತ್ರವೊಂದರ – ತಾಯ್ನಾಡಿಗೆ ಸೇವೆ, ಮತ್ತು ದರಿದ್ರನಾರಾಯಣನ ಸೇವೆ – ದೀಕ್ಷೆಯನ್ನು ಕೊಟ್ಟರು. ಜೊತೆಗೆ, ಸ್ವಾತಂತ್ರ್ಯ, ಸಮಾನತೆ ಮತ್ತು ಎಲ್ಲಾ ಮಾನವರಲ್ಲಿ ಸಹೋದರತ್ವ ಭಾವದ ಮಂತ್ರ, ಭಯ ಮತ್ತು ಗುಲಾಮಗಿರಿಯ ಭಾವನೆಗಳಿಂದ ಮನಸ್ಸನ್ನು ಮುಕ್ತಗೊಳಿಸುವ ಮಂತ್ರವನ್ನು ನೀಡಿದರು. ಜೀವನದ ವಿವಿಧ ರಂಗಗಳಲ್ಲಿ ಸ್ವಾರ್ಥತ್ಯಾಗ ಮಾಡುವ ಶ್ರೇಷ್ಠ ಹಾಗೂ ಕೆಚ್ಚೆದೆಯ ಕಲೆಯನ್ನು ಅವರು ಮಾಡಿ ತೋರಿಸಿದರು. "ಮಾನವಕುಲವು ಹೇಗೆ ಅಹಿಂಸೆಯ ಮೂಲಕ ಹಿಂಸೆಯಿಂದಾಚೆ ಬರಬೇಕು ಮತ್ತು ಕೇವಲ ಪ್ರೇಮದಿಂದಲೇ ದ್ವೇಷವನ್ನು ಮೀರಿ ನಿಲ್ಲಬೇಕು" ಎಂದು ಮತ್ತೆ ಮತ್ತೆ ಹೇಳುವಲ್ಲಿ ಅವರಿಗೆ ದಣಿವೇ ಆಗುತ್ತಿರಲಿಲ್ಲ.

ಗಾಂಧಿ ಸಕ್ರಿಯವಾದ ಜೀವನವನ್ನು ಬಾಳಿದರು. ಯಾರು ಪ್ರತಿನಿತ್ಯ ಅರ್ಪಣೆ ಮಾಡದೆಯೇ, ಕರ್ಮಯಜ್ಞ ಅಥವಾ ದೇಹಶ್ರಮ ಮಾಡದೆಯೇ ಊಟ ಮಾಡುತ್ತಾರೋ, ಅವರು ತಮ್ಮ ಆಹಾರವನ್ನು ಕದ್ದಂತೆ ಎಂಬ ಗೀತೆಯ ಬೋಧೆಯೊಂದಿಗೆ ಅವರಿಗೆ ಸಹಮತವಿತ್ತು. ಆಹಾರ ಶ್ರಮವನ್ನು ಕರ್ಮಯಜ್ಞಗಳಲ್ಲಿ ಒಂದಾಗಿ ಅವರು ಪರಿಗಣಿಸಿದ್ದರು. ಯಾವುದಾದರೂ ರೀತಿಯ ದೇಹಶ್ರಮವನ್ನು ಮಾಡದೆ ಒಂದು ದಿನವನ್ನೂ ಅವರು ಕಳೆದಿದ್ದಿಲ್ಲ. ಅವರು ಎಂದೂ ಸುಳ್ಳು ಹೇಳಲಿಲ್ಲ, ಯಾವುದೇ ಜೀವಿಯನ್ನು ಹಿಂಸಿಸಲಿಲ್ಲ ಮತ್ತು ನಿಂದೆಯ ಒಂದು ಶಬ್ದವನ್ನೂ ಉಚ್ಚರಿಸಲಿಲ್ಲ. ಅವರು ಬೆಳಿಗ್ಗೆ ಬೇಗನೆಯೇ, ಸೂರ್ಯ ಹುಟ್ಟುವ ಮುಂಚೆಯೇ ಏಳುತ್ತಿದ್ದರು. ದಿನಾ ಬೆಳಿಗ್ಗೆ ಮತ್ತು ಸಾಯಂಕಾಲ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದರು. ಅವರ ದೈನಂದಿನ ಪ್ರಾರ್ಥನೆಯಲ್ಲಿ ಗೀತೆಯ ಆಯ್ದಭಾಗ ಮತ್ತು ಉಪನಿಷತ್, ಕುರಾನ್ ಮತ್ತು ಜ಼ೆಂಡ್-ಅವೆಸ್ತಾಗಳಿರುತ್ತಿದ್ದವು. ನೆಲ ಅಥವಾ ಸಾಗರದ ಮೇಲಿದ್ದಾಗಲೂ, ಚಲಿಸುತ್ತಿರುವ ರೈಲು ಅಥವಾ ಹಡಗಿನಲ್ಲಿದ್ದಾಗಲೂ, ಮುಸಲ್ಮಾನ ಅಥವಾ ಕ್ರಿಶ್ಚಿಯನ್ ಅಥವಾ ಒಬ್ಬ ಬಹಿಷ್ಕೃತನ ಮನೆಯಲ್ಲಿದ್ದಾಗಲೂ ಅಥವಾ ಹಳ್ಳಿಯಿಂದ ಹಳ್ಳಿಗೆ ನಡೆದು ಹೋಗುತ್ತಿದ್ದಾಗಲೂ, ಅವರು ಈ ಅಭ್ಯಾಸಕ್ಕೆ ಅಂಟಿಕೊಂಡಿದ್ದರು. ಸೆರೆಮನೆಯಲ್ಲಿನ ಜೀವನ ಸಹ ಇದಕ್ಕೆ ಹೊರತಾಗಿರಲಿಲ್ಲ. ಅವರು ತಮಗಾಗಿ 21 ದಿನಗಳವರೆಗೆ ಆಹಾರವನ್ನಾದರೂ ಬಿಟ್ಟುಕೊಡುತ್ತಿದ್ದರು. ಆದರೆ ತಮ್ಮ ಪ್ರಾರ್ಥನೆ ಮಾಡದೆ, ಒಂದು ಚಪ್ಪಾಳೆಯನ್ನು ಸಹ ತಟ್ಟುತ್ತಿರಲಿಲ್ಲ. ಅವರ ಪಾಲಿಗೆ, ಪ್ರಾರ್ಥನೆ ಎಂದರೆ ಸುಮ್ಮನೆ ತುಟಿಗಳನ್ನು ಅಲುಗಿಸುವುದಷ್ಟೇ ಆಗಿರಲಿಲ್ಲ, ದೇವರಲ್ಲಿ ಅವರಿಗಿದ್ದ ಜೀವಂತ ನಂಬಿಕೆಯಾಗಿತ್ತು. ಪ್ರಾರ್ಥನೆಯ ಉದ್ದೇಶವೂ ದೇವರನ್ನು

ಸುಪ್ರೀತಗೊಳಿಸುವುದಾಗಿರಲಿಲ್ಲ, ಆತ್ಮವನ್ನು ಶುದ್ಧೀಕರಿಸುವದಾಗಿತ್ತು. 36ನೇ ವಯಸ್ಸಿನಲ್ಲಿ, ಅವರು ಬ್ರಹ್ಮಚರ್ಯೆಯ ಅನುಷ್ಠಾನವನ್ನು ಆರಂಭಿಸಿದರು ಹಾಗೂ ಫೀನಿಕ್ಸ್ ವಸಾಹತುವಿನಲ್ಲಿ ಸಾಮೂಹಿಕವಾಗಿ ಪ್ರಾರ್ಥನೆ ಮಾಡುವುದನ್ನು ಪರಿಚಯಿಸಿದರು. ಅಲ್ಲಿ, ಪ್ರತಿ ಸಂಜೆಯೂ ಭಜನೆ ಮತ್ತು ಕ್ರೈಸ್ತ ಗೀತೆಗಳನ್ನು ಹಾಡಲಾಗುತ್ತಿತ್ತು. ಜೀವನದ ತಮ್ಮ ಕೊನೆಯ ವರ್ಷಗಳಲ್ಲಿ, ಸಾಮೂಹಿಕ ಪ್ರಾರ್ಥನಾ ಸಭೆಗಳಲ್ಲಿ, ಕೈಯಿಂದ ಹಾಕುವ ತಾಳಕ್ಕೆ ಸರಿಯಾಗಿ ರಾಮ್‌ಧುನ್ ಹಾಡಲು ಜನರನ್ನು ಆಹ್ವಾನಿಸುತ್ತಿದ್ದರು. ಇಡೀ ಭಾರತವೇ ಪ್ರಾರ್ಥನಾ ಸಭೆಗಳಿಂದ ಆವೃತವಾಗಿರುವುದನ್ನು ನೋಡಲು ಅವರು ಬಹಳವಾಗಿ ಇಚ್ಛಿಸುತ್ತಿದ್ದರು.

ಗಾಂಧಿಗೆ ಮೋಸ–ತಟವಟಗಳನ್ನು ಸಹಿಸಲಾಗುತ್ತಿರಲಿಲ್ಲ, ಆದರೆ ಇತರರನ್ನು ಅವರ ತಪ್ಪುಗಳಿಗಾಗಿ ದಂಡಿಸುತ್ತಿರಲಿಲ್ಲ. ಯಾರಾದರೂ ಸುಳ್ಳು ಹೇಳಿದಲ್ಲಿ ಅಥವಾ ಏನಾದರೂ ತಪ್ಪು ಮಾಡಿದಲ್ಲಿ, ಶುದ್ಧೀಕರಣಕ್ಕಾಗಿ ಅವರೇ ಖುದ್ದು ಉಪವಾಸ ಕೈಗೊಳ್ಳುತ್ತಿದ್ದರು.

ಈ ಪುರೋಹಿತರು ದೇವಸ್ಥಾನಗಳಲ್ಲಿ ಒಂದು ಸಲಕ್ಕಿಂತಲೂ ಹೆಚ್ಚು ಬಾರಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರು ಹಾಗೂ ದೇವಸ್ಥಾನಗಳ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು. ಶಾಲೆ ಮತ್ತು ಆಸ್ಪತ್ರೆಗಳಿಗೆ ಅವರು ಅಸ್ತಿಭಾರ ಶಿಲೆ ಹಾಕಿದರು. ನೋಪಾಲಿಯಲ್ಲಿ, ಗಾಂಧಿ ಮುಸಲ್ಮಾನರಿಂದ ಭಿನ್ನವಾಗಿದ್ದ ಮೂರ್ತಿಯನ್ನು ಪುನರ್ ಪ್ರತಿಷ್ಠಾಪಿಸಿದರು. ದೆಹಲಿಯಲ್ಲಿ ಲಕ್ಷ್ಮೀನಾರಾಯಣ ದೇವಸ್ಥಾನ, ವಾರಣಾಸಿಯಲ್ಲಿ ಭಾರತಮಾತಾ ದೇವಸ್ಥಾನ, ಸೇಲುವಿನಲ್ಲಿ ಹರಿಜನರಿಗಾಗಿ ಒಂದು ದೇವಸ್ಥಾನ ಹಾಗೂ ರತ್ನಗಿರಿಯಲ್ಲಿ ಮಾರುತಿ ದೇವಸ್ಥಾನವನ್ನು ತೆರೆದರು. "ಮಾರುತಿಯಲ್ಲಿ ದೈತ್ಯಶಕ್ತಿ ಇತ್ತು ಎಂದು ನಾನು ಮಾರುತಿಯ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಿಲ್ಲ; ರಾವಣನಲ್ಲೂ ಆ ಶಕ್ತಿ ಇತ್ತು. ಆದರೆ ಮಾರುತಿಯಲ್ಲಿ ಆತ್ಮಶಕ್ತಿ ಇತ್ತು, ಆಧ್ಯಾತ್ಮಿಕ ಶಕ್ತಿ ಇತ್ತು. ಇದು ಅವನ ಬ್ರಹ್ಮಚರ್ಯ ಮತ್ತು ರಾಮನಲ್ಲಿ ಅವನಿಗಿದ್ದ ನಿಷ್ಠೆಯ ನೇರ ಪ್ರತಿಫಲವಾಗಿತ್ತು" ಎಂದು ರತ್ನಗಿರಿಯಲ್ಲಿ ಮಾರುತಿ ದೇವಸ್ಥಾನವನ್ನು ಉದ್ಘಾಟಿಸುವಾಗ ಅವರು ಹೇಳಿದರು.

ರಾಮನಾಮದಲ್ಲಿ ಗಾಂಧಿಯ ನಂಬಿಕೆ ಅಚಲವಾಗಿತ್ತು. ಪ್ರಾರ್ಥನಾ ಸಭೆಗೆ ಹೋಗುತ್ತಿರುವಾಗ, ಹಿಂದು ಮತಾಂಧನ ಗುಂಡಿಗೆ ಬಲಿಯಾದ ಗಾಂಧಿ ಉಚ್ಚರಿಸಿದ ಕೊನೆಯ ಪದ "ಹೇ ರಾಮ್" ಆಗಿತ್ತು.

ಗಾಂಧಿಯವರ ಬದುಕಿನ ಘಟನಾವಳಿಗಳು

- ಪೋರ್‌ಬಂದರಿನಲ್ಲಿ ಅಕ್ಟೋಬರ್ 2, 1869ರಂದು ಗಾಂಧಿಯ ಜನನ
- 1881ರಲ್ಲಿ ಕಸ್ತೂರ್‌ಬಾ ಅವರೊಂದಿಗೆ ವಿವಾಹ
- ನವೆಂಬರ್ 1887ರಲ್ಲಿ ಮೆಟ್ರಿಕ್ಯುಲೇಷನ್ ಮಾಡಿದರು
- ಅಕ್ಟೋಬರ್ 1888ರಲ್ಲಿ ಅಧ್ಯಯನಕ್ಕಾಗಿ ಲಂಡನ್‌ಗೆ ತೆರಳಿದರು
- ಜೂನ್ 1891ರಲ್ಲಿ ಬ್ಯಾರಿಸ್ಟರ್ ಆಗಿ ಸೇರ್ಪಡೆ
- ಜೂನ್ 1891ರಲ್ಲಿ ಭಾರತಕ್ಕೆ ಹಿಂತಿರುಗಿದರು
- ಏಪ್ರಿಲ್ 1893ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ ಬೆಳೆಸಿದರು
- 1896 ಮತ್ತು 1901ರಲ್ಲಿ ಭಾರತಕ್ಕೆ ಭೇಟಿ ನೀಡಿದರು
- 1901ರಲ್ಲಿ ಮೊದಲ ಬಾರಿಗೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದರು
- 1903ರಲ್ಲಿ ಇಂಡಿಯನ್ ಒಪಿನಿಯನ್‌ನ ಜವಾಬ್ದಾರಿ ವಹಿಸಿಕೊಂಡರು
- 1904ರಲ್ಲಿ ಫೀನಿಕ್ಸ್ ವಸಾಹತನ್ನು ಸ್ಥಾಪಿಸಿದರು
- 1899ರಲ್ಲಿ ಬೋಅರ್ ಯುದ್ಧದಲ್ಲಿ ಇಂಡಿಯನ್ ಅಂಬ್ಯುಲೆನ್ಸ್ ಕಾರ್ಪ್ಸ್ ಮತ್ತು 1906ರಲ್ಲಿ ಜುಲು ದಂಗೆಪಡೆಗಳನ್ನು ಮುನ್ನಡೆಸಿದರು
- 1906ರಲ್ಲಿ ಬ್ರಹ್ಮಚರ್ಯ ಜೀವನವನ್ನು ಅಳವಡಿಸಿಕೊಂಡರು
- 1906 ಮತ್ತು 1909ರಲ್ಲಿ ಇಂಗ್ಲೆಂಡಿಗೆ ಹೋದರು
- 1908ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಮೊದಲ ಬಾರಿಗೆ ಸೆರೆಮನೆ ಸೇರಿದರು
- 1910ರಲ್ಲಿ ಟಾಲ್‌ಸ್ಟಾಯ್ ಫಾರಂಅನ್ನು ಸ್ಥಾಪಿಸಿದರು
- 1913ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹಿಗಳ ಚಾರಿತ್ರಿಕ ನಡಿಗೆಗೆ ಮುಂದಾಳತ್ವ
- 1914ರಲ್ಲಿ ದಕ್ಷಿಣ ಆಫ್ರಿಕಾವನ್ನು ತೊರೆದು, 1915ರ ಜನವರಿಯಲ್ಲಿ ಭಾರತಕ್ಕೆ ಬಂದರು
- 1915ರಲ್ಲಿ ಸಬರಮತಿ ಆಶ್ರಮವನ್ನು ಸ್ಥಾಪಿಸಿದರು, 1933ರಲ್ಲಿ ವಾರ್ಧಾ ಆಶ್ರಮವನ್ನು ಸ್ಥಾಪಿಸಿದರು ಮತ್ತು ಸೇವಾಗ್ರಾಮ ಆಶ್ರಮವನ್ನು 1936ರಲ್ಲಿ ಸ್ಥಾಪಿಸಿದರು
- 1917ರಲ್ಲಿ ಚಂಪಾರಣ್ ಸತ್ಯಾಗ್ರಹವನ್ನು ಆರಂಭಿಸಿದರು
- 1918ರಲ್ಲಿ ಖೇಡಾನಲ್ಲಿ ಮೊದಲ 'ತೆರಿಗೆ ಬೇಡ' ಸತ್ಯಾಗ್ರಹವನ್ನು ಆರಂಭಿಸಿದರು
- 1919ರಲ್ಲಿ ಅಮೃತಸರದಲ್ಲಿ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ
- 1919ರಲ್ಲಿ 'ಯಂಗ್ ಇಂಡಿಯಾ' ಮತ್ತು 'ನವಜೀವನ್' ಪತ್ರಿಕೆಗಳ ಸಂಪಾದಕರಾದರು
- 1921ರಲ್ಲಿ ಅಸಹಕಾರ ಚಳುವಳಿಯನ್ನು ಆರಂಭಿಸಿದರು
- 1922ರಲ್ಲಿ ಮೊದಲಬಾರಿಗೆ ಭಾರತದಲ್ಲಿ ಸೆರೆಮನೆ ವಾಸ
- 1927ರಲ್ಲಿ ಖಾದಿ ಪ್ರವಾಸ
- 1930ರಲ್ಲಿ ದಂಡಿ ಯಾತ್ರೆ ಮತ್ತು ಉಪ್ಪು ಸತ್ಯಾಗ್ರಹ
- 1931ರಲ್ಲಿ ಲಂಡನ್ನಿನ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದರು ಮತ್ತು ಯೂರೋಪಿಗೆ ಪುನಃ ಭೇಟಿ ನೀಡಿದರು

- 1933ರಲ್ಲಿ 'ಹರಿಜನ್' ವಾರಪತ್ರಿಕೆಯನ್ನು ಆರಂಭಿಸಿದರು
- 1937ರಲ್ಲಿ 'ನಯೀ ತಾಲೀಂ' ಅನ್ನು ಪ್ರೋತ್ಸಾಹಿಸಿದರು
- 1942ರಲ್ಲಿ 'ಕ್ವಿಟ್ ಇಂಡಿಯಾ' ಚಳುವಳಿಯನ್ನು ಆರಂಭಿಸಿದರು
- 1942ರಿಂದ 1944ರವರೆಗೆ ಆಗಾಖಾನ್ ಅರಮನೆಯಲ್ಲಿ ಕೊನೆಯ ಬಾರಿಗೆ ಬಂಧನದಲ್ಲಿ
- 1948ರ ಜನವರಿ 30ರಂದು ಹತ್ಯೆ